ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಎ.ಐ ವಿಶ್ವವಿದ್ಯಾಲಯ
ದೇಶದ ಮೊದಲ ಎ.ಐ ವಿಶ್ವವಿದ್ಯಾಲಯವು ಮುಂದಿನ ಆರು ತಿಂಗಳೊಳಗೆ ಮಹಾರಾಷ್ಟ್ರದಲ್ಲಿ ನಿರ್ಮಾಣವಾಗಲಿದೆ ಎಂದು ಅಲ್ಲಿನ ಸರ್ಕಾರ ತಿಳಿಸಿದೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ನಗರ ಪ್ರದೇಶಗಳಲ್ಲಿ ಕಾವಲು ಸಮಿತಿ ರಚನೆ 5
ದೀಪು ಹತ್ಯೆ: ಭಾರತ ಕಳವಳ 9

ಹೈಕಮಾಂಡ್ 'ಕೈ' ಹಾಕಲ್ಲ: ಖರ್ಗೆ

ನಾಯಕತ್ವದ ಗೊಂದಲ ಸ್ಥಳೀಯ ಸೃಷ್ಟಿ: ಎಐಸಿಸಿ ಅಧ್ಯಕ್ಷ ಹೇಳಿಕೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಕದನ ತೀವ್ರ ಸ್ವರೂಪ ಪಡೆದುಕೊಳ್ಳುವ ಲಕ್ಷಣ ಕಾಣಿಸಿಕೊಳ್ಳುತ್ತಿರುವ ಮಧ್ಯೆಯೇ, 'ನಾಯಕತ್ವದ ಗೊಂದಲಗಳನ್ನು ಹೈಕಮಾಂಡ್ ಸೃಷ್ಟಿಸಿಲ್ಲ. ಅವೆಲ್ಲ ಸ್ಥಳೀಯವಾಗಿ ಸೃಷ್ಟಿಯಾಗುತ್ತಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

'ಈ ಗೊಂದಲಗಳನ್ನು ಸ್ಥಳೀಯ ನಾಯಕರೇ ಪರಿಹರಿಸಿಕೊಳ್ಳಬೇಕು. ಎಲ್ಲದಕ್ಕೂ ಹೈಕಮಾಂಡ್‌ನತ್ತ ಬೊಟ್ಟು ಮಾಡಿದರೆ ಹೇಗೆ' ಎಂದು ಪ್ರಶ್ನಿಸಿದ್ದಾರೆ.

'ಯಾವುದೇ ಒಪ್ಪಂದವಾಗಿಲ್ಲ. ಐದು ವರ್ಷ ನಾನೇ ಮುಖ್ಯಮಂತ್ರಿ' ಎಂಬ ಸಿದ್ದರಾಮಯ್ಯ ವಾದಕ್ಕೆ, 'ಸೂಕ್ತ ಸಮಯದಲ್ಲಿ ಇಬ್ಬರನ್ನೂ ಕರೆಯಿಸುವುದಾಗಿ ಹೈಕಮಾಂಡ್ ಹೇಳಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿರುವ ಬೆನ್ನಲ್ಲೆ, ಹೈಕಮಾಂಡ್ ಅನ್ನು ದೂಷಿಸುವ ಬದಲು ಸ್ಥಳೀಯ ನಾಯಕರು ಆಂತರಿಕ ಗೊಂದಲವನ್ನು ಸರಿಪಡಿಸಿಕೊಳ್ಳಬೇಕು ಎಂದು ಖರ್ಗೆ ತಾಕೀತು ಮಾಡಿದ್ದಾರೆ.

ನಾಯಕತ್ವದ ವಿಚಾರದಲ್ಲಿ ಉಂಟಾಗಿರುವ ಗೊಂದಲಗಳಿಗೆ ಭಾನುವಾರ ಇಲ್ಲಿ ಗರಂ ಆದ ಖರ್ಗೆ, 'ಕಾಂಗ್ರೆಸ್ ಪಕ್ಷ ಕಾರ್ಯಕರ್ತರು ಒಳಗೊಂಡು ಎಲ್ಲರೂ ಸೇರಿ ಕಟ್ಟಿದ ಪಕ್ಷ. ಪಕ್ಷ ಸಂಘಟನೆ ಕೆಲಸ ನನ್ನಿಂದ ಆಗಿದೆ, ತನ್ನಿಂದ ಆಗಿದೆ ಎಂದು ಯಾರೂ ಹೇಳಬಾರದು. ಕಾರ್ಯಕರ್ತರೂ ಪಕ್ಷ ಕಟ್ಟಿದ್ದು ಅವರು, ಇವರು ಎಂದು ಹೇಳುವುದನ್ನು ಬಿಡಬೇಕು' ಎಂದು ಕುರ್ಚಿ ಕಿತ್ತಾಟದಲ್ಲಿ ತೊಡಗಿರುವ ನಾಯಕರಿಗೆ ಕಿವಿಮಾತು ಹೇಳಿದ್ದಾರೆ.

> ಯಾರೇ ನಾಯಕರು ಬಂದರೂ ಪಕ್ಷದ ಕಾರ್ಯಕರ್ತರು ಅವರನ್ನು ಬೆಂಬಲಿಸುತ್ತಾರೆ. ಪಕ್ಷ ಎಂದ ಮೇಲೆ ಎಲ್ಲರ ಪಾತ್ರವೂ ಇರುತ್ತದೆ
> **ಮಲ್ಲಿಕಾರ್ಜುನ ಖರ್ಗೆ**, ಎಐಸಿಸಿ ಅಧ್ಯಕ್ಷ

ಡಿ.ಕೆ.ಶಿವಕುಮಾರ್ ಅವರ ನವದೆಹಲಿ ಭೇಟಿಯ ಬಗ್ಗೆ ತಮಗೆ ಮಾಹಿತಿ ಇಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕಾಂಗ್ರೆಸ್ ಸರ್ಕಾರ ಎರಡೂವರೆ ವರ್ಷ ಪೂರ್ಣಗೊಳಿಸುತ್ತಿದ್ದಂತೆಯೇ 'ಅಧಿಕಾರ ಹಂಚಿಕೆಯ ಸೂತ್ರ'ದ ವಿಷಯ ಮುನ್ನೆಲೆಗೆ ಬಂದಿತ್ತು. ಬೆಳಗಾವಿಯಲ್ಲಿ ನಡೆದ ವಿಧಾನಮಂಡಲ ಅಧಿವೇಶನದುದ್ದಕ್ಕೂ 'ನಾಯಕತ್ವ ಬದಲಾವಣೆ'ಯ ವಿಷಯ ಸದ್ದು ಮಾಡಿತ್ತು. ಕಲಾಪದ ಕೊನೆಯ ದಿನ ವಿಧಾನಸಭೆಯಲ್ಲಿ ಮಾತನಾಡಿದ್ದ ಸಿದ್ದರಾಮಯ್ಯ, 'ನನ್ನ ಪ್ರಕಾರ ಹೈಕಮಾಂಡ್ ನಾಯಕರು ನನ್ನ ಪರವಾಗಿದ್ದಾರೆ. ಹೈಕಮಾಂಡ್ ತೀರ್ಮಾನಿಸುವವರೆಗೂ ನಾನೇ ಮುಖ್ಯಮಂತ್ರಿ. ಅವರು ಏನು ತೀರ್ಮಾನ ಮಾಡುತ್ತಾರೊ ಅದರ ಪ್ರಕಾರ ನಡೆದುಕೊಳ್ಳುತ್ತೇವೆ' ಎಂದಿದ್ದರು.

ಈ ಹೇಳಿಕೆಗೆ ಪ್ರತಿಕ್ರಿಯಿಸಿದ್ದ ಡಿ.ಕೆ. ಶಿವಕುಮಾರ್, 'ನನ್ನ ಮತ್ತು ಸಿದ್ದರಾಮಯ್ಯ ನಡುವೆ ಒಪ್ಪಂದ ಆಗಿದೆ. ಸೂಕ್ತ ಸಮಯದಲ್ಲಿ ಕರೆಯಿಸುತ್ತೇವೆ ಎಂದು ಹೈಕಮಾಂಡ್ ನಾಯಕರು ನಮಗಿಬ್ಬರಿಗೂ ಹೇಳಿದ್ದಾರೆ' ಎಂದಿದ್ದರು.

11

ಭಿನ್ನಾಭಿಪ್ರಾಯ ಇಲ್ಲ: ಡಿಕೆಶಿ

ಬೆಂಗಳೂರು: 'ನನಗೆ ಪಕ್ಷದ ಯಾವುದೇ ನಾಯಕರ ಜತೆ ಭಿನ್ನಾಭಿಪ್ರಾಯಗಳಿಲ್ಲ. ನಾನು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಒಟ್ಟಿಗೆ, ಸಹೋದರರಂತೆ ಕೆಲಸ ಮಾಡುತ್ತಿಲ್ಲವೇ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಮುಖ್ಯಮಂತ್ರಿಯ ಆಪ್ತ ಬಳಗದಲ್ಲಿರುವ ಕೆ.ಎನ್.ರಾಜಣ್ಣ ಅವರನ್ನು ಭೇಟಿ ಮಾಡಿರುವ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ರಾಜಣ್ಣ ನನಗೂ ಆಪ್ತರೇ. ನಾನು ಮುಖ್ಯಮಂತ್ರಿಯ ಆಪ್ತನಲ್ಲವೇ? ರಾಜಣ್ಣ ಅವರು ಜನತಾ ದಳದಲ್ಲಿದ್ದರು. ಎಸ್.ಎಂ. ಕೃಷ್ಣ ಅವರ ಅವಧಿಯಲ್ಲಿ ರಾಜಣ್ಣ ಅವರನ್ನು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷನನ್ನಾಗಿ ಮಾಡಿದ್ದು ನಾನು. ಮುಖ್ಯಮಂತ್ರಿಗೂ ಇದಕ್ಕೂ ಸಂಬಂಧವೇ ಇಲ್ಲ' ಎಂದರು.

ಶಿವಕುಮಾರ್

'ರಾಜಕೀಯ ಬೆಂಬಲಕ್ಕೆ ರಾಜಣ್ಣ ಮತ್ತು ನೀವು ಭೇಟಿ ಮಾಡಿದ್ದೀರಿ' ಎಂಬ ಮಾತಿದೆಯಲ್ಲ ಎಂದಾಗ, 'ನಾವು ಸಹೋದ್ಯೋಗಿಗಳು. ಅವರು ನಮ್ಮ ಜತೆ ಕೆಲಸ ಮಾಡಿರುವವರು. ನನಗೆ ಯಾರ ಜತೆಯೂ ಭಿನ್ನಾಭಿಪ್ರಾಯಗಳಿಲ್ಲ. ಕಳೆದ 16 ವರ್ಷಗಳಿಂದ, ಅವರು ನಮ್ಮ ಪಕ್ಷಕ್ಕೆ ಬಂದ ದಿನದಿಂದ ನನಗೂ ಮುಖ್ಯಮಂತ್ರಿಗೂ ಭಿನ್ನಾಭಿಪ್ರಾಯಗಳೇನಾದರು ಇದೆಯೇ? ಭಿನ್ನಾಭಿಪ್ರಾಯಗಳನ್ನು ಮಾಧ್ಯಮಗಳು, ವಿರೋಧ ಪಕ್ಷಗಳು ಸೃಷ್ಟಿಸುತ್ತಿವೆ' ಎಂದರು.

'ಎಲ್ಲ ಕಾಂಗ್ರೆಸ್ ನಾಯಕರು ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ. ನಾನಂತು ಯಾರ ಮೇಲೂ ಜಗಳ ಮಾಡಲು ಹೋಗಿಲ್ಲ. ಯಾವ ವಿಚಾರಕ್ಕೂ ಒಬ್ಬರ ಮೇಲೆ ಇನ್ನೊಬ್ಬರು ಇದುವರೆಗೂ ಹೇಳಿಕೆ ನೀಡಿಲ್ಲ. ಕೆಲವು ಸಂದರ್ಭಗಳಲ್ಲಿ ರಾಜಕೀಯವಾಗಿ ಹೇಳಿಕೆ ಕೊಟ್ಟಿರುತ್ತಾರೆ. ಅದಕ್ಕೆ ಬೇಸರ ಮಾಡಿಕೊಳ್ಳಲು ಆಗುತ್ತದೆಯೇ? ಅಣ್ಣತಮ್ಮಂದಿರೇ ಜಗಳ ಮಾಡುತ್ತಾರಂತೆ, ಇನ್ನು ನಮ್ಮದು ಯಾವ ಜಗಳ?' ಎಂದರು.

'ಗೊಂದಲ ಬಗೆಹರಿಸಬೇಕು'

'ಬಜೆಟ್ ವೇಳೆಗೆ ಎಲ್ಲಾ ಗೊಂದಲಗಳನ್ನು ಬಗೆಹರಿಸಬೇಕು. ರಾಜ್ಯದ ಅಭಿವೃದ್ಧಿ ಸಲುವಾಗಿ ಹಾಗೂ ನಾವು ಜನರಿಗೆ ನೀಡಿರುವ ಭರವಸೆ ಈಡೇರಿಸಲು ಇದು ಅತ್ಯಗತ್ಯ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಜಿ. ಪರಮೇಶ್ವರ

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕೆ.ಎನ್. ರಾಜಣ್ಣ ಅವರು ತಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ, ಹಿಂದಿನ ಎಲ್ಲ ಹೇಳಿಕೆಗಳಿಗೂ ಬದ್ಧವಾಗಿದ್ದೇನೆ ಎಂದಿದ್ದಾರೆ. ಹೀಗಾಗಿ ಡಿ.ಕೆ. ಶಿವಕುಮಾರ್ ಹಾಗೂ ಕೆ.ಎನ್. ರಾಜಣ್ಣ ಭೇಟಿಯಲ್ಲಿ ವಿಶೇಷ ಏನೂ ಇಲ್ಲ' ಎಂದರು. 'ಪಕ್ಷದ ಅಧ್ಯಕ್ಷರು ಪಕ್ಷ ಸಂಘಟನೆ ವಿಚಾರವಾಗಿ ಎಲ್ಲರನ್ನೂ ಕರೆಸಿ ಮಾತನಾಡುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ' ಎಂದರು.

'ನೀವೂ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಯೇ' ಎಂಬ ಪ್ರಶ್ನೆಗೆ, 'ಹೈಕಮಾಂಡ್ ಏನು ತೀರ್ಮಾನ ಮಾಡುತ್ತದೆಯೋ ಅದಕ್ಕೆ ಬದ್ಧ' ಎಂದಷ್ಟೇ ಹೇಳಿದರು.

ಹೊರ ರಾಜ್ಯಗಳಿಗೆ ಸಿಐಡಿ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿಶೀಟರ್ ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಬಿಜೆಪಿ ಶಾಸಕ ಬೈರತಿ ಬಸವರಾಜ ಬಂಧನಕ್ಕೆ ಮೂರು ತಂಡಗಳನ್ನು ರಚಿಸಲಾಗಿದ್ದು, ಗೋವಾ, ಪುಣೆಯಲ್ಲಿ ಸಿಐಡಿ ಅಧಿಕಾರಿಗಳು ಶೋಧ ಕಾರ್ಯ ನಡೆಸಿದ್ದಾರೆ.

ಬೈರತಿ ಬಸವರಾಜ

ನಿರೀಕ್ಷಣಾ ಜಾಮೀನು ನೀಡಲು ಹೈಕೋರ್ಟ್ ಹಾಗೂ ಬಂಧನದಿಂದ ರಕ್ಷಣೆ ನೀಡಲು ಸೆಷನ್ಸ್ ನ್ಯಾಯಾಲಯ ನಿರಾಕರಿಸಿದ ಬೆನ್ನಲ್ಲೇ ಬೈರತಿ ಬಸವರಾಜ ಬಂಧನ ಭೀತಿಯಿಂದ, ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ತಲೆಮರೆಸಿಕೊಂಡಿದ್ದಾರೆ. ಆರೋಪಿ ಬೆಂಗಳೂರಿನಲ್ಲಿ ಇಲ್ಲದಿರುವ ಮಾಹಿತಿ ಲಭ್ಯವಾಗಿತ್ತು. ಅಧಿಕಾರಿಗಳ ತಂಡ ನೆರೆಯ ರಾಜ್ಯಗಳಲ್ಲಿ ಹುಡುಕಾಟ ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ವಿದೇಶಕ್ಕೆ ಪರಾರಿಯಾಗುವ ಶಂಕೆಯ ಮೇರೆಗೆ ಬೆಂಗಳೂರು ಸೇರಿ ದೇಶದ ಎಲ್ಲಾ ವಿಮಾನ ನಿಲ್ದಾಣಗಳಲ್ಲಿ ಬೈರತಿ ಬಸವರಾಜ ವಿರುದ್ಧ ಲುಕ್‌ಔಟ್ ನೋಟಿಸ್ ಜಾರಿ ಮಾಡಲಾಗಿದೆ. ಹೊರ ರಾಜ್ಯಗಳ ಪೊಲೀಸರ ಜತೆಗೂ ಸಂಪರ್ಕ ಸಾಧಿಸಿರುವ ಸಿಐಡಿ ತಂಡಗಳು, ಕಾರ್ಯಾಚರಣೆ ತೀವ್ರಗೊಳಿಸಿವೆ.

ರೌಡಿ ಬಿಕ್ಲು ಶಿವ ಕೊಲೆ ಪ್ರಕರಣದ ಪ್ರಮುಖ ಆರೋಪಿ ರೌಡಿ ಜಗದೀಶ್ ಅಲಿಯಾಸ್ ಜಗ್ಗನೊಂದಿಗೆ ಬೈರತಿ ಬಸವರಾಜ ಅವರಿಗೆ ನೇರ ಸಂಪರ್ಕವಿದೆ. ಶಿವನ ಕೊಲೆಗೂ ಮುನ್ನ ಹಲವು ಬಾರಿ ಭೇಟಿ ಮಾಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

10

ಕೆಎಎಸ್: ಮುಖ್ಯ ಪರೀಕ್ಷೆ ಉತ್ತರ ಪತ್ರಿಕೆಗಳ ಮೌಲ್ಯಮಾಪನದಲ್ಲಿ ಗೋಪ್ಯತೆ

ಕೆಪಿಎಸ್‌ಸಿ 'ಇಂಟ್ರಾನೆಟ್' ಬಳಕೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ಭರ್ತಿಗೆ ನಡೆದ ಮುಖ್ಯ ಪರೀಕ್ಷೆಯ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಗೌಪ್ಯತೆ ಕಾಪಾಡಲು ಕೆಪಿಎಸ್‌ಸಿ ಇದೇ ಮೊದಲ ಬಾರಿಗೆ 'ಇಂಟರ್‌ನೆಟ್' ಬದಲಿಗೆ 'ಇಂಟ್ರಾನೆಟ್' ಬಳಸುತ್ತಿದೆ. ಆ ಮೂಲಕ, ಅಭ್ಯರ್ಥಿಗಳು ಕಳ್ಳದಾರಿಯ ಮೂಲಕ ಅಂಕಗಳನ್ನು ಗಳಿಸಬಹುದೆಂಬ ವದಂತಿಗಳಿಗೆ ತೆರೆ ಎಳೆಯಲು ಮುಂದಾಗಿದೆ.

ಉತ್ತರ ಪತ್ರಿಕೆಗಳ ಡಿಜಿಟಲ್ ಮೌಲ್ಯಮಾಪನ ನಡೆಯುತ್ತಿದ್ದು, ಈ ಹಿಂದಿನ ವರ್ಷಗಳಲ್ಲಿ ಮೌಲ್ಯಮಾಪನ ವೇಳೆಯಲ್ಲಿ ಕಂಡುಬಂದಿದ್ದ ತಾಂತ್ರಿಕ ಲೋಪದೋಷಗಳನ್ನು ಪರಿಹರಿಸುವ ಕುರಿತು ಆಯೋಗದ ಸಭೆಯಲ್ಲಿ ಗಂಭೀರವಾಗಿ ಚರ್ಚಿಸಿದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ. 'ಇಂಟ್ರಾನೆಟ್' ಬಳಕೆಯಿಂದ ಹೊರಗಿನ ಹಸ್ತಕ್ಷೇಪ ತಪ್ಪಿಸುವ ಜೊತೆಗೆ, ದತ್ತಾಂಶಗಳ ಸೋರಿಕೆ ತಡೆಯಲು ಸಾಧ್ಯವಿದೆ ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

ಈ ಹಿಂದೆ ಆಯೋಗವು ಹೊರಗುತ್ತಿಗೆ ಆಧಾರದಲ್ಲಿ ಖಾಸಗಿ ಸಂಸ್ಥೆಯೊಂದರ ಒಡೆತನದಲ್ಲಿರುವ ಹಾಗೂ ಕೆಪಿಎಸ್‌ಸಿ ಆವರಣದ ಹೊರಗಿರುವ ಸರ್ವರ್‌ಗಳನ್ನು ಅಭ್ಯರ್ಥಿಗಳ ಅಂಕ ಸಂಬಂಧಿತ ದತ್ತಾಂಶ ಸಂಗ್ರಹಿಸಿಡಲು ಬಳಸಿಕೊಳ್ಳುತ್ತಿತ್ತು. ಈ ವ್ಯವಸ್ಥೆಯನ್ನು ದುರುಪಯೋಗ ಮಾಡಿಕೊಂಡು ಅಂಕಗಳನ್ನು ತಿರುಚಲಾಗಿದೆ ಎಂದು ಆರೋಪಿಸಿ ಹಲವು ಅಭ್ಯರ್ಥಿಗಳು ಕೋರ್ಟ್ ಮೊರೆಹೋಗಿದ್ದರು. ಇಂತಹ ಅನುಮಾನಗಳನ್ನು ತಪ್ಪಿಸಲು ಮತ್ತು ಈ ಬಾರಿ ಯಾವುದೇ ವ್ಯತ್ಯಾಸಕ್ಕೆ ಅವಕಾಶ ಆಗಬಾರದೆಂದು ಆಯೋಗದ ಆವರಣದಲ್ಲಿ ಡಿಜಿಟಲ್ ಮೌಲ್ಯಮಾಪನ ನಡೆಸಿ ಅಂಕಗಳನ್ನು 'ಇಂಟ್ರಾನೆಟ್' ಬಳಸಿ ಸರ್ವರ್‌ನಲ್ಲಿ ನೇರವಾಗಿ ಸಂಗ್ರಹಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

11

ಏನಿದು 'ಇಂಟ್ರಾನೆಟ್'

'ಇಂಟರ್‌ನೆಟ್ ಸಾರ್ವಜನಿಕವಾಗಿದ್ದರೆ, ಇಂಟ್ರಾನೆಟ್ ಖಾಸಗಿಯಾಗಿದೆ. ಇದು ಒಂದು ನಿರ್ದಿಷ್ಟ ಸಂಸ್ಥೆಯ ಸದಸ್ಯರಿಗೆ ಮಾತ್ರ ಸೀಮಿತವಾದ ಖಾಸಗಿ ನೆಟ್‌ವರ್ಕ್. ಸುರಕ್ಷಿತವಾಗಿ ಮಾಹಿತಿ ಹಂಚಿಕೊಳ್ಳಲು, ಆಂತರಿಕ ಸಂವಹನ, ಸಹಯೋಗ ಮತ್ತು ದಾಖಲಾತಿ ನಿರ್ವಹಣೆಗೆ ಬಳಸುವ ವೆಬ್ ತಂತ್ರಜ್ಞಾನ ಆಧಾರಿತ ವ್ಯವಸ್ಥೆ. ಇಂಟರ್ ನೆಟ್‌ನಂತೆಯೇ ಕಾರ್ಯನಿರ್ವಹಿಸುವ ಇದು, ಸಂಸ್ಥೆಯ ಹೊರಗಿನವರಿಗೆ ಪ್ರವೇಶಕ್ಕೆ ಅವಕಾಶ ಕೊಡುವುದಿಲ್ಲ ಮತ್ತು ದತ್ತಾಂಶಗಳನ್ನು ಆಂತರಿಕವಾಗಿ ಸಂರಕ್ಷಿಸಿಡಲು ಸಹಾಯ ಮಾಡುತ್ತದೆ' ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

2014ರ ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆಯಲ್ಲಿ (464 ಹುದ್ದೆಗಳು) ಮೊದಲ ಬಾರಿ ಡಿಜಿಟಲ್ ಮೌಲ್ಯ ಮಾಪನವನ್ನು ಕೆಪಿಎಸ್‌ಸಿ ಪರಿಚಯಿಸಿತ್ತು. 2015 (428 ಹುದ್ದೆ) ಮತ್ತು 2017–18ನೇ (106 ಹುದ್ದೆ) ಸಾಲಿನಲ್ಲೂ ಡಿಜಿಟಲ್ ಮೌಲ್ಯಮಾಪನ ನಡೆದಿತ್ತು. ಹೊರಗುತ್ತಿಗೆ ಸಂಸ್ಥೆ ಇದನ್ನು ನಿರ್ವಹಿಸಿದೆ.

11

ರೈಲು ಪ್ರಯಾಣ ದರ ಏರಿಕೆ

ನವದೆಹಲಿ (ಪಿಟಿಐ): 215 ಕಿ.ಮೀ.ಗೂ ದೂರದ ಸಾಮಾನ್ಯ ದರ್ಜೆಯಲ್ಲಿನ ರೈಲು ಪ್ರಯಾಣ ದರವನ್ನು ಪ್ರತಿ ಕಿ.ಮೀಗೆ 1 ಪೈಸೆ ಏರಿಕೆ ಮಾಡಿ ರೈಲ್ವೆ ಸಚಿವಾಲಯವು ಭಾನುವಾರ ಆದೇಶ ಹೊರಡಿಸಿದೆ. ಮೇಲ್ ಹಾಗೂ ಎಕ್ಸ್‌ಪ್ರೆಸ್ ರೈಲುಗಳ ಹವಾನಿಯಂತ್ರಿತ ಹಾಗೂ ಹವಾನಿಯಂತ್ರಿತ ವ್ಯವಸ್ಥೆ ಇಲ್ಲದ ಬೋಗಿಗಳಲ್ಲಿನ ಪ್ರಯಾಣದರವನ್ನು ಪ್ರತಿ ಕಿ.ಮೀಗೆ 2 ಪೈಸೆ ಏರಿಕೆ ಮಾಡಿದೆ.

ಡಿಸೆಂಬರ್ 26ರಿಂದಲೇ ಪರಿಷ್ಕೃತ ದರವು ಜಾರಿಗೆ ಬರಲಿದೆ.

'ಉಪನಗರ ರೈಲುಗಳಲ್ಲಿನ ಮಾಸಿಕ ಸೀಸನ್ ಟಿಕೆಟ್ ಹಾಗೂ ಇತರೆ ರೈಲುಗಳಲ್ಲಿ 215 ಕಿ.ಮೀವರೆಗಿನ ಸಾಮಾನ್ಯ ದರ್ಜೆಯ ಪ್ರಯಾಣದರದಲ್ಲಿ ಯಾವುದೇ ಏರಿಕೆ ಇಲ್ಲ' ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಪ್ರಯಾಣದರ ಏರಿಕೆಯಿಂದ 2026ರ ಮಾರ್ಚ್ ತಿಂಗಳ ಒಳಗಾಗಿ ಇಲಾಖೆಗೆ ಹೆಚ್ಚುವರಿಯಾಗಿ ₹600 ಕೋಟಿ ಆದಾಯ ಸೇರ್ಪಡೆಯಾಗಲಿದೆ' ಎಂದು ವಿವರಿಸಿದ್ದಾರೆ.

2025ರ ಜುಲೈ ತಿಂಗಳಲ್ಲಿ ರೈಲು ಪ್ರಯಾಣದರ ಏರಿಕೆಯಿಂದ ಇದುವರೆಗೆ ಇಲಾಖೆಗೆ ₹700 ಕೋಟಿ ಆದಾಯ ಸೇರ್ಪಡೆಯಾಗಿದೆ ಎಂದು ರೈಲ್ವೆ ಇಲಾಖೆಯು ಮಾಹಿತಿ ನೀಡಿದೆ.

ರೈಲ್ವೆ ಸಚಿವಾಲಯವು ತನ್ನ ಸಿಬ್ಬಂದಿ ವೇತನದ ವೆಚ್ಚ ₹1.15 ಲಕ್ಷ ಕೋಟಿ ಹಾಗೂ ಪಿಂಚಣಿ ಮೊತ್ತ ₹60 ಸಾವಿರ ಕೋಟಿ ವ್ಯಯಿಸುತ್ತಿದೆ. 2024–25ರಲ್ಲಿ ಒಟ್ಟು ನಿರ್ವಹಣಾ ವೆಚ್ಚವು ₹2.63 ಲಕ್ಷ ಕೋಟಿಗೆ ಏರಿಕೆಯಾಗಿದೆ.

ಸಿಬ್ಬಂದಿಯ ವೇತನ ಹಾಗೂ ನಿರ್ವಹಣಾ ವೆಚ್ಚವನ್ನು ಸರಿದೂಗಿಸಲು ಸರಕು ಸಾಗಣೆಯ ವಹಿವಾಟು ವಿಸ್ತರಣೆ ಹಾಗೂ ಪ್ರಯಾಣಿಕರ ದರ ಹೆಚ್ಚಳ ಮಾಡಲಾಗಿದೆ ಎಂದು ತಿಳಿಸಿದೆ.

ಮುಖ್ಯಾಂಶಗಳು

- ವರ್ಷದಲ್ಲಿ ಎರಡನೇ ಬಾರಿ ರೈಲು ಪ್ರಯಾಣದರ ಏರಿಕೆ
- 215 ಕಿ.ಮೀವರೆಗೆ ಸಾಮಾನ್ಯ ದರ್ಜೆಯಲ್ಲಿ ಇಲ್ಲ ಏರಿಕೆ
- ದರ ಏರಿಕೆಯಿಂದ 2026ರ ಮಾರ್ಚ್‌ವರೆಗೆ ₹600 ಕೋಟಿ ಹೆಚ್ಚಿನ ಆದಾಯ

ಇಂದು ವಿವಿಧೆಡೆ ಶೀತ ಗಾಳಿ ಸಾಧ್ಯತೆ

ಬೆಂಗಳೂರು: ರಾಜ್ಯದಲ್ಲಿ ಶೀತ ಗಾಳಿ ಹಾಗೂ ಮೋಡ ಕವಿದ ವಾತಾವರಣದಿಂದ ತಾಪಮಾನದಲ್ಲಿ ಕುಸಿತವಾಗಿ ಚಳಿ ಹೆಚ್ಚಾಗುತ್ತಿದೆ. ಸೋಮವಾರ ರಾಜ್ಯದ ವಿವಿಧೆಡೆ ಶೀತ ಗಾಳಿ ಕಾಣಿಸಿಕೊಳ್ಳುವ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೀದರ್, ಕಲಬುರಗಿ, ವಿಜಯಪುರ, ಯಾದಗಿರಿ ಹಾಗೂ ರಾಯಚೂರು ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಭಾನುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳಲ್ಲಿ ಒಳನಾಡಿನ ಕೆಲ ಸ್ಥಳಗಳಲ್ಲಿ ಕನಿಷ್ಠ ತಾಪಮಾನವು ಸಾಮಾನ್ಯಕ್ಕಿಂತ 7.5 ಡಿಗ್ರಿ ಸೆಲ್ಸಿಯಸ್‌ವರೆಗೂ ಕುಸಿತವಾಗಿದೆ.

9

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

‘ನೆಮ್ಮದಿ’ ಕೇಂದ್ರಕ್ಕೆ ಚಾಲನೆ

ಕಾರ್ಯಕ್ರಮದಲ್ಲಿ ಸದ್ಗುರು ಮಧುಸೂದನ್ ಸಾಯಿ, ಸುಕೃತಿ ಟ್ರಸ್ಟ್ ಧರ್ಮದರ್ಶಿ ಬಿ.ಎಸ್. ನಾಗರಾಜನ್, ರೋಟರಿ ಅಂತರರಾಷ್ಟ್ರೀಯ ನಿರ್ದೇಶಕ ಕೆ.ಪಿ. ನಾಗೇಶ್, ಸಂಸದ ಡಾ.ಸಿ.ಎನ್.ಮಂಜುನಾಥ್, ಜಮೀನಿನ ದಾನಿ ಇ. ಕೃಷ್ಣಪ್ಪ ಪಾಲ್ಗೊಂಡಿದ್ದರು

ಪ್ರಜಾವಾಣಿ ವಾರ್ತೆ

ನೆಲಮಂಗಲ: ರಾವುತ್ತನಹಳ್ಳಿ ರಸ್ತೆಯ ಶಿವನಪುರದ ಇ.ಕೆ.ಎಸ್ಟೇಟ್‌ನಲ್ಲಿ ಸುಕೃತಿ ಚಾರಿಟಬಲ್ ಟ್ರಸ್ಟ್, ಬೆಂಗಳೂರಿನ ಮಿಡ್ ಟೌನ್ ರೋಟರಿ ಸಂಸ್ಥೆ ಹಾಗೂ ದಾನಿಗಳ ಸಹಯೋಗದೊಂದಿಗೆ ಕ್ಯಾನ್ಸರ್ ರೋಗಿಗಳಿಗೆ ಉಚಿತ ಆರೈಕೆ ಕೇಂದ್ರ ‘ನೆಮ್ಮದಿ’ಗೆ ಸಾಯಿ ಗ್ಲೋಬಲ್ ಹ್ಯುಮ್ಯಾನಿಟೇರಿಯನ್ ಮಿಷನ್‌ನ ಸಂಸ್ಥಾಪಕ ಸದ್ಗುರು ಮಧುಸೂದನ್ ಅವರು ಭಾನುವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ‘ಜೀವನದ ಕೊನೆಯ ಕ್ಷಣಗಳಲ್ಲಿರುವ ಕ್ಯಾನ್ಸರ್ ರೋಗಿಗಳಿಗೆ ನೋವುರಹಿತ, ಪ್ರೀತಿ ಕಾಳಜಿಯುಳ್ಳ ಆರೈಕೆಯ ಅಗತ್ಯ ಇರುತ್ತದೆ. ಇದನ್ನು ಸಾಕಾರಗೊಳಿಸುವ ಉದ್ದೇಶದಿಂದ ಕೇಂದ್ರ ಪ್ರಾರಂಭಿಸಲಾಗಿದೆ’ ಎಂದರು.

ಸಂಸದ ಡಾ.ಸಿ.ಎನ್. ಮಂಜುನಾಥ್ ಮಾತನಾಡಿ, ‘ಅಶಕ್ತರಿಗೆ ನೆರವಾಗಲು ದೇವರು ತನ್ನ ಪ್ರತಿನಿಧಿಗಳನ್ನು ಕಳಿಸುತ್ತಾನೆ. ದೇಶದಲ್ಲಿ ಅಪರೂಪದ ಕೆಲವೇ ಉಪಶಾಮಕ ಕೇಂದ್ರಗಳಲ್ಲಿ ನೆಮ್ಮದಿಯು ಒಂದು. ಸೇವಾ ಮನೋಭಾವನೆಯ ವೈದ್ಯರು, ಶುಶ್ರೂಷಕರನ್ನು ಒಳಗೊಂಡ ಸಿಬ್ಬಂದಿಯನ್ನು ಹೊಂದಿಸಿಕೊಂಡು ಮುನ್ನಡೆಸುವ ಸವಾಲು ನಾಗರಾಜನ್ ಅವರ ಮೇಲಿದೆ’ ಎಂದರು.

‘ಜನರ ಬದುಕು ಮೂರಾಬಟ್ಟೆ’

ಜನದನಿ ರ್‍ಯಾಲಿಯಲ್ಲಿ ಸಿಪಿಎಂ ಕಾರ್ಯದರ್ಶಿ ಕೆ.ಪ್ರಕಾಶ್

‘ಅಧಿವೇಶನದಲ್ಲೂ ಚರ್ಚಿಸಿರಲಿಲ್ಲ’

‘ವಿಧಾನಮಂಡಲ ಅಧಿವೇಶನದಲ್ಲಿ ಕಾರ್ಮಿಕ ಸಂಹಿತೆಯ ಬಗ್ಗೆ ಚರ್ಚೆಯೇ ಆಗಿಲ್ಲ. ಕಾರ್ಮಿಕ ಮತ್ತು ಆರ್ಥಿಕ ನೀತಿಗಳಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿಗೆ ಯಾವುದೇ ವ್ಯತ್ಯಾಸ ಇಲ್ಲ ಎಂಬುದಕ್ಕೆ ಇದು ಸಾಕ್ಷಿಯಾಗಿದೆ’ ಎಂದು ಸಿಪಿಎಂ ರಾಜ್ಯ ಕಾರ್ಯದರ್ಶಿ ಕೆ.ಪ್ರಕಾಶ್ ಹೇಳಿದರು.

ಪ್ರಜಾವಾಣಿ ವಾರ್ತೆ

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸಿಪಿಎಂ ಆಯೋಜಿಸಿದ್ದ ಪರ್ಯಾಯ ರಾಜಕಾರಣಕ್ಕಾಗಿ ಜನದನಿ ರ್‍ಯಾಲಿಯಲ್ಲಿ ಭಾಗವಹಿಸಿದ್ದ ಜನಸ್ತೋಮ – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ದೇಶಕ್ಕೆ ಸ್ವಾತಂತ್ರ್ಯ ಬಂದು ಏಳು ದಶಕ ಕಳೆದರೂ ಉದ್ಯೋಗ, ಆಹಾರ, ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿನ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿಲ್ಲ. ಉದ್ಯಮಿಗಳಾದ ಅದಾನಿ, ಅಂಬಾನಿ ಅವರ ಸಂಪತ್ತು ಮಾತ್ರ ಬೆಳೆಯುತ್ತಿದೆ. ಜನಸಾಮಾನ್ಯರ ಬದುಕು ಮೂರಾಬಟ್ಟೆಯಾಗಿದೆ’ ಎಂದು ಸಿಪಿಎಂ ರಾಜ್ಯ ಕಾರ್ಯದರ್ಶಿ ಕೆ.ಪ್ರಕಾಶ್ ಹೇಳಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ಸಿಪಿಎಂ ಆಯೋಜಿಸಿದ್ದ ಪರ್ಯಾಯ ರಾಜಕಾರಣಕ್ಕಾಗಿ ಜನದನಿ ರ್‍ಯಾಲಿಯಲ್ಲಿ ಮಾತನಾಡಿದ ಅವರು, ‘ದೇಶದಲ್ಲಿ ಸಮ್ಮಿಶ್ರ ಸರ್ಕಾರದ ಆಡಳಿತದ ಅವಧಿಯಲ್ಲೂ ಜನರ ಬದುಕಿನಲ್ಲಿ ಸುಧಾರಣೆ ಆಗಲಿಲ್ಲ. ಜನರ ಸಮಸ್ಯೆಗಳಿಗೆ ಸರ್ಕಾರಗಳು ಸ್ಪಂದಿಸುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಪರ್ಯಾಯ ರಾಜಕಾರಣವೆಂದರೆ ನೀತಿಗಳ ಬದಲಾವಣೆಯೇ, ಹೊರತು ಸರ್ಕಾರ ಅಥವಾ ಮುಖ್ಯಮಂತ್ರಿ ಬದಲಾವಣೆ ಅಲ್ಲ. ಕೃಷಿ ವಲಯ ಬಂಡವಾಳಶಾಹಿಗಳ ಪಾಲಾಗಿದೆ. ಭೂಸ್ವಾಧೀನ ಕಾಯ್ದೆಗಳನ್ನು ಅತ್ಯಂತ ಕೆಟ್ಟದಾಗಿ ಜಾರಿ ಮಾಡಲಾಗುತ್ತಿದೆ. ರೈತರಿಂದ ಜಮೀನು ಕಿತ್ತು ಕಂಪನಿಗಳಿಗೆ ಕೊಡುವ ರಾಜ್ಯ, ಕೇಂದ್ರ ಸರ್ಕಾರಗಳು ರೈತ ವಿರೋಧಿ ನೀತಿ ಅನುಸರಿಸುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರ ಸಮಸ್ಯೆ ಬಗೆಹರಿಸುತ್ತಿಲ್ಲ, ಬದಲಾಗಿ ಹೆಚ್ಚಿಸಿವೆ. ಕಾರ್ಮಿಕ ಕಾಯ್ದೆಗಳು ಕಾರ್ಮಿಕರ ಬದುಕನ್ನು ಬೀದಿಗೆ ತಂದು ನಿಲ್ಲಿಸಿವೆ. ಕಾಂಗ್ರೆಸ್ ಮತ್ತು ಬಿಜೆಪಿಗೆ ಉದ್ಯೋಗದ ಬಗ್ಗೆ ಯೋಜನೆ-ಯೋಚನೆಗಳೇ ಇಲ್ಲ. ₹30 ಸಾವಿರ ಕನಿಷ್ಠ ಕೂಲಿಗಾಗಿ ಹೋರಾಟ ಮಾಡುತ್ತಿದ್ದೇವೆ ಎಂದರು.

ಸಿಪಿಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಮೀನಾಕ್ಷಿ ಸುಂದರಂ ಮಾತನಾಡಿ, ‘ಕೇಂದ್ರದ ಕಾರ್ಮಿಕ ಸಂಹಿತೆಗಳನ್ನು ಕೇರಳದ ಮಾದರಿಯಲ್ಲಿ ಕಸದ ಬುಟ್ಟಿಗೆ ಎಸೆಯುವ ಕ್ರಾಂತಿ ನಡೆಯಬೇಕಿದೆ. ಕಾರ್ಮಿಕ ಸಂಹಿತೆಗಳಿಂದ ಕಾರ್ಮಿಕರಿಗೆ ಅನ್ಯಾಯವಾದರೆ ಅದರ ವಿರುದ್ಧ ಧ್ವನಿ ಎತ್ತುವ ಅಥವಾ ಪ್ರತಿಭಟನೆ ಮಾಡುವ ಅವಕಾಶ ಇಲ್ಲ. ಎಷ್ಟು ಬೇಕಾದರೂ ಶೋಷಣೆ ಮಾಡಬಹುದು ಎನ್ನುದನ್ನು ಕಾರ್ಮಿಕ ಸಂಹಿತೆಗಳು ಹೇಳುತ್ತವೆ’ ಎಂದು ಹೇಳಿದರು.

ಕಾರ್ಮಿಕ ಸಂಹಿತೆಯನ್ನು ಜಾರಿ ಮಾಡುವುದಿಲ್ಲ ಎಂದು ಪಿಣರಾಯಿ ವಿಜಯನ್ ನೇತೃತ್ವದ ಕೇರಳ ಸರ್ಕಾರ ಘೋಷಿಸಿದೆ. ಕಾರ್ಮಿಕ ಹಕ್ಕು ಎನ್ನುವುದು ಭಿಕ್ಷೆ ಅಲ್ಲ, ಕಾರ್ಮಿಕರು ಹೋರಾಟದ ಮೂಲಕ ಪಡೆದುಕೊಂಡ ಹಕ್ಕು ಎಂದು ಅಲ್ಲಿನ ಸರ್ಕಾರ ಹೇಳಿದೆ. ರಾಜ್ಯ ಸರ್ಕಾರ ಕೇರಳ ಮಾದರಿಯಲ್ಲಿ ಕೇಂದ್ರದ ಕಾರ್ಮಿಕ ಸಂಹಿತೆ ವಿರುದ್ಧ ಏಕೆ ನಿಲುವು ತೆಗೆದುಕೊಂಡಿಲ್ಲ ಎಂದು ಪ್ರಶ್ನಿಸಿದರು.

ಸಿಪಿಎಂ ಪಾಲಿಟ್ ಬ್ಯುರೊ ಸದಸ್ಯೆ ಯು.ವಾಸುಕಿ ಮಾತನಾಡಿ, ‘ಕೇಂದ್ರ ಸರ್ಕಾರ ಜನರ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳ ಪರ ಕೆಲಸ ಮಾಡುತ್ತಿದೆ. ಐದು ಮಂದಿ ಶ್ರೀಮಂತರು ದೇಶದ ಸಂಪನ್ಮೂಲವನ್ನು ತಮ್ಮದಾಗಿಸಿಕೊಂಡಿದ್ದಾರೆ’ ಎಂದು ಆರೋಪಿಸಿದರು.

ಇದೇ ವೇಳೆ ಕೃಷಿ ಬಿಕ್ಕಟ್ಟು, ಭೂಮಿ ಪ್ರಶ್ನೆ ಸೇರಿ 20 ಅಂಶಗಳ ಹಕ್ಕೊತ್ತಾಯ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸಲಾಯಿತು.

ಹೋರಾಟಗಾರರಾದ ಶ್ರೀರಾಮ್, ಜಿ.ಎನ್.ನಾಗರಾಜ್, ಎಸ್.ವರಲಕ್ಷ್ಮೀ, ಕೆ.ನೀಲಾ, ಸಿಪಿಐ ರಾಜ್ಯ ಮಂಡಳಿ ಕಾರ್ಯದರ್ಶಿ ಸಾತಿ ಸುಂದರೇಶ್ ಹಾಜರಿದ್ದರು.

ಕಾರ್ಯಕ್ರಮದಲ್ಲಿ ಕೆ. ರೇವಣ್ಣ, ಅಜಯ್ ಕುಮಾರ್ ಸಿಂಗ್, ಎಸ್.ಜಿ. ಸಿದ್ಧರಾಮಯ್ಯ, ಅನ್ವರ್ ಅಲಿ, ಎಲ್. ಹನುಮಂತಯ್ಯ, ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

‘ವಿಮರ್ಶಾ ಲೋಕದಿಂದ ಶಿವಪ್ರಕಾಶ್ ಕಡೆಗಣನೆ’

ಭಾಗವತರು ಸಾಂಸ್ಕೃತಿಕ ಸಂಘಟನೆಯ ವಿಚಾರಸಂಕಿರಣ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ‘ಯಾವುದೇ ಪಕ್ಷ, ವ್ಯಕ್ತಿಗೆ ತಮ್ಮನ್ನು ತೆತ್ತುಕೊಳ್ಳದ ಶಿವಪ್ರಕಾಶ್ ವಿಮರ್ಶೆ’
- ‘ಕನ್ನಡ ಮತ್ತು ಭಾರತದ ಇತರ ಭಾಷೆಗಳ ಕೊಂಡಿಯಾಗಿರುವ ಕವಿ’

ಬೆಂಗಳೂರು: ‘ಒಂದು ಕಾಲದಲ್ಲಿ ಪ್ರಖರವಾಗಿದ್ದ ಕನ್ನಡ ವಿಮರ್ಶಾ ಲೋಕ ಈಗ ನಿದ್ದೆಗೆ ಜಾರಿದೆ. ಇದರಿಂದಾಗಿ ಹೊಸ ಚಿಂತನೆಗಳನ್ನು ನೀಡಿದ್ದ ಕವಿ ಎಚ್.ಎಸ್. ಶಿವಪ್ರಕಾಶ್ ಅಂತಹವರನ್ನು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕಡೆಗಣಿಸಲಾಗಿದೆ’ ಎಂದು ಸಾಹಿತ್ಯ ಕ್ಷೇತ್ರದ ಪ್ರಮುಖರು ಬೇಸರ ವ್ಯಕ್ತಪಡಿಸಿದರು.

ಭಾಗವತರು ಸಾಂಸ್ಕೃತಿಕ ಸಂಘಟನೆ ಹಮ್ಮಿಕೊಂಡಿದ್ದ ‘ಸಾಹಿತ್ಯಲೋಕದಲ್ಲಿ ಎಚ್.ಎಸ್. ಶಿವಪ್ರಕಾಶ್’ ವಿಚಾರ ಸಂಕಿರಣದಲ್ಲಿ ಕನ್ನಡ ಹಾಗೂ ಭಾರತೀಯ ಸಾಹಿತ್ಯ ಕ್ಷೇತ್ರಕ್ಕೆ ಶಿವಪ್ರಕಾಶ್ ಅವರು ನೀಡಿದ ಕೊಡುಗೆಯನ್ನು ಸ್ಮರಿಸಲಾಯಿತು.

ಕವಿ ಎಲ್. ಹನುಮಂತಯ್ಯ, ‘ಶಿವಪ್ರಕಾಶ್ ಅವರು ಭಕ್ತಿ ಸಾಹಿತ್ಯದ ಬಗ್ಗೆ ಆಳವಾಗಿ ಅಧ್ಯಯನ ಮಾಡಿದ್ದರು. ವಚನ ಸಾಹಿತ್ಯದ ಅನುವಾದದಲ್ಲಿ ಅವರಷ್ಟು ಉತ್ತಮ ಕೆಲಸ ಮಾಡಿದ ಸಾಹಿತಿ ಬೇರೊಬ್ಬರಿಲ್ಲ. ಬಸವ ಸಾಹಿತ್ಯವನ್ನು ಮುರಿದು ಕಟ್ಟಿ ಹೊಸತನ ತೋರಿದರು. ಆದರೆ, ಅವರ ಸಾಹಿತ್ಯ ಕೃತಿಗಳ ಬಗ್ಗೆ ಅಷ್ಟಾಗಿ ವಿಮರ್ಶೆ ನಡೆದಿಲ್ಲ. ಕನ್ನಡ ವಿಮರ್ಶಾ ಲೋಕವನ್ನು ಎಚ್ಚರಿಸುವ ಕೆಲಸವಾಗಬೇಕಿದೆ. ಅನಂತಮೂರ್ತಿ ಅವರ ‘ಭಾರತೀಪುರ’ ಕಾದಂಬರಿ ಸೇರಿ ವಿವಿಧ ಸಾಹಿತ್ಯ ಕೃತಿಗಳಿಗೆ ಪುಸ್ತಕದಲ್ಲಿನ ಪುಟಗಳಿಗಿಂತಲೂ ಹೆಚ್ಚು ವಿಮರ್ಶೆಗಳು ಬಂದಿದ್ದವು’ ಎಂದು ಹೇಳಿದರು.

ಸಾಹಿತಿ ಎಸ್.ಜಿ.ಸಿದ್ಧರಾಮಯ್ಯ, ‘ಕನ್ನಡ ವಿಮರ್ಶಾ ಕ್ಷೇತ್ರ ಪಕ್ಷಪಾತ ಬಿಟ್ಟು ಮುಕ್ತ ನೆಲೆಯಲ್ಲಿ ವಿಹರಿಸಿಲ್ಲ. ನಮ್ಮಲ್ಲಿ ವಿಮರ್ಶೆ ಭಜನೆ ಹಾಗೂ ಭಂಜನೆಯ ಎರಡು ನೆಲೆಗಳಲ್ಲಿ ಹರಿದಿದೆ. ಈ ಪರಿಸ್ಥಿತಿಯಲ್ಲಿಯೂ ಯಾವುದೇ ಪಕ್ಷ, ವ್ಯಕ್ತಿಗೆ ತಮ್ಮನ್ನು ತೆತ್ತುಕೊಳ್ಳದ ರೀತಿ ಕೆಲ ಸೂಕ್ಷ್ಮಮತಿಗಳು ವಿಮರ್ಶೆ ಮಾಡಿಕೊಂಡು ಬಂದಿದ್ದಾರೆ. ಶಿವಪ್ರಕಾಶ್ ಅವರು ಹೊರತೋರಿಕೆಗೆ ದ್ವಂದ್ವಾತ್ಮಕ ವ್ಯಕ್ತಿತ್ವದ ರೀತಿ ಕಾಣುತ್ತಾರೆ. ಆದರೆ, ಅವರ ಕಾವ್ಯ ಪ್ರಪಂಚ ಹೊಕ್ಕಾಗ ನಿಜವಾಗಿಯೂ ಕನ್ನಡದಲ್ಲಿ ಅನನ್ಯವಾದವರು ಎಂಬುದು ಅರಿವಿಗೆ ಬರುತ್ತದೆ’ ಎಂದು ಅವರು ಅಭಿಪ್ರಾಯಪಟ್ಟರು.

ಮಲೆಯಾಳ ಕವಿ ಅನ್ವರ್ ಅಲಿ ಅವರು ಶಿವಪ್ರಕಾಶ್ ಅವರ ಜತೆಗಿನ ಒಡನಾಟ ಹಾಗೂ ಅವರ ಸಾಹಿತ್ಯವನ್ನು ಸ್ಮರಿಸಿಕೊಂಡು, ‘ಶಿವಪ್ರಕಾಶ್ ಅವರು ಕನ್ನಡ ಮತ್ತು ಭಾರತದ ಇತರ ಭಾಷೆಗಳ ಕವಿಗಳ ನಡುವೆ ಸೇತುವೆಯಾಗಿದ್ದರು’ ಎಂದು ಹೇಳಿದರು.

ನಿವೃತ್ತ ಐಪಿಎಸ್ ಅಧಿಕಾರಿ ಅಜಯ್ ಕುಮಾರ್ ಸಿಂಗ್, ‘ಶಿವಪ್ರಕಾಶ್ ಅವರ ಸಾಹಿತ್ಯ ಲೋಕ ವಿಶಾಲವಾಗಿದೆ. ಅವರು ಕಾವ್ಯದ ಮೂಲಕ ಹೆಚ್ಚು ಪರಿಚಿತರಾದರು’ ಎಂದರು.

ಭಾಗವತರು ಸಾಂಸ್ಕೃತಿಕ ಸಂಘಟನೆಯ ಅಧ್ಯಕ್ಷ ಕೆ.ರೇವಣ್ಣ, ಪ್ರಕಾಶಕ ಬಿ.ಎಸ್. ವಿದ್ಯಾರಣ್ಯ ಉಪಸ್ಥಿತರಿದ್ದರು.

ಸಂಕ್ಷಿಪ್ತ ಸುದ್ದಿ

ಲೇಖಕಿಯರ ಸಂಘ ಪದಾಧಿಕಾರಿಗಳ ನೇಮಕ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘಕ್ಕೆ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರನ್ನು ನೇಮಕ ಮಾಡಲಾಗಿದೆ.

ಸಂಘದ ಅಧ್ಯಕ್ಷರಾದ ಆರ್. ಸುನಂದಮ್ಮ ನೇಮಕಾತಿ ಮಾಡಿದ್ದಾರೆ. ಉಪಾಧ್ಯಕ್ಷರಾಗಿ ಆರ್.ಕೆ. ಸರೋಜ ಹಾಗೂ ಸರ್ವಮಂಗಳಾ, ಕಾರ್ಯದರ್ಶಿಯಾಗಿ ಸುಮಾ ಸತೀಶ್, ಸಹ ಕಾರ್ಯದರ್ಶಿಯಾಗಿ ಬಿ.ಟಿ. ಅನುರಾಧ, ಖಜಾಂಚಿಯಾಗಿ ಲಲಿತಾ ಹೊಸಪ್ಯಾಟಿ ಅವರನ್ನು ನೇಮಿಸಲಾಗಿದೆ.

ಲೇಖಕಿಯರಾದ ಮುಕ್ತ ಬಿ. ಕಾಗಲಿ, ಕೃಷ್ಣಾಬಾಯಿ ಹಾಗಲವಾಡಿ, ಮಧುರಾ ಕರ್ಣಂ, ಟಿ.ಟಿ. ಅನುಸೂಯಾ ಹೊಂಬಾಳೆ, ರೇಣುಕಾ ಕೋಡಗುಂಟಿ, ಮಾನಸ ಚಂದ್ರಿಕಾ, ಜ್ಞಾಹಿದಾ ಶಿರೀನ್, ಜ್ಯೋತಿ ಎ., ಮಮತಾ ಕೆ.ಎನ್. ಮತ್ತು ಗೌರಿ ಅವರನ್ನು ಕಾರ್ಯಕಾರಿ ಸಮಿತಿಗೆ ನೇಮಕ ಮಾಡಲಾಗಿದೆ ಎಂದು ಸುನಂದಮ್ಮ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ಕೆನರಾ ಬ್ಯಾಂಕ್ ರಿಲೀಫ್ ಮತ್ತು ವೆಲ್‌ಫೇರ್ ಸೊಸೈಟಿ–ಮಾತೃಛಾಯ ಸಂಸ್ಥೆಯಿಂದ ಆರೋಗ್ಯ ಸೇವಾ ಸಹಾಯಕರ ಉಚಿತ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ಐದನೇ ತರಗತಿ ಉತ್ತೀರ್ಣರಾದ 18 ರಿಂದ 45 ವರ್ಷದೊಳಗಿನ ಆರ್ಥಿಕವಾಗಿ ಹಿಂದುಳಿದ ಮಹಿಳೆಯರು ಅರ್ಜಿ ಸಲ್ಲಿಸಬಹುದು. ಆಯ್ಕೆಯಾದವರಿಗೆ ಉಚಿತ ಊಟ ಮತ್ತು ವಸತಿ ಸೌಲಭ್ಯ ಇರಲಿದೆ. ವೈದ್ಯಕೀಯ ಕ್ಷೇತ್ರದ ತಜ್ಞರಿಂದ 10 ದಿನ ತರಗತಿ ನಡೆಯಲಿದ್ದು, ಬೆಡ್ ಪ್ಯಾನ್ ಬಳಕೆ, ಆಹಾರ ನೀಡುವ ಕ್ರಮ, ಫಿಸಿಯೋಥೆರಪಿ (ಬೇಸಿಕ್) ಬಗ್ಗೆ ತರಬೇತಿ ನೀಡಲಾಗುತ್ತದೆ.

ವಿಳಾಸ: ಮಾತೃಛಾಯ ಸಂಸ್ಥೆ, 27ನೇ ತಿರುವು, ಸೇವಾಕ್ಷೇತ್ರ ಆಸ್ಪತ್ರೆ ಆವರಣ, ಬನಶಂಕರಿ ಎರಡನೇ ಹಂತ, ಬೆಂಗಳೂರು–560070,
ಮಾಹಿತಿಗೆ: 080–26713421.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು – 560 064
ವೆಬ್‌ಸೈಟ್: rwf.indianrailways.gov.in.
ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಡಬ್ಲ್ಯೂ/25–26/18
ದಿನಾಂಕ: 19.12.2025
ಇ–ಟೆಂಡರ್‌ಗಳು: ಭಾರತದ ರಾಷ್ಟ್ರಪತಿಯವರ ಪರವಾಗಿ ಉಪ ಮುಖ್ಯ ಇಂಜಿನಿಯರ್‌ರವರು ವೆಬ್‌ಸೈಟ್ http://www.ireps.gov.in (Works) ಆನ್‌ಲೈನ್ ಮೂಲಕ ಕೆಳಗೆ ತಿಳಿಸಿರುವ ಕೆಲಸಗಳಿಗೆ ಎಲೆಕ್ಟ್ರಾನಿಕ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **ಟೆಂಡರ್ ಸಂಖ್ಯೆ:** ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ವೈಎನ್‌ಕೆ/1071. **ವಿವರ:** ಆರ್‌ಡಬ್ಲ್ಯೂಎಫ್ ಕಾರ್ಖಾನೆ ಆವರಣದೊಳಗೆ ಹಾಲಿಯಿರುವ ಫಸ್ಟ್ ಏಡ್ ಕಟ್ಟಡದ 1ನೇ ಮಹಡಿಯಲ್ಲಿ ಮೌಲ್ಡಿಂಗ್ ಕೊಠಡಿ ಕಛೇರಿ ನಿರ್ಮಾಣ. **ಅಂದಾಜು ಮೌಲ್ಯ:** ರೂ.37,62,439.91. **ಇಎಂಡಿ ಮೊತ್ತ:** ರೂ.75,300/–. **ಕೊನೆಯ ದಿನಾಂಕ ಹಾಗೂ ಸಮಯ:** 12.01.2026 ರಂದು 15.00 ಗಂಟೆಯವರೆಗೆ.
ಉಪ ಮುಖ್ಯ ಇಂಜಿನಿಯರ್

10ನೇ ವಾರ್ಷಿಕ ಘಟಿಕೋತ್ಸವ: ಅತಿಥಿ: ನವಕಾಂತ ಭಟ್, ಅಧ್ಯಕ್ಷತೆ: ಎಂ.ಆರ್. ಜಯರಾಮ್, ಆಯೋಜನೆ: ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್, ಸ್ಥಳ: ರಾಮಯ್ಯ ಮೆಡಿಕಲ್ ಕಾಲೇಜಿನ ಸಭಾಂಗಣ, ಜ್ಞಾನಗಂಗೋತ್ರಿ ಆವರಣ, ಎಂಎಸ್‌ಆರ್ ನಗರ, ಬೆಳಿಗ್ಗೆ 9

ಇಸರೊ ISRO
ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ,
ಎಲೆಕ್ಟ್ರೋ-ಆಪ್ಟಿಕ್ಸ್ ಸಿಸ್ಟಮ್ಸ್ (ಎಲ್.ಇ.ಓ.ಎಸ್.) ಪ್ರಯೋಗಾಲಯ
ಎಲ್.ಇ.ಓ.ಎಸ್. ನಿರ್ಮಾಣ ಮತ್ತು ನಿರ್ವಹಣಾ ವಿಭಾಗ (ಎಲ್.ಸಿ.ಎಂ.ಡಿ.)
ಪೀಣ್ಯ, ಬೆಂಗಳೂರು - 560058
(ದೂರವಾಣಿ : 080-22685086, 5047, 5094, 28392310)
ತಿದ್ದುಪಡಿ - 1

ಕ್ರ.ಸಂ.	ವಿವರಣೆ	ವಿವರಗಳು
1.	ಕೆಲಸದ ಹೆಸರು	ಎಲ್.ಇ.ಓ.ಎಸ್. ಕ್ಯಾಂಪಸ್ ಮತ್ತು ಹೊಸ ಅತಿಥಿ ಗೃಹ, ಪೀಣ್ಯ, ಬೆಂಗಳೂರು – 58 ಇಲ್ಲಿ ಲಿವರೀಸ್ ತೊಳೆಯುವ ಮತ್ತು ಒತ್ತುವ ಒಪ್ಪಂದ.
2.	ಇ–ಟೆಂಡರ್ ನೋಟೀಸ್ ನಂ.	CMG/LEOS/2025-26/LMN-07 Dtd: 24.11.2025
3.	ಟೆಂಡರ್‌ಗೆ ಇಡಲಾದ ಅಂದಾಜು ವೆಚ್ಚ	₹ 2.35 ಲಕ್ಷ
4.	ಟೆಂಡರ್ ಡಾಕ್ಯೂಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ	ದಿನಾಂಕ : 24.12.2025 ರಂದು 16.30 ರವರೆಗೆ ವಿಸ್ತರಿಸಲಾಗಿದೆ
5.	ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ : 29.12.2025 ರಂದು 14.30 ಗಂಟೆಯವರೆಗೆ
6.	ಟೆಂಡರ್‌ಗಳು ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ : 29.12.2025 ರಂದು 15.00 ಗಂಟೆಯ ನಂತರ

ಆಸಕ್ತ ಟೆಂಡರ್‌ಗಳು ಅರ್ಹತಾ ಮಾನದಂಡಗಳು ಮತ್ತು ಇತರ ವಿವರಗಳಿಗಾಗಿ ವೆಬ್‌ಸೈಟ್ : www.isro.gov.in ನಲ್ಲಿ ಹಿಂದಿ ಆವೃತ್ತಿಯೊಂದಿಗೆ ವಿವರವಾದ ಇ–ಟೆಂಡರ್ ಆಹ್ವಾನ ಪ್ರಕಟಣೆ (NIET) ಅನ್ನು ದಯವಿಟ್ಟು ನೋಡಬಹುದು ಮತ್ತು ಟೆಂಡರ್ ದಾಖಲೆಗಳನ್ನು www.tenderwizard.com/ISRO ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಸಹಿ/-
ಸಮೂಹ ನಿರ್ದೇಶಕರು, ಸಿ & ಎಂ.ಜಿ.

ನಗರದಲ್ಲಿ ಇಂದು

ಮಾಜಿ ಸಚಿವ ಆರ್. ಕೃಷ್ಣಪ್ಪ ಅವರ ‘ಸುಗುಣಾಂತರಂಗ’ ಅಭಿನಂದನಾ ಗ್ರಂಥ ಬಿಡುಗಡೆ: ಸಿದ್ದರಾಮಯ್ಯ, ಅತಿಥಿಗಳು: ಆರ್.ವಿ. ದೇಶಪಾಂಡೆ, ಎಚ್.ಸಿ. ಮಹದೇವಪ್ಪ, ಕೃಷ್ಣ ಬೈರೇಗೌಡ, ಜಮೀರ್ ಅಹಮದ್ ಖಾನ್, ಬೈರತಿ ಸುರೇಶ್, ಎಚ್.ಎಂ. ರೇವಣ್ಣ, ಗ್ರಂಥದ ಕುರಿತು: ವೂಡೇ ಪಿ. ಕೃಷ್ಣ, ಉಪಸ್ಥಿತಿ: ರುಕ್ಮಿಣಿಯಮ್ಮ ಆರ್. ಪಿ. ಸಾಂಬಸದಾಶಿವರೆಡ್ಡಿ, ಆಯೋಜನೆ: ಆರ್. ಕೃಷ್ಣಪ್ಪ ಅಭಿನಂದನಾ ಸಮಿತಿ, ಮೀಡಿಯಾ ಸಲ್ಯೂಷನ್ಸ್, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10

ದಾಸವಾಣಿ: ರಾಯಚೂರು ಶೇಷಗಿರಿ ದಾಸ್, ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ಮುಖ್ಯರಸ್ತೆ, ಮಧ್ಯಾಹ್ನ 1

ಸಂಗೀತ ರಸ ಸಂಜೆ–ಗೀತ ಗಾಯನ ಸಂಭ್ರಮ: ಅತಿಥಿಗಳು: ಎಂ.ಆರ್.ವಿ. ಪ್ರಸಾದ್, ಮೋಹನ್ ದೇವ್ ಆಳ್ವ, ಎಂ. ಶೈಲಜಾ ಆಳ್ವ, ಅಧ್ಯಕ್ಷತೆ: ವಿಷ್ಣು ಭರತ್ ಎ.ಎಸ್., ಉಪಸ್ಥಿತಿ: ಎ. ಪ್ರಕಾಶ್, ಗೀತ ಗಾಯನ: ಕಮಲಾ ಪ್ರಾಣೇಶ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಆಚಾರ್ಯ ಪಾಠಶಾಲಾ ಶಿಕ್ಷಣ ಸಂಸ್ಥೆ, ಎನ್.ಆರ್. ಕಾಲೊನಿ, ಸಂಜೆ 5

ಹೊಸ ವರ್ಷದ ಕೇಕ್–ಕಲಾ ಶಿಲ್ಪದ ಅನಾವರಣ: ಆಯೋಜನೆ: ಸ್ಪಾರ್ಕ್ 2026– ದಿ ಬೆಂಗಳೂರು ಹೊರೈಝುನ್, ಕೇಕ್ ಶೊ, ಸ್ಥಳ: ತ್ರಿಪುರ ವಾಸಿನಿ, ಅರಮನೆ ಮೈದಾನ, ಸಂಜೆ 4

ಕಲಾ ರಸ ಧಾರೆ: ಅತಿಥಿ: ಸಾಯ್ ವೆಂಕಟೇಶ್, ಸಂಗೀತ ಹಿಮ್ಮೇಳ: ಬಿ.ಯು. ಓಜಸ್ವಿನಿ, ಗಾಯನ: ದೀಪ್ತಿ ಎಸ್., ಮೃದಂಗ: ರಾಜಪುರಂ ಆರ್. ಕಾರ್ತಿಕ್, ಕೊಳಲು: ಕೆ.ಎನ್. ಗಣೇಶ್, ಆಯೋಜನೆ: ಕಲಾ ಸುಸಂಸ್ಕೃತಿ ಅಕಾಡೆಮಿ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ಮಾರ್ಗಶೀರ್ಷೋತ್ಸವ: ಭರತನಾಟ್ಯ ಪ್ರದರ್ಶನ: ಮಿಥುನ್ ಶ್ಯಾಮ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

‘ಮಹಾಯುಗ’ ನಾಟಕ ಪ್ರದರ್ಶನ: ನಿರ್ದೇಶನ: ಜೋಸೆಫ್ ಜಾನ್, ಆಯೋಜನೆ: ಸುಸ್ಥಿರ ಪ್ರತಿಷ್ಠಾನ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

‘ಮಧ್ವ ಸಿದ್ಧಾಂತ ಸಾರ’ ಧಾರ್ಮಿಕ ಪ್ರವಚನ: ಕಲ್ಯಾ ಶ್ರೀಕಾಂತಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಆರನೇ ಅಡ್ಡರಸ್ತೆ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 7

MARUTI SUZUKI
NEXA
UNBELIEVABLE RATE OF INTEREST ON STRONG HYBRID VARIANTS.
AVAIL LOAN @ 3.99%#
STRONG HYBRID
INVICTO
GRAND VITARA
INVICTO | GRAND VITARA
ECO MODE
POWER MODE
EV MODE
e-CVT
DRIVE MODES
360 VIEW CAMERA
5 YEAR WARRANTY~
3 YEARS + 2 YEARS COMPLIMENTARY
8 YEAR WARRANTY ON THE BATTERY^
BENEFITS UP TO ₹ 5 93 500*
NEXA SAFETY SHIELD
SCAN TO CONNECT TO A SHOWROOM NEAR YOU
E-BOOK TODAY @ WWW.NEXAEXPERIENCE.COM
Contact us at
1800-200-[6392]
1800-102-[6392]
For detailed T&C kindly visit nearest dealership. Maruti Suzuki India Limited reserves the right to discontinue offers without notice and offers may vary across models/variants. *Offer includes consumer offer, exchange bonus and institutional or rural offer (wherever applicable) on select models/variants. Above offers are valid till 31st December 2025. Features and accessories shown may not be part of standard fitment. Images used are for illustration purposes only. Car color may vary due to printing on paper. ^Maruti Suzuki offers warranty of ninety six (96) months or 1 60 000 kilometers (whichever occurs first) for Hybrid Electric Vehicle (HEV) battery from the date of invoice to the first owner ~This extended warranty is applicable for Delta+, Zeta, Zeta+, Alpha & Alpha+ variants except CNG variants of Grand Vitara. #Scheme valid for limited period. Finance at the sole discretion of the financier and may vary based on customer profile. Special Rate of Interest may vary basis subvention amount and customer credit evaluation by the financier. Customer may choose to avail either special rate of interest or applicable customer offer(s).

60.16 ಲಕ್ಷ ಮಕ್ಕಳಿಗೆ ಪೋಲಿಯೊ ಹನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆಯು ರಾಜ್ಯದಾದ್ಯಂತ ಭಾನುವಾರ ಹಮ್ಮಿಕೊಂಡಿದ್ದ ಪಲ್ಸ್ ಪೋಲಿಯೊ ಲಸಿಕೆ ವಿತರಣೆ ಅಭಿಯಾನದಲ್ಲಿ 60.16 ಲಕ್ಷ ಮಕ್ಕಳು ಪೋಲಿಯೊ ಹನಿ ಹಾಕಿಸಿಕೊಂಡಿದ್ದಾರೆ.

ಇಲಾಖೆಯು ಈ ಬಾರಿ 62.40 ಲಕ್ಷ ಮಕ್ಕಳಿಗೆ ಲಸಿಕೆ ವಿತರಿಸುವ ಗುರಿ ಹಾಕಿಕೊಂಡಿತ್ತು. ಶೇ 96ರಷ್ಟು ಗುರಿ ತಲುಪಿದ್ದು, ಬಿಟ್ಟು ಹೋದ ಹಾಗೂ ಅಭಿಯಾನದಿಂದ ಹೊರಗುಳಿದ ಮಕ್ಕಳಿಗೆ ಇದೇ 24 ರವರೆಗೆ ಮನೆ– ಮನೆಗೆ ತೆರಳಿ ಪೋಲಿಯೊ ಹನಿ ಹಾಕಲಾಗುತ್ತದೆ.

ಜಿಬಿಎ (ಗ್ರೇಟರ್ ಬೆಂಗಳೂರು ಪ್ರಾಧಿಕಾರ) ವ್ಯಾಪ್ತಿಯಲ್ಲಿ ಗರಿಷ್ಠ ಮಕ್ಕಳಿಗೆ (10.77 ಲಕ್ಷ) ಪೋಲಿಯೊ ಹನಿ ಹಾಕಲಾಗಿದೆ. ಜಿಲ್ಲಾವಾರು ನಿಗದಿಪಡಿಸಲಾದ ಗುರಿಯಲ್ಲಿ ಉತ್ತರ ಕನ್ನಡ ಜಿಲ್ಲೆ ಅಗ್ರ ಸ್ಥಾನ ಪಡೆದುಕೊಂಡಿದೆ.

ಬೆಂಗಳೂರು ಪೂರ್ವ ನಗರ ಪಾಲಿಕೆ ಶೇ 98ರಷ್ಟು ಗುರಿ ಸಾಧನೆ ಮಾಡಿದೆ. ಕೇಂದ್ರ ನಗರ ಪಾಲಿಕೆಯಲ್ಲಿ 1.76 ಲಕ್ಷ (ಶೇ 95), ಪಶ್ಚಿಮ ನಗರ ಪಾಲಿಕೆಯಲ್ಲಿ 2.63 ಲಕ್ಷ (ಶೇ 94), ದಕ್ಷಿಣ ನಗರ ಪಾಲಿಕೆಯಲ್ಲಿ 2.12 ಲಕ್ಷ (ಶೇ 95) ಹಾಗೂ ಉತ್ತರ ನಗರ ಪಾಲಿಕೆಯಲ್ಲಿ 2.53 ಲಕ್ಷ (ಶೇ 94) ಮಕ್ಕಳಿಗೆ ಪೋಲಿಯೊ ಹನಿ ವಿತರಿಸಲಾಗಿದೆ.

ಕಾಮರಾಜ್ ರಸ್ತೆ ಶೀಘ್ರ ಪೂರ್ಣ ಮುಕ್ತ

ಒಂದು ಪಥದಲ್ಲಿ ಸಂಚಾರವಿದ್ದು, ಸಿದ್ಧಗೊಂಡ ಇನ್ನೊಂದು ಪಥ

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಮ್ಮ ಮೆಟ್ರೊ ಗುಲಾಬಿ ಮಾರ್ಗದ ಕಾಮಗಾರಿಗಾಗಿ ಮುಚ್ಚಿದ್ದ ಕಾಮರಾಜ್ ರಸ್ತೆ ಆರೂವರೆ ವರ್ಷಗಳ ಬಳಿಕ ಪೂರ್ಣ ಪ್ರಮಾಣದಲ್ಲಿ ಸಂಚಾರಕ್ಕೆ ತೆರೆದುಕೊಳ್ಳಲು ಸಿದ್ಧಗೊಂಡಿದೆ. 2026ರ ಜನವರಿ ಮೊದಲ ವಾರದಲ್ಲಿ ಸಾರ್ವಜನಿಕರ ಸಂಚಾರಕ್ಕೆ ಮುಕ್ತವಾಗಲಿದೆ.

ಎಂ.ಜಿ. ರಸ್ತೆಯಿಂದ ಕಬ್ಬನ್ ರಸ್ತೆ ಜಂಕ್ಷನ್ ಕಡೆಗೆ ಸಾಗುವ ಒಂದು ಬದಿ ರಸ್ತೆಯಲ್ಲಿ ವಾಹನ ಸಂಚಾರ 2024ರ ಜೂನ್‌ನಲ್ಲಿ ಆರಂಭವಾಗಿತ್ತು. ಮೆಟ್ರೊ ನಿಲ್ದಾಣ ಮತ್ತು ಸುರಂಗ ಮಾರ್ಗದ ಕಾಮಗಾರಿ ನಡೆಸಿರುವ ಯಂತ್ರಗಳು ಇನ್ನಿತರ ಸಾಮಗ್ರಿಗಳನ್ನು ಸಾಗಾಟ ಮಾಡಲು ಆರು ತಿಂಗಳು ಬೇಕಿದ್ದು, ಅದಕ್ಕಾಗಿ ಕಬ್ಬನ್ ರಸ್ತೆ ಜಂಕ್ಷನ್ ಕಡೆಯಿಂದ ಎಂ.ಜಿ. ರಸ್ತೆ ಕಡೆಗೆ ಸಾಗುವ ರಸ್ತೆಯನ್ನು ವಾಹನ ಸಂಚಾರಕ್ಕೆ 2024ರ ಡಿಸೆಂಬರ್ ನಂತರ ತೆರೆಯಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದರು. ಇದೀಗ ಒಂದು ವರ್ಷ ತಡವಾಗಿ ತೆರೆದುಕೊಳ್ಳುತ್ತಿದೆ.

ನಾಗವಾರ–ಕಾಳೇನ ಅಗ್ರಹಾರ ಮೆಟ್ರೊ ಮಾರ್ಗದಲ್ಲಿ ಕಾವೇರಿ ಎಂಪೋರಿಯಂ ಜಂಕ್ಷನ್‌ನಿಂದ ಕಬ್ಬನ್ ರಸ್ತೆ ಜಂಕ್ಷನ್‌ವರೆಗೆ ಅಂತರ್‌ಬದಲಾವಣೆಯ (ಇಂಟರ್‌ಚೇಂಜ್) ಎಂ.ಜಿ. ರಸ್ತೆ ಮೆಟ್ರೊ ಭೂಗತ ನಿಲ್ದಾಣ ನಿರ್ಮಿಸಲು ಕಾಮರಾಜ್ ರಸ್ತೆಯನ್ನು 2019ರಲ್ಲಿ ಬಿಎಂಆರ್‌ಸಿಎಲ್ ಮುಚ್ಚಿತ್ತು. ಆದರೆ, ಜಮೀನು ಹಸ್ತಾಂತರ, ಮರಗಳ ತೆರವು ಪ್ರಕ್ರಿಯೆ ವಿಳಂಬವಾಗಿದ್ದರಿಂದ ಕಾಮಗಾರಿ ವೇಗ ಪಡೆದುಕೊಂಡಿರಲಿಲ್ಲ. ಈ ಮಧ್ಯೆ ಕೋವಿಡ್ ಬಿಕ್ಕಟ್ಟು ಕಾಡಿದ್ದರಿಂದ ಕಾಮಗಾರಿ ಇನ್ನಷ್ಟು ನಿಧಾನವಾಗಿತ್ತು. 2022ರ ನಂತರ ಕಾಮಗಾರಿಗೆ ವೇಗ ನೀಡಲಾಗಿತ್ತು.

ಕಾಮರಾಜ್ ರಸ್ತೆ ಮುಚ್ಚಿದ್ದರಿಂದ, ಈ ರಸ್ತೆ ಮೂಲಕ ಬ್ರಿಗೇಡ್ ರಸ್ತೆ, ಕಮರ್ಷಿಯಲ್ ಸ್ಟ್ರೀಟ್ ಮತ್ತು ಇತರ ಸ್ಥಳಗಳನ್ನು ತಲುಪಲು ವಾಹನ ಸವಾರರು ಸುತ್ತು ಹಾಕಿಕೊಂಡು ಬರುವಂತಾಗಿತ್ತು. 2024ರಲ್ಲಿ ಕಾಮಗಾರಿ ಅಂತಿಮ ಹಂತಕ್ಕೆ ಬಂದಿದ್ದಾಗ ಕಾಮರಾಜ್ ರಸ್ತೆಯ ಒಂದು ಬದಿಯಲ್ಲಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿತ್ತು.

ಎಂ.ಜಿ. ರಸ್ತೆಯ ಮೆಯೋಹಾಲ್ ಜಂಕ್ಷನ್ ಕಡೆಯಿಂದ ಬರುವ ವಾಹನಗಳು ಕಾವೇರಿ ಎಂಪೋರಿಯಂ ಜಂಕ್ಷನ್‌ನಲ್ಲಿ ಬಲ ತಿರುವು ಪಡೆದು ಕಾಮರಾಜ್ ರಸ್ತೆಯಲ್ಲಿ ಸಂಚರಿಸಿ ಕಬ್ಬನ್ ರಸ್ತೆ ಜಂಕ್ಷನ್‌ನಲ್ಲಿ ನೇರವಾಗಿ ಸಾಗಿ ಕಮರ್ಷಿಯಲ್ ಸ್ಟ್ರೀಟ್ ಕಡೆಗೆ ತೆರಳುವವರಿಗೆ ಅನುಕೂಲವಾಯಿತು. ಕಬ್ಬನ್ ರಸ್ತೆಯ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ಬಿಆರ್‌ವಿ ಕಡೆಗೆ ಹಾಗೂ ಬಲ ತಿರುವು ಪಡೆದು ಮಣಿಪಾಲ್ ಸೆಂಟರ್ ಕಡೆಗೂ ವಾಹನ ಸಂಚಾರ ಸುಗಮವಾಯಿತು. ಆದರೆ ಆ ಕಡೆಯಿಂದ ಎಂ.ಜಿ. ರಸ್ತೆ, ಚರ್ಚ್ ಸ್ಟ್ರೀಟ್ ಕಡೆಗೆ ಬರುವವರು ಎಂದಿನಂತೆ ಸುತ್ತು ಹಾಕಿ ಬರುವುದು ಮುಂದುವರಿದಿತ್ತು.

ನಮ್ಮ ಮೆಟ್ರೊ ಗುಲಾಬಿ ಮಾರ್ಗ ಮತ್ತು ನೇರಳೆ ಮಾರ್ಗ ಸಂಪರ್ಕಿಸುವ ಇಂಟರ್‌ಚೇಂಜ್ ನಿಲ್ದಾಣದ ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ. ಕಾಮರಾಜ್ ರಸ್ತೆಯಲ್ಲಿ ಈಗಾಗಲೇ ಒಂದು ಪಥದಲ್ಲಿ ವಾಹನ ಸಂಚಾರ ಇದೆ. ಇನ್ನೊಂದು ಪಥವನ್ನು ವಾಹನ ಸಂಚಾರಕ್ಕೆ 15 ದಿನಗಳಲ್ಲಿ ಬಿಟ್ಟುಕೊಡಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ನಮ್ಮ ಮೆಟ್ರೊ ಗುಲಾಬಿ ಮಾರ್ಗದ ಕಾಮಗಾರಿಗಾಗಿ ಬಂದ್ ಮಾಡಲಾಗಿದ್ದ ಕಾಮರಾಜ್ ರಸ್ತೆ ಪೂರ್ಣ ಪ್ರಮಾಣದಲ್ಲಿ ಸಂಚಾರಕ್ಕೆ ತೆರೆದುಕೊಳ್ಳಲು ಸಿದ್ಧವಾಗಿದೆ ಪ್ರಜಾವಾಣಿ ಚಿತ್ರ: ಪ್ರಶಾಂತ್ ಜಿ.ಎಚ್

50 ಮೀಟರ್ ಅಂತರ

ಕಾಮರಾಜ್ ರಸ್ತೆ ಮೆಟ್ರೊ ನಿಲ್ದಾಣವು ನಾಲ್ಕು ಪ್ರವೇಶ–ನಿರ್ಗಮನ ದ್ವಾರಗಳನ್ನು ಹೊಂದಿರುತ್ತದೆ. ಈಗಾಗಲೇ ನೇರಳೆ ಮಾರ್ಗದಲ್ಲಿ ಇರುವ ಎಂ.ಜಿ. ರಸ್ತೆಯ ಮೆಟ್ರೊ ನಿಲ್ದಾಣಕ್ಕೆ ಹೊಸ ನಿಲ್ದಾಣದ ಒಂದು ದ್ವಾರ ಸಂಪರ್ಕಿಸಲಿದೆ.

ಎಂ.ಜಿ. ರಸ್ತೆಯಲ್ಲಿ ನೇರಳೆ ಮಾರ್ಗದ ಮೆಟ್ರೊ ನಿಲ್ದಾಣಕ್ಕೂ ಗುಲಾಬಿ ಮಾರ್ಗದ ನಿಲ್ದಾಣಕ್ಕೂ 50 ಮೀಟರ್ ಅಂತರ ಇದೆ. ಆದರೂ ಪ್ರಯಾಣಿಕರು ಮಾರ್ಗ ಬದಲಾಯಿಸಲು ಸುಲಭವಾಗುವಂತೆ ಯೋಜನೆ ರೂಪಿಸಲಾಗಿದೆ. ನೇರಳೆ ಮತ್ತು ಗುಲಾಬಿ ನಿಲ್ದಾಣಗಳ ನಡುವಿನ ಓಡಾಟಕ್ಕೆ ಪ್ರಯಾಣಿಕರು ಗೇಟ್ ದಾಟಿ ಹೋಗದಂತೆ ಸಂಯೋಜನೆ ಮಾಡಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ನಾಲ್ಕನೇ ಇಂಟರ್‌ಚೇಂಜ್

ಎಂ.ಜಿ. ರಸ್ತೆಯಲ್ಲಿ ನಿರ್ಮಾಣಗೊಳ್ಳುತ್ತಿರುವ ಇಂಟರ್‌ಚೇಂಜ್ ನಿಲ್ದಾಣವು ನಮ್ಮ ಮೆಟ್ರೊ ಜಾಲದ ನಾಲ್ಕನೇ ಇಂಟರ್‌ಚೇಂಜ್ ನಿಲ್ದಾಣವಾಗಲಿದೆ.

ನೇರಳೆ ಮತ್ತು ಹಸಿರು ಮಾರ್ಗಗಳು ಸಂಧಿಸುವ ಮೆಜೆಸ್ಟಿಕ್ ಇಂಟರ್‌ಚೇಂಜ್ ನಿಲ್ದಾಣ ಒಂದೇ ಸುಮಾರು 10 ವರ್ಷಗಳಿಂದ ಇತ್ತು. ಕಳೆದ ಆಗಸ್ಟ್‌ನಲ್ಲಿ ಹಳದಿ ಮಾರ್ಗದಲ್ಲಿ ಮೆಟ್ರೊ ಸಂಚಾರ ಆರಂಭಗೊಂಡಾಗ ಹಳದಿ ಮಾರ್ಗವು ಹಸಿರು ಮಾರ್ಗವನ್ನು ಸಂಪರ್ಕಿಸುವ ಆರ್.ವಿ. ರಸ್ತೆಯ ಇಂಟರ್‌ಚೇಂಜ್ ನಿಲ್ದಾಣವು ಎರಡನೇಯದ್ದಾಯಿತು. ಗುಲಾಬಿ ಮಾರ್ಗದಲ್ಲಿ ಎತ್ತರಿಸಿದ ಮಾರ್ಗದಲ್ಲಿ 2026ರಲ್ಲಿ ಮೆಟ್ರೊ ಸಂಚಾರ ಆರಂಭಗೊಳ್ಳಲಿದೆ.

ಹಳದಿ ಮತ್ತು ಗುಲಾಬಿ ಮಾರ್ಗವನ್ನು ಸಂಪರ್ಕಿಸುವ ಜಯದೇವ ಆಸ್ಪತ್ರೆ ನಿಲ್ದಾಣವು ಆಗ ಮೂರನೇ ಇಂಟರ್‌ಚೇಂಜ್ ಆಗಿ ಕಾರ್ಯನಿರ್ವಹಿಸಲಿದೆ. ಗುಲಾಬಿ ಮಾರ್ಗದ ಸುರಂಗ ಮಾರ್ಗದಲ್ಲಿ 2027ರಲ್ಲಿ ಸಂಚಾರ ಆರಂಭಗೊಳ್ಳಲಿದ್ದು, ಎಂ.ಜಿ. ರಸ್ತೆ ಆಗ ನಾಲ್ಕನೇ ಇಂಟರ್‌ಚೇಂಜ್ ಆಗಲಿದೆ.

ಸುದ್ದಿ 2 ನಿಮಿಷ

ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ಉಪ ಕೇಂದ್ರಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುವ ಕಾರಣ ಡಿ. 22ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಕಂಬೀಪುರ, ಕಾರುಬೆಲೆ, ಎಚ್.ಗೊಲ್ಲಹಳ್ಳಿ, ಕಾಟನಾಯಕನಪುರ, ವರಹಸಂದ್ರ, ಸ್ವಾಮೀಜಿನಗರ, ಅಂಚೆಪಾಳ್ಯ, ಅಪ್ರಮೇಯನಗರ, ಕೃಷ್ಣ ಟೆಂಪಲ್, ಸರ್ಕಾರಿ ಶಾಲೆ, ಪ್ರಾವಿಡೆಂಟ್ ಅಪಾರ್ಟ್‌ಮೆಂಟ್, ವಿಬಿಎಚ್‌ಸಿ ಅವಾಟೋಮೆಂಟೋ, ಗುಡ್‌ಅರ್ಥ್, ಶ್ರೀನಿಧಿ ಗ್ರೀನ್ ಲೇಔಟ್, ದೇವಗೆರೆ, ಆನೆಪಾಳ್ಯ, ಶೋಭಾ ಇಂದ್ರಪ್ರಸ್ಥ ಅಪಾರ್ಟ್‌ಮೆಂಟ್, ಗ್ಲೋಬಲ್ ಮಾಲ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಪ್ರೆಸ್ಟೀಜ್ ಫಾಲ್ಕನ್ ಸಿಟಿ ವಿದ್ಯುತ್ ಉಪ ಕೇಂದ್ರದ ವ್ಯಾಪ್ತಿಯಲ್ಲಿ ಡಿ. 22ರಂದು ಬೆಳಿಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಫೋರಂ ಮಾಲ್, ಪ್ರೆಸ್ಟೀಜ್ ಫಾಲ್ಕನ್ ಸಿಟಿ ಅಪಾರ್ಟ್‌ಮೆಂಟ್, ದೊಡ್ಡಕಲ್ಲಸಂದ್ರ, ಕನಕಪುರ ಮುಖ್ಯರಸ್ತೆ, ನಾರಾಯಣ ನಗರ ಮೂರನೇ ಬ್ಲಾಕ್, ಮುನಿ ರೆಡ್ಡಿ ಲೇಔಟ್, ಕುಮಾರನ್ಸ್ ಶಾಲೆ, ಜ್ಯೋತಿ ಲೇಔಟ್, ಗಂಗಪತಿಪುರ, ಸುಪ್ರಜ ನಗರ, ಜೆಎಸ್‌ಎಸ್ ಶಾಲೆ, ಕೋಣನಕುಂಟೆ ಸರ್ಕಾರಿ ಶಾಲೆ, ಜರಗನಹಳ್ಳಿ, ಗಂಗಾಧರೇಶ್ವರ ದೇವಸ್ಥಾನ, ಬಸವರಾಜು ಲೇಔಟ್, ಶಾಂತಿ ಸಾಮಿಲ್, ರಾಜೀವ್ ಗಾಂಧಿ ರಸ್ತೆ, ಸಾರಕ್ಕಿ ಕೆರೆ, ಸಾರಕ್ಕಿ ಸಿಗ್ನಲ್, ನಾಗಾರ್ಜುನ್ ಪ್ರೀಮಿಯರ್ ಅಪಾರ್ಟ್‌ಮೆಂಟ್, ಚುಂಚಗಟ್ಟ ಗ್ರಾಮ, ಶ್ರೀನಿಧಿ ಲೇಔಟ್ ಮತ್ತು ಸುತ್ತಮುತ್ತಲ ಪ್ರದೇಶಗಳು.

23ರಿಂದ ವಿದ್ಯುತ್ ವ್ಯತ್ಯಯ: ಇಪಿಐಪಿ 220/66/11 ಕೆವಿ ವಿದ್ಯುತ್ ಉಪ ಕೇಂದ್ರದ ಎಂವಿಎ ಶಕ್ತಿ ಪರಿವರ್ತಕ–3ರ ರಿಟ್ರೋಫಿಲ್ಲಿಂಗ್ ನಿರ್ವಹಣಾ ಕೆಲಸಗಳನ್ನು ಕೈಗೊಳ್ಳುವುದರಿಂದ ಡಿ. 23ರಿಂದ ಜನವರಿ 11ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಎಲ್ ಆ್ಯಂಡ್ ಟಿ, ಆರ್‌ಎಂಜೆಡ್ ನೆಕ್ಸ್ಟ್, ರಾಗಿಹಳ್ಳಿ–ಸಿದ್ದಾಪುರ ಗೇಟ್, ಇಪಿಐಪಿ ಲೇಔಟ್, ಟಿಸಿಎಸ್ ಸಾಫ್ಟ್‌ವೇರ್, ಎಸ್‌ಜೆಆರ್ ಟೆಕ್ ಪಾರ್ಕ್, ಎಂಎಸ್ ವಿಎಸ್‌ಎನ್‌ಎಲ್ ಫೀಡರ್, ರಿಲಯನ್ಸ್ (ಬಿಗ್ ಬಜಾರ್), ಓರಿಯಂಟಲ್ ಹೋಟೆಲ್, ಏರ್‌ಟೆಲ್, ಬುಷ್ರಾ ಟೆಕ್ ಪಾರ್ಕ್, ಗೋಪಾಲನ್ ಎಂಟರ್‌ಪ್ರೈಸಸ್, ಸದಾ ಟೆಕ್ ಪಾರ್ಕ್, ಕ್ವಾಲ್‌ಕಾಮ್, ಕ್ವಾಲ್‌ಕಾಮ್–2, ಜಿಇಬಿಇ ಕಂಪನಿ, ಭಾಗಮನೆ ನೀಯಾನ್ ಬ್ಲಾಕ್, ಇಪಿಐಪಿ ಕೈಗಾರಿಕಾ ಪ್ರದೇಶ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

‘ಉತ್ತಮ ನಡತೆಗೆ ಶಿಕ್ಷಣ ಸಹಕಾರಿ’

ಪೀಣ್ಯ ದಾಸರಹಳ್ಳಿ: ‘ಮಕ್ಕಳಲ್ಲಿ ಉತ್ತಮ ನಡತೆ, ಭೌತಿಕ ಬೆಳವಣಿಗೆ ರೂಪುಗೊಳ್ಳಲು ಶಿಕ್ಷಣ ಸಹಕಾರಿ ಆಗಿದೆ’ ಎಂದು ಹಿರಿಯ ಉಪ ನೋಂದಣಾಧಿಕಾರಿ ಎಂ.ವಿ. ಸತೀಶ್ ತಿಳಿಸಿದರು.

ಶೆಟ್ಟಿಹಳ್ಳಿಯ ಸರ್ ಎಂ. ವಿಶ್ವೇಶ್ವರಯ್ಯ ವಿದ್ಯಾನಿಕೇತನ ಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಮಕ್ಕಳು ಕೇವಲ ಅಂಕ ಗಳಿಸುವುದಕ್ಕೆ ಸೀಮಿತವಾಗಬಾರದು. ಇಂದು ಶಾಲಾ ಶಿಕ್ಷಣದ ಜೊತೆಗೆ ನೈತಿಕ ಶಿಕ್ಷಣವನ್ನು ನೀಡುವ ಅಗತ್ಯ ಇದೆ. ಸಮಾರಂಭದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ದು.ಸರಸ್ವತಿ ಸೇರಿ ಮೂವರಿಗೆ ಸೂಲಗಿತ್ತಿ ನರಸಮ್ಮ ಪ್ರಶಸ್ತಿ

ತುಮಕೂರು: ಸೂಲಗಿತ್ತಿ ನರಸಮ್ಮ ಹೆಸರಿನಲ್ಲಿ ಕೊಡಮಾಡುವ ‘ಸೂಲಗಿತ್ತಿ ನರಸಮ್ಮ ಸೇವಾಪ್ರಶಸ್ತಿ’ಗೆ ಹೋರಾಟಗಾರ್ತಿ ದು.ಸರಸ್ವತಿ, ಲೇಖಕಿ ಶೈಲಾ ನಾಗರಾಜು, ಸಮಾಜ ಸೇವಕ ಬಿ.ಮಹದೇವ ಸ್ವಾಮಿ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ₹10 ಸಾವಿರ ನಗದು ಬಹುಮಾನ, ನೆನಪಿನ ಫಲಕ ಒಳಗೊಂಡಿದೆ. ನಗರದಲ್ಲಿ ಡಿ. 25ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಆಯ್ಕೆ ಸಮಿತಿ ಅಧ್ಯಕ್ಷೆ ಬಾ.ಹ.ರಮಾಕುಮಾರಿ ತಿಳಿಸಿದ್ದಾರೆ.

ಕಾರ್‌ಗಳ ರ‍್ಯಾಲಿ

ಪ್ರಜಾವಾಣಿ ಚಿತ್ರ ಕಿಶೋರ್ ಕುಮಾರ್ ಬೋಳಾರ್

ದ್ವಿತೀಯ ವಿಶ್ವ ಆಯುರ್ವೇದ ಸಮ್ಮೇಳನದ ಪ್ರಯುಕ್ತ ಪ್ರಶಾಂತಿ ಆಯುರ್ವೇದಿಕ್ ಸೆಂಟರ್ ನಗರದ ಪುರಭವನದಿಂದ ಅರಮನೆ ಮೈದಾನವರಗೆ ಭಾನುವಾರ ಹಮ್ಮಿಕೊಂಡಿದ್ದ ವಿಂಟೇಜ್ ಕಾರ್‌ಗಳ ರ‍್ಯಾಲಿಗೆ ನಟ ರಮೇಶ್ ಅರವಿಂದ್ ಚಾಲನೆ ನೀಡಿದರು

ಟಿಎಪಿಸಿಎಂಎಸ್‌ಗೆ ಆಯ್ಕೆ

ಹನುಮಂತರಾಜು

ನೆಲಮಂಗಲ: ತಾಲ್ಲೂಕು ವ್ಯವಸಾಯೋತ್ಪನ್ನಗಳ ಮಾರಾಟ ಸಹಕಾರ ಸಂಘದ (ಟಿಎಪಿಸಿಎಂಎಸ್) ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಯಲಚಗೆರೆ ಹನುಮಂತರಾಜು, ಉಪಾಧ್ಯಕ್ಷರಾಗಿ ಶ್ರೀನಿವಾಸ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನಿರ್ದೇಶಕರಾದ ಬಿ.ಎನ್. ನರಸಿಂಹಮೂರ್ತಿ, ಜಗಜ್ಯೋತಿ ಬಸವೇಶ್ವರ, ಗುರು ಪ್ರಸಾದ್, ನಟರಾಜು, ಶಶಿಧರ್, ಕೇಶವಮೂರ್ತಿ, ನಾಗಭೂಷಣ್, ರಾಜಶೇಖರಯ್ಯ, ಎಂ.ಬಿ.ರಂಗಸ್ವಾಮಿ, ಮರಿಯಪ್ಪ, ಮಂಜುಳ, ಶಾಂತ ಉಪಸ್ಥಿತರಿದ್ದರು.

‘ಮಾನಸಿಕ ಅಸ್ವಸ್ಥರಿಗೆ ಆರೈಕೆ ಕೇಂದ್ರ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಿರಾಶ್ರಿತ ಮಾನಸಿಕ ಅಸ್ವಸ್ಥರ ಸಮಗ್ರ ಚಿಕಿತ್ಸೆಗೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ತುರ್ತು ಆರೈಕೆ ಮತ್ತು ಚೇತರಿಕೆ ಕೇಂದ್ರ (ಇಸಿಆರ್‌ಸಿ) ಪ್ರಾರಂಭಿಸಬೇಕು’ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್ ಅವರು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

ನಿರಾಶ್ರಿತ ಮಾನಸಿಕ ಅಸ್ವಸ್ಥರ ಸಮಗ್ರ ಆರೈಕೆ ಸೇವೆಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ಆಲದಮರ ಫೌಂಡೇಷನ್ ಹಮ್ಮಿಕೊಂಡಿದ್ದ ದುಂಡು ಮೇಜಿನ ಸಭೆಯಲ್ಲಿ ಭಾಗವಹಿಸಿ, ಮಾತನಾಡಿದರು.

‘ಹಾಲಿ ವ್ಯವಸ್ಥೆಯಡಿ ನಿರಾಶ್ರಿತ ಮಾನಸಿಕ ಅಸ್ವಸ್ಥರನ್ನು ಗುರುತಿಸಿ, ಆಶ್ರಯ ಸಹಿತ ಚಿಕಿತ್ಸೆ ಒದಗಿಸುವುದು ಕಷ್ಟಸಾಧ್ಯ. ಆದ್ದರಿಂದ ಅವರ ಚಿಕಿತ್ಸೆಗೆ ಅಗತ್ಯ ಸಿಬ್ಬಂದಿಯನ್ನು ಗುರುತಿಸಿ, ತರಬೇತಿ ಒದಗಿಸಬೇಕು. ಈ ಕೆಲಸ ಎಲ್ಲ ಜಿಲ್ಲೆಗಳಲ್ಲೂ ಆಗಬೇಕು. ಮಾನಸಿಕ ಅಸ್ವಸ್ಥರು ಹಲವು ಬಾರಿ ನಂಬಿಕೆ ದ್ರೋಹ, ಕಿರುಕುಳ ಎದುರಿಸಿರುತ್ತಾರೆ. ಆರ್ಥಿಕ, ಲೈಂಗಿಕ ಕಿರುಕುಳಗಳೂ ಅವರ ಮೇಲೆ ನಡೆಯುವ ಸಾಧ್ಯತೆ ಇರುತ್ತದೆ. ಆರೋಗ್ಯ ಕಾರ್ಯಕರ್ತರು, ಮನೋವೈದ್ಯರು ಅವರನ್ನು ಕಾಳಜಿಯಿಂದ ಕಂಡು, ವಿಶ್ವಾಸಕ್ಕೆ ಪಡೆದುಕೊಳ್ಳಬೇಕು’ ಎಂದು ಅಭಿಪ್ರಾಯಪಟ್ಟರು.

ಆಲದಮರ ಫೌಂಡೇಷನ್ ಕಾರ್ಯನಿರ್ವಾಹಕ ನಿರ್ದೇಶಕ ಕಿಶೋರ್ ಕುಮಾರ್ ಕೆ.ವಿ., ‘ರಾಜ್ಯ ಸರ್ಕಾರದ ಸಹಯೋಗದಲ್ಲಿ ಎಲ್ಲ ಜಿಲ್ಲೆಗಳಲ್ಲಿ ತುರ್ತು ಆರೈಕೆ ಮತ್ತು ಚೇತರಿಕೆ ಕೇಂದ್ರ ಪ್ರಾರಂಭಕ್ಕೆ ಆಸ್ಪತ್ರೆಗಳನ್ನು ಗುರುತಿಸಲಾಗಿದೆ. ಬೆಂಗಳೂರಿನಲ್ಲಿ ಸರ್.ಸಿ.ವಿ.ರಾಮನ್ ಆಸ್ಪತ್ರೆಯಲ್ಲಿ ಈ ಕೇಂದ್ರ ಆರಂಭಿಸಲಾಗಿದೆ. ಕೋಲಾರ, ಉಡುಪಿ ಸೇರಿ ಇತರ ಜಿಲ್ಲೆಗಳಲ್ಲಿ ಹಂತ, ಹಂತವಾಗಿ ಅಸ್ವಸ್ಥರನ್ನು ಗುರುತಿಸಿ ಚಿಕಿತ್ಸೆ ನೀಡಲಾಗುತ್ತಿದೆ’ ಎಂದರು.

‘ಮಾನಸಿಕ ಅಸ್ವಸ್ಥರಿಗೆ ಆಹಾರ, ನೀರು ಒದಗಿಸುವುದು ಮುಖ್ಯ. ಅವರ ಇತರ ಕಾಯಿಲೆಗಳ ಬಗ್ಗೆಯೂ ತಿಳಿದು ಚಿಕಿತ್ಸೆ ನೀಡಬೇಕು. ಅವರು ಚೇತರಿಸಿಕೊಂಡು ಮನೆಗೆ ಸೇರಿದ ಬಳಿಕವೂ ನಿರಂತರ ನಿಗಾ ವಹಿಸಬೇಕಾಗುತ್ತದೆ. ಸ್ವಾವಲಂಬನೆಯ ಬದುಕು ನಡೆಸಲು ನಮ್ಮ ಸಂಸ್ಥೆಯಿಂದ ಅನುಕೂಲ ಮಾಡಿಕೊಡಲಾಗುತ್ತಿದೆ’ ಎಂದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗ್ಲೋಬಲ್ ಎಂಎಸ್‌ಎಂಇ ಸಮಾವೇಶ 2026ರ ಲಾಂಛನವನ್ನು ಶೋಭಾ ಕರಂದ್ಲಾಜೆ ಮತ್ತು ಉಮಾರೆಡ್ಡಿ ಅನಾವರಣಗೊಳಿಸಿದರು

‘ತಂತ್ರಜ್ಞಾನದ ಅಧ್ಯಯನ ನಡೆಯಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಫ್‌ಕೆಸಿಸಿಐನ ಮೂರನೇ ಸಮಾವೇಶದಲ್ಲಿ ಕೈಗಾರಿಕಾ ಮಳಿಗೆಗಳ ಪ್ರದರ್ಶನದ ಜೊತೆಗೆ, ಅಂತರರಾಷ್ಟ್ರೀಯ ತಂತ್ರಜ್ಞಾನ ಕುರಿತು ಅಧ್ಯಯನ ನಡೆಸುವಂತಾಗಬೇಕು. ಇದಕ್ಕೆ ಸಂಪೂರ್ಣ ಸಹಕಾರ ನೀಡಲಾಗುವುದು’ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಹಾಗೂ ಪೀಣ್ಯ ಕೈಗಾರಿಕಾ ಸಂಘ ಶನಿವಾರ ಜಂಟಿಯಾಗಿ ಆಯೋಜಿಸಿದ್ದ ಗ್ಲೋಬಲ್ ಎಂಎಸ್‌ಎಂಇ ಸಮಾವೇಶ 2026ರ ಲಾಂಛನ ಅನಾವರಣಗೊಳಿಸಿ ಮಾತನಾಡಿದರು.

ಎಫ್‌ಕೆಸಿಸಿಐ ಎರಡು ವರ್ಷಗಳಿಂದ ನಡೆಸಿದ ಸಮಾವೇಶ ಯಶಸ್ವಿಯಾಗಿದ್ದು, ಈಗ ಮೂರನೇ ಆವೃತ್ತಿಯ ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳ (ಎಂಎಸ್‌ಎಂಇ) ಸಮಾವೇಶವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತಿರುವುದು ಸಂತಸದ ವಿಷಯವಾಗಿದೆ. ಸಮಾವೇಶದಲ್ಲಿ ರಫ್ತು ಬಗ್ಗೆ ಕೇಂದ್ರೀಕರಿಸಿ ಹೆಚ್ಚಿನ ಅಧ್ಯಯನ ನಡೆಸಿ, ಕೇಂದ್ರಕ್ಕೆ ವರದಿ ನೀಡಬೇಕು. ಆಗ ಮಾತ್ರ ಎಂಎಸ್‌ಎಂಇಗಳ ಅಭಿವೃದ್ಧಿ ಸಾಧ್ಯ ಎಂದು ತಿಳಿಸಿದರು.

ಸಮಾವೇಶಕ್ಕೂ ಮುನ್ನ ಎಲ್ಲ ಬ್ಯಾಂಕ್‌ಗಳ ಜೊತೆ ಸಭೆ ನಡೆಸಿ, ಸಮಸ್ಯೆಗಳು ಹಾಗೂ ತೊಂದರೆಗಳ ಬಗ್ಗೆ ಚರ್ಚಿಸಲಾಗುವುದು. ರಾಷ್ಟ್ರೀಕೃತ ಬ್ಯಾಂಕ್, ಹಣಕಾಸು ಇಲಾಖೆ ಅಧಿಕಾರಿಗಳು ಹಾಗೂ ಎಫ್‌ಕೆಸಿಸಿಐ ಸದಸ್ಯರೊಡನೆ ಜಂಟಿ ಸಭೆ ನಡೆಸಲಾಗುವುದು. ಕರ್ನಾಟಕದ ಸಣ್ಣ ಕೈಗಾರಿಕೆಗಳು ಜಾಗತಿಕ ಮಟ್ಟದಲ್ಲಿ ಯಾವ ಸ್ಥಾನದಲ್ಲಿವೆ ಎಂಬುದು ಸಮಾವೇಶದ ಮೂಲಕ ತಿಳಿಯುವಂತಾಗುತ್ತದೆ. ಕೈಜೋಡಿಸುವಂತೆ ರಾಜ್ಯ ಸರ್ಕಾರದ ಜೊತೆಗೂ ಚರ್ಚಿಸಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾರೆಡ್ಡಿ, ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಡಿ.ಪಿ.ದಾನಪ್ಪ, ಹಿರಿಯ ಉಪಾಧ್ಯಕ್ಷ ಟಿ.ಸಾಯಿರಾಂ ಪ್ರಸಾದ್, ಉಪಾಧ್ಯಕ್ಷ ಬಿ.ಪಿ.ಶಶಿಧರ್, ನಿಕಟಪೂರ್ವ ಅಧ್ಯಕ್ಷ ಉಪಾಧ್ಯಕ್ಷ ಎಂ.ಜಿ.ಬಾಲಕೃಷ್ಣ, ಗ್ಲೋಬಲ್ ಎಂಎಸ್‌ಎಂಇ ಸಮಾವೇಶದ ಅಧ್ಯಕ್ಷ ಬಿ.ಸಿ. ತಿಪ್ಪೇಶಪ್ಪ, ಸಲಹೆಗಾರ ಎಂ.ಸಿ.ದಿನೇಶ್ ಉಪಸ್ಥಿತರಿದ್ದರು.

ಹೆಬ್ಬಾಳ: ಹೊಸ ಲೂಪ್‌ನಲ್ಲಿ ವಾಹನ ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಜಂಕ್ಷನ್ ಬಳಿ ನಿರ್ಮಿಸುತ್ತಿದ್ದ ಹೊಸ ಲೂಪ್ (ಪಥ) ಕಾಮಗಾರಿ ಮುಕ್ತಾಯವಾಗಿದ್ದು, ಶನಿವಾರ ರಾತ್ರಿಯಿಂದಲೇ ಪ್ರಾಯೋಗಿಕವಾಗಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಮಿಸಿರುವ ಹೊಸ ಲೂಪ್ ವಿಮಾನ ನಿಲ್ದಾಣ ಕಡೆಯಿಂದ ಹೆಬ್ಬಾಳ ಮೇಲ್ಸೇತುವೆ ಮೂಲಕ ನಗರ ಪ್ರವೇಶಿಸಲು ನೆರವಾಗಲಿದೆ. ಯಲಹಂಕ, ಜಕ್ಕೂರು, ಸಹಕಾರ ನಗರ ಕಡೆಯಿಂದ ಮೇಖ್ರಿ ಸರ್ಕಲ್‌ವರೆಗೆ ತಡೆರಹಿತವಾಗಿ ಸಂಚರಿಸಬಹುದಾಗಿದೆ.

‘ನಾಗವಾರ– ಕೆ.ಆರ್. ಪುರ ಕಡೆಯಿಂದ ಬರುವ ವಾಹನಗಳಿಗೆ ಪ್ರತ್ಯೇಕವಾದ ಲೂಪ್ ಇದೆ. ಈಗ ವಿಮಾನ ನಿಲ್ದಾಣದಿಂದ ಮೇಖ್ರಿ ಸರ್ಕಲ್ ಕಡೆಗೂ ಪಥ ನಿರ್ಮಿಸಿದ್ದು, ಇದರಿಂದ ಸಂಚಾರ ದಟ್ಟಣೆ ಕಡಿಮೆ ಆಗುವ ನಿರೀಕ್ಷೆ ಇದೆ’ ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

‘ಜೆ.ಸಿ.ರಸ್ತೆಯಲ್ಲಿ ವಾಹನ ನಿಲುಗಡೆ’

ನಗರದ ಹೃದಯ ಭಾಗದಲ್ಲಿರುವ ಜೆ.ಸಿ. ರಸ್ತೆಯಲ್ಲಿ ವೈಟ್‌ಟಾಪಿಂಗ್ ಕಾಮಗಾರಿ ಪೂರ್ಣಗೊಂಡಿದ್ದು, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ಮಿನರ್ವ ವೃತ್ತದಿಂದ ಭಾರತ್ ಜಂಕ್ಷನ್‌ವರೆಗೆ ರಸ್ತೆಯ ಎಡಭಾಗದಲ್ಲಿ ವಾಹನಗಳ ಬಿಡಿ ಭಾಗ ಮಾರಾಟದ ಮಳಿಗೆಗಳಿದ್ದು, ಈ ಮಳಿಗೆಗಳಿಗೆ ಬರುವ ಕಾರುಗಳನ್ನು ರಸ್ತೆ ಹಾಗೂ ಪಾದಚಾರಿ ಮಾರ್ಗದಲ್ಲಿಯೇ ನಿಲ್ಲಿಸಲಾಗುತ್ತಿದೆ.

ಮಳಿಗೆಗಳ ಮಾಲೀಕರು ಗ್ರಾಹಕರನ್ನು ಕರೆತರಲು ತಮ್ಮ ಪ್ರತಿನಿಧಿಗಳನ್ನು ರಸ್ತೆಯುದ್ದಕ್ಕೂ ನಿಲ್ಲಿಸುತ್ತಿದ್ದು, ಅವರು ಮಾರ್ಗ ಮಧ್ಯದವರೆಗೂ ಬಂದು ಕಾರುಗಳನ್ನು ತಡೆಯಲು ಪ್ರಯತ್ನಿಸುತ್ತಾರೆ. ಇದರಿಂದ ರಸ್ತೆ ಅಪಘಾತಗಳು ಸಂಭವಿಸುವ ಸಾಧ್ಯತೆಯಿದೆ. ವಾಹನಗಳ ದಟ್ಟಣೆ ಇದ್ದು, ಸವಾರರು ನಿತ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಸಂಚಾರ ಪೊಲೀಸರು ಈ ಬಗ್ಗೆ ಗಮನಹರಿಸುತ್ತಿಲ್ಲ.

ಮಂಜುನಾಥ್, ವಾಹನ ಸವಾರ

‘ರಸ್ತೆ ಗುಂಡಿ ಮುಚ್ಚಿ’

ಮಲ್ಲತ್ತಹಳ್ಳಿಯ ಮುಖ್ಯ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ವಾಹನ ಸಂಚಾರಕ್ಕೆ ಸಮಸ್ಯೆ ಆಗಿದೆ. ಮುದ್ದಿನಪಾಳ್ಯದಿಂದ ಜ್ಞಾನಭಾರತಿ ಆರ್‌ಟಿಒ ರಸ್ತೆ, ಜಯಂತ್ ಕನ್ವೆನ್ಷನ್ ಹಾಲ್ ಮೂಲಕ ವಿದ್ಯಾನಿಕೇತನ್ ಶಾಲೆಗೆ ತಲುಪುವ ರಸ್ತೆ ಗುಂಡಿಮಯವಾಗಿದೆ. ಈ ರಸ್ತೆಯಲ್ಲಿ ಅಲ್ಲಲ್ಲಿ ಗುಂಡಿಗಳಾಗಿರುವ ಪರಿಣಾಮ ವಾಹನ ಸಂಚಾರಕ್ಕೆ ಸಂಚಕಾರ ಬಂದಿದೆ. ರಸ್ತೆ ಅಭಿವೃದ್ಧಿಪಡಿಸುವಂತೆ ಪಾಲಿಕೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ. ಕೂಡಲೇ ಈ ರಸ್ತೆ ದುರಸ್ತಿಗೊಳಿಸಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಎಸ್.ಎಂ. ನಾಗರಾಜ್, ಮಲ್ಲತ್ತಹಳ್ಳಿ

‘ಕೆಟ್ಟು ನಿಂತಿರುವ ಕಾರು ಸ್ಥಳಾಂತರಿಸಿ’

ಬನ್ನಪ್ಪ ಪಾರ್ಕ್ ರಸ್ತೆಯಲ್ಲಿ ಹಲವು ತಿಂಗಳಿಂದ ಕೆಟ್ಟು ಹೋಗಿರುವ ಕಾರೊಂದು ನಿಂತಿದೆ. ಈ ರಸ್ತೆಯು ಕೆಂಪೇಗೌಡ ಹಾಗೂ ಕಬ್ಬನ್‌ಪೇಟೆ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸಲಿದ್ದು, ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಹಳೆಯ ಕಾರು ರಸ್ತೆಯ ಪಕ್ಕದಲ್ಲಿ ನಿಲ್ಲಿಸಿರುವುದರಿಂದ ವಾಹನ ದಟ್ಟಣೆ ಆಗುತ್ತಿದೆ. ಜೊತೆಗೆ ಅಪಘಾತಗಳು ಸಂಭವಿಸುತ್ತಿವೆ. ನಗರದ ಸೌಂದರ್ಯಕ್ಕೆ ಕಪ್ಪು ಚುಕ್ಕೆಯಾಗಿರುವ ಈ ಕಾರನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸ್ಥಳಾಂತರಿಸಬೇಕು.

ಶಿವಪ್ರಸಾದ್ ಎಸ್., ವಾಹನ ಸವಾರ

‘ಪಾದಚಾರಿ ಮಾರ್ಗದ ಕಾಂಕ್ರೀಟ್ ಕುಸಿತ’

ಅತ್ತಿಗುಪ್ಪೆ ಮೆಟ್ರೊ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಪಾದಚಾರಿ ಮಾರ್ಗದಲ್ಲಿ ಅಳವಡಿಸಿದ್ದ ಕಾಂಕ್ರೀಟ್ ಸ್ಲ್ಯಾಬ್ ಕುಸಿದಿದ್ದು ಜನರಿಗೆ ತೊಂದರೆಯಾಗುತ್ತಿದೆ. ಪಾದಚಾರಿ ಮಾರ್ಗ ಹಾಳಾಗಿರುವುದರಿಂದ ಜನರು ಮುಖ್ಯರಸ್ತೆಯಲ್ಲಿ ಓಡಾಡುತ್ತಿದ್ದು, ಅಪಘಾತಗಳು ಸಂಭವಿಸುವ ಸಾಧ್ಯತೆ ಇದೆ. ಪಾಲಿಕೆಯ ಸಂಬಂಧಪಟ್ಟ ಸಿಬ್ಬಂದಿ ಪಾದಚಾರಿ ಮಾರ್ಗವನ್ನು ಸರಿಪಡಿಸಬೇಕು.

ದಯಾನಂದ, ಅತ್ತಿಗುಪ್ಪೆ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

TEACHER REQUIRED for High School for Hindi and Science Contact The kenmore School Basavanagudi Ph 9901501185

PERSONAL

Change of Name

CHANGE OF NAME
I, GOWRAMMA (Old Name) W/o late. ANNAYAPPA., R/a #29/1, Kebbehalla, Rajeevgandhi Nagar, Sunkadakatte, Vishwaneedam Post, Bangalore- 560091. here by declare that my name has been changed to **LAKSHMAMMA GOWRAMMA (New Name).** vide affidavit dated: 8.3.2021 sworn before XXIV Addl. Chief Metropolitan Magistrate Bangalore.

REAL ESTATE SELLING

Industrial & Factory

Jigani

2300 SQ.FT plot at Jigani industrial area, clear title, 100m from main road, priced @90 Lakhs. Call 8310273250

EDUCATION SUCCESS

ಅಭಿನಂದನೆಗಳು

ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರು ಮತ್ತು ಸಹ ಪ್ರಾಧ್ಯಾಪಕರಾದ ನಾಗಜ್ಯೋತಿ ಎಂ.ಜೆ ರವರು ಪ್ರೊ. ರವೀಂದ್ರ ಕುಮಾರ್ ಬಿ, ಮುಖ್ಯಸ್ಥರು, ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಅವರ ಮಾರ್ಗದರ್ಶನದಲ್ಲಿ ಸಲ್ಲಿಸಿದ "Impact of E-banking services on Financial Inclusion in Karnataka: A Comparative Study of Public and Private Sector Banks." ಎಂಬ ಮಹಾಪ್ರಬಂಧಕ್ಕೆ ತುಮಕೂರು ವಿಶ್ವವಿದ್ಯಾಲಯ ಪಿಎಚ್.ಡಿ ಪದವಿ ಪ್ರದಾನ ಮಾಡಿದೆ.

ಶುಭಕೋರುವವರು
ಕುಟುಂಬವರ್ಗ ಮತ್ತು ಸ್ನೇಹಿತರು

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

CONNECT

DG RENEWABLE ENERGY
(A Division of)
DIVYAGEORGE VENTURES LLP
adani Solar
Approved Vendor of: MNRE, BESCOM, MESCOM, HESCOM, CESCOM, GESCOM
No. 36, 6th Cross, SMR Layout, Kanakagiri, Near Cocacola Godown, Khane Road, Kalkere, Horamavu, Bengaluru-560043.
www.dgventuresllp.in | info.dgsolarenergy@gmail.com
Mobile: 9481827127 / 7019913789

Solar net Metering System



Solar Hybrid net metering system

Are you looking for a Solar Rooftop net metering System under the PM-SURYA GHAR MUFT BIJLI YOGANA

CHRISTMAS AND NEW YEAR OFFER
Call us Immediately
OFFER valid up to Jan 10th 2026

SUBSIDY AND DISCOUNTED CHART

Suitable Rooftop Solar Plant Capacity	Subsidy Support from MNRE	Discount percentage from DG Renewable Energy in %
2 KW	60,000/-	10% of the Project Value
3 KW	78,000/-	12% of the Project Value
Above 3 KW	78,000/-	15% of the Project Value

We are looking for Dealers and Distibutors in all the Districts

ಹೆದ್ದಾರಿ: ಅನಧಿಕೃತ ಜಾಹೀರಾತು

ಹೈಕೋರ್ಟ್ ನಿರ್ದೇಶನ ಉಲ್ಲಂಘನೆ ಅಪಘಾತಕ್ಕೆ ಆಸ್ಪದ ನೀಡುವ ಫಲಕಗಳು

• ಶಿವರಾಜ್ ಮೌರ್ಯ

ಕೆ.ಆರ್.ಪುರ: ರಾಜ್ಯ ಹೆದ್ದಾರಿಗಳಲ್ಲಿ ಜಾಹೀರಾತು ಫಲಕ ಅಳವಡಿಸದಿರಲು ಹೈಕೋರ್ಟ್ ನಿರ್ದೇಶನವಿದ್ದರೂ ನಿಯಮಗಳನ್ನು ಗಾಳಿಗೆ ತೂರಿ, ಅನಧಿಕೃತವಾಗಿ ಪ್ರದರ್ಶಿಸಲಾಗುತ್ತಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಬೂದಿಗೆರೆ ಕ್ರಾಸ್ ಹಾಗೂ ಕಾಟಂನಲ್ಲೂರು ಮೂಲಕ ಆನೇಕಲ್ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿಯಲ್ಲಿ ಬೃಹತ್ ಪ್ರಮಾಣದಲ್ಲಿ ಜಾಹೀರಾತು ಫಲಕಗಳನ್ನು ಅಳವಡಿಸಲಾಗಿದೆ. ಈ ಫಲಕಗಳಿಂದ ನಿತ್ಯವೂ ಒಂದಿಲ್ಲೊಂದು ಅಪಘಾತವಾಗುತ್ತಿದ್ದು, ಜನರ ಪ್ರಾಣಕ್ಕೆ ಸಂಚಕಾರ ತಂದೊಡ್ಡುತ್ತಿವೆ.

ಮಹದೇವಪುರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಈ ರಾಜ್ಯ ಹೆದ್ದಾರಿಯಲ್ಲಿ ಅನಧಿಕೃತ ಜಾಹೀರಾತು ಫಲಕಗಳಿರುವ ಬಗ್ಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಕೆಆರ್‌ಡಿಸಿಎಲ್) ಅಧಿಕಾರಿಗಳ ಗಮನಕ್ಕೆ ತಂದರೂ ಅವರು ಕ್ರಮ ಕೈಗೊಳ್ಳುತ್ತಿಲ್ಲ ಎಂದು ನಾಗರಿಕರು ದೂರಿದರು.

ತಿರುಮೇನಹಳ್ಳಿ ಗೇಟ್, ಮಂಡೂರು, ಬೊಮ್ಮೇನಹಳ್ಳಿ ಗೇಟ್, ಬೂದಿಗೆರೆ ಕ್ರಾಸ್‌ವರೆಗೆ ಹಾಗೂ ಕಾಟಂನಲ್ಲೂರು ಗೇಟ್‌ನಿಂದ, ಗೊರವಗೆರೆ, ಸಫಲ್ ಗೇಟ್, ಕನ್ನಮಂಗಲ ಗೇಟ್‌ವರೆಗೆ 100 ಅಡಿಗೆ ಒಂದರಂತೆ ಬೃಹತ್ ಹಾಗೂ 10 ಅಡಿಗೆ ಒಂದರಂತೆ ಚಿಕ್ಕ ನೂರಾರು ಅನಧಿಕೃತ ಜಾಹೀರಾತು ಫಲಕಗಳು ರಾಜಾಜಿಸುತ್ತಿವೆ. ತಾಲ್ಲೂಕು ಪಂಚಾಯಿತಿ ಕಚೇರಿ ಮುಂಭಾಗದಲ್ಲಿ ಬೃಹತ್ ಜಾಹೀರಾತು ಫಲಕ ಕಾರಿನ ಮೇಲೆ ಬಿದ್ದು, ಪ್ರಯಾಣಿಕರಿಗೆ ಗಂಭೀರ ಗಾಯಗಳಾಗಿದ್ದವು.

‘ಫಲಕಗಳನ್ನು ತೆರವು ಮಾಡಲು ಕಾಟಾಚಾರಕ್ಕೆ ಮಾಲೀಕರಿಗೆ ನೋಟಿಸ್ ನೀಡಿದಂತೆ ಮಾಡಿ ಮತ್ತೆ ಜಾಹೀರಾತು ಫಲಕಗಳು ಹೆಚ್ಚಾಗಲು ಅಧಿಕಾರಿಗಳೇ ಕಾರಣರಾಗಿದ್ದಾರೆ’ ಎಂದು ಭೀಮ್ ಪ್ರಜಾ ಸಂಘದ ಅಧ್ಯಕ್ಷ ವೈಟ್‌ಫೀಲ್ಡ್ ಮುರುಗೇಶ್ ಆರೋಪಿಸಿದರು.

‘ವಾಹನ ಸವಾರರಿಗೆ ತೊಂದರೆಯಾಗಿರುವ ಜಾಹೀರಾತು ಫಲಕಗಳನ್ನು ಮುಲಾಜಿಲ್ಲದೆ ತೆರವು ಮಾಡಬೇಕು. ಇಲ್ಲದಿದ್ದರೆ ಅಧಿಕಾರಿಗಳ ವಿರುದ್ಧ ಹೋರಾಟ ನಡೆಸಲಾಗುವುದು’ ಎಂದು ಆದಿಜಾಂಬವ ಜನಸಂಘದ ಯುವ ಘಟಕದ ಅಧ್ಯಕ್ಷ ವೇಣು ಆಕ್ರೋಶ ವ್ಯಕ್ತಪಡಿಸಿದರು.

ಬೂದಿಗೆರೆ ಕ್ರಾಸ್‌ನಲ್ಲಿ ಅನಧಿಕೃತ ಜಾಹೀರಾತು ಫಲಕಗಳು

ತೆರವಿಗೆ ಸೂಚನೆ

‘ಜಾಹೀರಾತು ಫಲಕ ಹಾಕುತ್ತಿರುವ ಬಗ್ಗೆ ನಮ್ಮ ಗಮನಕ್ಕೆ ಬಂದಿದೆ. ಕೆಲವರು ತೆರವಿಗೆ ತಡೆಯಾಜ್ಞೆ ತರುತ್ತಿದ್ದಾರೆ. ಇದನ್ನು ತೆರವು ಮಾಡಲು ವಕೀಲರ ತಂಡವನ್ನು ನೇಮಿಸಲಾಗಿದೆ. ತೆರವಿಗೆ ಕೂಡಲೇ ಕ್ರಮ ಕೈಗೊಳ್ಳಲಾಗುವುದು’ ಎಂದು ಕೆಆರ್‌ಡಿಸಿಎಲ್ ವ್ಯವಸ್ಥಾಪಕ ನಿರ್ದೇಶಕಿ ಎನ್. ಸುಶೀಲಮ್ಮ ತಿಳಿಸಿದರು.

ಮುರುಗೇಶ್

ವೇಣು

ಮಂಜುನಾಥ್

‘ಮಹದೇವಪುರ ಕ್ಷೇತ್ರ ವ್ಯಾಪ್ತಿಯ ರಾಜ್ಯ ಹೆದ್ದಾರಿಯಲ್ಲಿ ಬ್ಯಾನರ್‌ಗಳ ಹಾವಳಿ ಹೆಚ್ಚಾಗಿದೆ. ಈ ಸಮಸ್ಯೆ ಶೀಘ್ರದಲ್ಲಿ ಪರಿಹರಿಸದಿದ್ದರೆ ಕೆಆರ್‌ಎಸ್ ಪಕ್ಷದಿಂದ ಹೋರಾಟ ನಡೆಸಲಾಗುವುದು’ ಎಂದು ಮಹದೇವಪುರ ಕ್ಷೇತ್ರದ ಕೆಆರ್‌ಎಸ್ ಪಕ್ಷದ ಮುಖಂಡ ಪಟ್ಟಂದೂರು ಅಗ್ರಹಾರ ಎಂ.ಮಂಜುನಾಥ್ ಹೇಳಿದರು.

ಯುವಿಸಿಇ: ಅತಿಥಿ ಉಪನ್ಯಾಸಕರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದ ಬಿ. ಟೆಕ್ ಮತ್ತು ಎಂ.ಟೆಕ್‌ನ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ವಿಭಾಗದಲ್ಲಿ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಡಿ.29 ಕೊನೆಯ ದಿನ. ಎಐಸಿಟಿಇ ಪ್ರಕಾರ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಹತೆ ಇರುವ ಅಭ್ಯರ್ಥಿಗಳು ವಿ.ವಿಯ ವೆಬ್‌ಸೈಟ್ www.uvce.karnataka.gov.in ಮೂಲಕ ಅರ್ಜಿ ಪಡೆದು, ಭರ್ತಿ ಮಾಡಿದ ಬಳಿಕ ಅಗತ್ಯ ದಾಖಲೆಗಳೊಂದಿಗೆ ನಗರದ ಕೆ.ಆರ್ ವೃತ್ತದಲ್ಲಿರುವ ಯುವಿಸಿಇ ಕ್ಯಾಂಪಸ್‌ನಲ್ಲಿ ಸಂಬಂಧಿಸಿದ ವಿಭಾಗದ ಮುಖ್ಯಸ್ಥರಿಗೆ ಸಲ್ಲಿಸಬೇಕು. ಸಂದರ್ಶನದ ದಿನವನ್ನು ವೆಬ್‌ಸೈಟ್‌ನಲ್ಲಿ ಅಥವಾ ನೇರವಾಗಿ ಅಭ್ಯರ್ಥಿಗಳಿಗೆ ತಿಳಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಹೈಕೋರ್ಟ್ ನ್ಯಾಯಮೂರ್ತಿ ವಿ. ಶ್ರೀಶಾನಂದ

ಪಠ್ಯದಲ್ಲಿ ಭಗವದ್ಗೀತೆ ಬೇಡ ಎಂದರೆ ಮತ್ತೇನು ಕಲಿಸ್ತೀರಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಠ್ಯದಿಂದ ಗೋವಿನಹಾಡು ತೆಗೆದಾಗಿದೆ. ಭಗವದ್ಗೀತೆ ಸೇರಿಸುವುದು ಬೇಡ ಎಂದು ತಜ್ಞರೇ ತಿಳಿಸಿದ್ದಾರೆ. ಹಾಗಾದರೆ ಮಕ್ಕಳಿಗೆ ಏನನ್ನು ಕಲಿಸುತ್ತೀರಿ’ ಎಂದು ಹೈಕೋರ್ಟ್ ನ್ಯಾಯಮೂರ್ತಿ ವಿ. ಶ್ರೀಶಾನಂದ ಪ್ರಶ್ನಿಸಿದರು.

ಕೂಟ ಮಹಾಜಗತ್ತು ಭಾನುವಾರ ಹಮ್ಮಿಕೊಂಡಿದ್ದ ‘ನರಸಿಂಹ ಪ್ರಶಸ್ತಿ ಪ್ರದಾನ’, ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ವಿದ್ಯಾರ್ಥಿಗಳು ಅಂಕ ಗಳಿಸುವಷ್ಟೇ ಮುಖ್ಯ ನಮ್ಮ ಸಂಸ್ಕಾರ, ಸಂಸ್ಕೃತಿಯನ್ನು ಅಳವಡಿಸಿಕೊಳ್ಳುವುದು ಆಗಿದೆ. ನೂರಕ್ಕೆ ನೂರು ಅಂಕ ಗಳಿಸಿ ಅವರು ಅಮೆರಿಕಕ್ಕೆ ಹಾರಿ ಹೋದರೆ, ಇಲ್ಲಿ ಹೆತ್ತವರು ಜಾರಿ ಬಿದ್ದಾಗ ನೆರವಿನ ಹಸ್ತ ಚಾಚಲು ಯಾರೂ ಇಲ್ಲದೇ ಇದ್ದರೆ ಎಷ್ಟು ದುಡ್ಡು ಇದ್ದು ಏನು ಪ್ರಯೋಜನ? ಅಂಕ ಕಡಿಮೆ ಇದ್ದರೂ ಪರವಾಗಿಲ್ಲ. ಹೆತ್ತವರನ್ನು ವೃದ್ಧಾಪ್ಯ ಕಾಲದಲ್ಲಿ ನೋಡಿಕೊಂಡು, ಉತ್ತಮ ದಾರಿಯಲ್ಲಿ ಸಂಪಾದನೆ ಮಾಡುವಂತಾಗಬೇಕು’ ಎಂದು ಹೇಳಿದರು.

‘ದೈವ ಋಣ, ಋಷಿ ಋಣ, ಪಿತೃ ಋಣ, ರಾಷ್ಟ್ರ ಋಣವು ಎಲ್ಲ ಮನುಷ್ಯರ ಮೇಲಿರುತ್ತದೆ. ಈ ಋಣವನ್ನು ಜೀವಿತಾವಧಿಯಲ್ಲಿ ತೀರಿಸಬೇಕು. ಸೈನಿಕರಿಗೆ, ರೈತರಿಗೆ, ದೀನ ದಲಿತರಿಗೆ, ನಮ್ಮ ನೆರೆಹೊರೆಯವರಿಗೆ, ದೇಶಕ್ಕೆ ನಾವು ಮಿಡಿಯದಿರುವುದು ಕೋವಿಡ್ ಕಾಲದಲ್ಲಿ ನೋಡಿದ್ದೇವೆ. ಮಿಡಿಯುವ ಗುಣವನ್ನು ಬೆಳೆಸಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

ನಿವೃತ್ತ ಸೇನಾಧಿಕಾರಿಗಳಾದ ಕರ್ನಲ್ ಚಿನ್ಮಯಿ, ಕರ್ನಲ್ ಪುಷ್ಪಾ ಕಪ್ರಿ, ಹೋಟೆಲ್ ಉದ್ಯಮಿ ಜಿ. ಪ್ರಕಾಶ್ ಮಯ್ಯ, ವೈದ್ಯಕೀಯ ಕ್ಷೇತ್ರದ ಡಾ. ಎ.ಎಸ್. ಕೃಷ್ಣಮೂರ್ತಿ ಕಾರಂತ. ಸಮಾಜ ಸೇವಕ ಕೆ. ತಾರಾನಾಥ ಹೊಳ್ಳ, ಯಕ್ಷಗಾನ ಕಲಾವಿದ ಸುದರ್ಶನ ಉರಾಳ ಅವರಿಗೆ ನರಸಿಂಹ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕೂಟಮಹಾಜಗತ್ತು ಬೆಂಗಳೂರು ಅಂಗಸಂಸ್ಥೆ ಅಧ್ಯಕ್ಷ ಪಿ.ಎಂ. ಗಿರಿಧರ ಉಪಾಧ್ಯಾಯ, ಗುರುನರಸಿಂಹ ಬಿಲಿಯನ್ ಫೌಂಡೇಷನ್ ಅಧ್ಯಕ್ಷ ಇ. ಗೋಪಾಲಕೃಷ್ಣ ಹೇರ್ಳೆ ಉಪಸ್ಥಿತರಿದ್ದರು.

‘ಸಹಕಾರ ಕ್ಷೇತ್ರದಲ್ಲಿ ದಲಿತರಿಗಿಲ್ಲ ಪ್ರಾತಿನಿಧ್ಯ’

ಪ್ರಜಾವಾಣಿ ವಾರ್ತೆ

ಕೆಂಗೇರಿ: ನಾಲ್ಕಾರು ದಶಕಗಳು ಕಳೆದರೂ ಸಹಕಾರ ಕ್ಷೇತ್ರದಲ್ಲಿ ದಲಿತರಿಗೆ ಸೂಕ್ತ ಪ್ರಾತಿನಿಧ್ಯ ಸಿಗಲಿಲ್ಲ ಎಂದು ಶಾಸಕ ಜಿ.ಟಿ. ದೇವೇಗೌಡ ಹೇಳಿದರು.

ಎಂ.ಎಚ್. ಜಯಪ್ರಕಾಶ್ ನಾರಾಯಣ ಅವರ 99ನೇ ಜನ್ಮ ದಿನದ ಅಂಗವಾಗಿ ಡಾ. ಬಿ.ಆರ್. ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ 99ನೇ ಸಂಸ್ಥಾಪಕ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಜಿಲ್ಲಾ ಯೂನಿಯನ್‌ಗಳಲ್ಲಿ ಒಬ್ಬ ದಲಿತನಿಗೂ ಅಧ್ಯಕ್ಷ ಸ್ಥಾನ ನೀಡಿರಲಿಲ್ಲ. ನನ್ನ ಅವಧಿಯಲ್ಲಿ ದಲಿತರೊಬ್ಬರು ಅಧ್ಯಕ್ಷರಾಗಿ ಆಯ್ಕೆಯಾಗಲು ಸಾಧ್ಯವಾಯಿತು. ಜಾತಿ ವಿರೋಧಿಸುವ ನಾಯಕರೇ ಅದರ ಪೋಷಣೆಯಲ್ಲಿ ತೊಡಗಿದ್ದಾರೆ. ನೇರ ನುಡಿ ಉಳ್ಳವರು ರಾಜಕೀಯ ಕ್ಷೇತ್ರದಲ್ಲಿ ಅಸ್ತಿತ್ವ ಕಂಡುಕೊಳ್ಳುವುದು ಕಷ್ಟ’ ಎಂದು ಹೇಳಿದರು.

ಪಿವಿಪಿ ಟ್ರಸ್ಟ್‌ನ ಕಾರ್ಯದರ್ಶಿ ಎಂ. ಮಹದೇವ್ ಮಾತನಾಡಿ, ‘ಕೆಲವು ರಾಜಕಾರಣಿಗಳು ಮಾತ್ರ ತಮ್ಮ ಕೊಡುಗೆಗಳ ಮೂಲಕ ಜನಸಾಮಾನ್ಯರಲ್ಲಿ ಶಾಶ್ವತವಾಗಿ ನೆಲಸುತ್ತಾರೆ. ಜಿ.ಟಿ. ದೇವೇಗೌಡ ಅವರು ಜಾತ್ಯತೀತರಾಗಿ ದಲಿತರೊಂದಿಗೆ ಅನುಪಮ ಸಂಬಂಧ ಹೊಂದಿದ್ದು, ಸಮಾಜದ ಅಭಿವೃದ್ಧಿಗೆ ಮುನ್ನುಡಿ ಬರೆಯುವ ಮೂಲಕ ಸಾಮಾಜಿಕ ಬದಲಾವಣೆಗೆ ಕಾರಣರಾಗಿದ್ದಾರೆ’ ಎಂದು ಹೇಳಿದರು.

ಎಂ.ಎಚ್.ಜಯಪ್ರಕಾಶ ನಾರಾಯಣರ 99ನೇ ಜನ್ಮ ದಿನಾಚರಣೆಯಲ್ಲಿ ಜಿ.ಟಿ. ದೇವೇಗೌಡ, ಪಿವಿಪಿ ಟ್ರಸ್ಟ್ ಅಧ್ಯಕ್ಷ ಎಸ್. ಮರಿಸ್ವಾಮಿ, ಕಾರ್ಯದರ್ಶಿ ಎಂ.ಮಹದೇವ್, ಎಸ್. ಶಿವಮಲ್ಲು, ಬಿ. ಎನ್. ಉಮೇಶ್ ಭಾಗವಹಿಸಿದ್ದರು

ರಾಜೇಂದ್ರ ಚೆನ್ನಿ ಅವರಿಗೆ ಕಾವ್ಯಾನಂದ ಪುರಸ್ಕಾರ ನೀಡಿ ಗೌರವಿಸಲಾಯಿತು. ಗೌರಿ ಪುರಾಣಿಕ, ಕವನ್ ಪುರಾಣಿಕ, ಭಾರತಿ ಮೃತ್ಯುಂಜಯ, ವಿಜಯಾ ನಂದೀಶ್ವರ, ಎಲ್.ಎನ್. ಮುಕುಂದರಾಜ್, ನಿಕಿತಾ ಪುರಾಣಿಕ, ಪ್ರಸನ್ನಕುಮಾರ್ ಪುರಾಣಿಕ, ರಂಗನಾಥ ಕಂಟನಕುಂಟೆ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ವಿಮರ್ಶೆಗೆ ಜಾಗ ಕಡಿಮೆಯಾಗುತ್ತಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಹಿತ್ಯದಲ್ಲಿ ವಿಮರ್ಶೆಗೆ ಜಾಗ ಕಡಿಮೆಯಾಗುತ್ತಿದೆ. ಸಮಾಜದಲ್ಲಿಯೇ ವಿಮರ್ಶಾತ್ಮಕ ಚಿಂತನೆಗೆ ಅವಕಾಶಗಳು ಕಡಿಮೆ ಆಗುತ್ತಿರುವುದರ ಪರಿಣಾಮ ಸಾಹಿತ್ಯದಲ್ಲಿಯೂ ಉಂಟಾಗಿರಬೇಕು’ ಎಂದು ವಿಮರ್ಶಕ ರಾಜೇಂದ್ರ ಚೆನ್ನಿ ಹೇಳಿದರು.

ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್ ವತಿಯಿಂದ ಶುಕ್ರವಾರ ‘ಕಾವ್ಯಾನಂದ ಪುರಸ್ಕಾರ’ ಸ್ವೀಕರಿಸಿ ಮಾತನಾಡಿದ ಅವರು ‘ಪತ್ರಿಕೆಗಳಲ್ಲಿಯೂ ವಿಮರ್ಶೆಗೆ ಜಾಗ ಇಲ್ಲದಂತಾಗಿದೆ. ಜಾಗ ನೀಡುತ್ತಿರುವ ಪತ್ರಿಕೆಗಳಲ್ಲಿಯೂ ಶಬ್ದಗಳ ಮಿತಿ ಇರುತ್ತದೆ. ವಿಮರ್ಶೆ ಮಾತ್ರವಲ್ಲ, ಗಂಭೀರ ಸಾಹಿತ್ಯವೂ ಕಡಿಮೆ ಆಗುತ್ತಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಸಹಾಯಕ ಪ್ರಾಧ್ಯಾಪಕ ರಂಗನಾಥ ಕಂಟನಕುಂಟೆ ಅವರು ‘ಸಾಂಸ್ಕೃತಿಕ ರಾಜಕೀಯ–ಇಂದಿನ ಇತಿಹಾಸ’ ಕೃತಿ ಕುರಿತು ಮಾತನಾಡಿದರು. ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್ ಅಧ್ಯಕ್ಷೆ ವಿಜಯಾ ನಂದೀಶ್ವರ, ಮ್ಯಾನೇಜಿಂಗ್ ಟ್ರಸ್ಟಿ ಪ್ರಸನ್ನ ಕುಮಾರ ಪುರಾಣಿಕ, ಕಾರ್ಯದರ್ಶಿ ರುದ್ರೇಶ್ ಅದರಂಗಿ ಉಪಸ್ಥಿತರಿದ್ದರು.

ಬೆಂಗಳೂರು ಸುರಂಗ ರಸ್ತೆ ಮಾರ್ಗ ಯೋಜನೆ ಕಾಮಗಾರಿ

ಅದಾನಿ ಗ್ರೂಪ್‌ನಿಂದ ಕಡಿಮೆ ಮೊತ್ತದ ಬಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಸುರಂಗ ರಸ್ತೆ ಮಾರ್ಗ ಯೋಜನೆ ಕಾಮಗಾರಿಗೆ ಕರೆಯಲಾಗಿದ್ದ ಬಿಡ್‌ನಲ್ಲಿ ಅದಾನಿ ಗ್ರೂಪ್ ಅತ್ಯಂತ ಕಡಿಮೆ ಮೊತ್ತವನ್ನು ನಮೂದಿಸಿದೆ. ಆದರೆ ಅಂದಾಜು ವೆಚ್ಚಕ್ಕಿಂತ ಶೇ 24ರಷ್ಟು ಹೆಚ್ಚು ಮೊತ್ತ ನಮೂದಿಸಿರುವ ಕಾರಣಕ್ಕೆ, ಗುತ್ತಿಗೆ ಪ್ರಕ್ರಿಯೆ ವಿಳಂಬವಾಗಲಿದೆ.

ಸಿಲ್ಕ್ ಬೋರ್ಡ್‌ನಿಂದ ವಿಮಾನ ನಿಲ್ದಾಣ ರಸ್ತೆಯ ಎಸ್ಟೀಮ್ ಮಾಲ್‌ವರೆಗೆ ನಿರ್ಮಿಸಲಾಗುವ ಈ ಸುರಂಗ ಮಾರ್ಗ ಯೋಜನೆಯ ಅನುಷ್ಠಾನದ ಹೊಣೆಯನ್ನು ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ನಿಯಮಿತಕ್ಕೆ (ಬಿ–ಸ್ಮೈಲ್) ನೀಡಲಾಗಿದೆ.

ಈ ಯೋಜನೆಗೆ ಅದಾನಿ ಗ್ರೂಪ್, ದಿಲಿಪ್ ಬಿಲ್ಡ್‌ಕಾನ್, ವಿಶ್ವ ಸಮುದ್ರ ಎಂಜಿನಿಯರಿಂಗ್, ರೈಲ್ ವಿಕಾಸ್ ನಿಗಮ್ ಲಿಮಿಟೆಡ್ (ಆರ್‌ವಿಎನ್‌ಎಲ್) ಬಿಡ್ ಸಲ್ಲಿಸಿದ್ದವು. ಬಿಡ್‌ದಾರರು ನಿರ್ಮಿಸಿದ್ದ ರಸ್ತೆ /ಸೇತುವೆಗಳು ಈಚಿನ ವರ್ಷಗಳಲ್ಲಿ ಕುಸಿದಿರಬಾರದು ಎಂಬ ಷರತ್ತನ್ನು ಬಿ–ಸ್ಮೈಲ್ ವಿಧಿಸಿತ್ತು. ಈ ಷರತ್ತಿನ ಕಾರಣಕ್ಕೆ, ವಿಶ್ವ ಸಮುದ್ರ ಎಂಜಿನಿಯರಿಂಗ್, ಆರ್‌ವಿಎನ್‌ಎಲ್ ಸಲ್ಲಿಸಿದ್ದ ಬಿಡ್‌ಗಳು ಅನರ್ಹಗೊಂಡವು ಎಂದು ಬಿ–ಸ್ಮೈಲ್ ಮೂಲಗಳು ಹೇಳಿವೆ.

16.57 ಕಿ.ಮೀ. ಉದ್ದದ ಸುರಂಗ ರಸ್ತೆ ಮಾರ್ಗ ಯೋಜನೆಗೆ ರಾಜ್ಯ ಸರ್ಕಾರವು ₹17,698 ಕೋಟಿ ವೆಚ್ಚವಾಗುತ್ತದೆ ಎಂದು ಅಂದಾಜಿಸಿತ್ತು. ಅದಾನಿ ಗ್ರೂಪ್ ಸಲ್ಲಿಸಿರುವ ಬಿಡ್ ಅತ್ಯಂತ ಕಡಿಮೆ ಮೊತ್ತದ್ದಾಗಿದ್ದರೂ (ಎಲ್–1), ಅದು ಅಂದಾಜು ವೆಚ್ಚಕ್ಕಿಂತ ಶೇ 24– 28ರಷ್ಟು ಹೆಚ್ಚು. ವೆಚ್ಚ ಹೆಚ್ಚಳದ ಪ್ರಮಾಣ ಅಧಿಕವಾಗಿ ಇರುವ ಕಾರಣಕ್ಕೆ, ರಾಜ್ಯ ಸಚಿವ ಸಂಪುಟದ ಒಪ್ಪಿಗೆ ಪಡೆಯಬೇಕಾಗುತ್ತದೆ ಎಂದು ಮೂಲಗಳು ಮಾಹಿತಿ ನೀಡಿವೆ.

ಈ ಸುರಂಗ ರಸ್ತೆ ಮಾರ್ಗವನ್ನು ನಿರ್ಮಾಣ– ನಿರ್ವಹಣೆ– ವರ್ಗಾವಣೆ ಮಾದರಿಯಲ್ಲಿ ನಿರ್ಮಿಸಲಾಗುತ್ತಿದೆ. ಸರ್ಕಾರವು ಶೇ 40ರಷ್ಟು ವೆಚ್ಚವನ್ನು ಭರಿಸಿದರೆ, ನಿರ್ಮಾಣ ಕಂಪನಿಯು ಶೇ 60ರಷ್ಟು ವೆಚ್ಚವನ್ನು ಭರಿಸಬೇಕು.

‘ಇದು ಅತ್ಯಂತ ದುಬಾರಿ ವೆಚ್ಚದ ಯೋಜನೆ. ಬಡವರಿಗೆ ಇದರಿಂದ ಅನುಕೂಲವಿಲ್ಲ’ ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಮತ್ತು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದ್ದರು.

ಸ್ನೇಹಿತನ ವಿರುದ್ಧ ಎಫ್‌ಐಆರ್

ಮಗಳ ಚಿಕಿತ್ಸೆಗೆ ನೆರವು ಪಡೆದಿದ್ದ ಮಹಿಳೆಗೆ ಲೈಂಗಿಕ ಕಿರುಕುಳ; ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಪೀಣ್ಯ ದಾಸರಹಳ್ಳಿ: ಮಗಳ ಚಿಕಿತ್ಸೆಗಾಗಿ ಹಣಕಾಸು ನೆರವು ಪಡೆದಿದ್ದ ಮಹಿಳೆಗೆ ಲೈಂಗಿಕ ಕಿರುಕುಳ ನೀಡಿದ್ದು, ಇದರಿಂದ ಮನನೊಂದ ಮಹಿಳೆ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಪೀಣ್ಯದ ಶಿವಪುರ ಕೆರೆಯ ಬಳಿ ನಡೆದಿದೆ.

ಸಂತ್ರಸ್ತೆ ದೂರು ಆಧರಿಸಿ ಪಾರಿತೋಷ್ ಯಾದವ್ ಎಂಬವರ ವಿರುದ್ಧ ರಾಜಗೋಪಾಲ ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ವಿಚಾರಣೆಗೆ ಬರುವಂತೆ ನೋಟಿಸ್ ಜಾರಿ ಮಾಡಿದ್ದಾರೆ.

‘ಸಂತ್ರಸ್ತೆ ವಿವಾಹಿತೆಯಾಗಿದ್ದು, ಜಾಲತಾಣದ ಮೂಲಕ ಆರೋಪಿಯ ಪರಿಚಯವಾಗಿತ್ತು. ಸಂತ್ರಸ್ತೆಯ ಮಗಳು ಅಗ್ನಿ ಅವಘಡದಲ್ಲಿ ಗಾಯಗೊಂಡಿದ್ದಳು. ಬಳಿಕ ಮಗಳ ಚಿಕಿತ್ಸೆಗಾಗಿ ಪಾರಿತೋಷ್ ಯಾದವ್‌ನಿಂದ ₹30 ಸಾವಿರ ಪಡೆದಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಆರೋಪಿ ಪಾರಿತೋಷ್ ಯಾದವ್, ಸಾಲ ಕೊಟ್ಟಿದ್ದನ್ನೇ ನೆಪ ಮಾಡಿಕೊಂಡು, ದೈಹಿಕವಾಗಿ ತನಗೆ ಸಹಕರಿಸ ಬೇಕೆಂದು ಸಂತ್ರಸ್ತೆಗೆ ಪೀಡಿಸಿದ್ದಾನೆ. ಇದಕ್ಕೆ ಒಪ್ಪದಿದ್ದಾಗ ಆಕೆಯ ಮೊಬೈಲ್ ಸಂಖ್ಯೆಯನ್ನು ವೇಶ್ಯಾವಾಟಿಕೆ ದಂಧೆಕೋರರಿಗೆ ಕೊಡುವುದಾಗಿ, ಸಾರ್ವಜನಿಕ ಶೌಚಾಲಯಗಳಲ್ಲಿ ಬರೆಯುವುದಾಗಿ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಹಾಕುವುದಾಗಿ ಬೆದರಿಸಿದ್ದಾನೆ. ಅಲ್ಲದೆ, ಅಶ್ಲೀಲ ಪೋಟೊ ಮತ್ತು ವಿಡಿಯೊಗಳನ್ನು ಸಂತ್ರಸ್ತೆಗೆ ಕಳುಹಿಸಿ ಮಾನಸಿಕ ಹಿಂಸೆ ನೀಡಿದ್ದಾನೆ’ ಎಂದು ಪೊಲೀಸರು ಹೇಳಿದ್ದಾರೆ.

‘ಪಾರಿತೋಷ್ ಯಾದವ್‌ನ ವಿಚಾರ ಸಂತ್ರಸ್ತೆಯ ಪತಿಗೆ ಗೊತ್ತಾಗಿ ದಂಪತಿ ಮಧ್ಯೆ ಮನಸ್ತಾಪ ಉಂಟಾಗಿತ್ತು. ಇದರಿಂದ ಮನನೊಂದ ಸಂತ್ರಸ್ತೆಯು ಪೀಣ್ಯದ ಸ್ನೇಹಿತೆ ಮನೆಗೆ ಹೋಗಿದ್ದರು. ನಂತರ ಶಿವಪುರ ಕೆರೆಯ ಬಳಿ ಬಂದು ಕೈ ಕೊಯ್ದುಕೊಂಡು ಕೆರೆಗೆ ಹಾರಿ ಆತ್ಮಹತ್ಯೆಯನ್ನು ಮಾಡಿಕೊಳ್ಳಲು ಯತ್ನಿಸಿದ್ದಾರೆ. ಸ್ಥಳೀಯರು ಸಂತ್ರಸ್ತೆಯನ್ನು ಕಾಪಾಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ರಸ್ತೆ ಅಪಘಾತ: ಟೆಕಿ ಸಾವು

ಬೆಂಗಳೂರು: ಹುಳಿಮಾವು ಕೆರೆ ರಸ್ತೆಯಲ್ಲಿ ಶನಿವಾರ ರಾತ್ರಿ ಸಂಭವಿಸಿದ ಬೈಕ್ ಅಪಘಾತದಲ್ಲಿ ಸಾಫ್ಟ್‌ವೇರ್ ಕಂಪನಿ ಉದ್ಯೋಗಿ ಮೃತಪಟ್ಟಿದ್ದಾರೆ.

ತಮಿಳುನಾಡಿನ ಮುನಿಸ್ವಾಮಿ (36) ಮೃತಪಟ್ಟವರು. ದೊಡ್ಡ ಕಮ್ಮನಹಳ್ಳಿಯಲ್ಲಿ ವಾಸವಾಗಿದ್ದ ಅವರು ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಸ್ನೇಹಿತರೊಂದಿಗೆ ರಾತ್ರಿ ಊಟ ಮಾಡಿ ಬೈಕ್‌ನಲ್ಲಿ ಮನೆಗೆ ಬರುತ್ತಿದ್ದಾಗ ಈ ದುರ್ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹುಳಿಮಾವು ಕೆರೆ ರಸ್ತೆಯ ಕೋದಂಡರಾಮ ದೇವಸ್ಥಾನದ ಬಳಿ ಮುನಿಸ್ವಾಮಿ ಅವರ ಬೈಕ್ ನಿಯಂತ್ರಣ ತಪ್ಪಿತು. ಕೆಳಗೆ ಬಿದ್ದು ತೀವ್ರವಾಗಿ ಗಾಯಗೊಂಡ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟರು. ಅಜಾಗರೂಕತೆ ಹಾಗೂ ಅತಿಯಾದ ವೇಗವೇ ಅಪಘಾತಕ್ಕೆ ಕಾರಣ ಎಂದು ಪೊಲೀಸರು ಹೇಳಿದ್ದಾರೆ. ಹುಳಿಮಾವು ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡೀಪ್ ಫೇಕ್ ವಿಡಿಯೊ: ಪ್ರಕರಣ

ಬೆಂಗಳೂರು: ರಾಷ್ಟ್ರಪತಿ ಮಾತನಾಡಿದಂತೆ ಬಿಂಬಿಸಿದ್ದ ಡೀಪ್ ಫೇಕ್ ವಿಡಿಯೊ ಮಾಡಿದ್ದ ವ್ಯಕ್ತಿ ಹಾಗೂ ಸಾಮಾಜಿಕ ಜಾಲತಾಣ ಖಾತೆ ವಿರುದ್ಧ ಮಹಾಲಕ್ಷ್ಮೀ ಲೇಔಟ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಈ ಸಂಬಂಧ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿ ಪತ್ತೆಗಾಗಿ ಶೋಧ ನಡೆಸುತ್ತಿದ್ದಾರೆ. ಠಾಣೆಯಲ್ಲಿ ಸಾಮಾಜಿಕ ಮಾಧ್ಯಮ ನಿಗಾ ಘಟಕದ (ಎಸ್‌ಎಂಎಂಸಿ) ಉಸ್ತುವಾರಿ ಪಿಎಸ್‌ಐ ರಾಕೇಶ್, ಫೇಸ್ ಬುಕ್ ಖಾತೆ ನೋಡುತ್ತಿರುವಾಗ ‘ಡುನ್ ಡ್ರೀಮ್’ ಹೆಸರಿನಲ್ಲಿ ದ್ರೌಪದಿ ಮುರ್ಮು ಅವರು ಹಣಕಾಸು ಯೋಜನೆ ಉದ್ದೇಶಿಸಿ ಮಾತನಾಡಿರುವ ವಿಡಿಯೊ ಕಂಡು ಬಂದಿತ್ತು. ಈ ಡೀಪ್ ಫೇಕ್ ವಿಡಿಯೊದಲ್ಲಿ ಹಣ ಹೂಡಿದರೆ ಮನೆಯಲ್ಲಿಯೇ ಕುಳಿತು ಹೆಚ್ಚಿನ ಲಾಭ ಮಾಡಬಹುದು ಎಂದು ಹೇಳಿದ್ದರು.

ಇದರಿಂದ ಅನುಮಾನಗೊಂಡು ತನಿಖೆ ನಡೆಸಿದಾಗ ಎ.ಐ ತಂತ್ರಜ್ಞಾನ ಮೂಲಕ ನಕಲಿ ವಿಡಿಯೊ ಸೃಷ್ಟಿಸಿರುವುದು ಗೊತ್ತಾಗಿದೆ.ಆಮಿಷವೊಡ್ಡುವ ವಿಡಿಯೊ ನೋಡುವ ಜನರು ಹಣದ ಆಸೆಗಾಗಿ ನಷ್ಟಕ್ಕೊಳಗಾಗುವ ಸಾಧ್ಯತೆ ಮನಗಂಡು ಫೇಸ್ ಬುಕ್ ಲಿಂಕ್ ಅಳಿಸಲಾಗಿದೆ.

ಸುಳ್ಳು ಮಾಹಿತಿ ಪ್ರಸಾರ ಮಾಡಿ, ಜನರಿಂದ ಹಣ ಸುಲಿಗೆ ಮಾಡುತ್ತಿರುವ ಆರೋಪದ ಮೇಲೆ ಅಪರಿಚಿತ ವ್ಯಕ್ತಿ ಹಾಗೂ ಸಾಮಾಜಿಕ ಜಾಲತಾಣ ಖಾತೆದಾರನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ.

ನಗರದ ಮಂಜುನಾಥೇಶ್ವರ ಸ್ವಾಮಿ ಕಲ್ಯಾಣ ಮಂಟಪದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಲೇಖಕಿ ಪಿ. ಜಯಲಕ್ಷ್ಮಿ ಅಭಯಕುಮಾರ್, ಚಂದ್ರಹಾಸ ರೈ, ಸುರೇಂದ್ರಕುಮಾರ್, ಎಂ. ವೀರಪ್ಪ ಮೊಯಿಲಿ, ನೀಲಾವರ ಸುರೇಂದ್ರ ಅಡಿಗ ಮತ್ತು ಜಾಣಗೆರೆ ವೆಂಕಟರಾಮಯ್ಯ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

‘ಭಾರತೀಯ ಧರ್ಮಗಳಿಗೆ ತತ್ವ ಸಿದ್ಧಾಂತಗಳೇ ಆಧಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತೀಯ ಧರ್ಮಗಳು ತತ್ವ ಸಿದ್ಧಾಂತಗಳ ಆಧಾರದ ಮೇಲೆ ನಿಂತಿವೆ’ ಎಂದು ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ ಹೇಳಿದರು.

ನಿಖಿಲ್ ನಿಶ್ಚಲ್ ಪ್ರಕಾಶನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಿ. ಜಯಲಕ್ಷ್ಮಿ ಅಭಯಕುಮಾರ್ ಅವರ ಆತ್ಮಕಥನ ಬೆಂಕಿಯಲ್ಲಿ ಅರಳಿದ ಹೂವು ಪುಸ್ತಕ ಜನಾರ್ಪಣೆಗೊಳಿಸಿ ಅವರು ಮಾತನಾಡಿದರು.

‘ವಿಶ್ವದಲ್ಲಿರುವ ಎಲ್ಲ ಧರ್ಮಗಳನ್ನು ನಾವು ವಿಮರ್ಶೆ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಸನಾತನ ಧರ್ಮ ಸಹಬಾಳ್ವೆಯಲ್ಲಿ ನಂಬಿಕೆ ಹೊಂದಿದ್ದು, ಇಡೀ ವಿಶ್ವ ಒಂದೇ ಕುಟುಂಬ ಎಂಬ ಸಂದೇಶ ಸಾರುತ್ತದೆ. ನಮ್ಮಲ್ಲಿ ಇರುವಷ್ಟು ದೇವರು, ಮಹಾತ್ಮರು ಬೇರೆ ಯಾವ ಧರ್ಮಗಳಲ್ಲೂ ಇಲ್ಲ. ಆದ್ದರಿಂದ ನಮ್ಮ ಸಮಾಜದಲ್ಲಿ ವಿವಿಧ ರೀತಿಯ ಆಚಾರ–ವಿಚಾರಗಳು, ಸಂಸ್ಕೃತಿ, ಸಂಪ್ರದಾಯಗಳನ್ನು ನೋಡಬಹುದು’ ಎಂದು ತಿಳಿಸಿದರು.

‘ಜಯಲಕ್ಷ್ಮಿ ಅವರು ತಮ್ಮ ಜೀವನದ ಪ್ರತಿಯೊಂದು ಮಾಹಿತಿಯನ್ನು ಈ ಪುಸ್ತಕದಲ್ಲಿ ನೀಡಿದ್ದಾರೆ. ಗೃಹಿಣಿಯರು ಇದನ್ನು ಓದಲೇಬೇಕು’ ಎಂದರು.

ಭಾರತೀಯ ಜೈನ್ ಮಿಲನ್ ಕಾರ್ಯಾಧ್ಯಕ್ಷ ಡಿ.ಸುರೇಂದ್ರ ಕುಮಾರ್, ಪತ್ರಕರ್ತ ಜಾಣಗೆರೆ ವೆಂಕಟರಾಮಯ್ಯ, ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗ, ಬಂಟರ ಸಂಘದ ಮಾಜಿ ಅಧ್ಯಕ್ಷ ಚಂದ್ರಹಾಸ ರೈ, ಪಿ.ಜಯಲಕ್ಷ್ಮಿ ಅಭಯಕುಮಾರ್ ಉಪಸ್ಥಿತರಿದ್ದರು.

ವರಲಕ್ಷ್ಮಮ್ಮ, ಬಾಬು ಅಮಾನತಿಗೆ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇ–ಖಾತಾ ಪಡೆಯಲು ಅರ್ಜಿಯೊಂದಿಗೆ ಎಲ್ಲ ದಾಖಲೆಗಳನ್ನು ಸಲ್ಲಿಸಿದ್ದರೂ ವಿನಾಕಾರಣ ಅರ್ಜಿಯನ್ನು ತಿರಸ್ಕರಿಸಿರುವ ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಉಪ ಆಯುಕ್ತ (ಬೊಮ್ಮನಹಳ್ಳಿ) ಡಿ.ಕೆ. ಬಾಬು ಮತ್ತು ಕಂದಾಯ ಅಧಿಕಾರಿ (ಬಿಟಿಎಂ ಲೇಔಟ್) ವರಲಕ್ಷ್ಮಮ್ಮ ಅವರನ್ನು ಅಮಾನತಿನಲ್ಲಿರಿಸಲು ನಗರಾಭಿವೃದ್ಧಿ ಇಲಾಖೆಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಉಪ ಆಯುಕ್ತರು ಪ್ರಸ್ತಾವ ಸಲ್ಲಿಸಿದ್ದಾರೆ.

ಅರ್ಜಿದಾರ ಡಿ.ಪಿ. ಮುರಳೀಧರ್ ಅವರು ಜಯನಗರ 5ನೇ ಕ್ರಾಸ್‌ನಲ್ಲಿರುವ ಸ್ವತ್ತಿಗೆ ಸಂಬಂಧಿಸಿದಂತೆ ಅಂತಿಮ ಇ–ಖಾತಾ ಪಡೆಯಲು ಅರ್ಜಿ ಸಲ್ಲಿಸಿದ್ದರು. ಕ್ರಯಪತ್ರ ಸಹಿತ ಅಗತ್ಯ ದಾಖಲೆಗಳನ್ನು ನೀಡಿದ್ದರು. ಸ್ವತ್ತು ‘ಎ’ ಆಸ್ತಿವಹಿ ಸಂಖ್ಯೆ ನಮೂದಿಸಿ ವಿಷಯ ನಿರ್ವಾಹಕರು ಅರ್ಜಿಯ ಅನುಮೋದನೆಗೆ ಪ್ರಸ್ತಾವ ಸಲ್ಲಿಸಿದ್ದರು. ಆದರೂ ‘ಎ’ ಅಥವಾ ‘ಬಿ’ ಖಾತಾ ಎಂಬುದನ್ನು ವಿಷಯ ನಿರ್ವಾಹಕರು ನಮೂದಿಸಿಲ್ಲ. ಸರಿಯಾದ ದಾಖಲೆ ಸಲ್ಲಿಸಿಲ್ಲ ಎಂದು ಷರಾ ಬರೆದು ಕಂದಾಯ ಅಧಿಕಾರಿ ತಿರಸ್ಕರಿಸಿದ್ದರು. ಬೊಮ್ಮನಹಳ್ಳಿ ಉಪ ಆಯುಕ್ತರು ಕೂಡ ತಿರಸ್ಕರಿಸಿದ್ದರು ಎಂದು ಕಂದಾಯ ವಿಭಾಗದ ಜಂಟಿ ಆಯುಕ್ತರು ನೀಡಿದ ವರದಿ ಮತ್ತು ವಿಶೇಷ ಆಯಕ್ತರು ನೀಡಿದ ವರದಿಯಲ್ಲಿ ತಿಳಿಸಿದ್ದಾರೆ.

ನಗರ ಪಾಲಿಕೆಗೆ, ಜಿಬಿಎಗೆ ಕೆಟ್ಟ ಹೆಸರು ಬರಲು ಇದು ಕಾರಣವಾಗಿದೆ. ಹಾಗಾಗಿ ಡಿ.ಕೆ. ಬಾಬು ಮತ್ತು ವರಲಕ್ಷ್ಮಮ್ಮ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತು ಮಾಡಲು ಹಾಗೂ ಮುಂದಿನ ಶಿಸ್ತುಕ್ರಮ ಕೈಗೊಳ್ಳಬೇಕು ಎಂದು ಪ್ರಸ್ತಾವದಲ್ಲಿ ತಿಳಿಸಲಾಗಿದೆ.

ಅಮಾನತು ಪ್ರಸ್ತಾವ: ಇಂದಿನಿಂದ ಪ್ರತಿಭಟನೆ

ಡಿ.ಕೆ ಬಾಬು ಮತ್ತು ವರಲಕ್ಷ್ಮಿ ಅವರನ್ನು ಅಮಾನತು ಮಾಡಲು ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವ ಸಲ್ಲಿಸಿರುವುದನ್ನು ವಿರೋಧಿಸಿ ಡಿ.22ರಿಂದ ವಿವಿಧ ನಗರಪಾಲಿಕೆಗಳ ವಿರುದ್ಧ ಪ್ರತಿಭಟನೆ ನಡೆಸಲು ಜಿಬಿಎ ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ನಿರ್ಧರಿಸಿದೆ.

ಡಿ.22ರಂದು ಸಂಜೆ 5.30ಕ್ಕೆ ಈ ಬಗ್ಗೆ ನೌಕರರ ಭವನದಲ್ಲಿ ತುರ್ತು ಸಭೆ ನಡೆಸಲಾಗುವುದು. ಸಭೆ ಮುಗಿದ ಬಳಿಕ ಮೇಣದ ಬತ್ತಿ ಹಚ್ಚುವ ಮೂಲಕ ಶಾಂತಿಯುತವಾಗಿ ಒಂದು ನಿಮಿಷ ಮೌನ ಆಚರಿಸಲಾಗುವುದು ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ತಿಳಿಸಿದ್ದಾರೆ.

ಡಿ. 23ರಂದು ಕೇಂದ್ರ ಪಾಲಿಕೆ, 24ರಂದು ದಕ್ಷಿಣ ಪಾಲಿಕೆ, 26ರಂದು ಪಶ್ಚಿಮ ಪಾಲಿಕೆ, 29ರಂದು ಪೂರ್ವ ಪಾಲಿಕೆ, 30ರಂದು ಉತ್ತರ ಪಾಲಿಕೆ ಕಚೇರಿ ಮುಂಭಾಗಗಳಲ್ಲಿ ಅಧಿಕಾರಿಗಳು ಮತ್ತು ನೌಕರರು ಸಂಜೆ 6.30ಕ್ಕೆ ಮೇಣದ ಬತ್ತಿ ಹಚ್ಚಿ ಮೌನ ಪ್ರತಿಭಟನೆ ಮಾಡಲಾಗುವುದು.

ಪ್ರಸ್ತಾವ ಹಿಂಪಡೆಯುವವರೆಗೂ ಪ್ರತಿದಿನ ಅಧಿಕಾರಿಗಳು ಮತ್ತು ನೌಕರರು ಕಪ್ಪು ಪಟ್ಟಿ ಧರಿಸಿ ಕರ್ತವ್ಯ ನಿರ್ವಹಿಸಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಭಯದಲ್ಲಿ ದಾರಿಯುದ್ದಕ್ಕೂ ಸಿಕ್ಕ ಸಿಕ್ಕ ವಾಹನಕ್ಕೆ ಡಿಕ್ಕಿ

ಸರಣಿ ಅಪಘಾತ: ವಾಹನ ಜಖಂ

ಪ್ರಜಾವಾಣಿ ವಾರ್ತೆ

ಆನೇಕಲ್: ಆನೇಕಲ್-ಚಂದಾಪುರ ರಸ್ತೆಯಲ್ಲಿ ಭಾನುವಾರ ಕೋಲ್ಕತ್ತದಿಂದ ಅತ್ತಿಬೆಲೆಗೆ ಸರಕು ತಂದಿದ್ದ ಕಂಟೇನರ್(ಲಾರಿ) ರಸ್ತೆಯಲ್ಲಿ ಸಿಕ್ಕಸಿಕ್ಕ ವಾಹನಗಳಿಗೆ ಡಿಕ್ಕಿ ಹೊಡೆದಿದೆ. ಸರಣಿ ಅಪಘಾತದಲ್ಲಿ ಕಾರು, ದ್ವಿಚಕ್ರ ವಾಹನ ಸೇರಿದಂತೆ ಹತ್ತಕ್ಕೂ ಹೆಚ್ಚು ವಾಹನಗಳು ಜಖಂಗೊಂಡಿವೆ. ಘಟನೆಯಲ್ಲಿ ಐವರು ಗಾಯಗೊಂಡಿದ್ದು, ಮಹಿಳೆಯೊಬ್ಬರಿಗೆ ಗಂಭೀರ ಸ್ವರೂಪದ ಗಾಯಗಳಾಗಿವೆ.

ಡಿಕ್ಕಿ ಹೊಡೆದ ನಂತರ ಪರಾರಿಯಾಗಲು ಯತ್ನಿಸಿದ ಲಾರಿ ಚಾಲಕ ಉತ್ತರ ಪ್ರದೇಶದ ಪ್ರೇಮ್ (35) ಎಂಬಾತನನ್ನು ಅಪಘಾತಕ್ಕೀಡಾದ ಕಾರಿನ ಚಾಲಕರು ಮತ್ತು ಸಾರ್ವಜನಿಕರು 15 ಕಿ.ಮೀ ಬೆನ್ನಟ್ಟಿದ್ದಾರೆ. ಜನರು ಬೆನ್ನಟ್ಟಿರುವುದು ಗೊತ್ತಾಗಿ ಭಯದಲ್ಲಿ ಚಾಲಕ ಲಾರಿಯನ್ನು ಯದ್ವಾತದ್ವಾ ಓಡಿಸಿದ್ದಾನೆ. ದಾರಿಯುದ್ದಕ್ಕೂ ಸಿಕ್ಕ, ಸಿಕ್ಕ ವಾಹನಕ್ಕೆ ಡಿಕ್ಕಿ ಹೊಡೆಸಿದ್ದಾನೆ.

ಕೊನೆಗೆ ಜನರು ಆತನನ್ನು ಹಿಡಿದು ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಹಲ್ಲೆಯಲ್ಲಿ ಲಾರಿ ಚಾಲಕನಿಗೆ ತಲೆಗೆ ಗಾಯವಾಗಿದೆ. ಚಿಕಿತ್ಸೆಗಾಗಿ ಆತನನ್ನು ಪೊಲೀಸರು ಆಸ್ಪತ್ರೆಗೆ ದಾಖಲಿಸಿದ್ದಾರೆ.

ಆನೇಕಲ್ ತಾಲ್ಲೂಕಿನ ಚಂದಾಪುರದಲ್ಲಿ ಸರಣಿ ಅಪಘಾತಕ್ಕೆ ಕಾರಣವಾದ ಲಾರಿ

ಮದ್ಯ, ಗಾಂಜಾ ಸೇವಿಸಿಲ್ಲ

ಸರಣಿ ಅಪಘಾತಕ್ಕೆ ನಿಖರ ಕಾರಣ ತಿಳಿದು ಬಂದಿಲ್ಲ. ಲಾರಿ ಚಾಲಕನ ತಪಾಸಣೆ ನಡೆಸಲಾಗಿದೆ. ಆತ ಮದ್ಯ ಇಲ್ಲವೇ ಮಾದಕ ವಸ್ತು ಸೇವಿಸಿರಲಿಲ್ಲ ಎಂಬುದು ಪರೀಕ್ಷೆಯಿಂದ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಲಾರಿ ಚಾಲಕ ಮೊದಲ ಅಪಘಾತದ ನಂತರ ಹೆದರಿಕೆಯಿಂದ ಲಾರಿಯನ್ನು ವೇಗವಾಗಿ ಓಡಿಸಿದ್ದರಿಂದ ಸರಣಿ ಅಪಘಾತ ಸಂಭವಿಸಿದೆ ಎಂದು ಪೊಲೀಸರು ಹೇಳಿದ್ದಾರೆ.

ಉತ್ತರ ಪ್ರದೇಶದ ಪ್ರೇಮ್ ಮತ್ತು ಇತರ ಮೂವರು ಕಂಟೇನರ್‌ನಲ್ಲಿ ಕೋಲ್ಕತ್ತದಿಂದ ಅತ್ತಿಬೆಲೆಗೆ ಸರಕು ತಂದಿದ್ದರು. ಬೆಸ್ತಮಾನಹಳ್ಳಿಯ ಬಳಿ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಸಂದರ್ಭದಲ್ಲಿ ಪ್ರೇಮ್‌ನೊಂದಿಗೆ ಇದ್ದ ಇಬ್ಬರು ಡ್ರೈವರ್ ಮತ್ತು ಕ್ಲೀನರ್‌ಗಳು ಲಾರಿಯಿಂದ ಜಿಗಿದು ಪರಾರಿಯಾಗಿದ್ದಾರೆ.

ಒಂದಾದ ನಂತರ ಒಂದು ಅಪಘಾತ: ಅತ್ತಿಬೆಲೆಯಿಂದ ಆನೇಕಲ್ ಕಡೆಗೆ ಬರುತ್ತಿದ್ದ ಲಾರಿ ಚಾಲಕ ಪ್ರೇಮ್, ಅತ್ತಿಬೆಲೆ– ಆನೇಕಲ್ ರಸ್ತೆಯ ಬೆಸ್ತಮಾನಹಳ್ಳಿ ಸಮೀಪ ದ್ವಿಚಕ್ರ ವಾಹನವೊಂದಕ್ಕೆ ಡಿಕ್ಕಿ ಹೊಡೆದ. ನಂತರ ಅಲ್ಲಿಂದ ತಪ್ಪಿಸಿಕೊಳ್ಳಲು ಯತ್ನಿಸಿದ ಆತನನ್ನು ಸ್ಥಳೀಯರು ಬೆನ್ನತ್ತಿದ್ದಾರೆ.

ಇದರಿಂದ ಭಯಗೊಂಡ ಚಾಲಕ ಲಾರಿಯನ್ನು ವೇಗವಾಗಿ ಓಡಿಸಿದ್ದಾನೆ. ತಪ್ಪಿಸಿಕೊಳ್ಳುವ ಭರದಲ್ಲಿ ಹಾಲ್ದೇನಳ್ಳಿಯ ರೈಲ್ವೆ ಗೇಟ್ ಬಳಿ ಆಟೊವೊಂದಕ್ಕೆ ಡಿಕ್ಕಿ ಹೊಡೆದಿದ್ದಾನೆ. ಆಟೊದಲ್ಲಿದ್ದ ಐವರು ಮಹಿಳೆಯರಿಗೆ ಗಾಯಗಳಾಗಿವೆ. ಚಾಲಕ ಅಲ್ಲಿಯೂ ಸಹ ಲಾರಿ ನಿಲ್ಲಿಸದೆ ವೇಗವಾಗಿ ಆನೇಕಲ್‌ನತ್ತ ತೆರಳಿದ್ದಾನೆ. ನಂತರ ಆನೇಕಲ್ ಪಟ್ಟಣದ ನ್ಯಾಯಾಲಯದ ಬಳಿ ಕಾರಿಗೆ ಡಿಕ್ಕಿ ಹೊಡೆದಿದ್ದು ಕಾರು ಸಂಪೂರ್ಣವಾಗಿ ಜಖಂಗೊಂಡಿದೆ. ಕಾರಿನಲ್ಲಿದ್ದವರು ಅಪಾಯದಿಂದ ಪಾರಾಗಿದ್ದಾರೆ.

ಅತ್ತಿಬೆಲೆ–ಆನೇಕಲ್ ರಸ್ತೆಯಿಂದ ರಾಘವೇಂದ್ರ ಭವನದ ಮೂಲಕ ಚಂದಾಪುರ ರಸ್ತೆಯಲ್ಲಿ ಚಾಲಕ ವೇಗವಾಗಿ ಲಾರಿ ಓಡಿಸಿಕೊಂಡು ಹೋಗಿದ್ದು, ಚಂದಾಪುರ ಸೂರ್ಯ ಸಿಟಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಎರಡು ದ್ವಿಚಕ್ರ ವಾಹನ ಮತ್ತು ಒಂದು ಕಾರು ಸೇರಿದಂತೆ ಮೂರು ವಾಹನಗಳಿಗೆ ಡಿಕ್ಕಿ ಹೊಡೆದಿದೆ. ಮೂರು ವಾಹನ ಜಖಂಗೊಂಡಿವೆ.

ಸ್ಥಳಕ್ಕೆ ಎಎಸ್‌ಪಿ ವೆಂಕಟೇಶ್ ಪ್ರಸನ್ನ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಆನೇಕಲ್ ಮತ್ತು ಸೂರ್ಯ ಸಿಟಿ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದೆ.

ಬಾಲಕನ ಮೇಲೆ ಹಲ್ಲೆ; ನಾಲ್ವರ ಸೆರೆ

ಬಾಗಲಕೋಟೆ: ಬುದ್ಧಿಮಾಂದ್ಯ ಬಾಲಕನ ಮೇಲೆ ಹಲ್ಲೆ ನಡೆಸಿದ್ದ ಶಾಲೆ ಮುಖ್ಯಸ್ಥ, ಶಿಕ್ಷಕ ಅಕ್ಷಯ ಇಂದೋಲ್ಕರ್ ಸೇರಿ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

ಅಕ್ಷಯ ಇಂದೋಲ್ಕರ್, ಅವರ ಪತ್ನಿ ಮಾಲಿನಿ, ರವಿ ಮತ್ತು ವಿಶಾಲ್ ಎಂಬವರನ್ನು ಪೊಲೀಸರು ಬಂಧಿಸಿದ್ದಾರೆ. ಡಿವೈಎಸ್‌ಪಿ ಗಜಾನನ ಸುತಾರ್ ನೇತೃತ್ವದ ತಂಡ ಸ್ಥಳದ ಮಹಜರು ನಡೆಸಿದ್ದು, ಹಲ್ಲೆಗೆ ಬಳಸಿದ್ದ ವಸ್ತುಗಳನ್ನು ವಶಕ್ಕೆ ತೆಗೆದುಕೊಂಡಿತು.

'ಶಾಲೆಯಲ್ಲಿದ್ದ 28 ಮಕ್ಕಳನ್ನು ಪಾಲಕರ ವಶಕ್ಕೆ ಒಪ್ಪಿಸಲು ಕ್ರಮ ವಹಿಸಲಾಗಿದೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಪ್ರಭಾಕರ ತಿಳಿಸಿದರು.

ಕ್ರಿಮಿನಲ್ ಪ್ರಕರಣ ದಾಖಲಿಸುತ್ತೇವೆ: ಬುದ್ಧಿಮಾಂದ್ಯ ಬಾಲಕನ ಮೇಲೆ ಹಲ್ಲೆ ನಡೆಸಿದ ಶಿಕ್ಷಕರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಸೂಚಿಸಲಾಗಿದೆ. ಜಿಲ್ಲಾಧಿಕಾರಿ ಜತೆಗೆ ಮಾತನಾಡಿ, ವಸತಿ ಶಾಲೆ ಮುಚ್ಚಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.

ನಗರ ಪ್ರದೇಶಕ್ಕೂ ಕಾವಲು ಸಮಿತಿ

ಮಹಿಳೆಯರ, ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಸಹಕಾರಿ

• ಖಲೀಲಅಹ್ಮದ ಶೇಖ

ಬೆಂಗಳೂರು: ರಾಜ್ಯದ ನಗರ ಪ್ರದೇಶಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯ, ಮಕ್ಕಳ ಕಳ್ಳ ಸಾಗಣೆ, ಬಾಲ್ಯ ವಿವಾಹ, ಪೋಕ್ಸೊ ಪ್ರಕರಣಗಳಿಗೆ ಕಡಿವಾಣ ಹಾಕುವುದರ ಜೊತೆಗೆ, ಮಕ್ಕಳನ್ನು ರಕ್ಷಣೆ ಮಾಡುವ ಉದ್ದೇಶದಿಂದ ನಗರ ಪ್ರದೇಶಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಕಾವಲು ಸಮಿತಿಗಳನ್ನು ರಚಿಸಲಾಗುತ್ತದೆ.

ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ ಮಕ್ಕಳ ಕಾವಲು ಸಮಿತಿಗಳನ್ನು ಪ್ರಾರಂಭಿಸಲಾಗಿದೆ. ಈ ಸಮಿತಿಗಳು ಪೋಕ್ಸೊ, ಬಾಲಕಾರ್ಮಿಕ ಹಾಗೂ ಜೀತ ಪದ್ಧತಿ ಕುರಿತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ, ಆರೋಗ್ಯ ಹಾಗೂ ಪೊಲೀಸ್ ಇಲಾಖೆಯ ಸಹಯೋಗದಲ್ಲಿ ಜಾಗೃತಿ ಮೂಡಿಸುತ್ತಿವೆ. ಅದೇ ಮಾದರಿಯಲ್ಲಿ ನಗರ ಪಾಲಿಕೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲೂ ಕಾವಲು ಸಮಿತಿಗಳನ್ನು ರಚಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರು ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಮಹಿಳಾ ಸದಸ್ಯರು ಉಪಾಧ್ಯಕ್ಷರಾಗಿರುತ್ತಾರೆ. ನಗರ ಸ್ಥಳೀಯ ಸಂಸ್ಥೆಯ ಇಬ್ಬರು ಸದಸ್ಯರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ತಾಲ್ಲೂಕು ಆರೋಗ್ಯ ಅಧಿಕಾರಿ, ಸಬ್ ಇನ್‌ಸ್ಪೆಕ್ಟರ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಸ್ವಯಂ ಸೇವಾ ಸಂಸ್ಥೆಯ ಇಬ್ಬರು ಮಹಿಳಾ ಸದಸ್ಯರು, ಪ್ರೌಢಶಾಲಾ ವಿದ್ಯಾರ್ಥಿಗಳು, ಕಾರ್ಮಿಕ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತ ಇಲಾಖೆಯ ತಲಾ ಒಬ್ಬ ಅಧಿಕಾರಿ, ವಾರ್ಡ್ ಮಟ್ಟದ ಅಧಿಕಾರಿ, ನಗರ ಪಾಲಿಕೆ, ಸ್ಥಳೀಯ ಸಂಸ್ಥೆಗಳ ಮುಖ್ಯ ಅಧಿಕಾರಿಗಳು ಸಮಿತಿಯ ಸದಸ್ಯರಾಗಿರುತ್ತಾರೆ.



ಸಮಿತಿಯಲ್ಲಿ ಶೇಕಡ 50ಕ್ಕಿಂತ ಹೆಚ್ಚು ಮಹಿಳಾ ಸದಸ್ಯರು ಇರಬೇಕು. ಮೂರು ತಿಂಗಳಿಗೊಮ್ಮೆ ಸಭೆ ಆಯೋಜಿಸಬೇಕು. ಕಳ್ಳ ಸಾಗಣೆಗೆ ಒಳಗಾದ ಮಕ್ಕಳ ಹಾಗೂ ಮಹಿಳೆಯರನ್ನು ರಕ್ಷಿಸುವ ಜೊತೆಗೆ ಅವರ ಕುಟುಂಬಗಳಿಗೆ ಆರ್ಥಿಕ, ನೈತಿಕ, ಸಾಮಾಜಿಕ, ವೈದ್ಯಕೀಯ ಹಾಗೂ ಶೈಕ್ಷಣಿಕ ನೆರವು ಒದಗಿಸಬೇಕು. ಬಾಲ್ಯ ವಿವಾಹ, ಬಾಲ ಗರ್ಭಿಣಿ, ಬಾಲ ಭಿಕ್ಷಾಟನೆ, ಬಾಲಕಾರ್ಮಿಕ ಪದ್ಧತಿಯ ಕುರಿತು ಶಾಲಾ–ಕಾಲೇಜು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವುದು ಈ ಸಮಿತಿಯ ಜವಾಬ್ದಾರಿಯಾಗಿದೆ.

'ಕಾಣೆಯಾದ ಮಕ್ಕಳು ಹಾಗೂ ಮಹಿಳೆಯರ ದಾಖಲೆಗಳನ್ನು ಇಡಬೇಕು. ವಲಸೆ ಹೋದ ಕುಟುಂಬದ ಮಾಹಿತಿಯ ಜೊತೆಗೆ ಮೇಲ್ವಿಚಾರಣೆ ಮಾಡಬೇಕು. ಬಾಲ್ಯ ವಿವಾಹ ತಡೆಯಬೇಕು. ಬಾಲ್ಯ ವಿವಾಹ ನಡೆದರೆ ಎಫ್‌ಐಆರ್ ದಾಖಲಿಸಬೇಕು. ಬೇಸಿಗೆ ರಜೆ ಮುಗಿದ ನಂತರ ಶಾಲೆಗೆ ದಾಖಲಾಗುವ ಮಕ್ಕಳ ಸಮೀಕ್ಷೆ ನಡೆಸಬೇಕು. ಶಾಲೆಯಿಂದ ಹೊರಗುಳಿದ ಮಕ್ಕಳ ಪೋಷಕರ ಮನವೊಲಿಸಿ, ಮತ್ತೆ ಶಾಲೆಗೆ ದಾಖಲಿಸಿಕೊಳ್ಳಬೇಕು' ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ 'ಪ್ರಜಾವಾಣಿ'ಗೆ ತಿಳಿಸಿದರು.

ಸಮಿತಿಯ ಕಾರ್ಯ

- ಮೂಢನಂಬಿಕೆಗಳಿಗೆ ಬಲಿಯಾಗದಂತೆ ಮಕ್ಕಳ ರಕ್ಷಣೆ
- ಮಕ್ಕಳಿಗೆ ಸಂಬಂಧಿಸಿದ ಯೋಜನೆಗಳ ಕುರಿತು ಅರಿವು
- 18 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದು

'ಪ್ರಕ್ರಿಯೆಗೆ ಚಾಲನೆ ನೀಡಿ'

'ನಗರ ಪ್ರದೇಶಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗೆ ಕಾವಲು ಸಮಿತಿಗಳನ್ನು ರಚಿಸುವ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಈ ಪ್ರಕ್ರಿಯೆಗೆ ಕೂಡಲೇ ಚಾಲನೆ ನೀಡಬೇಕು. ಮಹಿಳೆಯರು ಹಾಗೂ ಮಕ್ಕಳಿಗೆ ಸಂಬಂಧಿಸಿದ ಕಾಯ್ದೆಗಳ ಕುರಿತು ಕೆಳ ಹಂತದ ಅಧಿಕಾರಿಗಳಿಗೆ ತರಬೇತಿ ನೀಡಬೇಕು' ಎಂದು ಶಶಿಧರ ಕೋಸಂಬೆ ಒತ್ತಾಯಿಸಿದರು.

ಶಶಿಧರ ಕೋಸಂಬೆ

ಎಲ್‌ಕೆಜಿ, ಪಿಯು ಮಕ್ಕಳಿಗೂ ಬಿಸಿಯೂಟ: ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಪೂರ್ವ ಪ್ರಾಥಮಿಕ ಹಾಗೂ ಪದವಿಪೂರ್ವ (ಪಿಯುಸಿ) ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗುವುದು' ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

'ಬಿಸಿಯೂಟ ಮಾತ್ರವಲ್ಲ ನೋಟ್‌ಬುಕ್, ಪಠ್ಯಪುಸ್ತಕ, ಶೂ, ಸಾಕ್ಸ್, ಹಾಲು, ಮೊಟ್ಟೆ ಸೇರಿದಂತೆ ಎಲ್ಲ ಸೌಲಭ್ಯಗಳನ್ನೂ ಅವರಿಗೆ ಕೊಡಲಾಗುವುದು' ಎಂದು ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಇದರಿಂದ ಸರ್ಕಾರಿ, ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಎಲ್‌ಕೆಜಿ, ಯುಕೆಜಿ ಹಾಗೂ ಪಿಯುಸಿ ಓದುವವರಿಗೆ ನೆರವಾಗಲಿದೆ. ಬಿಸಿಯೂಟ ಯೋಜನೆಗೆ ಹೆಚ್ಚುವರಿಯಾಗಿ ₹200 ಕೋಟಿ ವೆಚ್ಚವಾಗಲಿದೆ' ಎಂದು ತಿಳಿಸಿದರು.

ನೂತನ ಶಾಲೆಗಳು ಸೇರಿ ರಾಜ್ಯದ ಎಲ್ಲ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಸಂಗೀತ, ದೈಹಿಕ ಶಿಕ್ಷಣ ಶಿಕ್ಷಕರನ್ನು ನೇಮಿಸಲಾಗುವುದು. ಶಾಲೆಗಳಲ್ಲಿ ಇನ್ನು ಮುಂದೆ ಬ್ಯಾಂಡ್ ಕಡ್ಡಾಯ

ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ

'ಹಾಲಿ ಸೇವೆಯಲ್ಲಿರುವ ಶಿಕ್ಷಕರಿಗೆ ಟಿಇಟಿ ಕಡ್ಡಾಯಗೊಳಿಸಿರುವ ಸುಪ್ರೀಂ ಕೋರ್ಟ್ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ನಿರ್ಧರಿಸಲಾಗಿದೆ. ಶಾಲೆಗಳನ್ನು ಹೊಸದಾಗಿ ಅನುದಾನಕ್ಕೆ ಒಳಪಡಿಸಲು ಹಾಗೂ ಶಿಕ್ಷಕರ ನೇಮಕಾತಿಗೆ ಅನುದಾನದ ಸಮಸ್ಯೆ ಇಲ್ಲ' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬಾಗಲಕೊಟೆಯಲ್ಲಿ ಭಾನುವಾರ ಆರಂಭಗೊಂಡಿರುವ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿನ ತೋಟಗಾರಿಕೆ ಮೇಳದಲ್ಲಿ ಹೂವಿನಲ್ಲಿ ಅರಳಿರುವ ನಂದಿ ಗಮನ ಸೆಳೆಯಿತು

ಶನಿವಾರದೊಳಗೆ ಖಾತೆಗೆ 'ಗೃಹಲಕ್ಷ್ಮಿ' ಹಣ: ಸಚಿವೆ

ಬೆಳಗಾವಿ: 'ಗೃಹಲಕ್ಷ್ಮಿ ಯೋಜನೆಯ 24ನೇ ಕಂತಿನ ಹಣ ಬಿಡುಗಡೆಗೆ ಆರ್ಥಿಕ ಇಲಾಖೆ ಅನುಮೋದನೆ ನೀಡಿದೆ. ಶನಿವಾರದೊಳಗೆ ಫಲಾನುಭವಿಗಳ ಖಾತೆಗೆ ಹಣ ಜಮೆ ಮಾಡಲಾಗುವುದು' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಭಾನುವಾರ ಹೇಳಿದರು.

ಮೃತರ ಖಾತೆಗೂ ಗೃಹಲಕ್ಷ್ಮಿ ಯೋಜನೆಯ ಹಣ ಜಮೆ ಆಗುತ್ತಿರುವ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಮೃತರ ಖಾತೆಗೆ ಹಣ ಜಮೆ ಆಗುವುದು ತಿಳಿದಿಲ್ಲ. ಅಂಗನವಾಡಿ ಕಾರ್ಯಕರ್ತೆಯರು ಪರಿಶೀಲಿಸುವರು. ಮೃತರ ಖಾತೆಗೆ ಜಮೆ ಆಗಿದ್ದರೆ ರಿಕವರಿ ಮಾಡುವ ಕುರಿತು ಬ್ಯಾಂಕ್‌ಗಳಿಗೆ ಸೂಚನೆ ಕೊಟ್ಟಿದ್ದೇವೆ' ಎಂದರು.

ಲಕ್ಷ್ಮಿ ಹೆಬ್ಬಾಳಕರ

ಬೆಳಗಾವಿ ಜಿಲ್ಲೆ ವಿಭಜನೆ ವಿಚಾರ ಸಿಎಂ ಚರ್ಚೆ: 'ಆಡಳಿತ ಮತ್ತು ಅಭಿವೃದ್ಧಿ ದೃಷ್ಟಿಯಿಂದ ಬೆಳಗಾವಿ ಜಿಲ್ಲೆ ವಿಭಜನೆ ಆಗಬೇಕಿದೆ. ಮುಖ್ಯಮಂತ್ರಿ ಅವರು ಈ ಬಗ್ಗೆ ಚರ್ಚೆ ನಡೆಸಿದರು. ಎರಡು ಅಥವಾ ಮೂರು ಜಿಲ್ಲೆ ರಚನೆಗೆ ಯೋಜಿಸಿದ್ದರು. ಬೇರೆ ತಾಲ್ಲೂಕುಗಳನ್ನು ಜಿಲ್ಲೆಯಾಗಿ ಘೋಷಿಸಲು ಕೋರಿ ಹಲವರು ನಿಯೋಗ ತಂದರು. ಈ ಕುರಿತು ಚಿಂತಿಸಿ ತೀರ್ಮಾನ ಕೈಗೊಳ್ಳಬೇಕಾಗಿದೆ' ಎಂದರು.

'ಗೃಹಲಕ್ಷ್ಮಿ' ನೆರವು ಕುರಿತು ಅಧಿವೇಶನದಲ್ಲಿಯೇ ಕಾಂಗ್ರೆಸ್ ಸುಳ್ಳುಮಾಹಿತಿ ನೀಡಿತ್ತು. ಸುಳ್ಳು ಹೇಳಿದವರ ವಿರುದ್ಧ ಸಿ.ಎಂ ಏನು ಕ್ರಮ ಕೈಗೊಂಡಿದ್ದಾರೆ

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ತಪ್ಪು ಮಾಹಿತಿ ಕೊಟ್ಟ ಸಚಿವರ ರಾಜೀನಾಮೆ ತೆಗೆದುಕೊಂಡರೇ? ಯಾವ ಅಧಿಕಾರಿಯನ್ನಾದರೂ ಅಮಾನತು ಮಾಡಿದರೇ?

ಎಚ್‌.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

'ಕಡೆಯ ಬಾರಿ ಜನ ಅವಕಾಶ ನೀಡಲಿ'

ಪ್ರಜಾವಾಣಿ ವಾರ್ತೆ

ಹಾಸನ: 'ನನಗೆ ಮತ್ತೆ ಮುಖ್ಯಮಂತ್ರಿ ಆಗಬೇಕು, ಮತ್ತೊಂದು ಆಗಬೇಕೆಂಬ ಬಯಕೆ ಇಲ್ಲ. ಆದರೆ, ನನ್ನ ಮೇಲೆ ವಿಶ್ವಾಸವಿಟ್ಟು ಬರುವ ಬಡವರಿಗೆ ಶಕ್ತಿ ತುಂಬಲು ಸಾಧ್ಯವೇ ಎನ್ನುವುದು ನನ್ನ ಚಿಂತೆ. ಕಡೆಯ ಬಾರಿ ರಾಜ್ಯದ ಜನ ಒಂದು ಅವಕಾಶ ಕೊಡಲಿ' ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ಭಾನುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಭಗವಂತ ನನಗೆ 5ನೇ ಬಾರಿಗೆ ಜೀವನ ನೀಡಿದ್ದಾನೆ. ಕೇಂದ್ರದ ಆರ್ಥಿಕ ನೆರವು ಬೇಕಿಲ್ಲ. ಎರಡು ಬಾರಿ ಮುಖ್ಯಮಂತ್ರಿಯಾಗಿ ಅನುಭವವಿದೆ. ಖಜಾನೆ ಖಾಲಿ ಮಾಡುವುದು ಬೇಕಾಗಿಲ್ಲ. ಅಭಿವೃದ್ಧಿ ಮಾಡಬಹುದು' ಎಂದರು.

'ದೇವರು ನನಗೆ ಎಲ್ಲವನ್ನೂ ಕೊಟ್ಟಿದ್ದಾನೆ. ಆದರೆ, ನನ್ನ ಪರಿಸ್ಥಿತಿ ಹೇಗಿದೆ ಎಂದರೆ ಯಾರ ಕೈಗೂ ಸಿಗದೇ ಅರಣ್ಯಕ್ಕೆ ಹೋಗಿ ಗುಪ್ತವಾಗಿರಬೇಕು ಎನಿಸಿದೆ. ಸಂಪತ್ತಿದೆ, ಎಲ್ಲವೂ ಇದೆ. ಅದನ್ನು ತೆಗೆದುಕೊಂಡು ಏನು ಮಾಡೋಣ? ನಿದ್ರೆ ಮಾಡುವುದಕ್ಕೂ ಅಗುವುದಿಲ್ಲ' ಎಂದು ಹೇಳಿದರು.

'ಸಿ.ಎಂ ಆಗಬೇಕು ಅಂತಿದ್ದಾನಲ್ಲ ನಿಮ್ಮ ಲೀಡರ್, ಅವನು ನಿದ್ದೆ ಮಾಡ್ತಾನಾ' ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ವಿರುದ್ಧ ಅವರು ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

'ನರೇಗಾ ಯೋಜನೆ ಹೆಸರು ಬದಲಾವಣೆ ಬಗ್ಗೆ ಚರ್ಚೆ ಆಗುತ್ತಿದೆ. ಇದೇ ಮಹಾತ್ಮ ಗಾಂಧಿ ಹೆಸರಿನಲ್ಲಿ ಎಷ್ಟು ಕೋಟಿ ಮಾಡಿದ್ದೀರಿ' ಎಂದು ಕಾಂಗ್ರೆಸ್‌ನವರನ್ನು ಪ್ರಶ್ನಿಸಿದರು.

'ನನ್ನಲ್ಲಿ ಸಣ್ಣತನವಿಲ್ಲ. ಮುಕ್ತ ತೀರ್ಮಾನಕ್ಕಾಗಿ ಬಿಜೆಪಿ ಜೊತೆ ಸಂಬಂಧ ಬೆಳೆಸಿದ್ದೇವೆ. ಕಾಂಗ್ರೆಸ್ ನೋಡಿ ಆಗಿದೆ. ರಾಜಕೀಯವಾಗಿ ದೇವೇಗೌಡರ ಜೀವನ ಹಾಳಾಗಲು ಕಾರಣ ಇದೇ ಕಾಂಗ್ರೆಸ್' ಎಂದು ದೂರಿದರು.

ಎತ್ತಿನ ಹೊಳೆ ಯೋಜನೆ ಏನಾಗಿದೆ? ಈ ಬಗ್ಗೆ ಕೇಂದ್ರಕ್ಕೆ ಮನವರಿಕೆ ಮಾಡಬೇಕಾಗುತ್ತದೆ. ಪ್ರಧಾನಿಗೆ ಹೆದರಲ್ಲ, ಗೃಹಸಚಿವರಿಗೆ ಹೆದರಲ್ಲ ಎನ್ನುವ ಅವನೊಬ್ಬ ಉಪ ಮುಖ್ಯಮಂತ್ರಿನಾ?

ಎಚ್‌.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ವಾಕ್ ಸ್ವಾತಂತ್ರ್ಯದ ಹರಣ: ಜೋಶಿ

ಹುಬ್ಬಳ್ಳಿ: 'ಹಿಂದುತ್ವ ಪರ ಸಂಘಟನೆಗಳನ್ನು ಹತ್ತಿಕ್ಕಲೆಂದೇ ರಾಜ್ಯ ಸರ್ಕಾರ ದ್ವೇಷ ಭಾಷಣ ತಡೆ ಕಾಯ್ದೆ ತರುತ್ತಿದ್ದು, ಇದು ವಾಕ್ ಸ್ವಾತಂತ್ರ್ಯದ ಹರಣ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಟೀಕಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಾಕ್ ಸ್ವಾತಂತ್ರ್ಯ ವಿರುದ್ಧದ ನೀತಿಗಳಿಂದ ಪ್ರಜಾಪ್ರಭುತ್ವ ಉಳಿಯಲು ಸಾಧ್ಯವಿಲ್ಲ. ಜನರ ಮೇಲೆ ದಬ್ಬಾಳಿಕೆಗೆ ಕಾನೂನುಗಳನ್ನು ಬಳಸಿಕೊಳ್ಳುತ್ತಿದೆ. ಇದರ ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದು' ಎಂದರು.

ಭ್ರಷ್ಟಾಚಾರಕ್ಕೆ ಅವಕಾಶವಿಲ್ಲ: 'ಕಾಂಗ್ರೆಸ್ ನಾಯಕರು ಅರ್ಧಂಬರ್ಧ ಮಾಹಿತಿಯಿಂದ ವಿಬಿ–ಜಿ–ರಾಮ್ ಜಿ ಯೋಜನೆ ಬಗ್ಗೆ ಸುಳ್ಳು ಹೇಳಿಕೆ ನೀಡುತ್ತಿದ್ದಾರೆ. ಕಾಂಗ್ರೆಸ್ ಕಾಲದಲ್ಲಿ 'ನರೇಗಾ' ಕೆಲಸದ ಹೆಸರಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆದಿದೆ. ಜಿ ರಾಮ್ ಜಿ ಯೋಜನೆಯಲ್ಲಿ ಅದಕ್ಕೆ ಅವಕಾಶವಿಲ್ಲ' ಎಂದರು.

'ಯೋಜನೆಗೆ ಹೆಸರು ಬದಲಿಸಿರುವುದನ್ನೇ ಹೇಳುತ್ತಿರುವ ಕಾಂಗ್ರೆಸ್ ನಾಯಕರು, ಎಷ್ಟು ಯೋಜನೆಗಳಿಗೆ ಮಹಾತ್ಮ ಗಾಂಧಿ, ಇಂದಿರಾ ಗಾಂಧಿ ಹೆಸರಿಟ್ಟಿದ್ದಾರೆ ಎಂಬುದನ್ನು ತಿಳಿಸಲಿ' ಎಂದು ಸವಾಲು ಹಾಕಿದರು.

ಸಂಸ್ಕಾರ, ಸಂಸ್ಕೃತಿ ಇಲ್ಲದವರು ದ್ವೇಷ ಭಾಷಣ ತಡೆ ಮಸೂದೆ ಮಾಡಿದ್ದಾರೆ. ಇದು ಮೊಂಡುತನದ ಪರಮಾವಧಿ. ಮುಂದೆ ಇದು ಕಾಂಗ್ರೆಸ್‌ನವರಿಗೇ ಕಂಟಕವಾಗಲಿದೆ

ವಿ.ಸೋಮಣ್ಣ, ರೈಲ್ವೆ ಖಾತೆ ರಾಜ್ಯ ಸಚಿವ

ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ. ಅದರ ವಿರುದ್ಧ ಯಾರೂ ಮಾತನಾಡದಂತೆ, ವ್ಯಕ್ತಿಯ ಸ್ವಾತಂತ್ರ್ಯ ಹತ್ತಿಕ್ಕಲು ಈ ಕಾಯ್ದೆ ರೂಪಿಸಲಾಗಿದೆ

ಬಸವರಾಜ ಬೊಮ್ಮಾಯಿ, ಸಂಸದ

ಬಾಲಕಿ ಮೇಲೆ ಅತ್ಯಾಚಾರ: ಸೆರೆ

ಉಪ್ಪಿನಂಗಡಿ (ದಕ್ಷಿಣ ಕನ್ನಡ ಜಿಲ್ಲೆ): ಕೂಲಿ ಕಾರ್ಮಿಕ ಕುಟುಂಬದ 13 ವರ್ಷದ ಬಾಲಕಿಯನ್ನು ಜೇನು ಕೃಷಿ ಕಲಿಸುವ ನೆಪದಲ್ಲಿ ಮನೆಯಲ್ಲಿರಿಸಿಕೊಂಡು, ನಿರಂತರ ಅತ್ಯಾಚಾರ ಎಸಗಿದ ಆರೋಪದಡಿ ನೆಕ್ಕಿಲಾಡಿ ಬೇರಿಕೆ ನಿವಾಸಿ ಅಬ್ದುಲ್ ಗಫೂರ್ (50) ಎಂಬಾತನನ್ನು ಉಪ್ಪಿನಂಗಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಉತ್ತರ ಕರ್ನಾಟಕ ಭಾಗದಿಂದ ಬಂದಿದ್ದ ಕುಟುಂಬವೊಂದರ ಬಾಲಕಿಗೆ ಆರೋಪಿಯು ಮನೆಯಲ್ಲೇ ವಾಸ್ತವ್ಯ ಕಲ್ಪಿಸಿದ್ದ. ಪೋಷಕರು ಆರೋಪಿಯನ್ನು ನಂಬಿ ಬಾಲಕಿಯನ್ನು ಮನೆಯಲ್ಲಿ ಬಿಟ್ಟು ಊರಿಗೆ ಹೋಗಿದ್ದರು.

ಡಿ.19ರಂದು ಊರಿಂದ ವಾಪಸ್ ಬಂದಿದ್ದ ಬಾಲಕಿಯ ತಾಯಿ ಹಾಗೂ ಸೋದರತ್ತೆ ಬಾಲಕಿಯ ಯೋಗಕ್ಷೇಮ ವಿಚಾರಿಸಲು ಆರೋಪಿಯ ಮನೆಗೆ ಹೋಗಿದ್ದರು. ಆಗ ಬಾಲಕಿ ಆರೋಪಿಯ ಕೃತ್ಯವನ್ನು ತಿಳಿಸಿದ್ದಾಳೆ. ಆಕ್ರೋಶಗೊಂಡ ತಾಯಿ, ಆರೋಪಿ ಜೊತೆ ವಾಗ್ವಾದ ನಡೆಸಿದ್ದರು. ಆಗ 112 ಸಂಖ್ಯೆಗೆ ಕರೆ ಮಾಡಿದ್ದ ಆರೋಪಿ, ಪೊಲೀಸರನ್ನು ಕರೆಯಿಸಿ ಮಹಿಳೆ ವಿರುದ್ಧವೇ ಕ್ರಮಕ್ಕೆ ಒತ್ತಾಯಿಸಿದ್ದ. ಎರಡೂ ಕಡೆಯವರನ್ನು ಠಾಣೆಗೆ ಕರೆದೊಯ್ದು ಪೊಲೀಸರು ವಿಚಾರಣೆ ನಡೆಸಿದಾಗ ಅತ್ಯಾಚಾರ ಪ್ರಕರಣ ಬೆಳಕಿಗೆ ಬಂದಿದೆ.

ಅಬ್ದುಲ್

ಬಾಲಕಿಯನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿದ್ದು, ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಅಬ್ದುಲ್ ಗಫೂರ್ ಜೇನು ಕೃಷಿಕನಾಗಿದ್ದು, ಹಲವು ಕಡೆ ವೇದಿಕೆಗಳಲ್ಲಿ ಜೇನು ಕೃಷಿ ಬಗ್ಗೆ ಮಾಹಿತಿ ನೀಡುತ್ತಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ. ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಕುಣಿಗಲ್‌ನ ಅರವಿಂದ್ ಶಿಕ್ಷಣ ಸಂಸ್ಥೆಯಲ್ಲಿ ಶೈಕ್ಷಣಿಕ ಕ್ರಾಂತಿ!

ಬೆಂಗಳೂರು : ಲಕ್ಷಾಂತರ ರೂಪಾಯಿ ಖರ್ಚು ಮಾಡಿದರೂ ಗುಣಮಟ್ಟದ ಶಿಕ್ಷಣ ಸಿಗದ ಈ ಕಾಲದಲ್ಲಿ ಶಿಕ್ಷಣ ಸಂಸ್ಥೆಯೊಂದು ಮಾನವೀಯತೆಯೊಂದಿಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಹೊಸದೊಂದು ಇತಿಹಾಸ ರೂಪಿಸುತ್ತಿದೆ. ಕೇವಲ 1ರೂ.ನಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದೊಂದಿಗೆ ವಸತಿ ಸೌಕರ್ಯವನ್ನೂ ಸಹ ಕಲ್ಪಿಸಿ ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಲು ಅತ್ಯುತ್ತಮ ಅವಕಾಶ ಕಲ್ಪಿಸುತ್ತಿದೆ. ವಿದ್ಯಾರ್ಥಿಗಳಲ್ಲಿ ಪ್ರತಿಭೆಯೊಂದಿದ್ದರೆ ಪ್ರೌಢ ಶಾಲೆ, ಪಿಯು ಶಿಕ್ಷಣವನ್ನು ಉಚಿತವಾಗಿ ಪಡೆಯುವುದು ಮಾತ್ರವಲ್ಲದೇ, ಅತ್ಯುನ್ನತ ಭವಿಷ್ಯವನ್ನು ತಮ್ಮದಾಗಿಸಿಕೊಳ್ಳಬಹುದಾಗಿದೆ. ಅತ್ಯುತ್ತಮ ಪರಿಸರದ ನಡುವೆ 17ರಿಂದ 18 ಎಕರೆ ವಿಸ್ತಾರವಾದ ಜಾಗದಲ್ಲಿ ಶಿಕ್ಷಣ ಸಂಸ್ಥೆಯನ್ನು ನಿರ್ಮಿಸಲಾಗಿದ್ದು, ಮಾನವೀಯತೆ ಮತ್ತು ಪಾರದರ್ಶಕತೆಯನ್ನು ಮೊದಲ ಆದ್ಯತೆಯನ್ನಾಗಿ ಸ್ವೀಕರಿಸಲಾಗಿದೆ. ಹೀಗಾಗಿಯೇ, ದುಬಾರಿ ಶುಲ್ಕಗಳಿಂದಾಗಿ ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕೇವಲ 1ರೂ. ಶುಲ್ಕದಲ್ಲಿಯೇ ಅತ್ಯುನ್ನತ ಶಿಕ್ಷಣ ಒದಗಿಸುವ ಸೌಕರ್ಯವನ್ನಿಲ್ಲಿ ಕಲ್ಪಿಸಲಾಗಿದೆ

ಸುಸಜ್ಜಿತ ವ್ಯವಸ್ಥೆ !

ನರ್ಸರಿಯಿಂದ ದ್ವಿತೀಯ ಪಿಯುವರೆಗೆ ಶಿಕ್ಷಣ ಒದಗಿಸುತ್ತಿರುವ ಈ ಶಿಕ್ಷಣ ಸಂಸ್ಥೆಯು ಸುಸಜ್ಜಿತ ಕಟ್ಟಡಗಳನ್ನು ಹೊಂದಿದ್ದು, ಗ್ರಂಥಾಲಯ, ಕ್ಯಾಂಟೀನ್, ಪ್ರತ್ಯೇಕ ಪ್ರಯೋಗಾಲಯಗಳು, ವಿಶಾಲವಾದ ಮೈದಾನ ಸೇರಿದಂತೆ ಉನ್ನತ ಶಿಕ್ಷಣ ಪಡೆದುಕೊಳ್ಳಲು ಅಗತ್ಯವಿರುವ ಎಲ್ಲಾ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಪಿಯುನಲ್ಲಿ ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳನ್ನು ಹೊಂದಿರುವ ಶಿಕ್ಷಣ ಸಂಸ್ಥೆಯಾಗಿದ್ದು, ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಿಗೂ ಆದ್ಯತೆ ನೀಡುತ್ತಾ ಬಂದಿದೆ.

ಪ್ರವೇಶ ಪ್ರಕ್ರಿಯೆ !

ಅರವಿಂದ್ ರೆಸಿಡೆನ್ಶಿಯಲ್ ಶಾಲೆ ಮತ್ತು ಪಿಯು ಕಾಲೇಜಿನಲ್ಲಿ ಪ್ರತಿ ವರ್ಷ ನಡೆಯುವಂತೆ ಈ ಬಾರಿಯೂ ಪ್ರತಿಭಾನ್ವೇಷಣೆ ಪರೀಕ್ಷೆ (Talent search exam) ಯನ್ನು ಜ.18ರಂದು ನಡೆಸುತ್ತಿದ್ದಾರೆ. 8, 9, 10 ಮತ್ತು ಪ್ರಥಮ ಪಿಯು ತರಗತಿಗಳಿಗೆ ಪರೀಕ್ಷೆ ಏರ್ಪಡಿಸಲಾಗಿದೆ. ಪರೀಕ್ಷೆಯು (ICSE, CBSE & State) ಆಯಾ ಪಠ್ಯಕ್ರಮಕ್ಕೆ ಅನುಗುಣವಾಗಿ ನಡೆಯುತ್ತದೆ. ರಾಜ್ಯದ ಎಲ್ಲಾ ಭಾಗದ ವಿದ್ಯಾರ್ಥಿಗಳಿಗೂ ಮುಕ್ತ ಅವಕಾಶ ಕಲ್ಪಿಸಲಾಗಿದ್ದು, ಶಾಲೆ ಮತ್ತು ಕಾಲೇಜಿನಲ್ಲಿ ಗುಣಮಟ್ಟದ ಶಿಕ್ಷಣ ಪಡೆದು ಉನ್ನತ ವ್ಯಾಸಂಗದ ಕನಸನ್ನು ಹೊತ್ತ ವಿದ್ಯಾರ್ಥಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬಹುದು.

ಹೈಟೆಕ್ ಹಾಸ್ಟೆಲ್ ಸೌಲಭ್ಯ

ಈ ಸಂಸ್ಥೆಯ ಶಾಲೆ ಮತ್ತು ಕಾಲೇಜಿನಲ್ಲಿ ಹಾಸ್ಟೆಲ್ ವ್ಯವಸ್ಥೆಯು ಹೈಟೆಕ್ ಸೌಲಭ್ಯಗಳನ್ನು ಒಳಗೊಂಡಿದ್ದು, ಆಧುನಿಕವಾಗಿ ರೂಪುಗೊಳಿಸಲಾಗಿದೆ. ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಿದ್ದು, ಸುರಕ್ಷತೆಗೆ ಮೊದಲ ಆದ್ಯತೆ ನೀಡಿ 24x7 ಸಿಸಿಟಿವಿಯ ಕಣ್ಗಾವಲಿನಲ್ಲಿರುತ್ತದೆ. ವಿಶಾಲವಾದ ಹಾಸ್ಟೆಲ್ ಕೊಠಡಿಗಳೊಂದಿಗೆ ಅಧ್ಯಯನಕ್ಕೆ ಪೂರಕವಾದ ವಾತಾವರಣವಿದೆ. ಪ್ರತಿ ಮಗುವಿನ ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ಸ್ಟಾಫ್ ನರ್ಸ್‌ಗಳಿದ್ದು, ನಿತ್ಯ ವೈದ್ಯರ ತಪಾಸಣೆಗೆ ಅವಕಾಶ ಕಲ್ಪಿಸಲಾಗಿದೆ. ಜತೆಗೆ, ಹಾಸ್ಟೆಲ್‌ನ ವಿದ್ಯಾರ್ಥಿಗಳಿಗೆ ಪೌಷ್ಟಿಕ ಆಹಾರ ನೀಡುವ ಸುಸಜ್ಜಿತ ಕ್ಯಾಂಟೀನ್ ಸೌಲಭ್ಯವಿದೆ.

ಉನ್ನತ ಕನಸುಗಳಿದ್ದರೂ ಸಹ ಪೋಷಕರ ಆರ್ಥಿಕ ಸಮಸ್ಯೆಗಳಿಂದಾಗಿ ಯಾವ ಪ್ರತಿಭಾವಂತ ಮಗುವೂ ಶಿಕ್ಷಣದಿಂದ ವಂಚಿತವಾಗಬಾರದು. ಈ ಉದ್ದೇಶದಿಂದಲೇ ನಮ್ಮ ಶಾಲೆಯಲ್ಲಿ ಕೇವಲ 1ರೂ. ಶುಲ್ಕದಲ್ಲಿ ಉಚಿತ ವಸತಿ ಸಹಿತ ಶಿಕ್ಷಣಕ್ಕೆ ವ್ಯವಸ್ಥೆ ಕಲ್ಪಿಸಲಾಗಿದ್ದು, ಶೈಕ್ಷಣಿಕ ಕ್ಷೇತ್ರದಲ್ಲಿ ಅತ್ಯಂತ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ.

–ಎಂ.ಕೆ.ಅಶೋಕ್, ಸಂಸ್ಥಾಪಕ ಅಧ್ಯಕ್ಷರು, ಅರವಿಂದ್ ರೆಸಿಡೆನ್ಶಿಯಲ್ ಶಾಲೆ ಮತ್ತು ಪಿಯು ಕಾಲೇಜು, ಕುಣಿಗಲ್.

ಶಿಕ್ಷಣ ಸಂಸ್ಥೆ ಹಿನ್ನೆಲೆ !

ಕುಣಿಗಲ್ ತಾಲೂಕಿನ ಮಡಿಕೆಹಳ್ಳಿ ಎಂಬ ಪುಟ್ಟ ಗ್ರಾಮ ಮೂಲದ ಎಂ.ಕೆ. ಅಶೋಕ್‌ರವರು ಗ್ರಾಮೀಣ ಸಮಸ್ಯೆಗಳನ್ನು ಬಲ್ಲವರಾಗಿದ್ದಾರೆ. ಹೀಗಾಗಿಯೇ, ಗ್ರಾಮೀಣ ಪ್ರದೇಶಗಳಲ್ಲಿನ ಮಕ್ಕಳ ಬದುಕು ಬದಲಾಗಬೇಕೆಂದರೆ ಶಿಕ್ಷಣವೊಂದೇ ಮಾರ್ಗ ಎನ್ನುವ ಮಾತನ್ನು ಬಲವಾಗಿ ನಂಬಿ, ತಮ್ಮ ತಾಯಿ ಹೆಸರಲ್ಲಿ 'ಗಂಗಮ್ಮ ಎಜುಕೇಶನ್ ಮತ್ತು ಚಾರಿಟಬಲ್ ಟ್ರಸ್ಟ್' ಸ್ಥಾಪಿಸಿ ಶಿಕ್ಷಣ ಕ್ಷೇತ್ರದಲ್ಲಿ ಹೊಸದೊಂದು ಇತಿಹಾಸ ನಿರ್ಮಿಸಲು ಪಣ ತೊಟ್ಟಿದ್ದಾರೆ. ವರ್ಷಕ್ಕೆ ನೂರಾರು ಮಕ್ಕಳಿಗೆ ಕೇವಲ 1ರೂ. ಶುಲ್ಕದಲ್ಲಿ ಅತ್ಯುನ್ನತ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದ್ದು, ಸಮಾಜಕ್ಕೆ ಮಾದರಿಯಾಗಿದ್ದಾರೆ.

ವಿಜೇತರಿಗೆ ₹3ಲಕ್ಷ ಬಹುಮಾನ ಗೆಲ್ಲುವ ಸುವರ್ಣಾವಕಾಶ! (ರಸಪ್ರಶ್ನೆ, ನೃತ್ಯ, ಚರ್ಚಾ ಸ್ಪರ್ಧೆ)

ಮಕ್ಕಳಲ್ಲಿ ಪಠ್ಯೇತರ ಪ್ರತಿಭೆ ಪ್ರೋತ್ಸಾಹಿಸುವ ನಿಟ್ಟನಲ್ಲಿ ಅರವಿಂದ್ ಸಮೂಹ ಶಿಕ್ಷಣ ಸಂಸ್ಥೆ ಸದಾ ಮುಂದಿದ್ದು, ಜ.18ರಂದು ಅಂತರ್‌ಶಾಲಾ ಸ್ಪರ್ಧೆಗಳನ್ನು ಆಯೋಜಿಸಿದೆ. ರಸಪ್ರಶ್ನೆ, ನೃತ್ಯ, ಚರ್ಚಾ ಸ್ಪರ್ಧೆಗಳನ್ನು ಆಯೋಜಿಸಿ, ಆಕರ್ಷಕ ನಗದು ಬಹುಮಾನಗಳನ್ನು ಘೋಷಿಸಿದೆ. ರಸಪ್ರಶ್ನೆ, ನೃತ್ಯ ಸ್ಪರ್ಧೆಗಳಿಗೆ ಪ್ರಥಮ ಬಹುಮಾನ ₹50,000, ದ್ವಿತೀಯ ₹30,000, ತೃತೀಯ ₹20,000 ಮೊತ್ತವನ್ನು ಬಹುಮಾನವಾಗಿ ನೀಡುತ್ತಿದೆ. ಜತೆಗೆ, ಚರ್ಚಾಸ್ಪರ್ಧೆಯಲ್ಲಿ ಪರ ಮತ್ತು ವಿರೋಧವಾಗಿ ವಿಷಯ ಮಂಡಿಸಿದ ವಿಜೇತ ತಂಡಗಳಿಗೆ ಪ್ರಥಮ ₹50,000, ದ್ವಿತೀಯ ₹30,000, ತೃತೀಯ ₹20,000 ಮೊತ್ತವನ್ನು ನೀಡುವ ಮೂಲಕ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಕೆಲಸವನ್ನು ಶಿಕ್ಷಣ ಸಂಸ್ಥೆ ಮಾಡುತ್ತಿದೆ. ಈ ಸ್ಪರ್ಧೆಗಳಿಗೆ 8ರಿಂದ 10ನೇ ತರಗತಿ ವಿದ್ಯಾರ್ಥಿಗಳು ಡಿ.30ರೊಳಗೆ ನೊಂದಾಯಿಸಿಕೊಳ್ಳತಕ್ಕದು.

ಸ್ಪರ್ಧೆ ನೊಂದಣಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಪೋಷಕರಿಲ್ಲದ ಮಕ್ಕಳಿಗೆ ಉಚಿತ ಶಿಕ್ಷಣ!

ಪ್ರತಿಭಾವಂತ ಮಕ್ಕಳಿಗೆ ಪ್ರವೇಶ ಪರೀಕ್ಷೆ ಮೂಲಕ ಉಚಿತ ಶಿಕ್ಷಣ ಒದಗಿಸುವ ಅರವಿಂದ್ ರೆಸಿಡೆನ್ಶಿಯಲ್ ಶಿಕ್ಷಣ ಸಂಸ್ಥೆ, ಪೋಷಕರಿಲ್ಲದ ಅನಾಥರ ಪಾಲಿನ ಅಕ್ಷರಧಾಮವಾಗಿದೆ. ಹೌದು. ಪೋಷಕರಿಲ್ಲದ ಮಕ್ಕಳು ಭವಿಷ್ಯದ ಹಾದಿಯಲ್ಲಿ ಹಿಂದುಳಿಯುವುದೇ ಹೆಚ್ಚು. ಇಂಥಹ ಮಕ್ಕಳಿಗೆ ಶಾಲೆಯಲ್ಲಿ ಉಚಿತ ಶಿಕ್ಷಣವನ್ನು ಒದಗಿಸುತ್ತಿದ್ದು, ಉನ್ನತ ಭವಿಷ್ಯ ಸೃಷ್ಟಿಗೆ ಅವಕಾಶ ಕಲ್ಪಿಸಲಾಗಿದೆ. ಈ ಮೂಲಕ ಶಿಕ್ಷಣ ಸಂಸ್ಥೆ ಮಾನವೀಯತೆ ಮೆರೆದಿದೆ.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಮರ್ಥ ತರಬೇತಿ!

ಪ್ರಸ್ತುತ ಸ್ಪರ್ಧಾತ್ಮಕ ಜಗತ್ತಿನಲ್ಲಿ ಪ್ರೌಢ ಶಾಲೆಯಿಂದಲೇ ವೃತ್ತಿಪರ ಕೋರ್ಸ್‌ಗಳಿಗೆ ಸಜ್ಜುಗೊಳಿಸುವ ವ್ಯವಸ್ಥೆಯನ್ನು ಅರವಿಂದ್ ರೆಸಿಡೆನ್ಶಿಯಲ್ ಶಾಲೆ ಒಳಗೊಂಡಿದೆ. ಪಿಯುಸಿಯಲ್ಲಿ NEET, JEE, KCET, COMED-K, CA/CLAT ಸೇರಿದಂತೆ ವಿವಿಧ ಸ್ಪರ್ಧಾತ್ಮಕ ವೃತ್ತಿಪರ ಪರೀಕ್ಷೆಗಳಿಗೆ ಸಂಸ್ಥೆಯಲ್ಲಿ ವಿಶೇಷ ತರಬೇತಿ ಒದಗಿಸಲಾಗುತ್ತದೆ. ಜತೆಗೆ, ಪಿಯುನಲ್ಲಿ ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಅವರವರ ಕನಸುಗಳನ್ನಾಧರಿಸಿ ಮೆಡಿಕಲ್, ಇಂಜಿನಿಯರಿಂಗ್, ವೆಟರ್ನರಿ, ಕೃಷಿ, ಫಾರ್ಮಸಿ ಸೇರಿದಂತೆ ವಿವಿಧ ಪರೀಕ್ಷೆಗಳಿಗೆ ಸಜ್ಜುಗೊಳಿಸಲು ನುರಿತ ಸಂಪನ್ಮೂಲ ಬೋಧಕರಿದ್ದಾರೆ.

ಭವಿಷ್ಯ ಸೃಷ್ಟಿಗೆ ಭರಪೂರ ವ್ಯವಸ್ಥೆ!

ಕಲ್ಪತರು ನಾಡು ತುಮಕೂರು ಜಿಲ್ಲೆಯ ಕುಣಿಗಲ್ ನಗರದಲ್ಲಿರುವ ಅರವಿಂದ್ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ಪ್ರೌಢಶಾಲೆ, ಪಿಯು ಕಾಲೇಜು ಸುಸಜ್ಜಿತ ವ್ಯವಸ್ಥೆಗಳಿಂದ ಕಾರ್ಯನಿರ್ವಹಿಸುತ್ತಿದೆ. 2011ರಲ್ಲಿ 230 ವಿದ್ಯಾರ್ಥಿಗಳೊಂದಿಗೆ ಆರಂಭವಾದ ಶಾಲೆಯಿಂದು 4ಸಾವಿರ ದಾಖಲಾತಿಯೊಂದಿಗೆ ಮಕ್ಕಳ ಭವಿಷ್ಯ ಸೃಷ್ಟಿಸುವ ನೆಲೆಯಾಗಿ ಪರಿವರ್ತನೆಗೊಂಡಿದೆ. 17ಎಕರೆಯ ವಿಶಾಲ ವಿಸ್ತೀರ್ಣದಲ್ಲಿರುವ ಶಿಕ್ಷಣ ಸಂಸ್ಥೆ ಹಚ್ಚಹಸಿನ ಪರಿಸರದ ನಡುವೆ ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕ ವಾತಾವರಣ ಹೊಂದಿದೆ. ಮೌಲ್ಯಾಧಾರಿತ ಶಿಕ್ಷಣಕ್ಕೆ ಆದ್ಯತೆ ನೀಡಿರುವ ಶಿಕ್ಷಣ ಸಂಸ್ಥೆ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಅಗತ್ಯ ಎಲ್ಲಾ ವ್ಯವಸ್ಥೆಗಳನ್ನು ಕಲ್ಪಿಸಿದೆ. ಸುಸಜ್ಜಿತ ಕ್ರೀಡಾಂಗಣ, ಪ್ರಯೋಗಾಲಯ ವ್ಯವಸ್ಥೆ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ಸೇರಿದಂತೆ ಆಧುನಿಕ ಜಗತ್ತಿನಲ್ಲಿ ಇಲ್ಲಿನ ವಿದ್ಯಾರ್ಥಿಗಳು ಸದಾ ಮುಂದಿರುವಂತೆ ಸಜ್ಜುಗೊಳಿಸುತ್ತಿದೆ.

ಎಲ್ಲಿದೆ ಶಿಕ್ಷಣ ಸಂಸ್ಥೆ?

ತುಮಕೂರು ಜಿಲ್ಲೆಯ ಕುಣಿಗಲ್ ಪಟ್ಟಣದಿಂದ ಮದ್ದೂರು ರಸ್ತೆಯಲ್ಲಿ 6ಕಿಮೀ ಸಾಗಿದರೆ ಅರವಿಂದ್ ರೆಸಿಡೆನ್ಶಿಯಲ್ ಶಾಲೆ ಮತ್ತು ಪಿಯು ಕಾಲೇಜು ಸಿಗುತ್ತದೆ.

ಸಂಪರ್ಕ: 08132–210000, 9483683004, 9008253744, 9945210041

www.arvindinternationalschool.com

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

‘ಸತ್ಯ’ ಒಂದೇ ಪರಮಾತ್ಮನ ಪರಿಪೂರ್ಣ ವಿವರಣೆ. ಉಳಿದೆಲ್ಲ ವಿವರಣೆ ಅಪರಿಪೂರ್ಣ.

–ಮಹಾತ್ಮ ಗಾಂಧೀಜಿ

ಸಂಪಾದಕೀಯ

ಬಿಹಾರ: ನಖಾಬ್ ಎಳೆದ ವಿವಾದ ಅಸೂಕ್ಷ್ಮ ನಡವಳಿಕೆ ಖಂಡನೀಯ

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಸಾರ್ವಜನಿಕ ಸಭೆಯೊಂದರಲ್ಲಿ ಮುಸ್ಲಿಂ ಮಹಿಳೆಯೊಬ್ಬರು ಮುಖಕ್ಕೆ ಧರಿಸಿದ್ದ ನಖಾಬ್ (ಮುಸುಕು) ಅನ್ನು ಎಳೆದಿರುವುದು ಅಸೂಕ್ಷ್ಮ ಹಾಗೂ ಅವರ ಹುದ್ದೆ, ವಯಸ್ಸಿಗೆ ತಕ್ಕುದಲ್ಲದ ನಡವಳಿಕೆಯಾಗಿದೆ. ಆಯುಷ್ ವೈದ್ಯರಿಗೆ ನೇಮಕಾತಿ ಪತ್ರಗಳನ್ನು ವಿತರಿಸುವಾಗ ಈ ಘಟನೆ ನಡೆದಿದೆ. ನಖಾಬ್ ಧರಿಸಿದ್ದ ವೈದ್ಯೆಗೆ ನೇಮಕಾತಿ ಪತ್ರ ವಿತರಿಸುವ ಸಂದರ್ಭದಲ್ಲಿ, ‘ಇದು ಏನು?’ ಎಂದು ಪ್ರಶ್ನಿಸಿರುವ ನಿತೀಶ್, ಆಕೆ ಉತ್ತರಿಸುವ ಮೊದಲೇ ನಖಾಬ್ ಎಳೆದಿದ್ದಾರೆ. ಈ ಘಟನೆಯ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಿದಾಡಿದೆ. ಬಿಹಾರದ ಮುಖ್ಯಮಂತ್ರಿ ಮಹಿಳೆಯ ವೈಯಕ್ತಿಕ ಘನತೆಗೆ ಧಕ್ಕೆ ತಂದಿದ್ದಾರೆ ಹಾಗೂ ನೈತಿಕ ಚೌಕಟ್ಟನ್ನು ಮೀರಿದ್ದಾರೆ ಎನ್ನುವ ಟೀಕೆಗಳ ಜೊತೆಗೆ, ಮುಖ್ಯಮಂತ್ರಿ ಕ್ಷಮೆ ಯಾಚಿಸಬೇಕೆಂದು ವಿರೋಧ ಪಕ್ಷಗಳು ಒತ್ತಾಯಿಸಿವೆ. ನಖಾಬ್ ಧರಿಸುವುದು ಮುಸ್ಲಿಂ ಮಹಿಳೆಯರ ವೈಯಕ್ತಿಕ ಆಯ್ಕೆ, ನಂಬಿಕೆ ಹಾಗೂ ಗೌರವದ ಸಂಕೇತವಾಗಿದೆ. ಧಾರ್ಮಿಕ ನಂಬಿಕೆಯ ಹೊರತಾಗಿಯೂ, ಮಹಿಳೆಯರ ಮುಖವಸ್ತ್ರಕ್ಕೆ ಕೈಹಾಕುವುದು ಸಭ್ಯತೆಯ ನಡವಳಿಕೆಯಲ್ಲ ಎನ್ನುವ ಎಚ್ಚರವಾದರೂ ನಿತೀಶ್ ಅವರಿಗೆ ಇರಬೇಕಾಗಿತ್ತು. ಯಾವುದೇ ಧರ್ಮದ ಮಹಿಳೆಯರಾದರೂ, ಅವರ ವೈಯಕ್ತಿಕ ನಂಬಿಕೆಗಳನ್ನು ಗಾಸಿಗೊಳಿಸುವ ಅಧಿಕಾರ ಯಾರಿಗೂ ಇರುವುದಿಲ್ಲ. ಮುಸ್ಲಿಂ ಸಮುದಾಯದ ನಂಬಿಕೆ, ಆಚಾರಗಳನ್ನು ಅನುಮಾನದಿಂದ ನೋಡುವ ಪ್ರವೃತ್ತಿ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಸಾಂವಿಧಾನಿಕ ಹುದ್ದೆಯಲ್ಲಿ ಇರುವವರು ವರ್ತಿಸುವ ವಿಧಾನವೂ ಇದಲ್ಲ. ಗುರುತರ ಅಧಿಕಾರ ಸ್ಥಾನದಲ್ಲಿ ಇರುವವರು ಮತ್ತೊಬ್ಬರ ನಂಬಿಕೆ ಹಾಗೂ ಆತ್ಮಘನತೆಯನ್ನು ಗೌರವಿಸಬೇಕೇ ಹೊರತು, ಅದನ್ನು ಉಲ್ಲಂಘಿಸುವ ಕೆಲಸ ಮಾಡಬಾರದು.

ಬಿಹಾರದ ಮುಖ್ಯಮಂತ್ರಿ ವೈದ್ಯೆಯೊಬ್ಬರ ನಖಾಬ್ ಎಳೆದಿರುವುದು ಮಹಿಳೆಯರ ಆತ್ಮಗೌರವಕ್ಕೆ ಧಕ್ಕೆ ತರುವ ನಡವಳಿಕೆ; ಸಂವಿಧಾನಬಾಹಿರ ಹಾಗೂ ಲಿಂಗಸೂಕ್ಷ್ಮ ಕೊರತೆಯ ಅಭಿವ್ಯಕ್ತಿಯೂ ಹೌದು.

ನಿತೀಶ್ ಅವರು ವೈದ್ಯೆಯ ನಖಾಬ್ ತೆಗೆದದ್ದನ್ನು ಸಹಾನುಭೂತಿಯಿಂದ ಹಾಗೂ ಕಿಡಿಗೇಡಿತನದಿಂದ ನೋಡುವ ಪ್ರತಿಕ್ರಿಯೆಗಳು, ರಾಜಕೀಯಪ್ರೇರಿತ ವಿಶ್ಲೇಷಣೆಗಳು ವ್ಯಕ್ತವಾಗಿವೆ. ತಂದೆ ಮತ್ತು ಮಗಳ ಮಧ್ಯೆ ವಿವಾದ ಇರಲು ಸಾಧ್ಯವೇ? ಮುಖ್ಯಮಂತ್ರಿಯವರು ಮಹಿಳೆಯರನ್ನು ತಮ್ಮ ಹೆಣ್ಣುಮಕ್ಕಳಂತೆ ಕಾಣುತ್ತಾರೆ ಎಂದು ಬಿಹಾರದ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಹೇಳಿದ್ದಾರೆ. ಘಟನೆಯನ್ನು ವಿವಾದದ ರೀತಿ ನೋಡುತ್ತಿರುವುದಕ್ಕೆ ಅವರು ಬೇಸರ ವ್ಯಕ್ತಪಡಿಸಿದ್ದಾರೆ. ಉತ್ತರ ಪ್ರದೇಶದ ಸಚಿವ ಸಂಜಯ್ ನಿಷಾದ್ ಅವರ ಪ್ರತಿಕ್ರಿಯೆ ಪ್ರಚೋದನಕಾರಿಯಾಗಿದೆ. ಮುಸುಕು ಎಳೆದದ್ದರಿಂದ ಏನಾಯಿತು? ಅವರು ಬೇರೆಡೆ ಮುಟ್ಟಿದ್ದರೆ ಏನಾಗುತ್ತಿತ್ತು? ಎನ್ನುವ ಅರ್ಥದ ಅವರ ಮಾತುಗಳಲ್ಲಿ ಪುರುಷಾಹಂಕಾರದ ಜೊತೆಗೆ ಅಧಿಕಾರದ ದರ್ಪವೂ ಇದೆ. ಧಾರ್ಮಿಕ ಅಸಹನೆಯ ಅವರ ಮಾತಿನಲ್ಲಿ, ಲಿಂಗಸೂಕ್ಷ್ಮ ಸಂವೇದನೆಯ ಕೊರತೆಯೂ ಇದೆ. ತೀವ್ರ ಪ್ರತಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ, ತಮ್ಮ ಮಾತುಗಳಿಗೆ ಅಪಾರ್ಥ ಕಲ್ಪಿಸಲಾಗಿದೆ ಎಂದವರು ಹೇಳಿದ್ದಾರೆ. ಬಿಹಾರದ ರಾಜ್ಯಪಾಲರ ಮಾತನ್ನೂ ಒಪ್ಪುವುದು ಸಾಧ್ಯವಿಲ್ಲ. ನಿತೀಶ್ ಅವರು ಎಲ್ಲ ಹೆಣ್ಣುಮಕ್ಕಳಿಗೂ ತಂದೆಯ ರೂಪದಲ್ಲಿ ಯಾರಿಗಾದರೂ ಕಾಣಿಸಿದರೆ ಅದರಲ್ಲಿ ತಪ್ಪೇನೂ ಇಲ್ಲ. ಆದರೆ, ಮಗಳ ಮುಖವಸ್ತ್ರವನ್ನು ತಂದೆಯೊಬ್ಬ ಸಾರ್ವಜನಿಕವಾಗಿ ಎಳೆದರೆ, ಆ ತಪ್ಪನ್ನು ಸರಿಯೆಂದು ಹೇಳಲಾಗುವುದಿಲ್ಲ. ತಂದೆಯ ವರ್ತನೆ ಹೆಣ್ಣುಮಕ್ಕಳ ಆತ್ಮಗೌರವ ಹೆಚ್ಚಿಸುವಂತೆ ಇರಬೇಕೇ ಹೊರತು, ಮುಜುಗರಕ್ಕೆ ಸಿಲುಕಿಸುವಂತೆ ಇರಬಾರದು.

ಬಿಹಾರದ ಮಹಿಳೆಯರ ಸಬಲೀಕರಣಕ್ಕೆ ನಿತೀಶ್ ಕುಮಾರ್ ಮಹತ್ವದ ಕೊಡುಗೆ ನೀಡಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ, ಪ್ರಸಕ್ತ ಘಟನೆ ಮಹಿಳೆಯರನ್ನು ಕುಗ್ಗಿಸುವಂತಹದ್ದು. ಧಾರ್ಮಿಕ ಸ್ವಾತಂತ್ರ್ಯವನ್ನು ಅಗೌರವದಿಂದ ಕಾಣುವ ಯಾವುದೇ ಹಕ್ಕು ನಿತೀಶ್ ಅವರಿಗಿಲ್ಲ. ಅವರ ನಡವಳಿಕೆ, ಸಂವಿಧಾನದ 25ನೇ ವಿಧಿಯು ನೀಡಿರುವ ಧಾರ್ಮಿಕ ಸ್ವಾತಂತ್ರ್ಯದ ಉಲ್ಲಂಘನೆಯಾಗಿದೆ. ನಖಾಬ್ ಸೆಳೆತಕ್ಕೆ ಒಳಗಾದ ವೈದ್ಯೆ, ನೇಮಕಾತಿ ಪತ್ರ ಪಡೆದ ನಂತರ, ಕೊನೆಯ ದಿನ ಮುಗಿದರೂ ಕರ್ತವ್ಯಕ್ಕೆ ವರದಿ ಮಾಡಿಕೊಂಡಿಲ್ಲ ಎನ್ನುವುದು ಆತಂಕ ಮೂಡಿಸುವ ಸಂಗತಿ. ಕ್ಷಮೆ ಯಾಚಿಸುವ ಮೂಲಕ ಪರಿಸ್ಥಿತಿಯನ್ನು ತಿಳಿಗೊಳಿಸುವ ಕೆಲಸಕ್ಕೆ ನಿತೀಶ್ ಮುಂದಾಗಬೇಕು. ಇಲ್ಲದೆಹೋದರೆ, ಮಹಿಳಾ ಸಬಲೀಕರಣದ ಅವರ ವರ್ಚಸ್ಸಿಗೆ ಕಳಂಕದ ಕಪ್ಪುಚುಕ್ಕೆಯೊಂದು ಸೇರ್ಪಡೆಯಾದಂತಾಗುತ್ತದೆ. ಸಮತೋಲ ತಪ್ಪದ ವ್ಯಕ್ತಿತ್ವ ಎಂದು ರಾಜಕಾರಣದಲ್ಲಿ ಗುರ್ತಿಸಿಕೊಂಡಿರುವ ಅವರು, ಸಮತೋಲ ಕಳೆದುಕೊಂಡಿರುವುದಕ್ಕೆ ಸಾಕ್ಷ್ಯ ಒದಗಿಸುವಂತೆ ನಡೆದುಕೊಳ್ಳಬಾರದು. ಮುಖ್ಯಮಂತ್ರಿ ನಖಾಬ್ ಎಳೆಯುವುದು ಸಹನೀಯ ಎನ್ನುವುದಾದರೆ, ಅದು ಕಿಡಿಗೇಡಿಗಳ ಕೃತ್ಯಗಳಿಗೆ ಮಾದರಿಯಾಗಿ ಒದಗಿಬರಬಹುದು.

ಭಿನ್ನ ತಂತ್ರ ಅಗತ್ಯ

ಇಂಗ್ಲಿಷ್ ಅನ್ನು ನಾವು ‘ಮುಕ್ತಿ’ಯ ಭಾಷೆಯೆಂದು ಭಾವಿಸದೆ, ಅದರ ಅಧಿಕಾರವನ್ನು ಕುಗ್ಗಿಸಲು ತಂತ್ರಾತ್ಮಕವಾಗಿ (ಸ್ಟ್ರಾಟೆಜಿಕ್) ಕಲಿಯಬೇಕು.

ಚೇತನ್ ‘ಅಹಿಂಸಾ’, ನಟ, ‘ಎಕ್ಸ್’ನಿಂದ

ಕಿಡಿನುಡಿ

ಪರಿಶಿಷ್ಟ ಜಾತಿಯ ಒಳಮೀಸಲಾತಿ ಅನುಷ್ಠಾನದ ವಿಚಾರದಲ್ಲಿ ಸರ್ಕಾರಕ್ಕೆ ಇಚ್ಛಾಶಕ್ತಿ, ಬದ್ಧತೆ ಇಲ್ಲ. ಬೆಳಗಾವಿ ಅಧಿವೇಶನದ ಕೊನೆಯ ದಿನದಂದು ಹೊಸ ಮಸೂದೆ ಮಂಡಿಸಿ ಚರ್ಚೆಯಿಲ್ಲದೆ ಪಾಸ್ ಮಾಡಿದೆ. ಇದು ಕಣ್ಣೊರೆಸುವ ತಂತ್ರ.

ಗೋವಿಂದ ಕಾರಜೋಳ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಶುಕ್ರವಾರ, 22-12-2000

● ಮಹಿಳಾ ಮೀಸಲಾತಿಗೆ ಸಂಸತ್ತಿನಲ್ಲಿ ಮತ್ತೆ ಗದ್ದಲ

ನವದೆಹಲಿ, ಡಿ. 21 (ಪಿಟಿಐ, ಯುಎನ್ಐ)– ಮಹಿಳಾ ಮೀಸಲಾತಿ ಮಸೂದೆ ಇಂದು ಸಂಸತ್ತಿನ ಉಭಯ ಸದನದಲ್ಲಿ ಭಾರೀ ಕೋಲಾಹಲಕ್ಕೆ ಕಾರಣವಾಗಿ ಲೋಕಸಭೆಯ ಕಲಾಪ ವನ್ನು ನಾಳೆಗೆ ಮುಂದೂಡಲಾಯಿತು.

ಸಂಸತ್ತಿನ ಚಳಿಗಾಲದ ಅಧಿವೇಶನ ಮುಕ್ತಾಯವಾಗುವ ಮುನ್ನಾದಿನವಾದ ಇಂದು ಎರಡೂ ಸದನಗಳಲ್ಲಿಯೂ ಮಹಿಳಾ ಮೀಸಲಾತಿ ಮಸೂದೆಯನ್ನು ಪರಿಗಣನೆಗೆ ತೆಗೆದುಕೊಳ್ಳಲು ವಿರೋಧ ಪಕ್ಷದ ಸದಸ್ಯರು ಬಿಡಲಿಲ್ಲ. ಲೋಕಸಭೆಯ ಕಲಾಪ ಆರಂಭವಾಗುತ್ತಿದ್ದಂತೆ ವಿರೋಧ ಪಕ್ಷಗಳ ಸದಸ್ಯರು, ಮೀಸಲಾತಿ ಮಸೂದೆ ವಿರುದ್ಧ ಘೋಷಣೆಗಳನ್ನು ಕೂಗಿದರು.

● ಧಾರವಾಡ: ಲೈಂಗಿಕ ಕಿರುಕುಳ ತನಿಖೆಗೆ ಆದೇಶ

ಧಾರವಾಡ, ಡಿ. 21– ಇಡೀ ಶೈಕ್ಷಣಿಕ ವಲಯವನ್ನೇ ತಲ್ಲಣಗೊಳಿಸಿರುವ ಧಾರವಾಡದ ಮಹಾಗಣಪತಿ ಆಯುರ್ವೇದ ಕಾಲೇಜಿನ ವಿದ್ಯಾರ್ಥಿನಿಯರ ಮೇಲಿನ ‘ಲೈಂಗಿಕ ಕಿರುಕುಳ ಹಗರಣ’ ಕುರಿತು ವಿಚಾರಣೆ ನಡೆಸುವಂತೆ ಮುಖ್ಯಮಂತ್ರಿಗಳ ಸಚಿವಾಲಯ ಹುಬ್ಬಳ್ಳಿ– ಧಾರವಾಡ ಮಹಾನಗರ ಪೊಲೀಸರಿಗೆ ಸೂಚಿಸಿದೆ. ಸಂತ್ರಸ್ತೆ ಪತ್ರದ ಮೂಲಕ ನೀಡಿದ್ದ ದೂರಿನ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳ ಸಚಿವಾಲಯ ಈ ಆದೇಶ ನೀಡಿದೆ.

75 ವರ್ಷಗಳ ಹಿಂದೆ

ಶುಕ್ರವಾರ, 22-12-1950

● ಅನಕ್ಷರಸ್ಥರು ಮಾತ್ರ ಬೆರಳೊತ್ತಬೇಕು

ಬೆಂಗಳೂರು, ಡಿ. 21– ತಾರೀಕು 21ರಲ್ಲಿ ಪ್ರಕಟಿಸಿದ ಮತದಾರರು ಓಟು ಮಾಡುವ ವಿಧಾನದ ಕರೆಯ ಹಿಂದಿನ ಪ್ಯಾರಾದಲ್ಲಿ ಹೇಳಿರುವಂತೆ ಅನಕ್ಷರಸ್ಥರು ಮಾತ್ರ ಬೆರಳಿನ ಗುರ್ತನ್ನು ಪೋಲಿಂಗ್ ಆಫೀಸರರ ಮುಂದೆ ಹಾಕಿ ಬ್ಯಾಲೆಟ್ ಪೇಪರನ್ನು ಪಡೆದು ಓಟು ಮಾಡಬೇಕಾಗಿ ವಿನಂತಿ ಎಂದು ಕಾರ್ಪೋರೇಷನ್ ಕಮಿಷನರ್ ತಿಳಿಸಿರುತ್ತಾರೆ.

● ಗುಂಡಿಟ್ಟು ಕೊಲ್ಲುವುದನ್ನು ನಿಲ್ಲಿಸಲಾಗಿದೆ

ಸಿಯೋಲ್, ಡಿ. 21– ದಕ್ಷಿಣ ಕೊರಿಯ ಸರ್ಕಾರವು ರಾಜಕೀಯ ಕೈದಿಗಳನ್ನೂ, ತಪ್ಪಿತಸ್ಥರನ್ನು ಗುಂಡಿಟ್ಟು ಕೊಲ್ಲುವುದನ್ನು ನಿಲ್ಲಿಸಿರುವುದಾಗಿ ಇಂದು ಪ್ರಕಟಣೆ ಹೊರಡಿಸಿದೆ.

ಮರಣ ದಂಡನೆ ಜಾರಿಗೊಳಿಸು ತ್ತಿರುವ ರೀತಿಯು ಕ್ರೂರ ಮತ್ತು ಅಮಾನುಷವೇ ಎಂಬ ವಿಚಾರದಲ್ಲಿ ತನಿಖೆ ಆಗುತ್ತಿದೆ ಎಂದು ಕೊರಿಯಾ ಸರ್ಕಾರ ತಿಳಿಸಿದೆ.

ಎಸ್ಐಆರ್: ದತ್ತಾಂಶಕ್ಕೆ ಮುಸುಕು

ವಿಶ್ಲೇಷಣೆ

ಯೋಗೇಂದ್ರ ಯಾದವ್
ರಾಹುಲ್ ಶಾಸ್ತ್ರಿ

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್ಐಆರ್) ಎರಡನೇ ಹಂತದ ಭಾಗವಾಗಿ ಮತದಾರರ ಕರಡು ಪಟ್ಟಿಯನ್ನು ಬಿಡುಗಡೆ ಮಾಡಲು ಚುನಾವಣಾ ಆಯೋಗ ಆರಂಭಿಸಿದೆ. ಈ ಬಾರಿ ಈ ಪ್ರಕ್ರಿಯೆ ಬಿಹಾರಕ್ಕಿಂತಲೂ ಕೆಟ್ಟದಾಗಿದೆ ಮತ್ತು ಮತದಾರರ ಹೆಸರು ಕೈಬಿಡುವಿಕೆ ಇನ್ನೂ ಹೆಚ್ಚಲಿದೆ; ಅದು ಹೆಚ್ಚಿನ ಹಾನಿಯನ್ನೂ ಮಾಡಲಿದೆ ಎಂಬುದು ಸ್ಪಷ್ಟವಾಗಿದೆ. ಐದು ರಾಜ್ಯಗಳ ಅಧಿಕೃತ ದತ್ತಾಂಶ ಮತ್ತು ಉಳಿದ ರಾಜ್ಯಗಳ ಕುರಿತು ಪ್ರಕಟವಾಗಿರುವ ಮಾಧ್ಯಮ ವರದಿಗಳನ್ನು ಒಟ್ಟಾಗಿ ಇರಿಸಿ ನೋಡಿದರೆ, ಮತದಾರರ ಪಟ್ಟಿಯಲ್ಲಿರುವ 11 ಕೋಟಿಯಷ್ಟು ಹೆಸರುಗಳನ್ನು ಕೈಬಿಡುವ ಅಪಾಯ ಎದ್ದು ಕಾಣಿಸುತ್ತಿದೆ. ಅಂತಿಮ ಸಂಖ್ಯೆ ಇದಕ್ಕಿಂತ ಬಹಳ ಕಡಿಮೆ ಇರಬಹುದು. ಆದರೆ, ಇಡೀ ದೇಶದಲ್ಲಿ ಎಸ್ಐಆರ್ ಪೂರ್ಣಗೊಂಡಾಗ ಸುಮಾರು 10 ಕೋಟಿ ಜನರು ಮತದಾನದ ಹಕ್ಕನ್ನು ಕಳೆದುಕೊಳ್ಳಬಹುದು.

ಮಾಹಿತಿಯು ಹರಿದು ಹಂಚಿ ಚೆಲ್ಲಾಪಿಲ್ಲಿಯಾಗಿದೆ ಮತ್ತು ಅದನ್ನು ಮರೆಮಾಚಲಾಗಿದೆ ಎಂಬುದೇ ಈ ವಿಚಾರವು ಚರ್ಚೆಯ ಮುಖ್ಯ ವಿಷಯ ಇನ್ನೂ ಆಗಿಲ್ಲ ಎಂಬುದಕ್ಕೆ ಕಾರಣ. ಬಿಹಾರ ಚುನಾವಣೆಯ ಬಳಿಕ ಎಸ್ಐಆರ್ ರಾಷ್ಟ್ರಮಟ್ಟದ ಮಾಧ್ಯಮಗಳಿಂದ ಮರೆಯಾಯಿತು ಮತ್ತು ಪ್ರಾದೇಶಿಕ ಮಾಧ್ಯಮಕ್ಕೆ ಅಥವಾ ಸ್ಥಳೀಯ ಪುಟಕ್ಕೆ ಸೀಮಿತವಾಯಿತು. ಎಸ್ಐಆರ್‌ನ ಗಡುವನ್ನು ಪದೇ ಪದೇ ರಾಜ್ಯವಾರು ವಿಸ್ತರಣೆ ಮಾಡಲಾಗಿದೆ ಮತ್ತು ಈ ಕಾರಣದಿಂದಾಗಿ ದತ್ತಾಂಶಗಳು ನಾಲ್ಕು ಕಂತುಗಳಲ್ಲಿ ಬಹಿರಂಗವಾಗಲಿವೆ. ಈ ಮೂಲಕ ಸಮಗ್ರ ಚಿತ್ರಣವನ್ನು ಮರೆ ಮಾಚಲಾಗಿದೆ.

ಡಿಜಿಟಲೀಕರಣಗೊಂಡ ದತ್ತಾಂಶದ ಶೇಕಡಾವಾರು ಪ್ರಮಾಣವನ್ನು ಪ್ರಕಟಿಸುವ ಹೊಸ ಪದ್ಧತಿಯ ಮೂಲಕ ಮಾಹಿತಿಯನ್ನು ಮರೆಮಾಚುವ ಕೆಲಸವನ್ನು ಆಯೋಗವು ಅದ್ಭುತವಾಗಿ ಮಾಡುತ್ತಿದೆ. ಇದರಿಂದಾಗಿ ನಮಗೆ ಬೇಕಾದ ಎರಡು ರೀತಿಯ ಮಾಹಿತಿಯು ಸಿಗದಂತಾಗುತ್ತದೆ. ಅವುಗಳೆಂದರೆ, ಗಣತಿ ನಮೂನೆಯನ್ನು ಭರ್ತಿ ಮಾಡದೆ ಕರಡು ಪಟ್ಟಿಯಿಂದ ಕೈಬಿಡಬಹುದಾದವರ ಸಂಖ್ಯೆ ಮತ್ತು ಹಳೆಯ ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದ ಕಾರಣಕ್ಕೆ ಹೊಸ ಪಟ್ಟಿಯಿಂದ ಹೆಸರು ಕೈಬಿಡಬಹುದಾದವರ ಸಂಖ್ಯೆ.

ಐದು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶ ಗಳ (ರಾಜಸ್ಥಾನ, ಪಶ್ಚಿಮ ಬಂಗಾಳ, ಗೋವಾ, ಲಕ್ಷದ್ವೀಪ ಮತ್ತು ಪುದುಚೇರಿ) ಮತದಾರರ ಕರಡು ಪಟ್ಟಿ ಪ್ರಕಟಗೊಂಡ ಬಳಿಕ ವಾಸ್ತವ ಚಿತ್ರಣ ಕಾಣಿಸ ತೊಡಗಿದೆ. ಉಳಿದ ರಾಜ್ಯಗಳಿಗೆ ಸಂಬಂಧಿಸಿದಂತೆ ಮಾಧ್ಯಮಗಳಲ್ಲಿನ ‘ಮೂಲ ಆಧಾರಿತ’ ಮಾಹಿತಿ ನಮಗೆ ಲಭ್ಯವಿದೆ. ಈ ವರದಿಗಳು ಬಹುತೇಕ ನಿಖರವಾಗಿ ಇದ್ದಂತೆ ಕಾಣಿಸುತ್ತಿದೆ. ಏಕೆಂದರೆ, ಪಶ್ಚಿಮ ಬಂಗಾಳ ಮತ್ತು ರಾಜಸ್ಥಾನದ ಕುರಿತು ಬಂದ ಇಂತಹ ವರದಿಗಳ ರೀತಿಯಲ್ಲಿಯೇ ನಂತರ ಪ್ರಕಟವಾದ ಅಧಿಕೃತ ಅಂಕಿಸಂಖ್ಯೆಗಳೂ ಇದ್ದವು. ರಾಜ್ಯ ಚುನಾವಣಾ ಅಧಿಕಾರಿಗಳು ಮತ್ತು ರಾಜಕೀಯ ನಾಯಕರ ಹೇಳಿಕೆಗಳು ಈ ವರದಿಗಳನ್ನು ದೃಢಪಡಿಸಿವೆ. ನಮಗೆ ಸಿಕ್ಕ ಅಧಿಕೃತವಲ್ಲದ ಅಂಕಿಸಂಖ್ಯೆಯನ್ನು ಉತ್ತರ ಪ್ರದೇಶದ ಮುಖ್ಯಮಂತ್ರಿ ಬಹಿರಂಗವಾಗಿಯೇ ದೃಢಪಡಿಸಿದ್ದಾರೆ.

ಮತದಾರರ ಸಾಮೂಹಿಕ ಕೈಬಿಡುವಿಕೆ ಯಾವ ಪ್ರಮಾಣದಲ್ಲಿ ಇರಬಹುದು ಎಂಬುದನ್ನು ಈ ಅಂಕಿಸಂಖ್ಯೆಗಳಿಂದ ನಾವು ಊಹಿಸಬಹುದು. ಸಣ್ಣ ರಾಜ್ಯ ಗೋವಾ (ಒಂದು ಲಕ್ಷ) ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ಪುದುಚೇರಿ (ಒಂದು ಲಕ್ಷ), ಅಂಡಮಾನ್–ನಿಕೋಬಾರ್ (0.6 ಲಕ್ಷ) ಅನ್ನು ಸೇರಿಸಿಕೊಂಡು ನೋಡಿದರೆ, ಗಣತಿ ನಮೂನೆ ಭರ್ತಿ ಮಾಡದವರ ಸಂಖ್ಯೆಯು 6.3 ಕೋಟಿಯಷ್ಟಿದೆ. ಇವರೆಲ್ಲರೂ ಕರಡು ಪಟ್ಟಿಯಿಂದ ಹೊರಬೀಳಬಹುದು. ಮೂಲ ಗಡುವಿನ ಒಳಗೆ ಗಣತಿ ನಮೂನೆ ಭರ್ತಿ ಮಾಡದವರು ಅತಿಹೆಚ್ಚು ಇರುವುದು ಉತ್ತರ ಪ್ರದೇಶದಲ್ಲಿ (2.93 ಕೋಟಿ); ನಂತರದ ಸ್ಥಾನಗಳಲ್ಲಿ ತಮಿಳುನಾಡು (80 ಲಕ್ಷ), ಗುಜರಾತ್ (72 ಲಕ್ಷ), ಪಶ್ಚಿಮ ಬಂಗಾಳ (58 ಲಕ್ಷ), ರಾಜಸ್ಥಾನ (43 ಲಕ್ಷ), ಮಧ್ಯಪ್ರದೇಶ (30 ಲಕ್ಷ), ಛತ್ತೀಸಗಢ (28 ಲಕ್ಷ) ಮತ್ತು ಕೇರಳ (21 ಲಕ್ಷ) ಇವೆ. ಸರಾಸರಿ ಹೆಸರು ಕೈಬಿಡುವಿಕೆಯು ಬಿಹಾರಕ್ಕೆ ಹೋಲಿಸಿದರೆ ಹೆಚ್ಚೇ ಇರಲಿದೆ.

> ‘ಭಾರತದಲ್ಲಿ ಜನಿಸಿದ ನಿವಾಸಿಗಳು, ಆದರೆ, ಮೂಲ ಸ್ಥಳದಲ್ಲಾಗಲಿ ಕೆಲಸದ ಸ್ಥಳದಲ್ಲಾಗಲಿ ಮತದಾನದ ಹಕ್ಕು ಇಲ್ಲದವರು’ ಎನ್ನುವ ಹೊಸ ಸಮುದಾಯ ಸೃಷ್ಟಿಸಲು ‘ಎಸ್ಐಆರ್’ ಹೊರಟಂತಿದೆ. ಇತಿಹಾಸದಲ್ಲಿಯೇ ಅತಿದೊಡ್ಡ ಪ್ರಮಾಣದಲ್ಲಿ ಮತದಾರರ ರದ್ದತಿ ದಾಖಲೆಯನ್ನೂ ‘ಎಸ್ಐಆರ್’ ಸೃಷ್ಟಿಸಲಿದೆ.

ಈ ಹೊರಗಿಡುವಿಕೆಯಲ್ಲಿ ಸಹಜವಾದದ್ದು ಏನೂ ಇಲ್ಲ. ತಮಿಳುನಾಡನ್ನು ಹೊರತುಪಡಿಸಿದರೆ (ಅಲ್ಪ ಪ್ರಮಾಣದಲ್ಲಿ ಕೇರಳ) ಯಾವ ರಾಜ್ಯದಲ್ಲಿಯೂ ಅರ್ಹ ಜನಸಂಖ್ಯೆಗಿಂತ ಈಗಾಗಲೇ ಇರುವ ಮತದಾರರ ಪಟ್ಟಿ ದೊಡ್ಡದಾಗಿಲ್ಲ. ಅರ್ಹ ವಯಸ್ಕ ಜನಸಂಖ್ಯೆ ಮತ್ತು ಎಸ್ಐಆರ್‌ಪೂರ್ವದ ಮತದಾರರ ಪಟ್ಟಿಯಲ್ಲಿರುವ ಜನರ ಸಂಖ್ಯೆಯನ್ನು ಹೋಲಿಸಿ ಇದನ್ನು ದೃಢಪಡಿಸಿಕೊಳ್ಳಬಹುದು. ಎಲ್ಲ ರಾಜ್ಯಗಳಲ್ಲಿಯೂ ವಯಸ್ಕ ಜನಸಂಖ್ಯೆ ಮತ್ತು ಮತದಾರರ ಅನುಪಾತ ಇಳಿಕೆ ಆಗಲಿದೆ ಎಂಬುದನ್ನೂ ಅಂಕಿಅಂಶಗಳು ತೋರಿಸುತ್ತವೆ. ಸರಾಸರಿ ಇಳಿಕೆಯು ಶೇ 12ರಷ್ಟಿದೆ. ಬಿಹಾರದ ಕರಡು ಎಸ್ಐಆರ್‌ನಲ್ಲಿ ಈ ಪ್ರಮಾಣವು ಶೇ 8ರಷ್ಟಿತ್ತು. ಆಘಾತ ಉಂಟು ಮಾಡುವ ಅಂಶವೆಂದರೆ, ಉತ್ತರ ಪ್ರದೇಶದಲ್ಲಿ ಈ ಪ್ರಮಾಣವು ಶೇ 96ರಿಂದ ಶೇ 78ಕ್ಕೆ ಇಳಿದು ಒಟ್ಟು ಶೇ 18ರಷ್ಟು ಕುಸಿತವಾಗಿದೆ. ಮುಂದಿನ ದಿನಗಳಲ್ಲಿ ಇದು ಸ್ವಲ್ಪಮಟ್ಟಿಗೆ ಸರಿಹೋಗಬಹುದು. ತಮಿಳುನಾಡು, ಗುಜರಾತ್ ಮತ್ತು ಛತ್ತೀಸಗಢದಲ್ಲಿ ಶೇ 13ರಿಂದ 14ರಷ್ಟು ಕುಸಿತ ಕೂಡ ಆಘಾತ ಉಂಟು ಮಾಡುವಷ್ಟು ಇದೆ.

ಈ ಸಂಖ್ಯೆ ಮುಂದಿನ ದಿನಗಳಲ್ಲಿ ಬದಲಾಗಬಹುದು. ಆದರೆ, ಗಣನೀಯವಾದ ಬದಲಾವಣೆಯ ಸಾಧ್ಯತೆ ಬಹಳ ಕ್ಷೀಣ. ಏಕೆಂದರೆ, ಇವುಗಳಲ್ಲಿ ಬಹುಪಾಲು ನಮೂದುಗಳನ್ನು ‘ಸಂಗ್ರಹಿಸಲಾಗದು’ ಎಂಬ ವರ್ಗಕ್ಕೆ ಸೇರಿಸಿ ಗೈರು, ಸ್ಥಳಾಂತರ, ನಿಧನ ಅಥವಾ ನಕಲಿ (ಒಂದಕ್ಕಿಂತ ಹೆಚ್ಚು ಕಡೆ ನಮೂದು) ಎಂಬ ಕಾರಣಗಳನ್ನು ಆಯೋಗವು ನೀಡಿದೆ.

ಬಹುತೇಕ ರಾಜ್ಯಗಳಲ್ಲಿ ವರ್ಗೀಕರಣದ ಅಧಿಕೃತ ಸಂಖ್ಯೆ ನಮಗೆ ಸಿಕ್ಕಿಲ್ಲ. ಆದರೆ, ಲಭ್ಯ ಇರುವ ಮಾಹಿತಿಯು ಸ್ಪಷ್ಟವಾದ ಪ್ರವೃತ್ತಿಯೊಂದನ್ನು ತೋರಿಸುತ್ತದೆ. ‘ನಿಧನ’ ಮತ್ತು ‘ಸ್ಥಳಾಂತರ’ ಎಂದು ಗುರುತಿಸಲಾದ ಪ್ರಮಾಣವು ಈ ಎಲ್ಲ ರಾಜ್ಯಗಳಲ್ಲಿಯೂ ಸರಿಸುಮಾರು ಸ್ಥಿರವಾಗಿದೆ. ಆದರೆ, ‘ಗೈರು’ ಮತ್ತು ‘ಸ್ಥಳಾಂತರ’ ಎಂದು ಗುರುತಿಸಲಾದವರ ಪ್ರಮಾಣವು ಛತ್ತೀಸಗಢ (ಶೇ 9), ಗುಜರಾತ್ (ಶೇ 10) ಮತ್ತು ಉತ್ತರ ಪ್ರದೇಶದಲ್ಲಿ (ಶೇ 13.7) ಆಘಾತಕರ ಎನ್ನುವಷ್ಟು ಅತಿಯಾಗಿದೆ. ಆದರೆ, ಪಶ್ಚಿಮ ಬಂಗಾಳದಲ್ಲಿ (ಶೇ 1.6) ಅಸಹಜ ಎನ್ನುವಷ್ಟು ಕಡಿಮೆ ಇದೆ. ಉತ್ತರ ಪ್ರದೇಶದಂತಹ ಹೊರ ವಲಸೆ ರಾಜ್ಯದಲ್ಲಿ ‘ಗೈರು’ ಮತ್ತು ವಲಸಿಗರ ಪ್ರಮಾಣವು ಅಸಹಜವಾಗಿ ಅತಿಯಾಗಿದೆ ಮತ್ತು ದೊಡ್ಡ ಪ್ರಮಾಣದ ಒಳ-ವಲಸೆಯ ರಾಜ್ಯವಾದ ಗುಜರಾತ್‌ನಲ್ಲಿಯೂ ಈ ಪ್ರಮಾಣ ಅತಿಯಾಗಿಯೇ ಇದೆ. ಹೀಗೆ ಇದು ಯಾವ ತರ್ಕಕ್ಕೂ ನಿಲುಕದ ರೀತಿಯಲ್ಲಿದೆ. ಎಸ್ಐಆರ್‌ನಿಂದಾಗಿ ಹೊಸ ಸಮುದಾಯವೊಂದು ಇಲ್ಲಿ ಸೃಷ್ಟಿಯಾಗಬಹುದು– ಭಾರತದಲ್ಲಿ ಜನಿಸಿದ ನಿವಾಸಿಗಳು, ಆದರೆ, ಮೂಲ ಸ್ಥಳದಲ್ಲಾಗಲಿ ಕೆಲಸದ ಸ್ಥಳದಲ್ಲಾಗಲಿ ಮತದಾನದ ಹಕ್ಕು ಇಲ್ಲದವರು.

ಈಗ ನಡೆಯುತ್ತಿರುವ ಎಸ್ಐಆರ್‌ನಲ್ಲಿ ಹೆಸರುಗಳನ್ನು ತೆಗೆದುಹಾಕಲು ಇನ್ನೊಂದು ಅವಕಾಶವೂ ಇದೆ. ಅದು, ಹಿಂದಿನ ಪಟ್ಟಿಯಲ್ಲಿ ಇಲ್ಲದವರು ಎಂಬ ವರ್ಗ. ಈ ಜನರು ಗಣತಿ ನಮೂನೆಯನ್ನು ಸಲ್ಲಿಸಿದ್ದರೂ ತಾವು ಅಥವಾ ತಮ್ಮ ಸಂಬಂಧಿಕರ (ಈ ಪದವನ್ನು ಇನ್ನೂ ವ್ಯಾಖ್ಯಾನಿಸಿಲ್ಲ) ಹೆಸರು 2002 ಅಥವಾ 2003ರ ಮತದಾರರ ಪಟ್ಟಿಯಲ್ಲಿ ಇತ್ತು ಎಂಬ ಪುರಾವೆ ಇಲ್ಲದವರು. ಇಂಥವರ ಹೆಸರನ್ನು ಕರಡು ಪಟ್ಟಿಯಲ್ಲಿ ಸೇರ್ಪಡೆ ಮಾಡಿದರೂ ಅದು ತಾತ್ಕಾಲಿಕ ನಮೂದು ಮಾತ್ರ. ಅವರಿಗೆ ನೋಟಿಸ್ ನೀಡಿ, ಪೌರತ್ವದ ಪುರಾವೆ ಸಲ್ಲಿಸುವಂತೆ ಸೂಚಿಸಲಾಗುವುದು. ಪುರಾವೆ ಸಲ್ಲಿಸಲು ವಿಫಲರಾದರೆ, ಅಂತಿಮ ಪಟ್ಟಿಯಿಂದ ಅವರ ಹೆಸರನ್ನು ಕೈಬಿಡಲಾಗುವುದು.

ಈಗ ನಮ್ಮಲ್ಲಿ ‘ಪುರಾವೆ ಇಲ್ಲದ’ ಇಂತಹ ಎಷ್ಟು ಜನರು ಇದ್ದಾರೆ? ಯಾವ ರಾಜ್ಯವೂ ಅಧಿಕೃತವಾಗಿ ಈ ಅಂಕಿಅಂಶವನ್ನು ಪ್ರಕಟಿಸಿಲ್ಲ. ಕೇರಳ ಮತ್ತು ಛತ್ತೀಸಗಢದಿಂದ ಅಧಿಕೃತವಲ್ಲದ ಅಂಕಿಅಂಶವೂ ಇಲ್ಲ. ಹಾಗಿದ್ದರೂ ಪ್ರಮಾಣದಲ್ಲಿ ರಾಜ್ಯದಿಂದ ರಾಜ್ಯಕ್ಕೆ ಭಾರಿ ಏರಿಳಿತ ಇದೆ. ಸಲ್ಲಿಕೆಯಾದ ನಮೂನೆಗಳಿಗೆ ಹೋಲಿಸಿದರೆ ‘ಪುರಾವೆ ಇಲ್ಲದ’ ಜನರ ಸಂಖ್ಯೆಯು ಕಳವಳ ಮೂಡಿಸುವಷ್ಟಿದೆ– ಉತ್ತರ ಪ್ರದೇಶದಲ್ಲಿ ಶೇ 27.1 ಮತ್ತು ಗುಜರಾತ್‌ನಲ್ಲಿ ಶೇ 16 ಇದ್ದರೆ, ತಮಿಳುನಾಡು (ಶೇ 10) ಮತ್ತು ಪಶ್ಚಿಮ ಬಂಗಾಳ (ಶೇ 4), ರಾಜಸ್ಥಾನ (ಶೇ 3) ಮತ್ತು ಮಧ್ಯಪ್ರದೇಶದಲ್ಲಿ (ಶೇ 2.4) ಕಡಿಮೆ ಇದೆ. ಒಟ್ಟಿನಲ್ಲಿ 5.25 ಕೋಟಿ ಜನರು– ಅವರಲ್ಲಿ 3.39 ಕೋಟಿ ಜನರು ಉತ್ತರ ಪ್ರದೇಶದಲ್ಲಿಯೇ ಇದ್ದಾರೆ– ಮತದಾರರ ಪಟ್ಟಿಯಿಂದ ಹೆಸರು ರದ್ದಾಗುವ ಆತಂಕದಲ್ಲಿ ಇದ್ದಾರೆ.

ಗಣತಿ ನಮೂನೆ ಸಲ್ಲಿಸದ 6.3 ಕೋಟಿ ಜನರು ಮತ್ತು ಪುರಾವೆ ನೀಡದ 5.3 ಕೋಟಿ ಜನರು ಸೇರಿ ಒಟ್ಟು 11.6 ಕೋಟಿ ಜನರು ಮತದಾನದ ಹಕ್ಕಿನಿಂದ ವಂಚಿತರಾಗುವ ಎರಡು ವರ್ಗಕ್ಕೆ ಸೇರಿದ್ದಾರೆ. ಇದು ಆಯಾ ರಾಜ್ಯಗಳ ಒಟ್ಟು ಜನಸಂಖ್ಯೆಯ ಐದನೇ ಒಂದರಷ್ಟಾಗುತ್ತದೆ. ವಿಶೇಷವಾಗಿ, ಉತ್ತರ ಪ್ರದೇಶದಲ್ಲಿ ‘ಪುರಾವೆರಹಿತ’ ಮತದಾರರ ಸಂಖ್ಯೆಯಲ್ಲಿ ಗಣನೀಯ ಕುಸಿತ ಆಗಬೇಕು. ಅದೇ ರೀತಿಯಲ್ಲಿ, ಪಶ್ಚಿಮ ಬಂಗಾಳದಲ್ಲಿ ಈ ಪ್ರಮಾಣ ಸ್ವಲ್ಪ ಏರಿಕೆ ಆಗಬಹುದು. ನೋಟಿಸ್ ಪಡೆಯುವವರಲ್ಲಿ ಒಂದು ಸಣ್ಣ ಪ್ರಮಾಣದ ಜನರ ಹೆಸರನ್ನು ಮಾತ್ರ ಅಂತಿಮ ಪಟ್ಟಿಯಿಂದ ಅಳಿಸಲಾಗುವುದು ಎಂಬುದು ನಿಜ. ಈಗ ಪಟ್ಟಿ ಮಾಡಲಾದ ಜನರ ಅರ್ಧದಷ್ಟು ಜನರ ಮತದಾನದ ಅವಕಾಶ ರದ್ದುಪಡಿಸಿದರೂ ಇದು ಪ್ರಜಾಪ್ರಭುತ್ವದಲ್ಲಿಯೇ ಅತಿದೊಡ್ಡ ಪ್ರಮಾಣದ ಮತದಾನದ ಹಕ್ಕು ರದ್ದತಿ ಎಂದು ಇತಿಹಾಸದಲ್ಲಿ ದಾಖಲಾಗುತ್ತದೆ.

ವಾಚಕರ ವಾಣಿ

ಅನ್ನ–ಅಕ್ಷರಗಳೊಂದಿಗೆ ಕಣ್ಣಾಮುಚ್ಚಾಲೆ

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಇತ್ತೀಚೆಗೆ ಕಂಡುಬರುತ್ತಿರುವ ಬೆಳವಣಿಗೆಗಳು ಆತಂಕಕಾರಿಯಾಗಿವೆ. ಬಿಸಿಯೂಟಕ್ಕೆ ಪೂರೈಕೆ ಆಗುತ್ತಿರುವ ಧಾನ್ಯಗಳಲ್ಲಿ ಹುಳುಗಳು ಪತ್ತೆಯಾಗುತ್ತಿರುವುದು ಮಕ್ಕಳ ಆರೋಗ್ಯದ ಜೊತೆಗಿನ ಚೆಲ್ಲಾಟ ಆಗಿದೆ. ಕಳಪೆ ಗುಣಮಟ್ಟದ ಆಹಾರವು ಮಕ್ಕಳಲ್ಲಿ ಅಪೌಷ್ಟಿಕತೆಯನ್ನು ಹೆಚ್ಚಿಸಲಿದೆ. ಸರ್ಕಾರವು ಕೇವಲ ಯೋಜನೆಗಳನ್ನು ಘೋಷಿಸಿದರೆ ಸಾಲದು; ಗುಣಮಟ್ಟದ ಮೇಲ್ವಿಚಾರಣೆ ಮಾಡುವುದು ಅತ್ಯಗತ್ಯ. ಇನ್ನೊಂದೆಡೆ, ಮೂಲ ಸೌಕರ್ಯದ ಕೊರತೆಯ ನೆಪವೊಡ್ಡಿ ಶಾಲೆಗಳನ್ನು ಮುಚ್ಚುವ ಅಥವಾ ವಿಲೀನಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ. ಇದು ಬಡ ವಿದ್ಯಾರ್ಥಿಗಳನ್ನು ಶಿಕ್ಷಣದಿಂದ ವಂಚಿತರನ್ನಾಗಿಸುವ ಹುನ್ನಾರವಾಗಿದೆ. ಸರ್ಕಾರವು ಕೂಡಲೇ ಎಚ್ಚೆತ್ತುಕೊಂಡು ಧಾನ್ಯಗಳ ಶುಚಿತ್ವವನ್ನು ಖಾತರಿಪಡಿಸಬೇಕು ಮತ್ತು ಶಾಲೆಗಳನ್ನು ಮುಚ್ಚುವ ಬದಲು ಅವುಗಳನ್ನು ಸಬಲೀಕರಣಗೊಳಿಸಬೇಕು. ಇಲ್ಲದಿದ್ದರೆ ಸರ್ಕಾರಿ ಶಾಲೆಗಳು ಇತಿಹಾಸದ ಪುಟ ಸೇರುವುದರಲ್ಲಿ ಸಂಶಯವಿಲ್ಲ.

ಭೂಮಿಕಾ, ಬೆಂಗಳೂರು

ಇಲಾಖಾ ಪರೀಕ್ಷೆ: ಫಲಿತಾಂಶ ತಡವೇಕೆ?

ಕರ್ನಾಟಕ ಲೋಕಸೇವಾ ಆಯೋಗ ಪ್ರತಿವರ್ಷ ಇಲಾಖಾ ಪರೀಕ್ಷೆಗಳನ್ನು ನಡೆಸುತ್ತದೆ. ಇತ್ತೀಚೆಗೆ ಈ ಪರೀಕ್ಷೆಗಳ ಫಲಿತಾಂಶ ಪ್ರಕಟಣೆಯಲ್ಲಿ ವಿಪರೀತ ವಿಳಂಬ ಉಂಟಾಗುತ್ತಿದೆ. ನೇರ ನೇಮಕಾತಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯ ಫಲಿತಾಂಶ ಪ್ರಕಟಣೆಗೆ ಸಮಯಾವಕಾಶ ಅಗತ್ಯ ಎಂಬುದನ್ನು ಒಪ್ಪಿಕೊಳ್ಳಬಹುದು. ಆದರೆ, ಇಲಾಖಾ ಪರೀಕ್ಷೆಗಳಿಗೆ ನಿಗದಿಪಡಿಸಲಾಗಿರುವ ಸಾಮಾನ್ಯ ಕಾನೂನು ಮತ್ತು ಅಕೌಂಟ್ಸ್ ವಿಷಯಗಳು ಎಷ್ಟೋ ಕಾಲದಿಂದ ಚಾಲ್ತಿಯಲ್ಲಿವೆ. ಮೇಲಾಗಿ, ಇಲಾಖಾ ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳು ಕಡಿಮೆ ಸಂಖ್ಯೆಯಲ್ಲಿರುತ್ತಾರೆ. ಆದಾಗ್ಯೂ ವಿಳಂಬ ಯಾಕೆ ಎನ್ನುವುದು ಅರ್ಥವಾಗುತ್ತಿಲ್ಲ. ಇದರಿಂದ ನಿವೃತ್ತಿ ಅಂಚಿನಲ್ಲಿರುವ ಸರ್ಕಾರಿ ನೌಕರರು ಮುಂಬಡ್ತಿಯಿಂದ ವಂಚಿತರಾಗುತ್ತಾರೆ. ಹಲವು ತಿಂಗಳ ಹಿಂದೆ ನಡೆಸಲಾಗಿರುವ ಇಲಾಖಾ ಪರೀಕ್ಷೆಗಳ ಫಲಿತಾಂಶವನ್ನು ಶೀಘ್ರವೇ ಪ್ರಕಟಿಸಬೇಕಿದೆ.

ಹರೀಶ್ ಕುಮಾರ್ ಕುಡ್ತಡ್ಕ, ಮಂಗಳೂರು

ಸ್ವಚ್ಛ ಮನಸ್ಸೇ ಸಮಾಜಕ್ಕೆ ಶಕ್ತಿಶಾಲಿ

ಇಂದಿನ ಯುವಜನತೆಯ ಜೀವನದಲ್ಲಿ ಸ್ಪರ್ಧೆ, ನಿರೀಕ್ಷೆ ಮತ್ತು ಸಾಮಾಜಿಕ ಮಾಧ್ಯಮಗಳ ಒತ್ತಡ ಹೆಚ್ಚಾಗಿದೆ. ಯಶಸ್ಸಿನ ಹಿಂದೆ ಓಡುವ ಪ್ರಯತ್ನದಲ್ಲಿ ಅನೇಕ ಮಂದಿ ಮಾನಸಿಕ ಆರೋಗ್ಯವನ್ನು ಸಂಪೂರ್ಣವಾಗಿ ಕಡೆಗಣಿಸುತ್ತಿದ್ದಾರೆ. ನಿರಂತರ ಒತ್ತಡ, ಆತಂಕ ಮತ್ತು ಒಂಟಿತನವು ನಿದ್ರಾಹೀನತೆ ಹಾಗೂ ಆತ್ಮವಿಶ್ವಾಸದ ಕುಸಿತಕ್ಕೆ ಕಾರಣವಾಗುತ್ತಿದೆ. ಮಾನಸಿಕ ಆರೋಗ್ಯವನ್ನು ದೌರ್ಬಲ್ಯವೆಂದು ಕಾಣದೆ, ಅದನ್ನು ಜೀವನದ ಅವಿಭಾಜ್ಯ ಭಾಗವಾಗಿ ಒಪ್ಪಿಕೊಳ್ಳಬೇಕು. ಕುಟುಂಬದ ಬೆಂಬಲ, ಸ್ನೇಹಿತರ ಜೊತೆ ಸಂವಹನ ಮತ್ತು ವೃತ್ತಿಪರ ಸಲಹೆಯು ಯುವಜನತೆಗೆ ಶಕ್ತಿಯನ್ನೂ ಸ್ಫೂರ್ತಿಯನ್ನೂ ನೀಡುತ್ತದೆ. ಆರೋಗ್ಯಕರ ಮನಸ್ಸೇ ಆರೋಗ್ಯಕರ ಸಮಾಜದ ಆಧಾರ ಎಂಬುದನ್ನು ಮರೆಯಬಾರದು.

ಜಹೀರ್ ಪಿ., ಕರೂರು

ಯೋಜನೆ ದುರ್ಬಳಕೆ: ಸೌಲಭ್ಯ ಮರೀಚಿಕೆ

ಪ್ರಸ್ತುತ ಕೇಂದ್ರ ಸರ್ಕಾರವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಹೆಸರನ್ನು ‘ವಿಬಿ–ಜಿ ರಾಮ್ ಜಿ’ ಎಂದು ಬದಲಾಯಿಸಿದೆ. ಆದರೆ, ಮನರೇಗಾ ಯೋಜನೆಯು ಗ್ರಾಮೀಣ ಪ್ರದೇಶದಲ್ಲಿ ಸರಿಯಾಗಿ ಅನುಷ್ಠಾನ ಆಗಿದೆಯೇ ಎನ್ನುವ ಬಗ್ಗೆ ಚರ್ಚೆ ನಡೆಯದಿರುವುದು ವಿಪರ್ಯಾಸ. ಬಹುತೇಕ ಹಳ್ಳಿಗಳಲ್ಲಿ ಈ ಯೋಜನೆಯ ಸೌಲಭ್ಯ ಅರ್ಹರಿಗೆ ತಲುಪಿಲ್ಲ. ಯೋಜನೆಯ ನಿಯಮಾವಳಿಗಳನ್ನು ಅಧಿಕಾರಿಗಳು ಪಾಲಿಸುತ್ತಿಲ್ಲ. ಇದರ ದುರುಪಯೋಗವೇ ಹೆಚ್ಚಿದೆ. ಯೋಜನೆಗಳಿಗೆ ಹೊಸ ಹೆಸರಿಡುವುದಕ್ಕೆ ಸಂಬಂಧಿಸಿದಂತೆ ಆಡಳಿತಾರೂಢ ಮತ್ತು ವಿರೋಧ ಪಕ್ಷಗಳು ಕಿತ್ತಾಟ ನಡೆಸುವ ಬದಲು ಅರ್ಹರಿಗೆ ಸೌಲಭ್ಯ ತಲುಪಿಸಲು ಮುಂದಾಗುವುದು ಒಳಿತು.

ಅಜಯ್ ಕುಮಾರ್, ಹೂವಿನ ಹಡಗಲಿ

ದುಶ್ಚಟಗಳನ್ನು ಬಿಡಿಸುವ ದಾರಿ ಹುಡುಕಿ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಬೊಕ್ಕಸ ತುಂಬಿಸಿಕೊಳ್ಳುವುದಷ್ಟೆ ಚಿಂತೆ. ಇದಕ್ಕಾಗಿ ಮದ್ಯ ಮತ್ತು ತಂಬಾಕು ಉತ್ಪನ್ನಗಳ ಮೇಲೆ ಹೆಚ್ಚಿನ ಜಿಎಸ್‌ಟಿ ವಿಧಿಸಲು ತುದಿಗಾಲ ಮೇಲೆ ನಿಂತಿವೆ. ಸರ್ಕಾರಗಳಿಗೆ ಜನಸಾಮಾನ್ಯರ ಆರೋಗ್ಯದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ. ಬೀಡಿ, ಸಿಗರೇಟ್, ತಂಬಾಕು, ಮದ್ಯ ಬಳಕೆಯಿಂದ ಸಮಾಜ ಸುಧಾರಣೆ ಕಾಣದೆ ಮತ್ತಷ್ಟು ಹದಗೆಡುತ್ತದೆ.

ದುಡಿಯುವ ವರ್ಗವು ಅನಾರೋಗ್ಯಕ್ಕೆ ತುತ್ತಾದರೆ ದೇಶದ ಆರ್ಥಿಕತೆ ಬೆಳವಣಿಗೆಗೂ ಪೆಟ್ಟು ಬೀಳುತ್ತದೆಯಲ್ಲವೆ? ದುಶ್ಚಟ ತ್ಯಜಿಸುವವರಿಗೆ ಉಚಿತವಾಗಿ ಆರೋಗ್ಯ ವಿಮೆ ಸೌಲಭ್ಯ ನೀಡುವಂತಹ ಜನಪರ ಯೋಜನೆ ಘೋಷಿಸುವ ಮೂಲಕ ವ್ಯಸನಿಗಳ ಮನಃಪರಿವರ್ತನೆಗೆ ಸರ್ಕಾರಗಳು ಮುಂದಾಗಲಿ.

ಪ್ರಶಾಂತ್ ಕುಮಾರ್ ಎಚ್.ಸಿ., ಬೆಂಗಳೂರು

ಲಿಂಗತ್ವ ಅಲ್ಪಸಂಖ್ಯಾತರಿಗೆ ನೌಕರಿ ಕೊಡಿ

ಮೊನ್ನೆ ಯಾವುದೋ ಕಾರಣಕ್ಕೆ ಬೆಂಗಳೂರಿಗೆ ಹೋಗಿದ್ದೆ. ಕೆಂಪೇಗೌಡ ರಸ್ತೆಯಲ್ಲಿ ಸಂಚರಿಸುತ್ತಿರಬೇಕಾದರೆ ದಾರಿಯಲ್ಲಿ ಒಬ್ಬಿಬ್ಬರಲ್ಲ; ಏಳೆಂಟು ಮಂದಿ ಲಿಂಗತ್ವ ಅಲ್ಪಸಂಖ್ಯಾತರು ಎದುರಾದರು. ಎಲ್ಲರೂ ತಲೆಮುಟ್ಟಿ, ಮುಖಮುಟ್ಟಿ ದುಡ್ಡು ಕೇಳಿದರು. ಮಧ್ಯ ವಯಸ್ಸಿಗಿಂತಲೂ ಸಣ್ಣವರಾದ ಅವರು, ದುಡಿಯಲು ಸಶಕ್ತವಾದ ದೇಹ ಹೊಂದಿದ್ದರು. ಅವರು ನಮ್ಮಂತೆ ಇರುವವರು. ಅವರು ಹೀಗೆ ಬೇಡಿ ಜೀವನ ನಡೆಸುವುದೇಕೆ? ಅವರಿಗೆ ಸರ್ಕಾರ ಅರ್ಹ ಉದ್ಯೋಗ ನೀಡಿ, ಸಮಾಜದ ಮುಖ್ಯವಾಹಿನಿಯಲ್ಲಿ ಅವರನ್ನು ಸೇರಿಸಿಕೊಳ್ಳಬಾರದೇಕೆ?

ಸಹನಾ ಕಾಂತಬೈಲು, ಮಡಿಕೇರಿ

ಚುರುಮುರಿ

ಕುರ್ಚಿ ಸಮೀಕರಣ

● ಸುಮಂಗಲಾ

‘ಏನೇ ಅನ್ನು... ನಮ್ ಕಮಲಕ್ಕನ ಮನಿ ವ್ಯವಹಾರನೇ ಛಂದ’ ಬೆಕ್ಕಣ್ಣ ಭಲೇ ಅಭಿಮಾನದಿಂದ ನುಡಿಯಿತು.

ನಾನು ವ್ಯವಹಾರ ಏನೆಂದು ಅರ್ಥವಾಗದೇ ಹುಬ್ಬೇರಿಸಿದೆ.

‘ಪ್ರಧಾನಿ ಕುರ್ಚಿ ಗದ್ಲನೇ ಇಲ್ಲ. 2035ರವರೆಗೂ ನಮ್ ಮೋದಿಮಾಮನೇ ಪ್ರಧಾನಿ ಅಂತ ಎಲ್ಲಾರೂ ಒಪ್ಪಿಕೊಂಡಾರೆ!’ ಬೆಕ್ಕಣ್ಣ ವಿವರಿಸಿತು.

‘ಅಷ್ಟೇ ಯಾಕೆ... ಯಾರು ಕೇಂದ್ರ ಗೃಹಮಂತ್ರಿ, ಯಾರು ಅರ್ಥ ಸಚಿವರು ಅಂತ ಕೂಡ ಎಲ್ಲಾರೂ ಒಪ್ಪಿಕೊಂಡಂತೆ ಕಾಣತೈತಿ. ಕಮಲಕ್ಕನ ಮನಿ = ಕುರ್ಚಿ ಸ್ಪಷ್ಟತೆ!’ ಎಂದು ನಾನು ಸಮೀಕರಣ ಹೊಸೆದೆ.

‘ಹೌದು... ಎಲ್ಲ ಖುಲ್ಲಂಖುಲ್ಲ! ರಾಜ್ಯಗಳಲ್ಲಿ ಬ್ಯಾರೆ ಪಕ್ಷದ ಜೊತಿಗಿ ಕಮಲಕ್ಕ ಕೈಜೋಡಿಸಿದಾಗಲೂ ಯಾರು ಸಿಎಂ ಅನ್ನೂದರ ಬಗ್ಗೆ ವಿವಾದನೇ ಇರಂಗಿಲ್ಲ’ ಎಂದು ಬೆಕ್ಕಣ್ಣ ಹುರುಪಿನಿಂದ ಹೇಳಿತು.

‘ಮಹಾರಾಷ್ಟ್ರದಾಗೆ ಸಿಎಂ ಫಡ್ನವೀಸ್, ಬಿಹಾರದಾಗೆ ಸಿಎಂ ನಿತೀಶ್... ಸಿಎಂ ಕುರ್ಚಿಗೆ ಬ್ಯಾರೆ ಯಾರೂ ಟುವಾಲ್ ಹಾಕಂಗಿಲ್ಲ!’ ಎಂದೆ.

‘ಇಲ್ಲಿ ಕೈಪಾಳೆಯದ ಸಿಎಂ ಕುರ್ಚಿ ಗದ್ಲ ಮುಗಿಯಂಗೇ ಕಾಣಂಗಿಲ್ಲ. ನಾವಿಬ್ಬರೂ ಛಲೋನೆ ಅದೀವಿ, ನಾನೇ ಸಿಎಂ ಅಂತ ಸಿದ್ದು ಅಂಕಲ್ ಕೈತಟ್ಟತಾರೆ. ಹೈಕಮಾಂಡಿನ ಕಮಾಂಡ್ ಮೀರಂಗಿಲ್ಲ ಅಂತ ಹೇಳ್ತಲೇ ಡಿಕೆಶಿ ಅಂಕಲ್ಲು ನನಗೆ ಹೂ ಪ್ರಸಾದ ಆಗೈತಿ ಅಂತ ಖುಷಿಯಾಗಿ ಬೀಗುತಾರೆ’ ಎಂದು ಬೆಕ್ಕಣ್ಣ ನಕ್ಕಿತು.

‘ಇವ್ರಿಬ್ಬರ ಕುರ್ಚಿ ಗದ್ಲದಲ್ಲಿ ಬಡವಾಗೋದು ಅಂದ್ರ ಶ್ರೀಸಾಮಾನ್ಯ! ಕರ್ನಾಟಕ ಇಡೀ ದೇಶದಲ್ಲೇ ರೈತರ ಆತ್ಮಹತ್ಯೆಯಲ್ಲಿ ಎರಡನೇ ಸ್ಥಾನದಾಗೈತೆ. ಈ ಎರಡೂವರೆ ವರ್ಷದಾಗೆ 2,800ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಾರೆ’ ಎಂದೆ ನಾನು ಸಿಟ್ಟಿನಿಂದ.

‘ಇವ್ರು ಎಷ್ಟರೆ ನಾಚಿಕೆ ಬಿಟ್ಟಿರತಾರೆ ಅಂದರೆ, ಪಕ್ಕದ ಮಹಾರಾಷ್ಟ್ರದಾಗೆ ಡಬ್ಬಲ್ ಎಂಜಿನ್ ಇದ್ರೂ ನಾಕು ಸಾವಿರದ ಮ್ಯಾಲೆ ರೈತರು ಆತ್ಮಹತ್ಯೆ ಮಾಡಿಕೊಂಡು ಮೊದಲನೆ ಸ್ಥಾನದಾಗೆ ಅದಾರಲ್ಲ ಅಂತ ವಾದಿಸತಾರೆ!’ ಎಂದ ಬೆಕ್ಕಣ್ಣನ ಜೊತೆ ನಾನೂ ಹಣೆ ಚಚ್ಚಿಕೊಂಡೆ.

ಸಂಗತ

ಸಾಮಾಜಿಕ ಮಾಧ್ಯಮ: ಕಾರ್ಪೊರೇಟ್ ಗಾಳ

ಕೊಂಚ ಎಚ್ಚರ ತಪ್ಪಿದರೆ ಬಳಕೆದಾರರನ್ನು ಅಪಾಯಕ್ಕೆ ಸಿಲುಕಿಸುವ ಸಾಮಾಜಿಕ ಮಾಧ್ಯಮ, ಕಾರ್ಪೊರೇಟ್ ಕಂಪನಿಗಳ ಪಾಲಿಗೆ ಲಾಭದಾಯಕ ಉದ್ಯಮ.

● ವಸಂತ ನಡಹಳ್ಳಿ

ದೇಶದ ಅತ್ಯುನ್ನತ ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿಯಲ್ಲಿದ್ದ ಇಪ್ಪತ್ತೈದರ ಯುವತಿ ಸಹಾಯ ಕೇಳಲು ಬಂದಾಗ ಮಾನಸಿಕವಾಗಿ ಕುಸಿದುಹೋಗಿದ್ದಳು. ಸಾಮಾಜಿಕ ಮಾಧ್ಯಮಗಳಲ್ಲಿ ಅವಳೇ ಹಾಕಿದ್ದ ಹಲವಾರು ಫೋಟೊ, ವಿಡಿಯೊಗಳನ್ನು ಬಳಸಿಕೊಂಡು ಸಹಪಾಠಿಯೊಬ್ಬ ಅಶ್ಲೀಲ ವಿಡಿಯೊಗಳನ್ನು ಮಾಡಿ, ಹಂಚಿಕೊಂಡಿದ್ದ. ಸುಮಾರು ಇಪ್ಪತ್ತು ಸೆಷನ್‌ಗಳಲ್ಲಿ ಇಡೀ ಕುಟುಂಬದ ಜೊತೆ ಮಾತನಾಡಿದ ನಂತರ, ಆಕೆ ಮತ್ತೆ ಪರೀಕ್ಷೆ ಬರೆಯಲು ಸಿದ್ಧಳಾಗಿದ್ದಳು. ನನ್ನ ಸಹಾಯದ ಜೊತೆಗೆ ಅವಳಿಗಿದ್ದ ಬಲವಾದ ರಕ್ಷಾಕವಚವೆಂದರೆ, ಪೋಷಕರು ಅವಳ ಮೇಲೆ ಇಟ್ಟಿದ್ದ ನಂಬಿಕೆ. ಪೋಷಕರೂ ಆಕೆಯ ಮೇಲೆ ಅನುಮಾನ ವ್ಯಕ್ತಪಡಿಸಿದ್ದರೆ ಏನಾಗಬಹುದಿತ್ತು ಎನ್ನುವುದನ್ನು ಕಲ್ಪಿಸಿಕೊಳ್ಳುವುದೂ ಅಸಾಧ್ಯ.

ಸಾಮಾಜಿಕ ಮಾಧ್ಯಮಗಳಿಂದ ಅಪಾಯಗಳಿಗೆ ಸಿಲುಕಿಕೊಂಡು ಹಿಂಸೆ ಅನುಭವಿಸಿದವರು ಸಹಾಯ ಕೇಳಿ ಬಂದಿದ್ದಾರೆ. ಅವರಲ್ಲಿ ಮಹಿಳೆಯರೇ ಹೆಚ್ಚು.

ಇದೇಕೆ ಹೀಗೆ ವಿವೇಚನಾರಹಿತವಾಗಿ ನಮ್ಮ ಯುವ ಜನತೆ ಮೊಬೈಲ್ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಭ್ರಮಾಧೀನರಾಗಿದ್ದಾರೆ? ಮಕ್ಕಳು, ಯುವಕರ ಮಾತು ಹಾಗಿರಲಿ, ಹಿರಿಯ ನಾಗರಿಕರು ದಿನಕ್ಕೆ ಎಷ್ಟು ಸಮಯ ಮೊಬೈಲ್, ರೀಲ್ಸ್, ಸಾಮಾಜಿಕ ಮಾಧ್ಯಮಗಳಲ್ಲಿ ಕಳೆದುಹೋಗಿರುತ್ತಾರೆ ಎನ್ನುವುದನ್ನು ಗಮನಿಸಿದರೆ, ಅವುಗಳ ಆಕರ್ಷಣೆ ಎಂತಹುದು ಎನ್ನುವುದರ ಪರಿಚಯ ಆಗಬಹುದು.



ಡೊಪೊಮೈನ್ ಎನ್ನುವ ನರ ರಾಸಾಯನಿಕ ನಮ್ಮ ಸಂತೋಷ, ತೃಪ್ತಿಗೆ ಅಗತ್ಯವಾದದ್ದು. ಉತ್ತಮ ಕೌಟುಂಬಿಕ, ಸ್ನೇಹ ಹಾಗೂ ಸಾಮಾಜಿಕ ಸಂಬಂಧಗಳು, ಕಲೆ, ಸಾಹಿತ್ಯ, ಕ್ರೀಡೆ ಮುಂತಾದವುಗಳು ಮಾನವ ತನ್ನ ವಿಕಾಸದ ದಾರಿಯಲ್ಲಿ ಕಂಡುಕೊಂಡಿರುವ ಡೊಪೊಮೈನ್ ಸೃಜನೆಯ ಮಾರ್ಗಗಳು. ಆದರೆ, ನಗರ ಕೇಂದ್ರಿತ ಬದುಕಿನತ್ತ ಹೊರಳಿಕೊಂಡ ಮನುಷ್ಯ ಏಕಾಂಗಿತನದ ಅನಿವಾರ್ಯತೆಯನ್ನು ಎದುರಿಸಬೇಕಾಯಿತು. ಇಂತಹ ಏಕಾಂಗಿತನವನ್ನು ನೀಗಿಕೊಂಡು ಡೊಪೊಮೈನ್ ಉತ್ಪಾದಿಸಲು ಮೊದಲ ಹಂತದಲ್ಲಿ ಹಣ ಮತ್ತು ಅದರಿಂದ ಕೊಳ್ಳಬಹುದಾದ ವಸ್ತುಗಳು ಮತ್ತು ಸೇವೆಗಳು ಸಹಾಯ ಮಾಡಿದವು. ಸಂಪರ್ಕ ಕ್ರಾಂತಿಯ ನಂತರ ಡಿಜಿಟಲ್ ಜಗತ್ತು ನಮ್ಮ ಕೈಬೆರಳಿನ ತುದಿಯಲ್ಲಿ ಕುಣಿಯತೊಡಗಿತು; ಕಾರ್ಪೊರೇಟ್‌ಗಳಿಗೆ ಇದರ ನಶೆಯತ್ತ ಜನರನ್ನು ಸೆಳೆದು ಖಜಾನೆ ತುಂಬಿಕೊಳ್ಳುವ ದಾರಿಗಳು ಕಂಡವು.

ಒಂದು ಮೊಬೈಲ್ ಫೋನ್, ಗೇಮಿಂಗ್ ಆ್ಯಪ್‌ಗಳು, ಸಾಮಾಜಿಕ ಮಾಧ್ಯಮ, ಮುಂತಾದವುಗಳ ವಿನ್ಯಾಸವನ್ನು ಎಂಜಿನಿಯರಿಂಗ್ ತಜ್ಞರಷ್ಟೇ ಮಾಡುವುದಿಲ್ಲ. ಅವರಿಗೆ ಸಹಾಯ ಮಾಡಲು ನರವಿಜ್ಞಾನಿಗಳು, ಮನಃಶಾಸ್ತ್ರಜ್ಞರು ಮುಂತಾದ ವಿಜ್ಞಾನದ ವಿವಿಧ ಶಾಖೆಗಳ ತಜ್ಞರು ಇರುತ್ತಾರೆ. ಇವರೆಲ್ಲ ಸೇರಿ ತಮ್ಮ ವಸ್ತು ಅಥವಾ ಸೇವೆಯನ್ನು ಆಕರ್ಷಕ ಆಗಿ ರೂಪಿಸಿ, ಮಿದುಳಿನಲ್ಲಿ ಡೊಪೊಮೈನ್ ಮಟ್ಟವನ್ನು ಹೆಚ್ಚಿಸುವುದು ಹೇಗೆ ಎಂದು ನಿರ್ಧರಿಸುತ್ತಾರೆ. ಮನುಷ್ಯನ ಮನೋದೈಹಿಕ ಆರೋಗ್ಯ ವೃದ್ಧಿಸಲು ಆಗುವ ನರವಿಜ್ಞಾನ, ಜೀವವಿಜ್ಞಾನ, ಮನಃಶಾಸ್ತ್ರದ ಸಂಶೋಧನೆಗಳೆಲ್ಲ ಕಾರ್ಪೊರೇಟ್ ಧನದಾಹಕ್ಕೆ ಬಳಕೆಯಾಗುತ್ತಿವೆ ಎನ್ನುವುದನ್ನು ಗಮನಿಸಬೇಕು.

ತಮ್ಮ ಉತ್ಪನ್ನಗಳು ಜನ ಸಮುದಾಯದ ಆರೋಗ್ಯಕ್ಕೆ ಅಪಾಯಕಾರಿ ಆಗಬಲ್ಲವು ಎನ್ನುವುದು ಕಂಪನಿಗಳಿಗೆ ಗೊತ್ತಿಲ್ಲದಿರುವುದೇನಲ್ಲ. ಇನ್‌ಸ್ಟಾಗ್ರಾಮ್ ಬಳಕೆ ಹದಿವಯಸ್ಸಿನ ಹೆಣ್ಣುಮಕ್ಕಳನ್ನು ಆತ್ಮಹತ್ಯೆಗೆ ಪ್ರಚೋದಿಸುತ್ತಿದೆ ಎಂದು ಫೇಸ್‌ಬುಕ್ ಕಂಪನಿಯ (ಇನ್‌ಸ್ಟಾಗ್ರಾಮ್ ಈಗ ಫೇಸ್‌ಬುಕ್ ಒಡೆತನದಲ್ಲಿದೆ) ಆಂತರಿಕ ಸಮೀಕ್ಷೆ, ಸಂಶೋಧನೆಗಳೇ ತಿಳಿಸಿವೆ. ಅದನ್ನೆಲ್ಲ ಮರೆಮಾಚಿದ ಫೇಸ್‌ಬುಕ್, ಅಮೆರಿಕದ ಸೆನೆಟರ್‌ಗಳಿಗೆ ತಪ್ಪುಮಾಹಿತಿ ನೀಡಿತ್ತು ಎಂದು ವಾಲ್‌ಸ್ಟ್ರೀಟ್ ಜರ್ನಲ್ 2021ರ ಸೆಪ್ಟೆಂಬರ್ 14ರಂದು ವರದಿ ಪ್ರಕಟಿಸಿತ್ತು. ಇನ್‌ಸ್ಟಾಗ್ರಾಮ್‌ನಲ್ಲಿ ಫೋಟೊಗಳನ್ನು ಹಂಚಿಕೊಂಡು ಮೆಚ್ಚುಗೆ ಗಿಟ್ಟಿಸುವ ಪ್ರಯತ್ನದಲ್ಲಿ ಯುವತಿಯರು ಅನಗತ್ಯ ಆಗಿ ತಮ್ಮ ದೇಹದ ಬಗೆಗೆ ಕೀಳರಿಮೆ ಮೂಡಿಸಿಕೊಂಡು ಖಿನ್ನತೆಯಿಂದ ನರಳುತ್ತಾರೆ ಎನ್ನುವುದಕ್ಕೆ ಪುರಾವೆಗಳು ಇದ್ದರೂ, ಇಂದಿಗೂ ಅದೇ ವ್ಯಸನವನ್ನು ಅಂಟಿಸುವುದು ಮುಂದುವರಿದಿದೆ.

ದೊಡ್ಡ ದೊಡ್ಡ ಕಾರ್ಪೊರೇಟ್ ಮುಖ್ಯಸ್ಥರು ತಮ್ಮ ಮಕ್ಕಳನ್ನು ‘ಪರದೆ ಸಮಯ’ದಿಂದ ಹೇಗೆ ಸುರಕ್ಷಿತವಾಗಿ ಇಡುತ್ತಾರೆ ಗೊತ್ತೇ? ಆ್ಯಪಲ್‌ನ ಮಾಜಿ ಸಿಇಒ ಸ್ಟೀವ್ ಜಾಬ್ಸ್ ತಮ್ಮದೇ ಉತ್ಪನ್ನವಾದ ಐಪಾಡ್ ಅನ್ನು ತಮ್ಮ ಮಕ್ಕಳಿಗೆ ಬಳಸಲು ಅವಕಾಶ ಕೊಟ್ಟಿಲ್ಲವೆಂದು ಹೇಳಿದ್ದರು. ಮೈಕ್ರೊಸಾಫ್ಟ್‌ನ ಮುಖ್ಯಸ್ಥ ಬಿಲ್ ಗೇಟ್ಸ್ ಅವರ ಮಕ್ಕಳಿಗೆ 14 ವರ್ಷಗಳಾಗುವವರೆಗೆ ಮೊಬೈಲ್ ಬಳಸಲು ಅವಕಾಶ ಕೊಟ್ಟಿರಲಿಲ್ಲ. ಸ್ನ್ಯಾಪ್‌ಚಾಟ್‌ನ ಸ್ಥಾಪಕ ಇವಾನ್ ಸ್ಪೀಗಲ್ ತನ್ನ ಮಕ್ಕಳಿಗೆ ವಾರಕ್ಕೆ ಒಂದೂವರೆ ಗಂಟೆ ಪರದೆ ಸಮಯಕ್ಕೆ ಅವಕಾಶ ನೀಡುತ್ತಿದ್ದ. ಗೂಗಲ್‌ನ ಸುಂದರ್ ಪಿಚ್ಚೈ ತಮ್ಮ ಮಕ್ಕಳನ್ನು ಟಿ.ವಿ.ಯಿಂದ ದೂರವಿರಿಸಿದ್ದರು.

ಇವತ್ತು ರಸ್ತೆಯಲ್ಲಿ, ಹೋಟೆಲ್‌ಗಳಲ್ಲಿ, ಬಸ್, ರೈಲು, ವಿಮಾನಗಳಲ್ಲಿ ಎಲ್ಲರೂ ಮೊಬೈಲ್‌ನ್ನು ಸ್ಕ್ರೋಲ್ ಮಾಡುತ್ತಲೇ ಇರುತ್ತಾರೆ. ತಮ್ಮ ಸಂಗಾತಿ ಲೈಂಗಿಕ ಕ್ರಿಯೆ ನಡೆಸುವಾಗ ಅಥವಾ ಅದು ಮುಗಿದ ಮರುಕ್ಷಣ ಮೊಬೈಲ್‌ನತ್ತ ಕೈಚಾಚುತ್ತಾರೆ ಎಂದು ಸಹಾಯ ಕೇಳಲು ಬಂದ ಕೆಲವರು ಹೇಳಿದ್ದಾರೆ! ಮಾನವೀಯ ಸಂಬಂಧದ ರುಚಿ ಕಳೆದುಕೊಂಡಿರುವ ಮನುಷ್ಯ ಯಂತ್ರಗಳೊಂದಿಗೆ ವ್ಯವಹರಿಸುತ್ತ, ಏಕಾಂಗಿತನದ ಅಪಾಯ ಆಹ್ವಾನಿಸಿಕೊಳ್ಳುತ್ತಿದ್ದಾನೆ.

ದುರದೃಷ್ಟದ ಸಂಗತಿಯೆಂದರೆ, ಡಿಜಿಟಲ್ ವ್ಯಸನ ನಿಯಂತ್ರಣಕ್ಕೆ ಸ್ಪಷ್ಟವಾದ ಕಾನೂನು ಅಥವಾ ಮಾರ್ಗಸೂಚಿ ರೂಪಿಸುವುದರ ಕುರಿತು ಸರ್ಕಾರಗಳು ಯೋಚಿಸುತ್ತಿಲ್ಲ. ಹಾಗಾಗಿ, ಸಾಮಾಜಿಕ ಕಾಳಜಿಯುಳ್ಳವರೆಲ್ಲರೂ ಇದರ ಕುರಿತು ಜನಸಾಮಾನ್ಯರಲ್ಲಿ ಹೆಚ್ಚು ಅರಿವು ಮೂಡಿಸಬೇಕು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸೈಬರ್ ಅಪರಾಧಗಳು ವಿದೇಶಿ ನೆಲ, ಅನೂಹ್ಯ ಜಾಲ

ದೇಶದಲ್ಲಿ ಡಿಜಿಟಲ್ ವಂಚನೆ ಪ್ರಕರಣಗಳು ವಿಪರೀತ ಹೆಚ್ಚಳವಾಗಿವೆ. ಈ ಸೈಬರ್ ಕಳ್ಳರದ್ದು ಅಂತರರಾಜ್ಯ ಜಾಲ. ದೇಶದ ಕೆಲವು ಜಿಲ್ಲೆಗಳು ಡಿಜಿಟಲ್ ವಂಚಕರಿಂದ ಕುಖ್ಯಾತಿ ಗಳಿಸಿವೆ. ಕುಗ್ರಾಮಗಳ ಅರೆಶಿಕ್ಷಿತರು, ಅಶಿಕ್ಷಿತರು ದೂರದ ನಗರ/ಪಟ್ಟಣಗಳಲ್ಲಿರುವ ಜನರ ಖಾತೆಗಳಿಂದ ಕೋಟ್ಯಂತರ ರೂಪಾಯಿಗಳನ್ನು ದೋಚುತ್ತಿದ್ದಾರೆ. ಚೀನಾ, ಮ್ಯಾನ್ಮಾರ್‌ನಂಥ ರಾಷ್ಟ್ರಗಳ ವಂಚಕರ ಜಾಲಗಳೂ ಭಾರತದಲ್ಲಿ ಡಿಜಿಟಲ್ ವಂಚನೆಯಲ್ಲಿ ತೊಡಗಿವೆ. ಭಾರತೀಯರನ್ನು ಉದ್ಯೋಗದ ಆಮಿಷ ಒಡ್ಡಿ ಕರೆಸಿಕೊಂಡು ಅವರನ್ನು ಸೈಬರ್ ಗುಲಾಮರನ್ನಾಗಿ ಮಾಡಿಕೊಂಡು ಅಕ್ರಮಗಳಿಗೆ ಬಳಸುವ ಜಾಲಗಳು ಆಗ್ನೇಯ ಏಷ್ಯಾದಲ್ಲಿ ಸಕ್ರಿಯವಾಗಿವೆ

• ಬಿ.ವಿ.ಶ್ರೀನಾಥ್

ದೇಶದಲ್ಲಿ 2021ರಿಂದ 2023ರ ನಡುವೆ ಡಿಜಿಟಲ್ ವಂಚನೆ ಪ್ರಕರಣಗಳು ಶೇ 60ರಷ್ಟು ಹೆಚ್ಚಾಗಿವೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ ದತ್ತಾಂಶ ಉಲ್ಲೇಖಿಸಿ ಕೇಂದ್ರ ಸರ್ಕಾರ ಹೇಳಿದೆ. ಈ ಪೈಕಿ ಆರ್ಥಿಕ ವಂಚನೆಗಳ ಪ್ರಮಾಣವು (ಶೇ 39) ಅಧಿಕವಾಗಿದೆ. ಕರ್ನಾಟಕವು ಸೈಬರ್ ಅಪರಾಧ ಪ್ರಕರಣಗಳಲ್ಲಿ ಮುಂಚೂಣಿಯಲ್ಲಿದ್ದರೆ, ಅದರ ನಂತರದ ಸ್ಥಾನದಗಳಲ್ಲಿ ತೆಲಂಗಾಣ, ಉತ್ತರ ಪ್ರದೇಶ ಇವೆ.

ಸೈಬರ್ ಪೊಲೀಸರು ದೇಶದಾದ್ಯಂತ ವಂಚಕರ ಪತ್ತೆಗೆ ಪ್ರಯತ್ನಿಸುತ್ತಲೇ ಇದ್ದಾರೆ. ಆದರೆ, ಇದೊಂದು ಬೃಹತ್ ಜಾಲವಾಗಿದ್ದು, ಅತ್ಯಂತ ಕ್ಷಿಪ್ರವಾಗಿ ವ್ಯಾಪಿಸುತ್ತಿದೆ. ಡಿಜಿಟಲ್ ವಂಚನೆಗೆ ಸಂಬಂಧಿಸಿದಂತೆ ಕೇಂದ್ರ ತನಿಖಾ ಸಂಸ್ಥೆಯು (ಸಿಬಿಐ) ಡಿಸೆಂಬರ್ 14ರಂದು 17 ಮಂದಿಯ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದೆ. 111 ನಕಲಿ (ಶೆಲ್) ಕಂಪನಿಗಳು ಈ ಪಟ್ಟಿಯಲ್ಲಿವೆ. ಇವು ಭಾರತೀಯರ ₹1,000 ಕೋಟಿಗೂ ಹೆಚ್ಚು ಮೊತ್ತವನ್ನು ಕೊಳ್ಳೆ ಹೊಡೆದಿವೆ. ನಾಲ್ವರು ಚೀನಾ ಪ್ರಜೆಗಳು ಕೂಡ ವಂಚಕರ ಪಟ್ಟಿಯಲ್ಲಿದ್ದಾರೆ. ಇದೊಂದು ಅಂತರರಾಷ್ಟ್ರೀಯ ಜಾಲ ಎನ್ನುವುದಕ್ಕೆ ಇಂಥ ಹಲವು ನಿದರ್ಶನಗಳು ಪೊಲೀಸರಿಗೆ ಲಭ್ಯವಾಗಿವೆ. ನಕಲಿ ನಿರ್ದೇಶಕರು, ತಪ್ಪು ವಿಳಾಸ, ತಿರುಚಿದ ದಾಖಲೆಗಳ ಮೂಲಕ ಶೆಲ್ ಕಂಪನಿಗಳನ್ನು ಆರಂಭಿಸಿರುವುದು ತನಿಖೆಯ ವೇಳೆ ಪತ್ತೆಯಾಗಿದೆ. ದೆಹಲಿಯಲ್ಲಿ ವಂಚಕರು ಸುಸಜ್ಜಿತ ಕಾಲ್ ಸೆಂಟರ್‌ಗಳನ್ನು ನಡೆಸುತ್ತಿದ್ದುದು ಕಂಡುಬಂದಿದೆ.

ಸೈಬರ್ ಕಳ್ಳರು 2024ರಲ್ಲಿ ಹೀಗೆ ದೋಚಿದ ಹಣ ₹22,845 ಕೋಟಿ. ಇಷ್ಟೊಂದು ಬೃಹತ್ ಪ್ರಮಾಣದ ಹಣ ಎಲ್ಲಿ ಹೋಗುತ್ತಿದೆ, ಸೈಬರ್ ವಂಚನೆ ಮಾಡುವವರು ಯಾರು, ಬ್ಯಾಂಕ್ ಖಾತೆಗಳ ಮೂಲಕ ಅವರನ್ನು ಪತ್ತೆ ಹಚ್ಚಲು ಸಾಧ್ಯವಿಲ್ಲವೇ ಎನ್ನುವಂಥ ಪ್ರಶ್ನೆಗಳು ಮೂಡುವುದು ಸಹಜ.

ತಂತ್ರಜ್ಞಾನ ಮುಂದುವರಿದಿದ್ದರೂ ಬ್ಯಾಂಕಿಂಗ್ ವ್ಯವಸ್ಥೆ ಸರ್ಕಾರದ ಸ್ವಾಧೀನದಲ್ಲಿ ಇದ್ದರೂ ಡಿಜಿಟಲ್ ವಂಚನೆಗಳನ್ನು ತಡೆಯುವಲ್ಲಿ ಪೊಲೀಸರು ಯಶಸ್ವಿಯಾಗಿರುವುದು ಅತ್ಯಲ್ಪ ಮಾತ್ರವೇ. ಇದಕ್ಕೆ ಸೈಬರ್ ಕಳ್ಳತನಗಳ ಸಂಕೀರ್ಣ ಮಾರ್ಗವೇ ಕಾರಣ ಎನ್ನಲಾಗುತ್ತಿದೆ.

ದೇಶದಲ್ಲಿ ದಾಖಲಾಗಿರುವ ಡಿಜಿಟಲ್ ವಂಚನೆ ಪ್ರಕರಣಗಳು

ವರ್ಷ	ಪ್ರಕರಣಗಳು
2019	44,735
2020	50,035
2021	52,974
2022	65,893
2023	86,420

ಕರ್ನಾಟಕದಲ್ಲಿ ದಾಖಲಾಗಿರುವ ಡಿಜಿಟಲ್ ವಂಚನೆಗಳು

ವರ್ಷ	ಪ್ರಕರಣಗಳು
2019	12,020
2020	10,741
2021	8,136
2022	12,556
2023	21,889

ಮೂಲ: ಎನ್‌ಸಿಆರ್‌ಬಿ

ಸಂತ್ರಸ್ತರಿಗೆ ಪರಿಹಾರ: ‘ಸುಪ್ರೀಂ’ ಸಲಹೆ

ದೇಶದ ಸೈಬರ್ ಅಪರಾಧಗಳ ಬಗ್ಗೆ ಸಿಬಿಐ, ಸುಪ್ರೀಂ ಕೋರ್ಟ್‌ಗೆ ಮುಚ್ಚಿದ ಲಕೋಟೆಯಲ್ಲಿ ಎರಡು ಸಂಪುಟಗಳ ವರದಿ ಸಲ್ಲಿಸಿತ್ತು. ಭಾರತೀಯರು ಒಟ್ಟು ₹3,000 ಕೋಟಿಯನ್ನು ಸೈಬರ್ ವಂಚನೆಯಿಂದ ಕಳೆದುಕೊಂಡಿದ್ದಾರೆ ಎಂದು ಉಲ್ಲೇಖಿಸಲಾಗಿತ್ತು. ಅದನ್ನು ಅವಲೋಕಿಸಿದ್ದ ನ್ಯಾಯಾಲಯವು, ತನಿಖಾ ಸಂಸ್ಥೆಗಳ ಕೈ ಬಲಪಡಿಸಲು ತಾನು ಕಠಿಣ ಆದೇಶಗಳನ್ನು ಪ್ರಕಟಿಸುವುದಾಗಿ ಇದೇ ನವೆಂಬರ್ 3ರಂದು ಹೇಳಿತ್ತು. ಪ್ರಕರಣಗಳಲ್ಲಿ ಹಣ ಕಳೆದುಕೊಂಡವರಿಗೆ ಪರಿಹಾರ ಖಾತರಿಪಡಿಸುವ ಬಗ್ಗೆ ನ್ಯಾಯಾಲಯ ಸಹಾಯಕರ ಶಿಫಾರಸುಗಳನ್ನು ಪರಿಶೀಲಿಸುವಂತೆ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಸೂಚಿಸಿತ್ತು. ಸೈಬರ್ ವಂಚನೆಯ ಮೂಲಕ ವಿದೇಶಗಳ ಪಾಲಾಗುತ್ತಿರುವ ಬೃಹತ್ ಮೊತ್ತದ ಬಗ್ಗೆ ನ್ಯಾಯಾಲಯವು ಅಚ್ಚರಿ ವ್ಯಕ್ತಪಡಿಸಿತ್ತು. ಬ್ಯಾಂಕ್‌ಗಳು ರಕ್ಷಣಾ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸೂಚಿಸಿದ್ದ ಕೋರ್ಟ್, ವಂಚಕರ ಪತ್ತೆಗೆ ಎಐ ತಂತ್ರಜ್ಞಾನ ಅಳವಡಿಸಿಕೊಳ್ಳುವಂತೆ ಆರ್‌ಬಿಐಗೆ ಸೂಚಿಸಿತ್ತು.

ಕುಖ್ಯಾತಿ ಪಡೆದ ಜಿಲ್ಲೆಗಳು

ದೇಶದ ಕೇವಲ 10 ಜಿಲ್ಲೆಗಳಿಂದಲೇ ಶೇ 80ರಷ್ಟು ಸೈಬರ್ ಕಳ್ಳರು ಕಾರ್ಯಾಚರಣೆ ನಡೆಸುತ್ತಿದ್ದಾರೆ ಎಂದು ಕಾನ್ಪುರ ಐಐಟಿ ನಡೆಸಿದ್ದ ಅಧ್ಯಯನದಲ್ಲಿ ಪತ್ತೆಯಾಗಿತ್ತು. ರಾಜಸ್ಥಾನದ ಭರತ್‌ಪುರ, ಅಲ್ವಾರ್, ಉತ್ತರ ಪ್ರದೇಶದ ಮಥುರಾ, ಜಾರ್ಖಂಡ್‌ನ ದೇವಗಢ, ಜಾಮ್‌ತಾಡ, ಬೊಕಾರೊ, ಗಿರಿಧ್, ಕರಮತಂಡ್, ಹರಿಯಾಣದ ಗುರುಗ್ರಾಮ್, ನುಹ್ (ಮೇವಾತ್) ಜಿಲ್ಲೆಗಳು ಸೈಬರ್ ಕಳ್ಳರ ನೆಲೆಗಳಾಗಿದ್ದವು. ಹೆಚ್ಚಿನ ವಂಚಕರು ಅರೆಶಿಕ್ಷಿತರು ಇಲ್ಲವೇ ಅಶಿಕ್ಷಿತರು. ಹೈಸ್ಕೂಲು, ಕಾಲೇಜು ತೊರೆದವರು ತಮ್ಮ ಡಿಜಿಟಲ್ ಜ್ಞಾನದಿಂದ ಅಲ್ಪಕಾಲದಲ್ಲಿಯೇ ಅಪಾರ ಸಂಪತ್ತು ಗಳಿಸಿದ್ದಾರೆ. ಅನೇಕರು ಭವ್ಯ ಮಹಲುಗಳನ್ನು ಕಟ್ಟಿಕೊಂಡಿದ್ದೂ ವರದಿಯಾಗಿವೆ.

ಪೊಲೀಸರು ನಿರ್ದಿಷ್ಟವಾಗಿ ಕಾರ್ಯಾಚರಣೆ ಆರಂಭಿಸಿದ್ದರಿಂದ ಇತ್ತೀಚೆಗೆ ಈ ಜಿಲ್ಲೆಗಳಲ್ಲಿ ಸೈಬರ್ ಕಳ್ಳರ ಸಂಖ್ಯೆ ಕಡಿಮೆಯಾಗಿದ್ದು, ಈ ರಾಜ್ಯಗಳ ಇತರೆ ಕೆಲ ಜಿಲ್ಲೆಗಳಲ್ಲಿ ಅವರ ಸಂಖ್ಯೆ ಹೆಚ್ಚಿದೆ. ಜತೆಗೆ, ಉತ್ತರ ಪ್ರದೇಶ, ಬಿಹಾರ, ದೆಹಲಿ, ಅಸ್ಸಾಂ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶದ ಕೆಲವು ಜಿಲ್ಲೆಗಳಲ್ಲಿಯೂ ಈ ಪ್ರವೃತ್ತಿ ಹೆಚ್ಚಾಗಿದೆ ಎನ್ನಲಾಗಿದೆ.

ಬೆಂಗಳೂರಿನಲ್ಲಿ ದಾಖಲಾದ ವಿವಿಧ ವಂಚನೆ ಪ್ರಕರಣಗಳ ಮೊತ್ತ (2024)



ಕರ್ನಾಟಕದಲ್ಲಿ 22 ಸಾವಿರ ಪ್ರಕರಣಗಳು

ಕರ್ನಾಟಕದಲ್ಲಿ 2023ರಲ್ಲಿ ಸೈಬರ್ ಅಪರಾಧಗಳಿಗೆ ಸಂಬಂಧಿಸಿದ 22,255 ಪ್ರಕರಣಗಳು ವರದಿಯಾಗಿದ್ದರೆ, 2024ರಲ್ಲಿ ಅವುಗಳ ಪ್ರಮಾಣದಲ್ಲಿ ಅಲ್ಪ ಹೆಚ್ಚಳವಾಗಿತ್ತು (22,479). 2024ರಲ್ಲಿ ಡಿಜಿಟಲ್ ವಂಚನೆಯ ಪ್ರಮಾಣ ₹1,995 ಕೋಟಿ ಇದ್ದರೆ, 2025ರಲ್ಲಿ (ಸೆಪ್ಟೆಂಬರ್‌ವರೆಗೆ) ಈ ಮೊತ್ತವು ₹1,543 ಕೋಟಿ ಆಗಿದೆ.

ಡಿಜಿಟಲ್ ಅರೆಸ್ಟ್ ಪ್ರಕರಣಗಳಲ್ಲಿ ಕರ್ನಾಟಕದ ಜನರು ಮೂರು ವರ್ಷಗಳಲ್ಲಿ ₹312.5 ಕೋಟಿ ಕಳೆದುಕೊಂಡಿದ್ದಾರೆ. ಈ ಪೈಕಿ ₹24.86 ಕೋಟಿ ವಶಪಡಿಸಿಕೊಳ್ಳಲಾಗಿದ್ದು, ₹18.33 ಕೋಟಿ ಸಂತ್ರಸ್ತರಿಗೆ ಹಿಂದಿರುಗಿಸಲಾಗಿದೆ.

ಆರಂಭದಲ್ಲಿ, ಅಂದರೆ 2023ರಲ್ಲಿ, 147 ಡಿಜಿಟಲ್ ಅರೆಸ್ಟ್ ಪ್ರಕರಣಗಳು ವರದಿಯಾಗಿದ್ದವು; ಸಂತ್ರಸ್ತರು ₹16.66 ಕೋಟಿ ಕಳೆದುಕೊಂಡಿದ್ದರು. 2024ರಲ್ಲಿ ಪ್ರಕರಣಗಳಲ್ಲಿ ವಿಪರೀತ ಹೆಚ್ಚಳವಾಗಿತ್ತು. 874 ಪ್ರಕರಣಗಳು ವರದಿಯಾದರೆ, ₹151.25 ಕೋಟಿಯನ್ನು ಸೂರೆಹೊಡೆದಿದ್ದರು. 2025ರಲ್ಲಿ ಪ್ರಕರಣಗಳ ಸಂಖ್ಯೆ ಕುಸಿದಿದ್ದರೂ ಸಂತ್ರಸ್ತರು ಕಳೆದುಕೊಂಡ ಮೊತ್ತ ಹೆಚ್ಚು ಕಡಿಮೆ ಹಿಂದಿನ ವರ್ಷದಷ್ಟೇ (₹144.59) ಇದೆ.

ಬ್ಯಾಂಕ್‌ಗಳ ಮೂಲಕ ಅಕ್ರಮ ವ್ಯವಹಾರ

ಮೊಬೈಲ್ ಸಿಮ್ ಕಾರ್ಡ್‌ಗಳು ಮತ್ತು ಬ್ಯಾಂಕ್ ಖಾತೆಗಳು ಡಿಜಿಟಲ್ ವಂಚನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ನಕಲಿ ದಾಖಲೆಗಳ ಮೂಲಕ ಸಿಮ್ ಕಾರ್ಡ್‌ಗಳನ್ನು ಪಡೆದು ಅವುಗಳನ್ನು ಅಕ್ರಮಕ್ಕೆ ಬಳಸಲಾಗುತ್ತಿದೆ. 2024-25ರ ನಡುವೆ ಸೈಬರ್ ವಂಚನೆಗೆ ಬಳಕೆಯಾಗುತ್ತಿದ್ದ 9.6 ಲಕ್ಷ ಸಿಮ್ ಕಾರ್ಡ್‌ಗಳನ್ನು ನಿರ್ಬಂಧಿಸಲಾಗಿದೆ.

ಬ್ಯಾಂಕ್ ಖಾತೆಗಳದ್ದೂ ಇದೇ ಕಥೆ. ಹಣ ಅಕ್ರಮ ವರ್ಗಾವಣೆಗೆ ಲಕ್ಷಾಂತರ ಬ್ಯಾಂಕ್ ಖಾತೆಗಳು (ಮ್ಯೂಲ್ ಅಕೌಂಟ್ಸ್) ಬಳಕೆಯಾಗುತ್ತಿವೆ. ಭಾರತದ ಸೈಬರ್ ಅಪರಾಧಗಳ ಸಮನ್ವಯ ಕೇಂದ್ರದ (ಐ4ಸಿ) ಮಾಹಿತಿಯ ಪ್ರಕಾರ, ಪ್ರತಿ ನಿತ್ಯ ಇಂಥ 4000 ಖಾತೆಗಳು ಪತ್ತೆಯಾಗುತ್ತಿವೆ. ಸೈಬರ್ ವಂಚನೆಗೆ ಬಳಕೆಯಾಗುತ್ತಿದ್ದ 700 ಬ್ಯಾಂಕ್ ಶಾಖೆಗಳ ಇಂಥ 8,50,000 ಖಾತೆಗಳನ್ನು ಇತ್ತೀಚೆಗೆ ನಿರ್ಬಂಧಿಸಲಾಗಿದೆ.

ಕಾರ್ಪೊರೇಟ್ ಶೈಲಿಯಲ್ಲಿ ಕಳ್ಳತನ

ಇತ್ತೀಚೆಗೆ ದೇಶದ ಒಳಗಿನ ಸೈಬರ್ ಕಳ್ಳರನ್ನು ವಿದೇಶಗಳ ಕಾರ್ಪೊರೇಟ್ ಶೈಲಿಯ ವಂಚಕರು ಮೀರಿಸಿದ್ದಾರೆ ಎನ್ನುವ ವರದಿಗಳಿವೆ. ಶೇ 46ರಷ್ಟು ಸೈಬರ್ ಅಪರಾಧಗಳಿಗೆ ವಿದೇಶಗಳಿಂದ ಕಾರ್ಪೊರೇಟ್ ಶೈಲಿಯಲ್ಲಿ ಕಾರ್ಯಾಚರಿಸುತ್ತಿರುವ ವಂಚಕ ಜಾಲಗಳೇ ಕಾರಣ ಎನ್ನಲಾಗಿದೆ. ಆಗ್ನೇಯ ಏಷ್ಯಾದ ಮ್ಯಾನ್ಮಾರ್, ಕಾಂಬೋಡಿಯಾ, ಲಾವೋ ದೇಶಗಳು ಇದರಲ್ಲಿ ಮುಂಚೂಣಿಯಲ್ಲಿವೆ.

ಈ ದೇಶಗಳು ಉದ್ಯೋಗದ ಭರವಸೆಯೊಂದಿಗೆ ಭಾರತದ ಯುವಕರನ್ನು ಸೆಳೆಯುತ್ತವೆ. ಉದ್ಯೋಗಕ್ಕೆ ಬಂದವರನ್ನು ದೊಡ್ಡ ಕಟ್ಟಡಗಳಲ್ಲಿ ಕೂಡಿಹಾಕಿ ದೈಹಿಕ, ಮಾನಸಿಕ ಚಿತ್ರಹಿಂಸೆ ನೀಡಿ, ಬಲವಂತದಿಂದ ಅವರನ್ನು ಸೈಬರ್ ಅಪರಾಧಗಳಿಗೆ ಬಳಸಲಾಗುತ್ತದೆ. ಇಂಥ ದೇಶಗಳಿಗೆ ಭಾರತದ ಯುವಕರನ್ನು ಪೂರೈಸುವ ಭಾರತದ ಏಜೆಂಟರ ಜಾಲವನ್ನು ಭೇದಿಸಿದ್ದ ಸಿಬಿಐ ಇತ್ತೀಚೆಗೆ 13 ಮಂದಿ ವಂಚಕರ ವಿರುದ್ಧ ದೋಷಾರೋಪ ಪಟ್ಟಿ ದಾಖಲಿಸಿದೆ. ಆಗ್ನೇಯ ಏಷ್ಯಾ ರಾಷ್ಟ್ರಗಳಲ್ಲಿ ‘ಸೈಬರ್ ಗುಲಾಮ’ರಾಗಿ ಕೆಲಸ ಮಾಡುತ್ತಿದ್ದ ಇಂಥ 6,700 ಭಾರತೀಯರನ್ನು ರಕ್ಷಿಸಲಾಗಿದೆ ಎಂದು ಕೇಂದ್ರ ಸರ್ಕಾರ ಲೋಕಸಭೆಯಲ್ಲಿ (ಡಿಸೆಂಬರ್, 11) ತಿಳಿಸಿದೆ.

ಗ್ರಾಮೀಣ ಪ್ರದೇಶದ ಬ್ಯಾಂಕ್‌ಗಳನ್ನೇ ವಂಚಕರು ಹೆಚ್ಚು ಗುರಿ ಮಾಡುತ್ತಾರೆ. ಕೆವೈಸಿ ಆಗದೇ ಇರುವ ಇಲ್ಲವೇ ನಕಲಿ ದಾಖಲೆಗಳನ್ನು ಕೆವೈಸಿ ಮಾಡಲಾಗಿರುವ ಖಾತೆಗಳನ್ನು ಸೈಬರ್ ವಂಚಕರು ಬಳಸುತ್ತಾರೆ. ಇಲ್ಲವೇ ಹಣ ನೀಡಿ ಬೇರೊಬ್ಬರ ಖಾತೆಗಳನ್ನು ಬಳಸುತ್ತಾರೆ. ನಿಷ್ಕ್ರಿಯವಾಗಿರುವ ವೈಯಕ್ತಿಕ ಖಾತೆಗಳು, ಕಂಪನಿ/ಸಂಸ್ಥೆಗಳ ಖಾತೆಗಳೂ ವಂಚಕರಿಗೆ ಬಳಕೆಯಾಗುತ್ತಿವೆ. ಸರ್ಕಾರಿ ಸ್ವಾಮ್ಯದ ಮತ್ತು ಖಾಸಗಿ ಕ್ಷೇತ್ರದ ಬ್ಯಾಂಕ್‌ಗಳೆರಡರಲ್ಲೂ ಇಂಥ ಖಾತೆಗಳು ಇರುವುದು ಪತ್ತೆಯಾಗಿದೆ. ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಇರುವ ಭ್ರಷ್ಟಾಚಾರದಂಥ ಹುಳುಕುಗಳನ್ನು ಬಳಸಿಕೊಂಡು ಅಕ್ರಮ ಎಸಗುತ್ತಿದ್ದಾರೆ.

ವಂಚನೆಯ ಹಣ ಖಾತೆಗೆ ಬಂದು ಬೀಳುತ್ತಿದ್ದಂತೆಯೇ ಅದನ್ನು ಮತ್ತೊಂದು ಖಾತೆಗೆ ವರ್ಗಾಯಿಸುತ್ತಾರೆ. ಹೀಗೆ ಕೆಲವೇ ನಿಮಿಷಗಳಲ್ಲಿ ಹಣ ಹಲವು ಖಾತೆಗಳನ್ನು ಬದಲಾಯಿಸುತ್ತದೆ. ಕೊನೆಗೆ, ಯಾವುದೋ ಒಂದು ಖಾತೆಯಿಂದ ಹಣವನ್ನು ನಗದು ಮಾಡಿಕೊಳ್ಳುತ್ತಾರೆ. ಕ್ರಿಪ್ಟೊ ಕರೆನ್ಸಿ ಮತ್ತಿತರ ಮಾರ್ಗಗಳ ಮೂಲಕವೂ ಹಣ ಚಲಾವಣೆಯಾಗುತ್ತಿದೆ. ಬಹುತೇಕ ಸಂದರ್ಭಗಳಲ್ಲಿ, ವಂಚಕರು ಒಮ್ಮೆ ಬಳಸಿದ ಖಾತೆಯನ್ನು ಮತ್ತೊಮ್ಮೆ ಬಳಸುವುದಿಲ್ಲ. ಸೈಬರ್ ವಂಚನೆ ನಡೆದ ಕೆಲವೇ ಗಂಟೆಗಳ ಒಳಗೆ ದೂರು ದಾಖಲಿಸಿದರೆ, ವಂಚಕರನ್ನು ಪತ್ತೆ ಮಾಡುವುದು ಸುಲಭ ಎಂದು ಪೊಲೀಸರು ಹೇಳುತ್ತಾರೆ.

ಸೈಬರ್ ವಂಚಕರಿಗೆ ಇಂಥ ಖಾತೆಗಳನ್ನು ಪೂರೈಸುವವರ ಜಾಲವೂ ಇದೆ. ಕಮಿಷನ್ ಆಧಾರದಲ್ಲಿ ಇಂಥ ಕೃತ್ಯಗಳಲ್ಲಿ ತೊಡಗಿದ್ದ ಮಧ್ಯಪ್ರದೇಶ, ಅಸ್ಸಾಂ ಮತ್ತು ಕರ್ನಾಟಕದ ಕಲಬುರಗಿಯ ಕೆಲವರು ಇತ್ತೀಚೆಗೆ ಪೊಲೀಸರ ಬಲೆಗೆ ಬಿದ್ದಿದ್ದರು.

ಆಧಾರ: ಪಿಟಿಐ, ಸಂಸತ್ ವೆಬ್‌ಸೈಟ್, ಸೆಂಟರ್ ಫಾರ್ ಸೈಬರ್ ಕ್ರೈಂ ಇನ್‌ವೆಸ್ಟಿಗೇಷನ್ ಟ್ರೈನಿಂಗ್ ಆ್ಯಂಡ್ ರಿಸರ್ಚ್, ಮಾಧ್ಯಮ ವರದಿಗಳು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಆಸ್ಟ್ರೇಲಿಯಾದ ಬೋಂಡಿ ಬೀಚ್‌ನಲ್ಲಿ ನಡೆದ ಭಯೋತ್ಪಾದನಾ ದಾಳಿಯ ಬಳಿಕ ಸಿಡ್ನಿಯಲ್ಲಿ ಮುಸ್ಲಿಮರು ಸಂಭ್ರಮಾಚರಣೆ ಮಾಡಿದ್ದಾರೆ ಎಂದು ಹೇಳಿಕೊಂಡು ಫೇಸ್‌ಬುಕ್ ಬಳಕೆದಾರರೊಬ್ಬರು ಒಂದಷ್ಟು ಜನರು ಪ್ರದೇಶವೊಂದರಲ್ಲಿ ಸೇರಿರುವ ಮತ್ತು ಮುಸ್ಲಿಂ ಧರ್ಮಗುರು ಒಬ್ಬರು ಮಾತನಾಡುತ್ತಿರುವ ವಿಡಿಯೊವನ್ನು ಪೋಸ್ಟ್ ಮಾಡಿದ್ದಾರೆ. ‘ಬೋಂಡಿ ಹತ್ಯಾಕಾಂಡದ ಬಗ್ಗೆ ಆಸ್ಟ್ರೇಲಿಯಾದಲ್ಲಿ ಮುಸ್ಲಿಮರು ಖುಷಿಯಾಗಿದ್ದಾರೆ. ಅದನ್ನು ಸಂಭ್ರಮಿಸಲು ಅವರು ಪಟಾಕಿಗಳನ್ನು ಕೂಡ ಹಚ್ಚಿದ್ದಾರೆ. ಪ್ರತಿ ದೇಶದಿಂದಲೂ ಅವರನ್ನು ಅರಬ್ ರಾಷ್ಟ್ರಗಳಿಗೆ ಗಡಿಪಾರು ಮಾಡಬೇಕು’ ಎಂದು ಪೋಸ್ಟ್‌ನಲ್ಲಿ ಹೇಳಲಾಗಿದೆ. ಆದರೆ, ಇದು ಸುಳ್ಳು.

ವಿಡಿಯೊದ ಕೀಫ್ರೇಮ್ ಒಂದನ್ನು ರಿವರ್ಸ್ ಇಮೇಜ್ ವಿಧಾನದ ಮೂಲಕ ಗೂಗಲ್ ಲೆನ್ಸ್ ಬಳಸಿ ಹುಡುಕಿದಾಗ ಇದೇ ವಿಡಿಯೊವನ್ನು ಹಲವರು ಹಂಚಿಕೊಂಡಿರುವುದು ಕಂಡು ಬಂತು. ಇನ್ನಷ್ಟು ಪರಿಶೀಲನೆ ನಡೆಸಿದಾಗ 2023ರ ಅಕ್ಟೋಬರ್ 9ರಂದು ಡೇವಿಡ್ ಆರ್ಥರ್ಟನ್ ಎಂಬ ‘ಎಕ್ಸ್’ ಬಳಕೆದಾರ ಇದೇ ವಿಡಿಯೊವನ್ನು ಪೋಸ್ಟ್ ಮಾಡಿರುವುದು ಸಿಕ್ಕಿತು. ಇದರ ಆಧಾರದಲ್ಲಿ ರಿವರ್ಸ್ ಇಮೇಜ್ ವಿಧಾನದಲ್ಲಿ ಹುಡುಕಾಡಿದಾಗ 2023ರ ಅಕ್ಟೋಬರ್ 9ರಂದು ಡೈಲಿ ಮೇಲ್ ಪ್ರಕಟಿಸಿದ್ದ ವರದಿ ಸಿಕ್ಕಿತು. ‘ನೂರಾರು ಯಹೂದಿಗಳನ್ನು ಹತ್ಯೆ ಮಾಡಿದ ಪ್ಯಾಲೆಸ್ಟೀನಿಯನ್ನರನ್ನು ಶೇಖ್ ಇಬ್ರಾಹಿಂ ಡಡೌನ್ ಎಂಬ ಮುಸ್ಲಿಂ ಮೌಲ್ವಿಯು ಪ್ರಾರ್ಥನೆಯ ಸಂದರ್ಭದಲ್ಲಿ ಹೊಗಳಿದರು’ ಎಂದು ವರದಿಯಲ್ಲಿತ್ತು. ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊವನ್ನೂ ಡೈಲಿ ಮೇಲ್ ಪ್ರಕಟಿಸಿತ್ತು. ಸ್ಕೈ ನ್ಯೂಸ್ ಆಸ್ಟ್ರೇಲಿಯಾ ತನ್ನ ಯೂಟ್ಯೂಬ್ ಚಾನೆಲ್‌ನಲ್ಲಿ ಅದೇ ದಿನ ಈ ವಿಡಿಯೊ ಪ್ರಕಟಿಸಿತ್ತು. ಎರಡು ವರ್ಷಗಳ ಹಿಂದಿನ ಸಂಭ್ರಮಾಚರಣೆ ವಿಡಿಯೊವನ್ನು ಬೋಂಡಿ ಬೀಚ್ ಪ್ರಕರಣಕ್ಕೆ ತಳಕುಹಾಕಲಾಗಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪದಬಂಧ 6261

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ತರ್ಕ ಮಾಡುತ್ತಿರುವ ವ್ಯಾಪಾರಿ (3)
5.ಕುಂತಿ ಪುತ್ರನ ಕಿವಿ! (2)
6.ಮನೆ ಇಲ್ಲಿದೆ (4)
7.ಮೂಡುಬಿದಿರೆಯಲ್ಲಿ ನಡೆದ 71 ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಇವರು ಹಂಪನಾಗರಾಜಯ್ಯ ಅವರ ಪತ್ನಿ (6)
9.ದುಸ್ತರದಲ್ಲೇ ಪದರವನ್ನು ನೋಡಿರಿ (2)
10.ಅಂಬುಧಿಯಲ್ಲಿ ಬಿದ್ದಿರುವ ಬಾಣ (2)
11.ತಾನಾಗಿ ಕಲ್ಪಿಸಿಕೊಂಡದ್ದು (6)
14.ಚಂದ್ರನನ್ನು ಹೀಗೂ ಕರೆವರು (4)
15.ಸಮತಟ್ಟಾದ ನೆಲ (2)
16.ವಿಲಾಸ ಪ್ರಿಯ ಇಲ್ಲಿದ್ದಾನೆ (3)

ಮೇಲಿಂದ ಕೆಳಕ್ಕೆ

1.ಬೇರೆ ಬೇರೆ ಜಾತಿಗಳು ಬೆರೆಯುವಿಕೆ (5)
2.ಕಾವ್ಯಾದಿಗಳ ಲಕ್ಷಣಗಳನ್ನು ಬಲ್ಲವನು ತಿರುಗಿದ್ದಾನಲ್ಲಾ! (4)
3.ನಾರಿ ಹಿಡಿದಿರುವ ತೆಂಗಿನಕಾಯಿ ಉಲ್ಟಾ ಪಲ್ಟಾ ಆಗಿದೆ (4)
4.ಜನರ ಹತ್ತಿರವಿರುವ ತಂದೆ (3)
8.ಬಲವುಳ್ಳ ತೀವ್ರವಾದ ಆಸೆ (3)
10.ಯಮನಿಗೆ ಯಮನಾಗಿರುವ ಶಿವ (5)
11.ನೀಲ ಕಮಲವನ್ನು ಹೀಗೂ ಹೇಳುವರು (4)
12.ಕರದಲ್ಲಿರುವ ಚಿನ್ನ (4)
13.ಪರಾಧೀನತೆ ಇಲ್ಲದಿರುವುದು (3)



6260ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಅನಘ 4.ಹಕೀಮ 5.ಸಹಪಾಠಿ 6.ರಾಯಭಾರ 8.3ಲ 10.ರವಿ 13.ಜಮಖಾನ 14.ಸತ್ಯಭಾಮೆ 15.ಯಾಚಕ 16.ಯೌವ್ವನ

ಮೇಲಿಂದ ಕೆಳಕ್ಕೆ:
1.ಅಹಮಹಮಿಕೆ 2.ಅಮರಾವತಿ 3.ಉಪಾಯ 5.ಸರದಾರ 7.ಐತಿಹಾಸಿಕತೆ 9.ಲವಾಜಮೆ 11.ವಿಮಾನಯಾನ 12.ಪ್ರತ್ಯಯ

ಸುಡೊಕು 6645

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

9		7					5	
			4		9	8		7
5		8					6	
		6	5			7		9
7				6	1		4	
	5		8			3		6
			3			4		2
	9							
6		4		9	5	1		3

6644 ಸುಡೊಕು

7	1	5	9	4	6	3	2	8
3	4	6	5	8	2	7	9	1
2	8	9	3	7	1	5	6	4
9	6	4	1	3	7	8	5	2
5	2	8	4	6	9	1	3	7
1	3	7	8	2	5	9	4	6
4	9	3	2	1	8	6	7	5
6	5	1	7	9	4	2	8	3
8	7	2	6	5	3	4	1	9

ದಯೆಯೇ ದೊಡ್ಡತನ ಹಗೆಯೇ ಸಣ್ಣತನ

ನುಡಿ ಬೆಳಗು

ದಾದಾಪೀರ್ ನವಿಲೇಹಾಳ್

‘ಮಾನವ ಜನ್ಮ ದೊಡ್ಡದು’, ಹೌದು. ಆದರೆ ಮನುಷ್ಯ ಜನ್ಮ ಹೇಗೆ ಯಾವಾಗ ದೊಡ್ಡದಾಗುತ್ತದೆ ಎಂದು ಯೋಚಿಸುವವರು ಕಡಿಮೆಯೇ. ಅತಿ ಎತ್ತರದ ಪ್ರತಿಮೆಗಳಿಂದ, ಬೃಹತ್ತಾದ ಕಟ್ಟಡಗಳಿಂದ ದೊಡ್ಡತನ ಸಾಧಿತವಾಗುತ್ತದೆ ಎಂದು ಭಾವಿಸುವ ಅವಿವೇಕವೇ ತುಂಬಿರುವ ವರ್ತಮಾನದಲ್ಲಿ ಮಾನವ ಜನ್ಮವನ್ನು ಎತ್ತರಿಸುವ ಸಾರ್ಥಕ ಪ್ರಯತ್ನಗಳು ವಿರಳವಾಗಿವೆ. ಅರಮನೆಯಿಂದ ಹೊರಗೆ ಹೋದ ಬುದ್ಧನ ಹಿರಿತನ ಮತ್ತು ಹೊರಗಿನಿಂದ ಅರಮನೆಗೆ ಬಂದು ಬಸವಣ್ಣ ಸಾಧಿಸಿದ ದೊಡ್ಡತನ ಬೇರೆ ಬೇರೆ ಕಾಲ, ಪ್ರದೇಶದ ವಿದ್ಯಮಾನಗಳಾಗಿರಬಹುದು. ಆಳದಲ್ಲಿ ಅವುಗಳ ಗತಿಶೀಲ ಗಮ್ಯ ಒಂದೇ ಆಗಿದೆ. ಸಮಾಜ ಅವರ ಚಿಕಿತ್ಸಕ ಸಂದೇಶವನ್ನು ನೀತಿ ಆದರ್ಶಗಳ ಸುವರ್ಣ ಚೌಕಟ್ಟಿನೊಳಗೆ ಅಡಗಿಸಿಟ್ಟು ದಿನನಿತ್ಯ ಅನುತ್ಪಾದಕ ಆರಾಧನೆಯಲ್ಲಿ ತೊಡಗಿದೆ. ಸಮಾನತೆಯನ್ನು ಸಾಮಾಜಿಕ ಅಧ್ಯಾತ್ಮದ ತತ್ವಕೇಂದ್ರವನ್ನಾಗಿ ರೂಪಿಸಿದ ಪ್ರಯೋಗಶೀಲತೆಯೇ ಅವರ ಹಿರಿತನಕ್ಕೆ ಪುರಾವೆ.

ಎಲ್ಲವೂ ಚೆನ್ನಾಗಿದ್ದಾಗ ಬದುಕು ಅರ್ಥವಾಗುವುದಿಲ್ಲ. ಇನ್ನೇನು ಜೀವನ ಮುಗಿಯುತ್ತಾ ಬಂದಿದೆ ಎನ್ನುವಾಗ ಅರ್ಥವಾಗುತ್ತದೆ. ಆದರೆ ಪ್ರಯೋಜನವಾಗುವುದಿಲ್ಲ. ಹಾಗಾಗಿ ಹಿರಿತನದ ಭ್ರಮೆಯಲ್ಲಿ ಜೀವನಯಾನ ಮುಗಿಸಬೇಕಾಗುತ್ತದೆ. ದೇಹಕ್ಕಾದ ವಯಸ್ಸಿನಿಂದ, ಗಳಿಸಿದ ಸಂಪತ್ತಿನಿಂದ, ಹೋರಾಡಿದ ಯುದ್ಧಗಳಿಂದ ಹಿರಿತನವನ್ನು ಕ್ಲೇಮ್ ಮಾಡುವುದು ಮತ್ತು ಅದನ್ನು ಪರಿಗಣಿಸುವುದು ಉತ್ತಮ ನಾಗರಿಕತೆಯ ಲಕ್ಷಣವಲ್ಲ. ಗಡ್ಡ ಬಿಟ್ಟವರೆಲ್ಲ ಋಷಿಗಳಾಗುವುದಿಲ್ಲ. ಹಾಗೆಯೇ ವ್ಯಕ್ತಿಯೊಬ್ಬನ ಒಳಗಿನ ಒಲುಮೆ ಹೊರಗಿನ ನಡವಳಿಕೆಗೆ, ಹೊರಗಿನ ಬಾಂಧವ್ಯ ಒಳಗಿನ ತುಡಿತಕ್ಕೆ ಪ್ರೇರಣೆಯಾಗುತ್ತದೆ.

ಉತ್ತಮ ಅಭಿರುಚಿಗಳಿಂದ ಮಾತ್ರ ಉತ್ತಮ ಚಿಂತನೆ ಹಾಗೂ ನಡವಳಿಕೆಗಳು ಹುಟ್ಟುತ್ತವೆ. ಹೊರಗಿನ ಬಾಂಧವ್ಯವನ್ನು ಗಟ್ಟಿಗೊಳಿಸದ ಒಳತುಡಿತಗಳಿಗೆ ಹಿರಿತನವೆಲ್ಲಿಂದ ಬಂದೀತು? ಜನಜೀವನ ಇಲ್ಲದ ಕಡೆ ಆಕೃತಿಗೊಂಡು ಕಾಲಿಕವಾಗಿ ಮೆರೆಯುವುದಕ್ಕಿಂತ ಕೃತಿಗೊಂಡು ಕಾಲಾತೀತವಾಗುಳಿಯುವುದು ಹಿರಿತನ.

ಕುವೆಂಪು ಕಂಡರಿಸಿದ ಶ್ರೀರಾಮಚಂದ್ರನ ಹಿರಿತನದ ಬಗೆ ಅಂತಹದ್ದು. ರಾವಣನನ್ನು ಕೊಂದ ಕಾರಣವೇ ಆತನ ಹಿರಿತನಕ್ಕೆ ಸಾಕ್ಷಿಯಾಗುವುದಾದರೆ ರಾಮನ ಮಹತ್ತಿಗೆ ಬೆಲೆ ಬಂದದ್ದಾದರೂ ಏನು? ಹಗೆತನವನ್ನೇ ಹಿರಿತನ ಎನ್ನುವುದಾದರೆ ಅವನ ಪುರುಷೋತ್ತಮಿಕೆಗೆ ಕುಂದಲ್ಲವೇ? ಹಿಂಸಾಮೋಹಕ್ಕೆ ಮರುಳಾದವರೆಲ್ಲ ರಾವಣನ ಕೊಲೆಗಾಗಿ ರಾಮನನ್ನು ಕೊಂಡಾಡಿದರೆ ವಿವೇಕಿಗಳಿಗೂ ಆ ಭ್ರಾಂತಿ ಯಾಕಿರಬೇಕು? ಶ್ರೀರಾಮ ದಯಾಪರನೂ ನಿಷ್ಕಾಮ ಪ್ರೇಮಿಯೂ ಆಗಿರುವುದು ಅವನ ಹಿರಿತನದ ಸಂಕೇತ. ಪೆರ್ಮೆಗೊಲ್ಮೆಯೆ ಚಿಹ್ನೆ! ಕಪಟವರಿಯದ ಎದೆಯೊಲುಮೆಯೇ ಅವನ ಒಳತುಡಿತ. ಅದನ್ನೇ ಹೊರಗೂ ಹಂಚಿದ. ಹಿರಿತನ ಮೆರೆದ. ಗುರುವಾದ. ಗುರುತರವಾಗಿ ಬದುಕಿದರೆ ಗುರುತನ. ಅನ್ಯವೆಂದೆಣಿಸದೆ ಅಪ್ಪಿದರೆ ಹಿರಿತನ.

ಒಲುಮೆ ತುಂಬಿದ ದಯೆಗೆ ದನಿಗೊಡದೆ ಬರಿಯ ಹೆಸರು ಜಪಿಸಿದರೆ ಬರುವ ಭಾಗ್ಯವೇನು? ಹಗೆ ಸಾಧಿಸಿದವರು ದೊಡ್ಡವರಾದ ಚರಿತ್ರೆ ಎಲ್ಲಿದೆ? ರಾವಣನಂಥವರನ್ನೂ ಉದ್ಧರಿಸುವ ಶ್ರೀರಾಮನ ದಯೆಗೆ ವರ್ತಮಾನದ ಹಿಂಸಾರುಚಿಯನ್ನು ತಗ್ಗಿಸುವ ಶಕ್ತಿಯಿದೆ. ವಿಂಗಡಿಸುವ ದ್ವೇಷ ಬೇಡ. ಒಗ್ಗೂಡಿಸುವ ಒಲುಮೆ ಬೇಕು. ಮಾನವ ಜನ್ಮ ದೊಡ್ಡದು ಎಂದು ನಂಬಿದವರ ಆದ್ಯತೆಯು ಆದರ್ಶ ರಾಮರಾಜ್ಯದ ಜೀವಾಳವಾಗಿರುವ ಒಲುಮೆಯೇ ಆಗಿರಬೇಕು. ದಯೆಯೇ ದೊಡ್ಡತನ. ಹಗೆಯೇ ಸಣ್ಣತನ. ಬಯಕೆ ತುಂಬಿದ ಬಾಳಿನಲ್ಲಿ ಒಲುಮೆಯ ಹೂ ಚೆಲ್ಲಿ ಬದುಕಿನ ಎತ್ತರವನ್ನು ಉತ್ತಮಗೊಳಿಸುತ್ತಾ ಸಾಗಬೇಕು. ಕುಳಿತುಣ್ಣುವ ಕಲರವದಲ್ಲಿ ಒಡಕು ಮಾತಿಗೇನು ಮರ್ಯಾದೆ?

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

22 ಡಿಸೆಂಬರ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ದ್ವಿತೀಯ ಗಂ 10-52 **ನಕ್ಷತ್ರ:** ಉತ್ತರಾಷಾಢ ಗಂ. 29-32 **ಯೋಗ:** ಧ್ರುವ ಗಂ. 16-41 **ಕರಣ:** ಕೌಲವ ಗಂ. 10-52 ಧನು ಮಾಸದ 07 ನೇ ದಿನ. **ಮಳೆ ನಕ್ಷತ್ರ :** ಮೂಲ 3 ನೇ ಪಾದ. **ರಾಹುಕಾಲ :** ಬೆಳಿಗ್ಗೆ 07-30 - 09-00 , **ಸೂರ್ಯೋದಯ :** 06-53 **ಸೂರ್ಯಾಸ್ತ :** 06-06, **ಮುಸ್ಲಿಂ ದಿನಾಂಕ :** 02 ರಜಬ್ , **ಅದೃಷ್ಟ ಸಂಖ್ಯೆ :** 8, 10

ಮೇಷ: ಉದ್ಯೋಗದಲ್ಲಿ ಸ್ಥಳ ಬದಲಾವಣೆ ಬೇಕಿದ್ದರೆ, ಹೇಳಿಕೊಳ್ಳಲು ಹಿಂಜರಿಕೆ ಬೇಡ. ರಾಜಕೀಯ ಸೇರ್ಪಡೆಗೆ ಆಹ್ವಾನ ಬರಲಿದೆ. ಆದರೆ ದೂರ ಉಳಿಯುವುದು ಕ್ಷೇಮಕರ.

ವೃಷಭ: ಆಸ್ತಿ ಕೊಳ್ಳುವಾಗ ಎಲ್ಲಾ ವಿವರಗಳ ಬಗ್ಗೆ ಎರಡೆರಡು ಬಾರಿ ಮಾಹಿತಿ ಪಡೆದುಕೊಳ್ಳಿರಿ. ಸೃಜನಶೀಲ ಯೋಜನೆಯನ್ನು ಮುಂದುವರಿಸಲು ಶುಭದಿನ. ಧನಾದಾಯಕ್ಕೆ ಅಡ್ಡಿ ಆತಂಕಗಳು ಇರುವುದಿಲ್ಲ.

ಮಿಥುನ: ಆಫೀಸಿನ ಕೆಲಸದ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾಗುವುದು. ಷೇರು ವ್ಯವಹಾರ, ಸಿನಿಮಾ ತಯಾರಿಕೆಯಂಥ ಕಾರ್ಯವು ಲಾಭ ತರಲಿದೆ. ಅಬಕಾರಿ ಇಲಾಖೆ ಅಧಿಕಾರಿಗಳಿಗೆ ಕೆಲಸವಿರಲಿದೆ.

ಕರ್ಕಾಟಕ: ಅಧ್ಯಯನ ಸಂಶೋಧನೆಯಿಂದ ಯೋಚಿಸಿದ ಹಣ ಮತ್ತು ಖ್ಯಾತಿಯನ್ನು ಇಷ್ಟದಂತೆ ಪಡೆದುಕೊಳ್ಳಲು ಆಗದೇ ಇರುವುದರಿಂದ ನೆಮ್ಮದಿ ಕಳೆದುಕೊಳ್ಳುವಂತಾಗಲಿದೆ. ಆತ್ಮವಿಶ್ವಾಸ ಕಳೆದುಕೊಳ್ಳದಿರಿ.

ಸಿಂಹ: ಅಪರಿಚಿತ ವ್ಯಕ್ತಿಯೊಬ್ಬರಿಂದ ಮುಖ್ಯ ಸಲಹೆಯೊಂದನ್ನು ಪಡೆಯಲಿದ್ದೀರಿ, ಅದನ್ನು ಜೀವನದಲ್ಲಿ ರೂಢಿಸಿಕೊಳ್ಳಿ. ನಿಮ್ಮ ವೈಯಕ್ತಿಕ ಆಸೆ ಪೂರ್ಣಗೊಳ್ಳಲಿದೆ. ಕ್ರೀಡಾಪಟುಗಳಿಗೆ ದೇಹಬಾಧೆ ಕಾಣಿಸಬಹುದು.

ಕನ್ಯಾ: ವೃತ್ತಿಯಲ್ಲಿ ಉನ್ನತಿ ತೋರಿಬಂದರೂ ವಿಘ್ನ ಭೀತಿ ಅಥವಾ ಅಪವಾದದ ಸಮಸ್ಯೆ ಇರುತ್ತದೆ. ಸರ್ಕಾರಿ ಅಧಿಕಾರಿಗಳು ಕಾನೂನು ವಿಷಯಗಳ ಬಗ್ಗೆ ಗಮನ ಹರಿಸಿ. ಭೂ ವ್ಯವಹಾರಗಳು ನಿಧಾನವಾಗಿ ಕೈಗೂಡಲಿವೆ.

ತುಲಾ: ಯಾವ ಕೆಲಸಕ್ಕೆ ಪ್ರಾಮುಖ್ಯತೆ ಕೊಡಬೇಕೆಂದು ಯೋಚಿಸಿ ನಂತರದಲ್ಲಿ ಕಾರ್ಯಶೀಲರಾಗುವುದು ಉತ್ತಮ. ರಿಯಲ್ ಎಸ್ಟೇಟ್‌ದಾರರಿಗೆ ಧನಲಾಭವಿದೆ.

ವೃಶ್ಚಿಕ: ಹೊಸ ಆಸೆಗಳನ್ನು ಈಡೇರಿಸಿಕೊಳ್ಳುವಂಥ ಅವಕಾಶಗಳು ಎದುರಾಗಲಿವೆ. ಭವಿಷ್ಯದ ದೃಷ್ಟಿಯಿಂದ ಯಾವುದೇ ವಿಷಯವನ್ನು ದೊಡ್ಡದು ಸಣ್ಣದು ಎಂಬ ಭೇದ ಮಾಡಬೇಡಿ.

ಧನು: ವ್ಯಾಪಾರ ಸಂಬಂಧ ಬ್ಯಾಂಕ್ ಅಧಿಕಾರಿಗಳ ಜತೆ ತಕ್ಷಣದಲ್ಲಿ ಮಾತುಕತೆ ನಡೆಸಬೇಕಾದೀತು. ಮದುವೆ ಮುಂತಾದ ವಿಷಯಗಳತ್ತ ಗಮನಹರಿಸಿ. ಸುಖ ಸಂಪತ್ತಿನ ಚಿಂತೆಯು ನಿದ್ದೆಗೆಡಿಸುತ್ತದೆ.

ಮಕರ: ಇತರರಿಗೆ ನೋವಾಗದಂತೆ ಹಾಗೂ ಅಸೂಯೆ ಉಂಟಾಗದಂತೆ ಕಾರ್ಯ ಸಾಧಿಸಿಕೊಳ್ಳಿ. ಗಣ್ಯ ವ್ಯಕ್ತಿಯೊಬ್ಬರನ್ನು ಭೇಟಿಯಾಗಲಿದ್ದೀರಿ. ಉದ್ಯೋಗಕ್ಕಾಗಿ ನಡೆಸಿದ ತೀವ್ರ ಪ್ರಯತ್ನ ಫಲ ನೀಡಲಿದೆ.

ಕುಂಭ: ಅಸಾಧಾರಣ ಸಾಧನೆಗಳಿಗಾಗಿ ಪ್ರಶಂಸೆಯ ನುಡಿ ಮತ್ತು ಸನ್ಮಾನ ಪಡೆಯುವಿರಿ. ನಾಸ್ತಿಕತೆಯನ್ನು ಬದಿಗಿಟ್ಟು ದೇವತಾರಾಧನೆ ಮಾಡಿ. ಚರ ಅಥವಾ ಸ್ಥಿರ ಸ್ವತ್ತುಗಳು ಸಿಗುವ ಸಂಭವವಿದೆ.

ಮೀನ: ಅಭಿವೃದ್ಧಿಯಲ್ಲಿ ಅಡೆತಡೆಗಳು ಮತ್ತು ಆತಂಕಕಾರಿ ವಿಚಾರಗಳು ಎದುರಾಗಲಿವೆ. ಒಪ್ಪಂದ ಹಾಗೂ ಸಹಕಾರಗಳು ಬಹಳ ಸುಲಭವಾಗುವುದು. ಸ್ವಂತವಾಗಿ ಉದ್ಯೋಗ ಮಾಡುವವರು ಪ್ರಗತಿ ಕಾಣಲಿದ್ದೀರಿ.

ಮೈಬಣ್ಣದ ಚಿಂತೆ ಬಿಡಿ ವಿಶ್ವಾಸದಿಂದ ಅಡಿ ಇಡಿ

ಸಮಾಧಾನ

ಡಾ. ಡಿ.ಎಂ. ಹೆಗಡೆ, ಆಪ್ತಸಮಾಲೋಚಕ

ನನಗೀಗ 17 ವರ್ಷ. ನನ್ನ ಮೈಬಣ್ಣ ಕಪ್ಪು. ನನಗೆ ಅದೇ ಒಂದು ಸಮಸ್ಯೆಯಾಗಿದೆ. ನನ್ನ ಪಾಲಕರು ಬೆಳ್ಳಗೆ, ನೋಡಲು ಚೆನ್ನಾಗಿದ್ದಾರೆ. ನಾನು ಅವರ ಮಗಳೇನಾ, ಅವರು ನನ್ನನ್ನು ಪ್ರೀತಿಸುತ್ತಿಲ್ಲವಾ, ನನ್ನ ಅಣ್ಣನಿಗೆ ಹೆಚ್ಚು ಪ್ರೀತಿ, ಕಾಳಜಿ ತೋರುತ್ತಿದ್ದಾರೆ, ನನ್ನನ್ನು ನಿರ್ಲಕ್ಷಿಸುತ್ತಾರೆ ಎಂದೆಲ್ಲ ಆಗಾಗ ಅನ್ನಿಸುತ್ತದೆ. ಅವರ ಹತ್ತಿರ ಇದನ್ನೆಲ್ಲ ಹೇಳಿದರೆ, 'ಹಾಗೆಲ್ಲ ಏನೂ ಇಲ್ಲ, ಇಬ್ಬರನ್ನೂ ಸಮನಾಗಿ ಪ್ರೀತಿಸುತ್ತೇವೆ' ಎನ್ನುತ್ತಾರೆ. ನನಗೆ ಸಮಾಧಾನವಿಲ್ಲ. ಇದು ನನ್ನ ಓದಿನ ಮೇಲೂ ಪರಿಣಾಮ ಬೀರುತ್ತಿದೆ. ಇತ್ತೀಚೆಗಂತೂ ಸತ್ತೇ ಹೋಗುವಷ್ಟು ಬೇಸರವಾಗಿದೆ, ಏನು ಮಾಡಲಿ ಸರ್?

ಕಾವೇರಿ ರಮೇಶ್, ಬೆಂಗಳೂರು

ನಿಮ್ಮ ಸಮಸ್ಯೆ ಹಾಗೂ ಅದರಿಂದ ಆಗುತ್ತಿರುವ ನಿಮ್ಮ ಮಾನಸಿಕ ಯಾತನೆ ನನಗೆ ಅರ್ಥವಾಗುತ್ತದೆ. ಮೈಬಣ್ಣ ಕಪ್ಪು ಅಂದಮಾತ್ರಕ್ಕೆ ನೀವು ಹೀಗೆಲ್ಲಾ ಕುಗ್ಗಬಾರದು. ಇಷ್ಟೆಲ್ಲಾ ಚಿಂತಿಸಬಾರದು. ದೇವರ ಸೃಷ್ಟಿಯಲ್ಲಿ ಎಲ್ಲರೂ ಸಮಾನರು, ಎಲ್ಲರೂ ಮುಖ್ಯರು. ಯಾರೂ ಕಾರಣವಿಲ್ಲದೇ ಇಲ್ಲಿ ಹುಟ್ಟುವುದಿಲ್ಲ. ಪ್ರತಿಯೊಬ್ಬರೂ ಅವರದೇ ಆದ ಕೆಲಸವನ್ನು ಮಾಡುತ್ತಾ, ಬದುಕನ್ನು ಅನುಭವಿಸುವ ಸಲುವಾಗಿ ಹುಟ್ಟಿರುತ್ತಾರೆ. ಇಲ್ಲಿ ಪ್ರತಿಯೊಂದಕ್ಕೂ ಅದರದ್ದೇ ವಿಶೇಷತೆ, ಸೌಂದರ್ಯ ಹಾಗೂ ಮಹತ್ವ ಇದೆ. ಯಾರೂ ಸುಂದರವಾಗಿಲ್ಲ ಎನ್ನುವ ಹಾಗಿಲ್ಲ.

ನೀವು ಒಮ್ಮೆ ಸಹಜವಾಗಿ ನಿಮ್ಮ ಸುತ್ತಲೂ ಗಮನಿಸಿ ನೋಡಿ. ಕಣ್ಣಿಗೆ ಕಾಣುವುದೆಲ್ಲವೂ ಒಂದಕ್ಕಿಂತ ಇನ್ನೊಂದು ಭಿನ್ನವಾಗಿವೆ, ವಿಶೇಷವಾಗಿವೆ. ಬಣ್ಣ, ಆಕಾರ, ಸುವಾಸನೆ, ಎತ್ತರ, ದಪ್ಪ ಎಲ್ಲವೂ ಬೇರೆಯೇ ಇವೆ. ಒಂದರಂತೆ ಇನ್ನೊಂದು ಇಲ್ಲದಿರುವುದೇ ಸೃಷ್ಟಿಯ ವೈಶಿಷ್ಟ್ಯ. ವೈವಿಧ್ಯವೇ ನಿತ್ಯ ನೂತನ. ಬೇರೆಯವರಂತೆ ತಾನಿಲ್ಲ ಎಂದು ಯಾರೂ ಕೊರಗುವ ಅಗತ್ಯವೇ ಇಲ್ಲ. ಭೂಮಿಯ ಮೇಲೆ ಇಂದಿನವರೆಗೆ ನಿಮ್ಮಂತೆ ಯಾರೂ ಹುಟ್ಟಲಿಲ್ಲ. ಅಷ್ಟೇ ಅಲ್ಲ ಇನ್ನು ಮುಂದೆಯೂ ನಿಮ್ಮಂತೆ ಇನ್ನೊಬ್ಬರು ಹುಟ್ಟುವುದೂ ಇಲ್ಲ.

ಕೋಟ್ಯಂತರ ಮನುಷ್ಯರು ಇದ್ದೇವಾದರೂ ಒಬ್ಬರ ಹೆಬ್ಬೆರಳಿನಂತೆ ಇನ್ನೊಬ್ಬರದಿಲ್ಲ, ಒಬ್ಬರ ಕಣ್ಣಿನ ರೆಟಿನಾದಂತೆ ಇನ್ನೊಬ್ಬರದಿಲ್ಲ, ಒಬ್ಬರ ನಾಲಿಗೆಯಂತೆ ಇನ್ನೊಬ್ಬರದಿಲ್ಲ, ಒಬ್ಬರ ಧ್ವನಿಯಂತೆ ಇನ್ನೊಬ್ಬರದಿಲ್ಲ, ಒಬ್ಬರ ಬುದ್ಧಿಯಂತೆ ಇನ್ನೊಬ್ಬರದಿಲ್ಲ, ಒಬ್ಬರಿಗಿರುವ ಪ್ರತಿಭೆಯೂ ಇನ್ನೊಬ್ಬರಿಗೆ ಇರುವುದಿಲ್ಲ. ಯಾವುದೇ ಕಾರಣಕ್ಕೂ ಯಾರೂ ತನ್ನ ಬಗ್ಗೆಯಾಗಲೀ ಬೇರೆಯವರ ಬಗ್ಗೆಯಾಗಲೀ ಬೇಸರಪಡುವ ಅಗತ್ಯವಿಲ್ಲ.

ಪಾಲಕರು ಬೆಳ್ಳಗಿರುವುದು, ಅವರ ಮಕ್ಕಳು ಅಷ್ಟಿಷ್ಟು ಕಪ್ಪಗಿರುವುದು ಅಸಹಜ ಏನಲ್ಲ. ವೈಜ್ಞಾನಿಕವಾಗಿ ನೋಡಿದರೆ, ಕೆಲವು ತಲೆಮಾರುಗಳ ಹಿಂದಿನವರ ದೇಹಲಕ್ಷಣಗಳು ಮಕ್ಕಳಲ್ಲಿ ಕಾಣುತ್ತವೆ. ನೀವೂ ಅಷ್ಟೆ, ನಿಮ್ಮ ಮುತ್ತಜ್ಜಿಯ ಮುತ್ತಜ್ಜಿಯ ಮರಿಯಜ್ಜಿಯ ಹಾಗೆಯೇ ಇದ್ದಿರಬಹುದು. ಅವರ ಫೋಟೊಗಳು ಇದ್ದಿದ್ದರೆ ನಿಮಗೆ ಸುಲಭವಾಗಿ ಇದು ಅರ್ಥವಾಗುತ್ತಿತ್ತು, ಅಲ್ಲವೇ?

ನಮ್ಮ ಭೂಮಿಯ ಮೇಲಿನ ಖಂಡಗಳಲ್ಲಿರುವ ಜನರಲ್ಲಿಯೇ ಕಾಣುವ ವೈವಿಧ್ಯಗಳನ್ನು ಗಮನಿಸಿ. ದಕ್ಷಿಣ ಭಾರತೀಯರ ದೈಹಿಕ ಗುಣಲಕ್ಷಣಗಳಂತೆ ಉತ್ತರದವರದ್ದಿಲ್ಲ. ಆಫ್ರಿಕಾದವರಂತೆ ಅಮೆರಿಕದವರಿಲ್ಲ. ಅಫ್ಗನ್ನಿನವರಂತೆ ಚೀನಾದವರಿಲ್ಲ. ಜರ್ಮನ್ನರಂತೆ ಜಪಾನೀಯರಿಲ್ಲ. ಒಂದು ಪೃಥ್ವಿಯಲ್ಲಿ ಸೃಷ್ಟಿಯೇ ಇಷ್ಟೊಂದು ವ್ಯತ್ಯಾಸಗಳಿರುವವರನ್ನು ಸೃಷ್ಟಿಸಿದೆ! ಎಲ್ಲರೂ ಭಿನ್ನವಾಗಿಯೂ ವಿಶೇಷವಾಗಿಯೂ ಇದ್ದಾರೆ. ಆದರೂ ಮನುಷ್ಯರೆಲ್ಲರೂ ಒಂದೇ. ರಕ್ತದ ಗುಂಪುಗಳಲ್ಲಿ ವ್ಯತ್ಯಾಸವಿಲ್ಲ. ಅಂಗಾಂಗ ರಚನೆಯಲ್ಲಿ ವ್ಯತ್ಯಾಸವಿಲ್ಲ. ಹಾಗಾಗಿಯೇ ಎಲ್ಲರೂ ಎಲ್ಲರಿಗಾಗಿ ಬದುಕಬೇಕು ಎನ್ನುವುದನ್ನು ಎಲ್ಲೆಡೆಯೂ ಕಲಿಸಲಾಗುತ್ತದೆ.

ಕಾವೇರಿಯವರೆ, ನಿಮ್ಮ ವ್ಯಕ್ತಿತ್ವದಲ್ಲಿರುವ ವಿಶೇಷವನ್ನು ಗಮನಿಸಿ. ಹವ್ಯಾಸಗಳನ್ನು ಪಟ್ಟಿ ಮಾಡಿ. ಯಾವುದರ ಬಗ್ಗೆ ಮನಸ್ಸು ಅತಿಯಾಗಿ ಒಲಿಯುತ್ತದೆಯೋ ಅದನ್ನು ಶ್ರಮವಹಿಸಿ ಅಭ್ಯಾಸ ಮಾಡಿ. ನೀವು ಉಳಿದವರಿಗಿಂತ ಎಷ್ಟು ಭಿನ್ನ ಹಾಗೂ ಎಷ್ಟೊಂದು ಪ್ರತಿಭಾವಂತ ವ್ಯಕ್ತಿ ಎನ್ನುವುದನ್ನು ನಿರೂಪಿಸಿ. ಜಾಕಿಚಾನ್‌ರಿಂದ ರಜನಿಕಾಂತ್ ಅವರವರೆಗೆ ಹಲವರು ವಿವಿಧ ಕ್ಷೇತ್ರಗಳಲ್ಲಿ ಸೂಪರ್ ಸ್ಟಾರ್‌ಗಳಾಗಿದ್ದಾರೆ. ಹಾಗಾಗಿ, ನೀವು ಕೂಡ ಸಾಕಷ್ಟು ಆಕರ್ಷಕವಾಗಿದ್ದೀರಿ, ಒಳ್ಳೆಯವರಾಗಿದ್ದೀರಿ, ನಿಮ್ಮಿಂದಲೂ ಬಹಳಷ್ಟು ಒಳ್ಳೆಯ ಕೆಲಸಗಳು ಆಗಲಿವೆ ಎನ್ನುವ ಭರವಸೆ ನನಗಿದೆ.

ನನಗೆ ಗೊತ್ತಿರುವಂತೆ, ಕಪ್ಪಗಿರುವ ಹುಡುಗಿಯನ್ನು ಇಷ್ಟಪಡುವ ಬೆಳ್ಳಗಿನ ಹುಡುಗರಿದ್ದಾರೆ, ಕಪ್ಪಗಿರುವ ಹುಡುಗನನ್ನು ಇಷ್ಟಪಡುವ ಬೆಳ್ಳಗಿನ ಹುಡುಗಿಯರಿದ್ದಾರೆ. ಕೃಷ್ಣವರ್ಣದ ವ್ಯಕ್ತಿಗಳ ಚರ್ಮದ ಹೊಳಪು ವಿಶೇಷವಾಗಿರುತ್ತದೆ. ಆಫ್ರಿಕನ್ ದೇಶಗಳ ಕೃಷ್ಣವೇಣಿಯರು ಸೌಂದರ್ಯ ಸ್ಪರ್ಧೆಗಳಲ್ಲಿ ಛಾಪು ಮೂಡಿಸುತ್ತಿರುವುದನ್ನು ನೀವು ಗಮನಿಸಿಲ್ಲವೇ? ಮನುಷ್ಯನ ವ್ಯಕ್ತಿತ್ವವೆಂಬುದು ಅವನ ಮೈಬಣ್ಣವಲ್ಲ. ಅವನ ಗುಣ, ಪ್ರತಿಭೆ, ಸಂಸ್ಕಾರ, ಸಾಧನೆ ಇವು ಮುಖ್ಯ. ನಿಮ್ಮ ಮೈಬಣ್ಣವು ನಿಮ್ಮ ಬದುಕಿನ ಸಾಧನೆಯ ಹಾದಿಯಲ್ಲಿ ಯಾವುದೇ ರೀತಿಯ ಸಮಸ್ಯೆಯಾಗಿ ಕಾಡುವುದಿಲ್ಲ. ನಿಮ್ಮ ಪಾಲಕರಿಗೆ ನೀವಿಬ್ಬರು ಮಕ್ಕಳ ಮೇಲೂ ಸಮಾನವಾದ ಪ್ರೀತಿ, ವಿಶ್ವಾಸ, ಅಕ್ಕರೆ, ಕಾಳಜಿ ಇರುತ್ತದೆ. ಅದು ಸಹಜ ಕೂಡ. ನೀವು ವೃಥಾ ಚಿಂತಿಸುವುದನ್ನು ಬಿಡಿ. ವಿಶ್ವಾಸದಿಂದ ಮುನ್ನುಗ್ಗಿ. ಓದಿನತ್ತ ಗಮನಹರಿಸಿ.

ಗಣಿತ ಕಬ್ಬಿಣದ ಕಡಲೆಯಲ್ಲ ಈಗ ಹುರಿಗಡಲೆ!



ಗ್ರಾಮೀಣ ಪ್ರದೇಶದ ಬಹುತೇಕ ಮಕ್ಕಳಿಗೆ ಗಣಿತ ಕಬ್ಬಿಣದ ಕಡಲೆ. ಬೇರೆ ವಿಷಯಗಳ ಕಲಿಕೆಯಲ್ಲಿ ಉತ್ತಮವಾಗಿದ್ದರೂ ಗಣಿತದಲ್ಲಿ ಹಿಂದೆ ಇರುವುದನ್ನು ಮನಗಂಡು, ಇದಕ್ಕೆ ಪರಿಹಾರ ಕಂಡುಕೊಳ್ಳಲು 'ಗಣಿತ ಗಣಕ' ಎಂಬ ಯೋಜನೆ ಜಾರಿಗೊಳಿಸಲಾಗಿದೆ.

● ಎ.ಎಂ. ಸುರೇಶ

ರಾಜ್ಯದಲ್ಲಿನ ಮಕ್ಕಳಲ್ಲಿ ಗಣಿತ ಕಲಿಕೆಗೆ ಉತ್ತೇಜನ ನೀಡುವ ಮತ್ತು ಅವರಲ್ಲಿನ ಆಸಕ್ತಿಯನ್ನು ಹೆಚ್ಚಿಸುವ ಉದ್ದೇಶದಿಂದ ರೂಪಿಸಿರುವ 'ಗಣಿತ ಗಣಕ' ಯೋಜನೆಯಿಂದಾಗಿ ಶಿಕ್ಷಣದ ಗುಣಮಟ್ಟದಲ್ಲಿ ಸುಧಾರಣೆ ಕಂಡುಬರುತ್ತಿದೆ.

3ರಿಂದ 5ನೇ ತರಗತಿವರೆಗಿನ ಮಕ್ಕಳಿಗೆ ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರದಂತಹ ವಿಷಯಗಳನ್ನು ಶಾಲಾ ಅವಧಿಯ ನಂತರ ಸಂಜೆ ಹೊತ್ತು ಪೋಷಕರ ಸಮ್ಮುಖದಲ್ಲಿ ಹೇಳಿಕೊಡುವ ಉದ್ದೇಶವನ್ನು ಈ ಯೋಜನೆ ಹೊಂದಿದೆ.

ಗಣಿತ ಗಣಕ ಯೋಜನೆಯಡಿ, ಸಂಜೆ 6ರ ನಂತರ 8 ಗಂಟೆಯ ಒಳಗೆ ಫೋನ್ ಮೂಲಕವೇ ಮಕ್ಕಳಿಗೆ ಗಣಿತದ ಕೌಶಲಗಳನ್ನು ಶಿಕ್ಷಕರು ತಿಳಿಸಿಕೊಡುತ್ತಾರೆ. ಒಬ್ಬ ಶಿಕ್ಷಕರಿಗೆ 18 ಮಕ್ಕಳ ಜವಾಬ್ದಾರಿಯನ್ನು ವಹಿಸಲಾಗಿದೆ. ಆ ಮಕ್ಕಳಿಗೆ ಕರೆ ಮಾಡಿ ಅನುಮಾನಗಳನ್ನು ಬಗೆಹರಿಸುವುದರ ಜೊತೆಗೆ, ಸರಳವಾಗಿ ಅರ್ಥವಾಗುವ ಹಾಗೆ ಕೌಶಲಗಳನ್ನು ಅವರು ತಿಳಿಸಿಕೊಡುತ್ತಾರೆ.

ಆರಂಭದಲ್ಲಿ 17 ಜಿಲ್ಲೆಗಳ 93 ಮಹತ್ವಾಕಾಂಕ್ಷಿ ತಾಲ್ಲೂಕುಗಳ 14,711 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿತ್ತು. ಸುಮಾರು 6.99 ಲಕ್ಷ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದಿದ್ದರು. ಆ ಮಕ್ಕಳು ಇನ್ನೂ ಹೆಚ್ಚಿನ ಕಾಳಜಿಯಿಂದ ಕಲಿಕೆಯಲ್ಲಿ ತೊಡಗಿಕೊಳ್ಳಲು ಈ ಯೋಜನೆ ಪ್ರೇರಣೆಯಾಗಿದೆ ಎಂಬುದು ಸಮೀಕ್ಷೆಯಿಂದ ಗೊತ್ತಾಗಿದೆ.

ಸಕಾರಾತ್ಮಕ ಫಲಿತಾಂಶ ಬಂದಿರುವುದನ್ನು ಮನಗಂಡು, ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ರಾಜ್ಯದಲ್ಲಿನ 38,548 ಸರ್ಕಾರಿ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಗೆ ಈ ಯೋಜನೆಯನ್ನು ವಿಸ್ತರಿಸಲಾಗಿದೆ. ಸುಮಾರು 13.51 ಲಕ್ಷ ಮಕ್ಕಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

ಗಣಿತ ವಿಷಯದ ಬಗ್ಗೆ ಆಸಕ್ತಿ ಮೂಡಿಸುವ ಹಾಗೂ ಮೂಲ ಪರಿಕಲ್ಪನೆಗಳ ಕುರಿತು ತಿಳಿಸಿಕೊಡುವ ಕಾರ್ಯವನ್ನು ಫೋನ್ ಕರೆಗಳ ಮೂಲಕ (ರಿಮೋಟ್ ಟ್ಯೂಟರಿಂಗ್) ಶಿಕ್ಷಕರು ಮಾಡುತ್ತಿದ್ದಾರೆ. ಸಮಗ್ರ ಶಿಕ್ಷಣ ಕರ್ನಾಟಕ, ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ, ಜೆ-ಪಾಲ್, ಅಲೋಕಿಟ್ ಮತ್ತು ಯೂತ್ ಇಂಪ್ಯಾಕ್ಟ್ ಸಂಸ್ಥೆಗಳ ಸಹಯೋಗದಲ್ಲಿ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ.

ಅಲೋಕಿಟ್ ಮತ್ತು ಯೂತ್ ಇಂಪ್ಯಾಕ್ಟ್ ಸ್ವಯಂ ಸೇವಾ ಸಂಸ್ಥೆಗಳಾಗಿದ್ದು, ಸರ್ಕಾರಿ ಶಾಲೆಗಳಲ್ಲಿ ಕಲಿಕೆಯ ಗುಣಮಟ್ಟ ಸುಧಾರಿಸಲು, ಮೇಲ್ವಿಚಾರಣೆ ಮಾಡಲು ಸರ್ಕಾರಕ್ಕೆ ಬೆಂಬಲವಾಗಿ ನಿಂತಿವೆ. ಈ ಕಾರ್ಯಕ್ರಮದ ವಿನ್ಯಾಸ, ಅನುಷ್ಠಾನಕ್ಕೆ ಅವು ಬೆಂಬಲವಾಗಿ ನಿಂತಿದ್ದು, ವಿದ್ಯಾರ್ಥಿಗಳಲ್ಲಿನ ಕಲಿಕಾ ಅಂತರ ಹೋಗಲಾಡಿಸಲು ನೆರವಾಗುತ್ತಿವೆ.

ಈ ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಇದರಿಂದ ಪ್ರೇರಿತರಾಗಿರುವ ಪೋಷಕರೇ ಈಗ ಜವಾಬ್ದಾರಿ ತೆಗೆದುಕೊಂಡು ಸಂಜೆ ಹೊತ್ತು ಮಕ್ಕಳಿಗೆ ಗಣಿತದ ಲೆಕ್ಕಗಳನ್ನು ಮಾಡಿಸುತ್ತಿದ್ದಾರೆ.

ಕೆ.ವಿದ್ಯಾಕುಮಾರಿ, ರಾಜ್ಯ ಯೋಜನಾ ನಿರ್ದೇಶಕಿ ಸಮಗ್ರ ಶಿಕ್ಷಣ ಕರ್ನಾಟಕ

75,000 ಗಣಿತ ಶಿಕ್ಷಕರು ಭಾಗಿ

ಗಣಿತ ಗಣಕ ಕಾರ್ಯಕ್ರಮದ ಅನುಷ್ಠಾನದಲ್ಲಿ ಸುಮಾರು 75,000 ಗಣಿತ ಶಿಕ್ಷಕರು ಭಾಗಿಯಾಗಿದ್ದಾರೆ. ಅವರಿಗೆಲ್ಲ ಅಗತ್ಯ ತರಬೇತಿ ನೀಡಲಾಗಿದೆ. ಈ ಶಿಕ್ಷಕರು ನಿಗದಿಪಡಿಸಿದ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಫೋನ್ ಕರೆ ಮಾಡಿ, ಗಣಿತದಲ್ಲಿನ ಕ್ಲಿಷ್ಟಕರ ಸಮಸ್ಯೆಗಳನ್ನು ಬಗೆಹರಿಸಲು ನೆರವಾಗುತ್ತಾರೆ. ಈ ಎಲ್ಲಾ ಕರೆಗಳನ್ನು ರೆಕಾರ್ಡ್ ಮಾಡಲಾಗುತ್ತದೆ.

ವಿದ್ಯಾರ್ಥಿಗಳಿಗೆ ಕರೆ ಮಾಡಲು ತಗಲುವ ವೆಚ್ಚವನ್ನು ಸರ್ಕಾರವು ಶಿಕ್ಷಕರಿಗೆ ಮರುಪಾವತಿ ಮಾಡುತ್ತದೆ. ಪ್ರತಿಯೊಬ್ಬ ಶಿಕ್ಷಕರಿಗೆ ಸಹಾಯಧನವಾಗಿ ಒಟ್ಟಾರೆ ಅವಧಿಗೆ ₹800 ನಿಗದಿ ಮಾಡಲಾಗಿದೆ. ಇದಕ್ಕಾಗಿ ಸರ್ಕಾರ ಒಟ್ಟು ₹6 ಕೋಟಿ ಅನುದಾನ ನಿಗದಿಪಡಿಸಿದೆ. ಈ ಹಣವನ್ನು ಶಿಕ್ಷಕರ ಖಾತೆಗೆ ನೇರವಾಗಿ ಜಮಾ ಮಾಡಲಾಗುತ್ತದೆ.

ವಿದ್ಯಾರ್ಥಿ ವೇತನ ಕೈಪಿಡಿ

ಫೌಂಡೇಷನ್ ಫಾರ್ ಎಕ್ಸಲೆನ್ಸ್

ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತರಿಗೆ ತಾಂತ್ರಿಕ ಕೋರ್ಸ್‌ಗಳನ್ನು ಕಲಿಯಲು ಈ ಸ್ಕಾಲರ್‌ಷಿಪ್ ನೆರವಾಗುತ್ತದೆ.

ಅರ್ಹತೆ: ಎಂಜಿನಿಯರಿಂಗ್, ಇಂಟಿಗ್ರೇಟೆಡ್ ಎಂ.ಟೆಕ್, ಎಂಬಿಬಿಎಸ್ ಮತ್ತು ಐದು ವರ್ಷದ ಕಾನೂನು ಶಿಕ್ಷಣ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ವಿದ್ಯಾರ್ಥಿಗಳು 2023ರಲ್ಲಿ ಅಥವಾ ನಂತರದ ವರ್ಷಗಳಲ್ಲಿ 12ನೇ ತರಗತಿ/ ಇಂಟರ್‌ಮೀಡಿಯಟ್/ ಹೈಯರ್ ಸೆಕೆಂಡರಿ/ ಪ್ರೀ-ಯೂನಿವರ್ಸಿಟಿ / ಐಎಸ್ಸಿ/ ಸಿಬಿಎಸ್‌ಇ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನಿಷ್ಠ ಶೇ 70ರಷ್ಟು ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ರಾಜ್ಯ ಅಥವಾ ರಾಷ್ಟ್ರ ಮಟ್ಟದ ಪ್ರವೇಶ ಪರೀಕ್ಷೆ ಅಥವಾ ಕೌನ್ಸೆಲಿಂಗ್ ಪ್ರಕ್ರಿಯೆಯ ಮೂಲಕ ವೃತ್ತಿಪರ ಪದವಿ ಶಿಕ್ಷಣಕ್ಕೆ ಪ್ರವೇಶ ಪಡೆದಿರಬೇಕು. ಕುಟುಂಬದ ಒಟ್ಟು ಆದಾಯವು ವರ್ಷಕ್ಕೆ ₹3 ಲಕ್ಷ ಮೀರಿರಬಾರದು. ಸಂಪೂರ್ಣ ಕೋರ್ಸ್ ಅವಧಿಗೆ ₹50,000 ನೀಡಲಾಗುತ್ತದೆ. ಜೊತೆಗೆ, ಇಂಗ್ಲಿಷ್, ತಂತ್ರಜ್ಞಾನ, ನಾಯಕತ್ವ ಮತ್ತು ಮಹತ್ವಾಕಾಂಕ್ಷಿ ಯೋಜನೆಗಳಿಗೆ ಅನುವಾಗುವಂತೆ ಕೌಶಲಾಭಿವೃದ್ಧಿ ತರಬೇತಿ ಕೊಟ್ಟು, ಉದ್ಯೋಗಕ್ಕೆ ಸಜ್ಜುಗೊಳಿಸಲಾಗುತ್ತದೆ.

ಅರ್ಜಿ ಸಲ್ಲಿಸಲು ಕೊನೇ ದಿನ: 31-12-2025
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್.
ಮಾಹಿತಿಗೆ: Short Url: www.b4s.in/praja/FFES

ನೆಹರೂ ಫೆಲೋಷಿಪ್

'ಇನ್‌ಕ್ಲೂಸಿವ್ ಮೈಂಡ್ಸ್' ಸಂಸ್ಥೆಯು ಯುವ ಸಮೂಹವನ್ನು ಪ್ರೇರೇಪಿಸಲು ನೆಹರೂ ಫೆಲೋಷಿಪ್ ನೀಡುತ್ತಿದೆ.

ಯಾವುದೇ ವಿಷಯದಲ್ಲಿ ಪದವಿ ಪಡೆದಿರುವವರು ಅರ್ಜಿ ಸಲ್ಲಿಸಬಹುದು. ಯುವ, ವಿದ್ಯಾರ್ಥಿ ಅಥವಾ ಸಾಮಾಜಿಕ ಚಳವಳಿಗಳಲ್ಲಿ ತೊಡಗಿಕೊಂಡಿರಬೇಕು. ಸಾಮಾಜಿಕ ನ್ಯಾಯ ಹಾಗೂ ಸಾಂವಿಧಾನಿಕ ಮೌಲ್ಯಗಳ ಬಗ್ಗೆ ಬದ್ಧತೆ ಹೊಂದಿರಬೇಕು. ಆರ್ಥಿಕ ಸಹಾಯ: ಪ್ರತಿ ತಿಂಗಳು ₹50,000ದವರೆಗೆ ಸಹಾಯಧನ ದೊರೆಯುತ್ತದೆ. **ಅರ್ಜಿ ಸಲ್ಲಿಸಲು ಕೊನೇ ದಿನ:** 31-12-2025, ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್. ಮಾಹಿತಿಗೆ: Short Url: www.b4s.in/praja/NFLY1

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಷಿಪ್

ಡಿಜಿಟಲ್ ಮಾರ್ಕೆಟಿಂಗ್: ಪಾಝ್ ಫೌಂಡೇಷನ್ (Pawzz Foundation) ಮನೆಯಿಂದ ಕೆಲಸ ಮಾಡುವ ಡಿಜಿಟಲ್ ಮಾರ್ಕೆಟಿಂಗ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಸೃಜನಾತ್ಮಕ ಬರವಣಿಗೆ, ಇಂಗ್ಲಿಷ್‌ನಲ್ಲಿ ಮಾತನಾಡುವ ಮತ್ತು ಬರೆಯುವ ಸಾಮರ್ಥ್ಯ, ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್, ಸರ್ಚ್ ಎಂಜಿನ್ ಮಾರ್ಕೆಟಿಂಗ್ (ಎಸ್‌ಇಎಂ), ಸರ್ಚ್ ಎಂಜಿನ್ ಆಪ್ಟಿಮೈಸೇಷನ್ (ಎಸ್‌ಇಒ) ಬಗ್ಗೆ ಜ್ಞಾನ ಇರುವ ವಿದ್ಯಾರ್ಥಿಗಳು ಜ.14ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್–ತಿಂಗಳಿಗೆ ₹1,500–₹15,000. ಸಂಪರ್ಕ: https://shorturl.at/AaFt9.

ಗ್ರಾಫಿಕ್ ಡಿಸೈನ್: ಫಿಟ್‌ಬೇ ಹೆಲ್ತ್‌ಕೇರ್ ಪ್ರೈವೇಟ್ ಲಿಮಿಟೆಡ್ (Fitbae Healthcare Private Limited) ಗ್ರಾಫಿಕ್ ಡಿಸೈನ್ ಇಂಟರ್ನಿಗಳನ್ನು ಆಹ್ವಾನಿಸಿದೆ. ಅಡೋಬ್ ಕ್ರಿಯೇಟಿವ್, ಅಡೋಬ್ ಇಲಸ್ಟ್ರೇಟರ್, ಅಡೋಬ್ ಇನ್‌ಡಿಸೈನ್, ಅಡೋಬ್ ಫೋಟೊಶಾಪ್, ಅಡೋಬ್ ಪ್ರೀಮಿಯರ್ ಪ್ರೊ ಮತ್ತು ವಿಡಿಯೊ ಎಡಿಟಿಂಗ್ ಬಗ್ಗೆ ತಿಳಿದಿರುವವರು ಅರ್ಜಿ ಸಲ್ಲಿಸಬಹುದು. ಜನವರಿ 16 ಅರ್ಜಿ ಸಲ್ಲಿಕೆಗೆ ಕಡೇ ದಿನ. ಸ್ಟೈಪೆಂಡ್–ತಿಂಗಳಿಗೆ ₹3,000–₹5,000. ಸಂಪರ್ಕ: https://tinyurl.com/3ajvkvrm.

ಬೆಂಗಳೂರು ಕೇಂದ್ರಿತ ಇಂಟರ್ನ್‌ಷಿಪ್

ಪ್ರೋಗ್ರಾಂ ಮ್ಯಾನೇಜರ್: ಏರ್‌ಟ್ರೈಬ್ ಸಂಸ್ಥೆಯು ಪ್ರೋಗ್ರಾಂ ಮ್ಯಾನೇಜರ್ ಇಂಟರ್ನಿಯನ್ನು ನೇಮಿಸಿಕೊಳ್ಳಲಿದೆ. ಗ್ರಾಹಕರೊಂದಿಗೆ ಉತ್ತಮ ಬಾಂಧವ್ಯ, ಕಮ್ಯುನಿಟಿ ಮ್ಯಾನೇಜ್‌ಮೆಂಟ್, ಪರಿಣಾಮಕಾರಿ ಸಂವಹನ ಹಾಗೂ ಇಂಟರ್‌ಪರ್ಸನಲ್ ಸ್ಕಿಲ್ಸ್ ಇರುವ ವಿದ್ಯಾರ್ಥಿಗಳು ಜನವರಿ 16ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್–ತಿಂಗಳಿಗೆ ₹15,000–₹20,000. ಸಂಪರ್ಕ: https://tinyurl.com/5n83aafk.

ಕಾಪಿರೈಟಿಂಗ್ & ಕಂಟೆಂಟ್ ಸ್ಟ್ರ್ಯಾಟಜಿ: ಬ್ರ್ಯಾಂಡ್ ಸ್ಕೇಲ್–ಅಪ್ ಇಂಕ್. ಸಂಸ್ಥೆಯು ಕಾಪಿರೈಟಿಂಗ್ ಮತ್ತು ಕಂಟೆಂಟ್ ಸ್ಟ್ರ್ಯಾಟಜಿ ಇಂಟರ್ನಿಗಳನ್ನು ಆಹ್ವಾನಿಸಿದೆ. ಕಾಪಿರೈಟಿಂಗ್, ಕ್ರಿಯೇಟಿವ್ ರೈಟಿಂಗ್, ಇಂಗ್ಲಿಷ್‌ನಲ್ಲಿ ಬರೆಯುವ ಮತ್ತು ಮಾತನಾಡುವ ಸಾಮರ್ಥ್ಯ, ಹಿಂದಿಯಲ್ಲಿ ಮಾತನಾಡುವ ಸಾಮರ್ಥ್ಯ ಹಾಗೂ ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್ ಬಗ್ಗೆ ಅರಿತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜ.15 ಅರ್ಜಿ ಸಲ್ಲಿಕೆಗೆ ಕೊನೇ ದಿನ. ಸ್ಟೈಪೆಂಡ್–ತಿಂಗಳಿಗೆ ₹15,000–₹20,000. ಸಂಪರ್ಕ: https://tinyurl.com/yc65ze5s.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಮೈಸೂರಿನ ಒಡೆಯರು ಹಾಗೂ ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

ಪ್ರಶ್ನೋತ್ತರ:–

45) ಕಿತ್ತೂರು ರಾಣಿ ಚೆನ್ನಮ್ಮ ಯಾವುದರ ವಿರುದ್ಧ ಹೋರಾಡಿದಳು?

ಉತ್ತರ:– ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ಪದ್ಧತಿಯ ವಿರುದ್ಧ ಹೋರಾಡಿದವರೇ ರಾಣಿ ಚೆನ್ನಮ್ಮ.

46) ಕಿತ್ತೂರಿನ ಚೆನ್ನಮ್ಮ ಶಿವಲಿಂಗರುದ್ರ ಸರ್ಜನ ಮರಣಾನಂತರ ಯಾರನ್ನು ದತ್ತು ಪಡೆದು ಆಡಳಿತವನ್ನು ನಿರ್ವಹಿಸಿದಳು

ಉತ್ತರ:– ಶಿವಲಿಂಗರುದ್ರಸರ್ಜನ ಮರಣಾನಂತರ ಶಿವಲಿಂಗಪ್ಪ ಎಂಬ ಹುಡುಗನನ್ನು ದತ್ತು ಪಡೆದು ಚೆನ್ನಮ್ಮ ಆಡಳಿತವನ್ನು ನಿರ್ವಹಿಸಲು ಪ್ರಾರಂಭಿಸಿದಳು.

47) ಧಾರವಾಡದ ಕಲೆಕ್ಟರ್ ಮತ್ತು ಪೊಲಿಟಿಕಲ್ ಏಜೆಂಟನಾಗಿದ್ದ ಥ್ಯಾಕರೆ ಏನು ಮಾಡಿದ?

ಉತ್ತರ:– ಧಾರವಾಡದ ಕಲೆಕ್ಟರ್ ಮತ್ತು ಪೊಲಿಟಿಕಲ್ ಏಜೆಂಟನಾಗಿದ್ದ ಥ್ಯಾಕರೆ ಆತ ಬಾಂಬೆಯ ಗವರ್ನರನಿಗೆ ಕಿತ್ತೂರಿನ ದತ್ತಕದ ಬಗ್ಗೆ ವರದಿಯನ್ನು ಸಲ್ಲಿಸಿ ದತ್ತು ಮಕ್ಕಳಿಗೆ ಹಕ್ಕನ್ನು ನೀಡುವುದನ್ನು ನಿರಾಕರಿಸಿ ಕಿತ್ತೂರಿನ ಆಡಳಿತವನ್ನು ವಶಪಡಿಸಿಕೊಳ್ಳಲು ಯತ್ನಿಸಿದನು.

48) ಕಿತ್ತೂರಿನ ವೀರ ರಾಣಿ ಚೆನ್ನಮ್ಮನ ಬಗ್ಗೆ ಬಗ್ಗೆ ಬರೆಯಿರಿ.

ಉತ್ತರ:– ವೀರರಾಣಿ ಚೆನ್ನಮ್ಮ (1824) ಬ್ರಿಟಿಷರು ತಮ್ಮ ಆಳ್ವಿಕೆಗೆ ವಿರುದ್ಧವಾಗಿದ್ದ ಹೈದರಾಲಿ, ಟಿಪ್ಪು ಮತ್ತು ಮರಾಠರ ಬಲಿಷ್ಠ ಪ್ರತಿರೋಧಕಗಳನ್ನು ಅಡಗಿಸಿದ ನಂತರ ತಮ್ಮ ಅಧಿಕಾರದ ಕ್ರೋಢೀಕರಣಕ್ಕಾಗಿ ಕೆಲವು ಕಾನೂನುಗಳನ್ನು ಜಾರಿಗೆ ತಂದರು. ಅವುಗಳಲ್ಲಿ ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬುದು ಒಂದು. ಈ ಕಾನೂನಿನ ವಿರುದ್ಧ ಸಂಘಟಿಸಲಾದ ಸಶಸ್ತ್ರ ಬಂಡಾಯಗಳಲ್ಲಿ ಕಿತ್ತೂರಿನ ರಾಣಿ ಚೆನ್ನಮ್ಮನ ಹೋರಾಟ ಖ್ಯಾತಿಯನ್ನು ಪಡೆಯಿತು. ಕಿತ್ತೂರು, ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳ ನಡುವೆ ಇರುವ ಊರಾಗಿತ್ತು. ಕಿತ್ತೂರು ಸಂಸ್ಥಾನದ ಮಲ್ಲಸರ್ಜನ ಮರಣಾನಂತರ ಚೆನ್ನಮ್ಮ ಕಿತ್ತೂರಿನ ಆಡಳಿತ ವ್ಯವಹಾರಗಳಲ್ಲಿ ಹೆಚ್ಚು ಆಸಕ್ತಿ ವಹಿಸಿತೊಡಗಿದಳು.

ಮಲ್ಲಸರ್ಜನ ಮರಣಾನಂತರ ಹಿರಿಯ ಮಗ ಶಿವಲಿಂಗರುದ್ರಸರ್ಜ ಕಿತ್ತೂರಿನ ಆಡಳಿತವನ್ನು ನಿರ್ವಹಿಸಲು ಪ್ರಾರಂಭಿಸಿದನು. ಆದರೆ ಆತನ ದೈಹಿಕ ಪರಿಸ್ಥಿತಿ ಸರಿಯಿಲ್ಲದ ಕಾರಣಗಳಿಂದಾಗಿ ಚೆನ್ನಮ್ಮ ನಿಜವಾದ ಆಡಳಿತಗಾರಳಾಗಿ ಜವಾಬ್ದಾರಿಯನ್ನು ನಿರ್ವಹಿಸುವಂತಾಯಿತು. ಶಿವಲಿಂಗರುದ್ರಸರ್ಜ ಮರಾಠರ ಯುದ್ಧದಲ್ಲಿ ಬ್ರಿಟಿಷರಿಗೆ ಸಹಾಯವನ್ನು ನೀಡಿದ್ದನು. ಇದರಿಂದಾಗಿ ಬ್ರಿಟಿಷರು ಆ ಸಂಸ್ಥಾನವನ್ನು ವಂಶಪಾರಂಪರ್ಯವಾಗಿ ಆತನಿಗೆ ನೀಡಿದ್ದು ಅದಕ್ಕೆ ಪ್ರತಿಯಾಗಿ ವಾರ್ಷಿಕ ಕಾಣಿಕೆಯನ್ನು ಪಡೆದುಕೊಳ್ಳುತ್ತಿದ್ದರು. ಈ ಒಪ್ಪಂದ ಥಾಮಸ್ ಮನ್ರೋನ ಕಾಲದಲ್ಲಿ ಜಾರಿಗೊಳಿಸಲಾಗಿತ್ತು.

ಚೆನ್ನಮ್ಮಳು ಶಿವಲಿಂಗರುದ್ರಸರ್ಜನ ಮರಣಾನಂತರ ಶಿವಲಿಂಗಪ್ಪ ಎಂಬ ಹುಡುಗನನ್ನು ದತ್ತು ಪಡೆದು ಆಡಳಿತವನ್ನು ನಿರ್ವಹಿಸಲು ಪ್ರಾರಂಭಿಸಿದಳು. ಥ್ಯಾಕರೆ ಆ ಸಮಯದಲ್ಲಿ ಧಾರವಾಡದ ಕಲೆಕ್ಟರ್ ಮತ್ತು ಪೊಲಿಟಿಕಲ್ ಏಜೆಂಟನಾಗಿದ್ದನು. ಅವನು ಬಾಂಬೆಯ ಗವರ್ನರನಿಗೆ ದತ್ತಕದ ಬಗ್ಗೆ ವರದಿಯನ್ನು ಸಲ್ಲಿಸಿ ದತ್ತು ಮಕ್ಕಳಿಗೆ ಹಕ್ಕನ್ನು ನೀಡುವುದನ್ನು ನಿರಾಕರಿಸಿ ಕಿತ್ತೂರಿನ ಆಡಳಿತವನ್ನು ವಶಪಡಿಸಿಕೊಳ್ಳಲು ಯತ್ನಿಸಿದನು. ಕಿತ್ತೂರಿನ ಖಜಾನೆ, ಕೋಟೆ ಕೊತ್ತಲಗಳ ಸುಪರ್ದಿಯನ್ನು ತನ್ನ ವಶಕ್ಕೆ ತೆಗೆದುಕೊಂಡನು. ಚೆನ್ನಮ್ಮ ಥ್ಯಾಕರೆಯ ಈ ಪ್ರಯತ್ನಗಳನ್ನು ವಿಫಲಗೊಳಿಸಲು ಯುದ್ಧವನ್ನು ಅನಿವಾರ್ಯವೆಂದು ಬಗೆದಳು. ಬ್ರಿಟಿಷರೂ ತಮ್ಮ ಸೈನ್ಯವನ್ನು ಸಿದ್ಧಮಾಡಲು ಆರಂಭಿಸಿದರು. ಕಿತ್ತೂರಿನ ಸೈನ್ಯ ಬ್ರಿಟಿಷ್ ಸೈನ್ಯದ ಮೇಲೆ ದಾಳಿ ಮಾಡಿತು. ಈ ದಾಳಿಯಲ್ಲಿ ಥ್ಯಾಕರೆ ಗುಂಡೇಟಿಗೆ ಬಲಿಯಾದ. ಅನೇಕ ಬ್ರಿಟಿಷ್ ಸೈನಿಕರನ್ನು ಸೆರೆಮನೆಗೆ ದೂಡಲಾಯಿತು. ಕಿತ್ತೂರನ್ನು ವಶಪಡಿಸಿಕೊಳ್ಳಲೇಬೇಕೆಂಬ ದೃಢ ನಿರ್ಧಾರದಿಂದ ಬ್ರಿಟಿಷರು ಮತ್ತಷ್ಟು ಸನ್ನದ್ಧರಾದರು. ಕರ್ನಲ್ ಡೀಕ್‌ನ ನೇತೃತ್ವದಲ್ಲಿ ಬ್ರಿಟಿಷ್ ಸೈನ್ಯ ಕಿತ್ತೂರಿಗೆ ಮುತ್ತಿಗೆ ಹಾಕಿತು. ಸೈನಿಕರು ವೀರಾವೇಶದಿಂದ ಹೋರಾಡಿದರು. ಬ್ರಿಟಿಷರ ಸೈನ್ಯದಿಂದ ತಪ್ಪಿಸಿಕೊಂಡ ಚೆನ್ನಮ್ಮನನ್ನು ಸೆರೆ ಹಿಡಿಯಲಾಯಿತು. ಕಿತ್ತೂರು ಬ್ರಿಟಿಷರ ವಶವಾಯಿತು. ಚೆನ್ನಮ್ಮ ಮತ್ತು ಅನೇಕರನ್ನು ಬೈಲಹೊಂಗಲ ಕೋಟೆಯ ಸೆರೆಮನೆಯಲ್ಲಿ ಇರಿಸಲಾಯಿತು. ಕಾಲಾನಂತರದಲ್ಲಿ ಚೆನ್ನಮ್ಮ ಮರಣ ಹೊಂದಿದರು. ಇಂದಿಗೂ ಕೂಡಾ ನಾಡಿಗೆ ಅವಳು ಆದರ್ಶಪ್ರಾಯಳಾಗಿದ್ದಾಳೆ.

49) ಸಂಗೊಳ್ಳಿ ರಾಯಣ್ಣ ಕುರಿತು ಬರೆಯಿರಿ

ಉತ್ತರ:– ಕಿತ್ತೂರಿನ ಚೆನ್ನಮ್ಮನೊಂದಿಗೆ ಸಂಗೊಳ್ಳಿಯ ರಾಯಣ್ಣನ ಹೆಸರು ಅಜರಾಮರ ಮತ್ತು ಆದರ್ಶಪ್ರಾಯವಾದದ್ದು. ರಾಯಣ್ಣ ವೀರ ಯೋಧ. ಕಿತ್ತೂರಿನ ಸ್ವಾತಂತ್ರ್ಯಕ್ಕಾಗಿ ಹೋರಾಡುವುದು ತನ್ನ ಆದ್ಯ ಕರ್ತವ್ಯವೆಂದು ಭಾವಿಸಿದ್ದನು. ಈತನ ಮನೆತನದವರು ಪರಂಪರೆಯಿಂದಲೂ ಸೈನಿಕರಾಗಿ ಸೇವೆಯನ್ನು ಸಲ್ಲಿಸಿದ್ದರು. ರಾಯಣ್ಣ ಕಿತ್ತೂರಿನ ಯುದ್ಧದಲ್ಲಿ ಚೆನ್ನಮ್ಮನ ಜೊತೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ್ದನು. ಯುದ್ಧದಲ್ಲಿ ಸೆರೆಯಾಳಾಗಿ ಬಂಧಿಸಲ್ಪಟ್ಟು ತರುವಾಯ ಬಿಡುಗಡೆಗೊಂಡನು. ಈತನ ಬಗ್ಗೆ ಮೌಖಿಕ ಆಕರಗಳು ಲಭ್ಯವಿವೆ. ಅವನು ಸೈನಿಕರನ್ನು ಸಂಘಟಿಸುತ್ತಾ ಸ್ವಾತಂತ್ರ್ಯದ ಬಗ್ಗೆ ಅಭಿಮಾನವನ್ನು ಬೆಳೆಸಿಕೊಂಡನು. ಭೌಗೋಳಿಕವಾಗಿ ಆಯಕಟ್ಟಿನ ಸ್ಥಳಗಳಲ್ಲಿ ಗುಪ್ತ ಸಭೆಗಳನ್ನು ನಡೆಸುವ ಮೂಲಕ ತನ್ನ ಮುಂದಿನ ಯೋಜನೆಗಳನ್ನು ರೂಪಿಸಿದ್ದನು

ಸಂಗೊಳ್ಳಿ ರಾಯಣ್ಣನು ಮೊದಲ ಗುರಿ ಬ್ರಿಟಿಷರ ಆಡಳಿತ ಯಂತ್ರದ ಪ್ರಮುಖ ಅಂಗವಾಗಿದ್ದ ತಾಲ್ಲೂಕು ಕಚೇರಿಗಳು ಮತ್ತು ಖಜಾನೆಗಳನ್ನು ಲೂಟಿ ಮಾಡುವುದಾಗಿತ್ತು ಮೊದಲು ನಂದಗಡ ಮತ್ತು ಖಾನಾಪುರ ತರುವಾಯ ಸಂಪಗಾವಿ ಆತನ ಕಾರ್ಯಾಚರಣೆಗಳ ಸ್ಥಳಗಳಾದವು. ಆತನ ಸೈನ್ಯ ಐನೂರಷ್ಟಿತ್ತು. ಬ್ರಿಟಿಷರ ಸೈನ್ಯಕ್ಕೆ ಸಹಾಯವನ್ನು ನೀಡುತ್ತಿದ್ದ ಹಳ್ಳಿಗರು ಅವನ ಆಕ್ರೋಶಕ್ಕೆ ತುತ್ತಾದರು. ಬ್ರಿಟಿಷರು ರಾಯಣ್ಣನು ರಾಣಿ ಚೆನ್ನಮ್ಮನ ಕುಮ್ಮಕ್ಕಿನಿಂದ ಸೈನಿಕ ಕಾರ್ಯಾಚರಣೆಗಳನ್ನು ನಡೆಸುತ್ತಿದ್ದಾನೆ ಎಂದು ಭಾವಿಸಿದ್ದರು. ಹೀಗಾಗಿ ಚೆನ್ನಮ್ಮನನ್ನು ಬೈಲಹೊಂಗಲದಿಂದ ಕುಸುಗಲ್ಲಿನ ಸೆರೆಮನೆಗೆ ಸ್ಥಳಾಂತರಿಸಿದರು.

ಸಂಗೊಳ್ಳಿ ರಾಯಣ್ಣನನ್ನು ಸೆರೆಹಿಡಿಯಲು ಬ್ರಿಟಿಷರು ಸಂಚನ್ನು ರೂಪಿಸಿದರು. ಕಿತ್ತೂರಿನ ಚೆನ್ನಮ್ಮಳನ್ನು ವಿರೋಧಿಸುತ್ತಿದ್ದ ದೇಸಾಯಿಗಳನ್ನು ಪ್ರಚೋದಿಸಿದರು. ಅಮಲ್ದಾರನಾಗಿದ್ದ ಕೃಷ್ಣರಾಯ ಎಂಬುವವನು ಈ ಸಂಚಿಗೆ ಕೈಜೋಡಿಸಿದನು. ಸಂಚಿಗೆ ಬಲಿಯಾದ ರಾಯಣ್ಣನನ್ನು ಇಂಗ್ಲಿಷ್ ಸೈನ್ಯ ಬಂಧಿಸಿ ಧಾರವಾಡಕ್ಕೆ ತಂದಿತು. ಆತನ ಬಂಧನಾನಂತರ ಆತನ ಸೈನಿಕರು ಶರಣಾಗತರಾದರು. ಮುಖ್ಯ ಅಪರಾಧಿ ಎಂದು ಘೋಷಿಸಿ 1831ರಲ್ಲಿ ನಂದಗಡದಲ್ಲಿ ಅವನನ್ನು ಗಲ್ಲಿಗೇರಿಸಲಾಯಿತು. ಆತನ ಅನೇಕ ಅನುಯಾಯಿಗಳನ್ನು ಜೀವಾವಧಿ ಶಿಕ್ಷೆಗೆ ಗುರಿಪಡಿಸಲಾಯಿತು. ಸಂಗೊಳ್ಳಿ ರಾಯಣ್ಣನ ಜೀವನ ಮತ್ತು ದೇಶ ಪ್ರೇಮವನ್ನು ಆ ಪ್ರದೇಶದ ಲಾವಣಿಗಳು ಇಂದಿಗೂ ಜೀವಂತವಾಗಿಸಿವೆ.

50) ಚಿಕ್ಕವೀರರಾಜೇಂದ್ರನನ್ನು ಪದಚ್ಯುತಗೊಳಿಸಿ ಬ್ರಿಟಿಷರು ಎಲ್ಲಿಗೆ ಕಳುಹಿಸಿದರು?

ಉತ್ತರ:– ಹಾಲೇರಿ ರಾಜವಂಶದ ಚಿಕ್ಕವೀರ ರಾಜೇಂದ್ರನನ್ನು ಬ್ರಿಟಿಷರು 1834ರಲ್ಲಿ ಪದಚ್ಯುತಗೊಳಿಸಿ ಅವನನ್ನು ಬೆಂಗಳೂರಿನ ಮೂಲಕ ವೆಲ್ಲೂರಿಗೆ ಕಳುಹಿಸಿದರು, ತರುವಾಯ ಕಾಶಿಗೆ ಸಾಗಿಸಿದರು.

51) ಕೊಡಗಿನನಲ್ಲಿ ಆದ ರಾಜಕೀಯ ಅಸಮಾಧಾನವನ್ನು ಬಳಸಿ ಬಂಡಾಯವನ್ನು ಸಂಘಟಿಸಿದವರು ಯಾರು?

ಉತ್ತರ:– ಸ್ವಾಮಿ ಅಪರಂಪರ, ಕಲ್ಯಾಣಸ್ವಾಮಿ ಮತ್ತು ಪುಟ್ಟಬಸಪ್ಪ ಸಶಸ್ತ್ರ ಬಂಡಾಯವನ್ನು ಸಂಘಟಿಸಿದರು.

52) ಯಾವ ವರ್ಷ ಬ್ರಿಟಿಷರು ಸ್ವಾಮಿ ಅಪರಂಪರ ಸೆರೆಹಿಡಿದರು ಮತ್ತು ಎಲ್ಲಿಗೆ ಕಳುಹಿಸಿದರು?

ಉತ್ತರ:– ಸ್ವಾಮಿ ಅಪರಂಪರನನ್ನು 1835ರಲ್ಲಿ ಬ್ರಿಟಿಷರು ಸೆರೆಹಿಡಿದು ಬೆಂಗಳೂರಿಗೆ ರವಾನಿಸಿದರು.

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

PHYSICS

CURRENT ELECTRICITY

25. Obtain the condition for the balance of a Wheatstone's network by applying Kirchoff's law.

Ans:- (.........Contd)

Applying the Kirchoff's I law to the nodes B and D, we get

$I_1 = I_3 + I_g$ ....(i)

$I_2 + I_g = I_4$ ......(ii)

Applying Kirchoff's II law to mesh ABDA,

$I_1P + I_gG - I_2R = 0$.......(iii)

and for the mesh BCDB,

$I_3Q - I_4S - I_gG = 0$.......(iv)

The current I_g through the galvanometer can be altered by varying resistances in the bridge.

Let any one or more of 4 resistances be changed until current through the galvanometer becomes zero ($I_g = 0$).

Under this condition the Wheatstone's network is said to be balanced.

Substituting $I_g = 0$ in eqns (i), (ii), (iii) and (iv), we get

$I_1 = I_3$ ....(v)

$I_2 = I_4$ ....(vi)

$I_1P - I_2R = 0 \Rightarrow I_1P = I_2R$........(vii)

$I_3Q - I_4S = 0 \Rightarrow I_3Q = I_4S$..........(viii)

Dividing eqns (7) and (8), we get

$$\frac{I_1P}{I_3Q} = \frac{I_2R}{I_4S}$$

But from eqns (5) & (6), $I_1 = I_3$ & $I_2 = I_4$

$$\therefore \frac{P}{Q} = \frac{R}{S}$$

This is the condition for balance of a Wheatstone's network.

If 3 of the 4 resistances are known then the 4th unknown one can be calculated.

Multiple Choice questions:-

1. Consider a current carrying wire(current I) in the shape of a circle. Note that as the current progresses along the wire, the direction of j (current density) charges in an exact manner, while the current I remain unaffected. The agent that is *essentially* responsible for is -

a) source of emf.

b) electric field produced by charges accumulated on the surface of wire.

c) the charges just behind a given segment of wire which push them just the right way by repulsion.

d) the charges ahead

2. Two batteries of emf ε_1 and ε_2 ($\varepsilon_2 > \varepsilon_1$) and internal resistances r_1 and r_2 respectively are connected in parallel as in fig below -



a) The equivalent emf ε_{eq} of the two cells is between ε_1 and ε_2, i.e. $\varepsilon_1 < \varepsilon_{eq} < \varepsilon_2$.

b) The equivalent emf ε_{eq} is smaller than ε_1.

c) The ε_{eq} is given by $\varepsilon_{eq} = \varepsilon_1 + \varepsilon_2$ always.

d) ε_{eq} is independent of internal resistances r_1 and r_2.

3. A resistance R is to be measured using a meter bridge. Student chooses the standard resistance S to be 100 Ω. He finds the null point at $l_1 = 2.9$ cm. He is told to attempt to improve the accuracy. Which of the following is a useful way?

a) He should measure l_1 more accurately.

b) He should change S to 1000Ω and repeat the experiment.

c) He should change S to 3Ω and repeat the experiment.

d) He should give up hope of a more accurate measurement with a meter bridge.

4. Two cells of emf's approximately 5V and 10V are to be accurately compared using a potentiometer of length 400cm.

a) The battery that runs the potentiometer should have voltage of 8V.

b) The battery of potentiometer can have a voltage of 15V and R adjusted so that the potential drop across the wire slightly exceeds 10V.

c) The first portion of 50 cm of wire itself should have a potential drop of 10V.

d) Potentiometer is usually used for comparing resistances and not voltages.

5. A metal rod of length 10 cm and a rectangular cross-section of $1\,cm \times \frac{1}{2}\,cm$ is connected to a battery across opposite faces. The resistance will be –

a) maximum when the battery is connected across $1\,cm \times \frac{1}{2}\,cm$ faces. ***(Contd....)***

ದೀಪು ಬರ್ಬರ ಹತ್ಯೆ: ಭಾರತ ಕಳವಳ

ಅಪರಾಧಿಗಳಿಗೆ ತಕ್ಕ ಶಿಕ್ಷೆಯಾಗಬೇಕು– ರಣಧೀರ್ ಜೈಸ್ವಾಲ್ ಆಗ್ರಹ

ಮುಖ್ಯಾಂಶಗಳು

- ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದಾಳಿ
- ಬಾಂಗ್ಲಾದೇಶದ ಪರಿಸ್ಥಿತಿ– ಭಾರತದಿಂದ ಸೂಕ್ಷ್ಮವಾಗಿ ಗಮನ
- ಅಧಿಕಾರಿಗಳ ಜೊತೆಗೆ ನಿರಂತರ ಸಂಪರ್ಕ

ನವದೆಹಲಿ (ಪಿಟಿಐ): ಬಾಂಗ್ಲಾದೇಶದಲ್ಲಿ ಹಿಂದು ವ್ಯಕ್ತಿ ದೀಪು ಚಂದ್ರದಾಸ್ ಅವರ ಬರ್ಬರ ಹತ್ಯೆಯಾದ ಬೆನ್ನಲ್ಲೇ, ಅಲ್ಲಿನ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದಾಳಿಗಳ ಬಗ್ಗೆ ಭಾರತ ತೀವ್ರ ಕಳವಳ ವ್ಯಕ್ತಪಡಿಸಿದೆ.

ದೀಪು ಹತ್ಯೆಗೆ ನ್ಯಾಯ ದೊರೆಯಬೇಕು ಮತ್ತು ಅಪರಾಧಿಗಳಿಗೆ ತಕ್ಕ ಶಿಕ್ಷೆಯಾಗಬೇಕು ಎಂದು ಭಾರತ ಆಗ್ರಹಿಸಿದೆ.

‘ಬಾಂಗ್ಲಾದೇಶದ ಪರಿಸ್ಥಿತಿಯನ್ನು ಭಾರತ ಸೂಕ್ಷ್ಮವಾಗಿ ಗಮನಿಸುತ್ತಿದೆ. ನಮ್ಮ ಅಧಿಕಾರಿಗಳು ಬಾಂಗ್ಲಾದ ಅಧಿಕಾರಿಗಳ ಜತೆ ಸಂಪರ್ಕದಲ್ಲಿದ್ದು, ಕಳವಳವನ್ನು ವ್ಯಕ್ತಪಡಿಸಿದ್ದಾರೆ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಾಂಗ್ಲಾದ ಯುವ ನಾಯಕ ಶರೀಫ್ ಉಸ್ಮಾನ್ ಹಾದಿ ಹತ್ಯೆಯಾದ ಬಳಿಕ ಬಾಂಗ್ಲಾದಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿದೆ. ಈ ವೇಳೆ ಹಿಂದು ವ್ಯಕ್ತಿ ದೀಪು ಚಂದ್ರದಾಸ್ ಎಂಬುವವರನ್ನು ಗುಂಪೊಂದು ಬೆಂಕಿ ಹಚ್ಚಿ ಹತ್ಯೆ ಮಾಡಿತ್ತು.

‘ದಾರಿ ತಪ್ಪಿಸುವ ವರದಿ’: ಬಾಂಗ್ಲಾದಲ್ಲಿ ಹಿಂದೂ ವ್ಯಕ್ತಿಯ ಹತ್ಯೆ ವಿರೋಧಿಸಿ ನವದೆಹಲಿಯ ಬಾಂಗ್ಲಾದೇಶ ಹೈಕಮಿಷನ್ ಕಚೇರಿ ಎದುರು ನಡೆದ ಪ್ರತಿಭಟನೆ ಕುರಿತು ಬಾಂಗ್ಲಾದೇಶದ ಪತ್ರಿಕೆಗಳು ಮಾಡಿರುವ ವರದಿಗಳು ದಾರಿ ತಪ್ಪಿಸುವಂತಿವೆ ಎಂದು ಕೇಂದ್ರ ಸರ್ಕಾರ ಖಂಡಿಸಿದೆ.

ದೀಪು ಅವರ ಹತ್ಯೆಯನ್ನು ಖಂಡಿಸಿ 20ರಿಂದ 25 ಯುವ ಜನರು ಬಾಂಗ್ಲಾದೇಶದ ಹೈಕಮಿಷನ್ ಕಚೇರಿ ಬಳಿ ಶನಿವಾರ ಪ್ರತಿಭಟನೆ ನಡೆಸಿ, ಕೆಲ ಘೋಷಣೆಗಳನ್ನು ಕೂಗಿದ್ದರು. ಬಾಂಗ್ಲಾದಲ್ಲಿರುವ ಎಲ್ಲ ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದ್ದರು ಎಂದು ಜೈಸ್ವಾಲ್ ಮಾಹಿತಿ ನೀಡಿದರು.

‘ಆದರೆ, ಬಾಂಗ್ಲಾದ ಪತ್ರಿಕೆಗಳಲ್ಲಿ, ಪ್ರತಿಭಟನಕಾರರು ಆವರಣದ ಭದ್ರತೆಯನ್ನು ಉಲ್ಲಂಘಿಸಲು ಯತ್ನಿಸಿದ್ದಾರೆ ಎಂದು ವರದಿಯಾಗಿದೆ. ಅದು ಸತ್ಯಕ್ಕೆ ದೂರವಾದದ್ದು. ಈ ರೀತಿ ಯಾವುದೇ ಉಲ್ಲಂಘನೆಗಳು ನಡೆದಿಲ್ಲ. ಕೆಲ ನಿಮಿಷ ಪ್ರತಿಭಟನೆ ನಡೆಸಿದ ಪ್ರತಿಭಟನಕಾರರ ಗುಂಪನ್ನು ಪೊಲೀಸರು ಚದುರಿಸಿದರು. ಈ ಕುರಿತು ದೃಶ್ಯಗಳ ಪುರಾವೆಗಳು ಸಾರ್ವಜನಿಕವಾಗಿ ಲಭ್ಯವಿವೆ’ ಎಂದುಅವರುವಿವರಿಸಿದರು.

ಭಾರತದ ಭೂ ಪ್ರದೇಶದಲ್ಲಿರುವ ವಿದೇಶಿ ರಾಯಭಾರ ಕಚೇರಿಗಳು ಮತ್ತು ಅಲ್ಲಿನ ಅಧಿಕಾರಿಗಳ ರಕ್ಷಣೆಗೆ ಭಾರತ ಬದ್ಧವಾಗಿದೆ ಎಂದು ಅವರು ಪ್ರತಿಕ್ರಿಯಿಸಿದರು.

ಬಾಂಗ್ಲಾದೇಶದಲ್ಲಿ ಹಿಂದೂ ವ್ಯಕ್ತಿ ದೀಪು ಚಂದ್ರದಾಸ್ ಹತ್ಯೆಯನ್ನು ಖಂಡಿಸಿ ವಿದ್ಯಾರ್ಥಿಗಳು ಢಾಕಾ ವಿಶ್ವವಿದ್ಯಾಲಯದ ಆವರಣದಲ್ಲಿ ಭಾನುವಾರ ಮೌನ ಪ್ರತಿಭಟನೆ ನಡೆಸಿದರು– ಎಎಫ್‌ಪಿ ಚಿತ್ರ

ಭಾರತದ ವೀಸಾ ಕಾರ್ಯಾಚರಣೆ ಸ್ಥಗಿತ

ಢಾಕಾ (ಪಿಟಿಐ): ಬಾಂಗ್ಲಾದ ಯುವ ನಾಯಕ ಶರೀಫ್ ಉಸ್ಮಾನ್ ಹಾದಿ ಹತ್ಯೆ ಬಳಿಕ ದೇಶದಲ್ಲಿ ಉದ್ವಿಗ್ನತೆ ಹೆಚ್ಚಿರುವ ಕಾರಣ ಚಟ್ಟೋಗ್ರಾಮ್‌ನ ಭಾರತೀಯ ವೀಸಾ ಅರ್ಜಿ ಕೇಂದ್ರದಲ್ಲಿ ವೀಸಾ ಕಾರ್ಯಾಚರಣೆಯನ್ನು ಭಾನುವಾರ ಸ್ಥಗಿತಗೊಳಿಸಲಾಗಿದೆ.

‘ಇತ್ತೀಚೆಗೆ ನಡೆದ ಬೆಳವಣಿಗೆಗಳಿಂದ ಭದ್ರತಾ ಸಮಸ್ಯೆಗಳು ಉಂಟಾಗಿರುವ ಕಾರಣ ಭಾನುವಾರದಿಂದ (ಡಿ. 21) ಮುಂದಿನ ಆದೇಶದವರೆಗೆ ವೀಸಾ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿದೆ. ಪರಿಸ್ಥಿತಿ ಸುಧಾರಿಸಿದ ಬಳಿಕ ಕೇಂದ್ರವನ್ನು ಪುನಃ ತೆರೆಯಲಾಗುವುದು’ ಎಂದು ಕೇಂದ್ರದ ಪ್ರಕಟಣೆ ತಿಳಿಸಿದೆ.

ಢಾಕಾ, ಖುಲ್ನಾ, ರಾಜ್‌ಶಾಹಿ, ಚಟ್ಟೋಗ್ರಾಮ್, ಸಿಲ್ಹೆಟ್‌ಗಳಲ್ಲಿ ಭಾರತದ ವೀಸಾ ಕೇಂದ್ರಗಳಿವೆ. ಈ ಪೈಕಿ ಚಟ್ಟೋಗ್ರಾಮ್ ಹೊರತುಪಡಿಸಿ ಉಳಿದ ನಾಲ್ಕು ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ ಎಂದು ಅದು ಹೇಳಿದೆ.

ವೀಸಾ ಕೇಂದ್ರ– ಭದ್ರತೆ ಹೆಚ್ಚಳ

ಢಾಕಾ (ಪಿಟಿಐ): ಪ್ರತಿಭಟನೆ, ಹಿಂಸಾಚಾರ ಹೆಚ್ಚುತ್ತಿರುವ ಕಾರಣ ಬಾಂಗ್ಲಾದೇಶದ ಸಿಲ್ಹೆಟ್‌ನಲ್ಲಿನ ಭಾರತೀಯ ಸಹಾಯಕ ಹೈಕಮಿಷನ್ ಕಚೇರಿ ಮತ್ತು ವೀಸಾ ಅರ್ಜಿ ಕೇಂದ್ರಕ್ಕೆ ಹೆಚ್ಚಿನ ಭದ್ರತೆ ಒದಗಿಸಲಾಗಿದೆ ಎಂದು ಬಾಂಗ್ಲಾದ ಹಿರಿಯ ಅಧಿಕಾರಿಗಳು ಹೇಳಿದ್ದಾರೆ.

‘ಈ ಪರಿಸ್ಥಿತಿಯನ್ನು ಮೂರನೇ ವ್ಯಕ್ತಿಗಳು ದುರ್ಬಳಕೆ ಮಾಡಿಕೊಳ್ಳಲು ಅವಕಾಶ ನೀಡಬಾರದು ಎಂಬ ಉದ್ದೇಶದಿಂದ ಹೆಚ್ಚಿನ ಭದ್ರತೆ ನೀಡಿದ್ದೇವೆ’ ಎಂದು ಸಿಲ್ಹೆಟ್ ಮೆಟ್ರೊಪಾಲಿಟನ್ ಪೊಲೀಸ್‌ನ ಹೆಚ್ಚುವರಿ ಉಪ ಆಯುಕ್ತ ಸೈಫುಲ್ ಇಸ್ಲಾಂ ಮಾಹಿತಿ ನೀಡಿದ್ದಾರೆ. ಭದ್ರತಾ ಪಡೆಗಳ ಸದಸ್ಯರು ರಾತ್ರಿಯಿಡೀ ಕಾರ್ಯನಿರ್ವಹಿಸಿದ್ದಾರೆ ಎಂದು ಅವರು ವಿವರಿಸಿದ್ದಾರೆ.

ಹಾದಿ ಹತ್ಯೆ ಬೆನ್ನಲ್ಲೇ, ಭಾರತದ ಸಹಾಯಕ ಹೈಕಮಿಷನ್ ಕಚೇರಿಯನ್ನು ಮುತ್ತಿಗೆ ಹಾಕುವುದಾಗಿ ಗಾನೋ ಓದಿಕರ್ ಪರಿಷತ್ ಇತ್ತೀಚೆಗೆ ಘೋಷಿಸಿತ್ತು. ಈ ಹಿನ್ನೆಲೆಯಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿದೆ.

‘ತ್ರಿಪುರಾದಲ್ಲಿ ಸೇನಾ ಬೆಟಾಲಿಯನ್’

ಅಗರ್ತಲಾ (ಪಿಟಿಐ): ಬಾಂಗ್ಲಾದಲ್ಲಿ ಹೆಚ್ಚುತ್ತಿರುವ ಅಶಾಂತಿಯ ಬೆನ್ನಲ್ಲೇ, ಈಶಾನ್ಯ ರಾಜ್ಯವಾದ ತ್ರಿಪುರಾದಲ್ಲಿ ಸೇನಾ ಬೆಟಾಲಿಯನ್ ಅನ್ನು ನಿಯೋಜಿಸಲಾಗಿದೆ ಎಂದು ತ್ರಿಪುರಾದ ಮುಖ್ಯಮಂತ್ರಿ ಮಾಣಿಕ್ ಸಹಾ ಭಾನುವಾರ ತಿಳಿಸಿದ್ದಾರೆ.

1971ರ ಭಾರತ–ಪಾಕ್ ಯುದ್ಧದಲ್ಲಿ ಹೋರಾಡಿದ ಸೇನಾ ಬೆಟಾಲಿಯನ್ ಅನ್ನು ಇಲ್ಲಿಗೆ ನಿಯೋಜಿಸಲಾಗಿದೆ. ಬಾಂಗ್ಲಾ ಸೇನೆಯಾದ ‘ಮುಕ್ತಿ ಬಹಿನಿಗೆ’ ತರಬೇತಿ ನೀಡಿದ್ದು ಇದೇ ಬೆಟಾಲಿಯನ್ ಎಂದು ಅವರು ಮಾಹಿತಿ ನೀಡಿದ್ದಾರೆ.

ಬಿಜೆಪಿ ಕಾನೂನು ಘಟಕದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಬಾಂಗ್ಲಾದೇಶದಲ್ಲಿ ನಡೆಯುತ್ತಿರುವ ಘಟನೆಗಳನ್ನು ಮತ್ತು ಅದರ ಸಂಭಾವ್ಯ ಪರಿಣಾಮಗಳ ಕುರಿತು ನಾನು ದೆಹಲಿಗೆ ವರದಿಗಳನ್ನು ರವಾನಿಸುತ್ತಿದ್ದೇನೆ’ ಎಂದು ಅವರು ಹೇಳಿದ್ದಾರೆ.

1971ರ ಯುದ್ಧದ ವೇಳೆ ಭಾರತೀಯ ಸೇನೆಯು ಪರ್ವತ ಭಾಗಗಳಲ್ಲಿ ನಿರ್ಣಾಯಕ ಪಾತ್ರವಹಿಸಿತ್ತು ಎಂದ ಅವರು, ಬಾಂಗ್ಲಾದೇಶದಲ್ಲಿನ ಅಶಾಂತಿಯ ವಾತಾವರಣಕ್ಕೆ ಪಾಕಿಸ್ತಾನ ಕಾರಣ ಎಂದು ದೂರಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಸುರಕ್ಷಿತ ಕೈಯಲ್ಲಿ ಭಾರತ ಇದೆ ಎಂಬುದು ಸಂತೋಷದ ವಿಷಯವಾಗಿದೆ ಎಂದು ಅವರು ತಿಳಿಸಿದ್ದಾರೆ.

‘ದಾರಿ ತಪ್ಪಿಸುವ ಪ್ರಚಾರದಿಂದ ಆರ್‌ಎಸ್‌ಎಸ್ ಬಗ್ಗೆ ತಪ್ಪು ಕಲ್ಪನೆ’

ಕೋಲ್ಕತ್ತ (ಪಿಟಿಐ): ‘ದಾರಿ ತಪ್ಪಿಸುವ ಅಭಿಯಾನಗಳಿಂದ, ಒಂದು ವರ್ಗದ ಜನರಲ್ಲಿ ಸಂಘಟನೆಯ ಬಗ್ಗೆ ತಪ್ಪು ಕಲ್ಪನೆಗಳು ಮೂಡಿವೆ’ ಎಂದು ಆರ್‌ಎಸ್‌ಎಸ್‌ನ ಸರಸಂಘಚಾಲಕ ಮೋಹನ್ ಭಾಗವತ್ ತಿಳಿಸಿದ್ದಾರೆ.


ಮೋಹನ್ ಭಾಗವತ್

ಆರ್‌ಎಸ್‌ಎಸ್‌ನ ಶತಮಾನೋತ್ಸವದ ಹಿನ್ನೆಲೆಯಲ್ಲಿ ಇಲ್ಲಿನ ಸೈನ್ಸ್ ಸಿಟಿ ಆಡಿಟೋರಿಯಂನಲ್ಲಿ ಭಾನುವಾರ ಆಯೋಜಿಸಿದ್ದ ಉಪನ್ಯಾಸ– ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

‘ಸಂಘಕ್ಕೆ ಯಾರೂ ಶತ್ರುಗಳಿಲ್ಲ. ಸಂಘಟನೆಯು ಬೆಳೆದರೆ, ಸಂಕುಚಿತ ಮನಃಸ್ಥಿತಿಯ ಅಂಗಡಿಗಳು ಮುಚ್ಚುತ್ತವೆ’ ಎಂದು ವಿರೋಧಿಗಳಿಗೆ ತಿರುಗೇಟು ನೀಡಿದ್ದಾರೆ.

‘ಒಬ್ಬ ವ್ಯಕ್ತಿಗೆ ಆರ್‌ಎಸ್‌ಎಸ್ ಕುರಿತು ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು ಇದೆ. ಅದು ವಾಸ್ತವವನ್ನು ಆಧರಿಸಿ ಇರಬೇಕೇ ಹೊರತು, ನಿರೂಪಣೆ ಅಥವಾ ಎರಡನೇ ಹಂತದ ಮಾಹಿತಿಯಿಂದ ಅಲ್ಲ. ಜನರ ಮುಂದೆ ನೈಜ ವಿಚಾರವನ್ನು ತಿಳಿಸುವ ಉದ್ದೇಶದಿಂದ ದೇಶದ ನಾಲ್ಕು ನಗರಗಳಲ್ಲಿ ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ’ ಎಂದು ಹೇಳಿದ್ದಾರೆ.

ರಾಜಕೀಯ ಕಾರ್ಯಸೂಚಿಯಿಲ್ಲ: ‘ಆರ್‌ಎಸ್‌ಎಸ್ ಯಾವುದೇ ರಾಜಕೀಯ ಅಜೆಂಡಾ ಹೊಂದಿಲ್ಲ. ಸಂಘವು ಹಿಂದೂ ಸಮಾಜದ ರಕ್ಷಣೆ ಹಾಗೂ ಏಳ್ಗೆಗಾಗಿ ಶ್ರಮಿಸುತ್ತದೆ. ದೇಶವು ಮತ್ತೊಮ್ಮೆ ‘ವಿಶ್ವಗುರು’ ಆಗುತ್ತದೆ, ಆ ಉದ್ದೇಶಕ್ಕಾಗಿಯೇ ಸಮಾಜವನ್ನು ಸಿದ್ಧಪಡಿಸುವುದು ಆರ್‌ಎಸ್‌ನ ಕರ್ತವ್ಯವಾಗಿದೆ’ ಎಂದು ಭಾಗವತ್ ತಿಳಿಸಿದ್ದಾರೆ.

ಶತಮಾನೋತ್ಸವದ ಅಂಗವಾಗಿ ಆರ್‌ಎಸ್‌ಎಸ್ ನವದೆಹಲಿ, ಮುಂಬೈ, ಬೆಂಗಳೂರಿನಲ್ಲಿಯೂ ಈ ಹಿಂದೆ ಕಾರ್ಯಕ್ರಮವನ್ನು ಆಯೋಜಿಸಿತ್ತು.

ಶಬರಿಮಲೆ: 27ರಂದು ಮಂಡಲ ಪೂಜೆ

ಶಬರಿಮಲೆ (ಕೇರಳ) (ಪಿಟಿಐ): ಶಬರಿಮಲೆಯ ಅಯ್ಯಪ್ಪ ದೇಗುಲದಲ್ಲಿ ಡಿಸೆಂಬರ್ 27ರಂದು ಬೆಳಿಗ್ಗೆ 10.10–11.30ರವರೆಗೆ ಮಂಡಲ ಪೂಜೆ ನಡೆಯಲಿದೆ ಎಂದು ದೇಗುಲದ ಪ್ರಧಾನ ಅರ್ಚಕ ತಿಳಿಸಿದ್ದಾರೆ.

ಪೂಜೆಗೆ ಸಂಬಂಧಿಸಿದ ದೀಪಾರಾಧನೆ ಬೆಳಿಗ್ಗೆ 11.30ಕ್ಕೆ ಕೊನೆಗೊಳ್ಳಲಿದೆ. ಅಯ್ಯಪ್ಪ ಸ್ವಾಮಿಯ ಸ್ವರ್ಣ ವಸ್ತ್ರದ ಮೆರವಣಿಗೆಯು ಡಿ.23ರಂದು ಬೆಳಿಗ್ಗೆ 7 ಗಂಟೆಗೆ ಅರನ್ಮುಳದ ಶ್ರೀ ಪಾರ್ಥಸಾರಥಿ ದೇಗುಲದಿಂದ ಆರಂಭವಾಗಲಿದೆ. ಡಿ.26ರ ಸಂಜೆ ದೀಪಾರಾಧನೆಗೆ ಮೊದಲು ಇದು ಶಬರಿಮಲೆಗೆ ಬರುವ ನಿರೀಕ್ಷೆಯಿದೆ ಎಂದು ಅವರು ತಿಳಿಸಿದ್ದಾರೆ.

ಡಿ.27ರಂದು ಮಧ್ಯಾಹ್ನ ಮೂರ್ತಿಯನ್ನು ಸ್ವರ್ಣ ವಸ್ತ್ರದ ಮೂಲಕ ಅಲಂಕರಿಸಿದ ಬಳಿಕ ಮಂಡಲ ಪೂಜೆ ನಡೆಯಲಿದ್ದು, ಅದೇ ದಿನ ರಾತ್ರಿ 11 ಗಂಟೆಗೆ ದೇಗುಲವನ್ನು ಮುಚ್ಚಲಾಗುವುದು. ‘ಮಕರವಿಳಕ್ಕು’ ಉತ್ಸವಕ್ಕಾಗಿ ಡಿ.30ರಂದು ಸಂಜೆ 5 ಗಂಟೆಗೆ ದೇಗುಲವನ್ನು ಮತ್ತೆ ತೆರೆಯಲಾಗುವುದು ಎಂದು ಪ್ರಧಾನ ಅರ್ಚಕರು ತಿಳಿಸಿದ್ದಾರೆ.

‘ದಲಿತರಿಗೆ ಶೇ 30ರಷ್ಟು ಪ್ರಶಸ್ತಿ ಮೀಸಲಿಡಿ’

ಪ್ರಜಾವಾಣಿ ವಾರ್ತೆ

ರಾಯಚೂರು: ‘ಅಕಾಡೆಮಿ ಹಾಗೂ ರಾಜ್ಯೋತ್ಸವ ಪ್ರಶಸ್ತಿಗಳಲ್ಲಿ ಶೇ 30ರಷ್ಟು ಪ್ರಶಸ್ತಿಗಳನ್ನು ಈ ನೆಲದ ಮೂಲನಿವಾಸಿಗಳಿಗೆ ಮೀಸಲಿಡಬೇಕು’ ಎಂದು ಸಾಹಿತಿ ಕುಂ.ವೀರಭದ್ರಪ್ಪ ಇಲ್ಲಿ ಒತ್ತಾಯಿಸಿದರು.


ಕುಂ. ವೀರಭದ್ರಪ್ಪ

ಭಾನುವಾರ ನಡೆದ ಹನ್ನೊಂದನೆಯ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದಲ್ಲಿ ಸಾಧಕರಿಗೆ ರಾಷ್ಟ್ರೀಯ ಯುವ ಪ್ರಶಸ್ತಿ ಹಾಗೂ ರಾಷ್ಟ್ರೀಯ ಪುಸ್ತಕ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ಪ್ರಾಧಿಕಾರ, ಅಕಾಡೆಮಿಗಳನ್ನು ರಚಿಸುವಾಗ ಸರ್ಕಾರ ಅವುಗಳಿಗೆ ದಲಿತ ಸದಸ್ಯರನ್ನು ನೇಮಿಸಬೇಕು. ರಾಜ್ಯದಲ್ಲಿ 30ರಷ್ಟು ಪ್ರಶಸ್ತಿಗಳನ್ನು ದಲಿತರಿಗೆ ಮೀಸಲಿಡಬೇಕು. ಈ ಮೂಲಕ ದಲಿತ ಸಮುದಾಯವನ್ನು ಜಾಗೃತಗೊಳಿಸಬೇಕು’ ಎಂದು ಮನವಿ ಮಾಡಿದರು.

‘ಉಪದ್ರವಿ ಸಾಹಿತಿಗಳು ನಮ್ಮ ಮಧ್ಯೆ ಇದ್ದಾರೆ. ಇಂಥವರು ನಮ್ಮನ್ನು ಉಳಿಸಲು ಸಾಧ್ಯವಿಲ್ಲ. ದಲಿತರು ಕೃತಿಗಳನ್ನು ಬರೆದದ್ದನ್ನೇ ಸಾಧನೆಯಾಗಿ ಪರಿಗಣಿಸಬೇಕು. ದಲಿತರೇ ದೇಶದ ಮೂಲನಿವಾಸಿಗಳು. ನಮಗೆ ಕಮಲ ಮುಖ್ಯವಲ್ಲ, ಕಮಲದ ಕೆಳಗಿನ ಕೆಸರು ಮುಖ್ಯ. ಕಾರಣ ಅದರ ಕೆಳಗೆ ಬ್ರಹ್ಮ ರಾಕ್ಷಸ ಇದ್ದಾನೆ. ಹೀಗಾಗಿ ದಲಿತ ಸಂವೇದನೆಗಳನ್ನು ರಕ್ಷಿಸುವ ಹೊಣೆ ಎಲ್ಲರ ಮೇಲಿದೆ’ ಎಂದು ಪ್ರತಿಪಾದಿಸಿದರು.

ಶಿರಸಿ ಮಾರಿಕಾಂಬಾ ಜಾತ್ರೆ ಫೆ.24ರಿಂದ

ಶಿರಸಿ: ಶಿರಸಿಯ ಮಾರಿಕಾಂಬಾ ದೇವಿಯ ಜಾತ್ರೆ ಫೆ.24ರಿಂದ ಮಾರ್ಚ್ 4ರವರೆಗೆ ಜರುಗಲಿದೆ. ಭಾನುವಾರ ನಡೆದ ಜಾತ್ರಾ ಮುಹೂರ್ತ ನಿಗದಿ ಸಭೆಯಲ್ಲಿ ಅರ್ಚಕ ಶರಣ ಆಚಾರ್ಯ ದಿನಾಂಕ ಘೋಷಿಸಿದರು.

‘ಜಾತ್ರಾ ಮಹೋತ್ಸವದ ವಿಧಿವಿಧಾನಗಳು ಜ.7ರಿಂದ ಆರಂಭವಾಗಲಿವೆ. ಫೆ.24ರಂದು ದೇವಿ ಕಲ್ಯಾಣೋತ್ಸವ, ಫೆ.25ರಂದು ರಥೋತ್ಸವ ಜರುಗಲಿದೆ. ಫೆ.26ರಿಂದ ದರ್ಶನ, ಸೇವೆಗೆ ಅವಕಾಶ ನೀಡಲಾಗಿದೆ’ ಎಂದರು.

ತಾಪಮಾನ ಕುಸಿತ: ಇಂದು ಶೀತ ಗಾಳಿ ಸಾಧ್ಯತೆ

ಒಂದನೇ ಪುಟದಿಂದ...

ಬೀದರ್‌ನಲ್ಲಿ ತೀವ್ರ ಶೀತ ಗಾಳಿ ಕಾಣಿಸಿಕೊಂಡ ಪರಿಣಾಮ, ಅಲ್ಲಿ ಕನಿಷ್ಠ ಉಷ್ಣಾಂಶವು 7.4 ಡಿಗ್ರಿ ಸೆಲ್ಸಿಯಸ್‌ಗೆ ಕುಸಿತವಾಗಿತ್ತು. ರಾಯಚೂರು (9.4 ಡಿಗ್ರಿ ಸೆಲ್ಸಿಯಸ್), ಧಾರವಾಡ (9.5 ಡಿಗ್ರಿ ಸೆಲ್ಸಿಯಸ್) ಹಾಗೂ ವಿಜಯಪುರ (9.8 ಡಿಗ್ರಿ ಸೆಲ್ಸಿಯಸ್) ಜಿಲ್ಲೆಯಲ್ಲಿ ಕನಿಷ್ಠ ಉಷ್ಣಾಂಶ 10 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆಯಿತ್ತು.

ಕರಾವಳಿ ಹೊರತು ಪಡಿಸಿ, ಉತ್ತರ ಹಾಗೂ ದಕ್ಷಿಣ ಒಳನಾಡಿನ ಪ್ರದೇಶಗಳಲ್ಲಿ ಕನಿಷ್ಠ ಉಷ್ಣಾಂಶವು 15 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ. ಕೆಲವೆಡೆ ದಟ್ಟವಾದ ಮಂಜು ಕೂಡ ಕಾಣಿಸಿಕೊಂಡ ಪರಿಣಾಮ ಚಳಿ ಹೆಚ್ಚಾಗಿತ್ತು.

ಬೆಂಗಳೂರಿನಲ್ಲಿ ಮುಂದಿನ ಎರಡು ದಿನ ಮುಂಜಾನೆ ದಟ್ಟವಾದ ಮಂಜು ಕವಿಯುವ ಸಾಧ್ಯತೆಯಿದೆ. ಗರಿಷ್ಠ ಹಾಗೂ ಕನಿಷ್ಠ ಉಷ್ಣಾಂಶವು ಕ್ರಮವಾಗಿ 27 ಡಿಗ್ರಿ ಸೆಲ್ಸಿಯಸ್ ಮತ್ತು 15 ಡಿಗ್ರಿ ಸೆಲ್ಸಿಯಸ್ ಇರುವ ಸಂಭವವಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮದ್ಯದಂಗಡಿ ಹರಾಜು ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳ ವ್ಯಾಪ್ತಿಯಲ್ಲಿ ಹಂಚಿಕೆಯಾಗದ ಮತ್ತು ಸ್ಥಗಿತಗೊಂಡಿರುವ 569 ಮದ್ಯದಂಗಡಿ ಸನ್ನದುಗಳ ಹರಾಜು ಪ್ರಕ್ರಿಯೆಗೆ ಅಬಕಾರಿ ಇಲಾಖೆಯು ಚಾಲನೆ ನೀಡಿದೆ.

ಬಳಕೆಯಲ್ಲಿ ಇಲ್ಲದ ಸನ್ನದುಗಳನ್ನು ಪಾರದರ್ಶಕ ಇ-ಹರಾಜು ಮೂಲಕ ಹಂಚಿಕೆ ಮಾಡಲಾಗುತ್ತದೆ ಎಂದು 2025–26ನೇ ಸಾಲಿನ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿದ್ದರು. ಅದರಂತೆ ಸೋಮವಾರದಿಂದಲೇ (22ನೇ ಡಿಸೆಂಬರ್) ಹರಾಜು ಪ್ರಕ್ರಿಯೆ ಆರಂಭವಾಗಲಿದೆ ಎಂದು ಅಬಕಾರಿ ಇಲಾಖೆಯ ಪ್ರಕಟಣೆ ತಿಳಿಸಿದೆ.

ಸ್ಥಗಿತಗೊಂಡಿರುವ ಹಾಗೂ ಹಂಚಿಕೆಯಾಗದೇ ಇರುವ ಸಿಎಲ್–2 ಮತ್ತು ಸಿಎಲ್–11ಸಿ ಸನ್ನದುಗಳನ್ನು ಈ ಹರಾಜು ಪ್ರಕ್ರಿಯೆ ಅಡಿಯಲ್ಲಿ ‘ಸಿಎಲ್–2ಎ’ ಎಂದು ವರ್ಗೀಕರಿಸಲಾಗಿದೆ. ಸ್ಥಗಿತಗೊಂಡಿರುವ ಸಿಎಲ್–9 ಸನ್ನದುಗಳನ್ನು ‘ಸಿಎಲ್–9ಎ’ ಎಂದು ಮರುಹೆಸರಿಸಲಾಗಿದೆ. ಈ ಪ್ರಕಾರ 477 ಸಿಎಲ್–2ಎ ಮತ್ತು 92 ಸಿಎಲ್–9ಎ ಸನ್ನದುಗಳು ಹರಾಜಿಗೆ ಲಭ್ಯವಿವೆ.

ಯಾವುದೇ ವ್ಯಕ್ತಿ, ಏಕವ್ಯಕ್ತಿ ಮಾಲೀಕತ್ವದ ಸಂಸ್ಥೆ, ಟ್ರಸ್ಟ್, ಸೊಸೈಟಿ, ಪಾಲುದಾರಿಕೆ ಸಂಸ್ಥೆ, ಸೀಮಿತ ಪಾಲುದಾರಿಕೆ ಸಂಸ್ಥೆಗಳು ಇ–ಹರಾಜಿನಲ್ಲಿ ಭಾಗವಹಿಸಬಹುದಾಗಿದೆ.

ಇ–ಹರಾಜು ಪ್ರಕ್ರಿಯೆಯನ್ನು ಭಾರತ ಸರ್ಕಾರದ ಎಂಎಸ್‌ಟಿಸಿ ಲಿಮಿಟೆಡ್‌ನ ಇ-ಪೋರ್ಟಲ್‌ನಲ್ಲಿ ನಡೆಸಲಾಗುತ್ತದೆ. ಹರಾಜಿನಲ್ಲಿ ಭಾಗವಹಿಸಲು ಬಯಸುವವರು ಎಂಎಸ್‌ಟಿಸಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ಪ್ರತಿ ನೋಂದಣಿಗೆ ₹1,000 ಶುಲ್ಕ ನಿಗದಿಪಡಿಸಲಾಗಿದೆ ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

ಅರ್ಜಿಗೆ ₹50,000 ಶುಲ್ಕ: ಒಂದು ನೋಂದಣಿ ಅಡಿಯಲ್ಲಿ ಹಲವು ಸನ್ನದುಗಳಿಗಾಗಿ ಅರ್ಜಿ ಸಲ್ಲಿಸಬಹುದು. ಆದರೆ, ಪ್ರತಿ ಅರ್ಜಿಗೆ ₹50,000 ಶುಲ್ಕವನ್ನು ಪ್ರತ್ಯೇಕವಾಗಿ ಪಾವತಿ ಮಾಡಬೇಕು. ಅರ್ಜಿ ಶುಲ್ಕವನ್ನು ವಾಪಸ್ ಮಾಡಲಾಗುವುದಿಲ್ಲ. ಜತೆಗೆ ಪ್ರತಿ ಸನ್ನದಿಗೆ ಸಲ್ಲಿಸುವ ಅರ್ಜಿಯ ಜತೆಗೆ, ಸನ್ನದಿನ ಮೂಲ ಬೆಲೆಯ ಶೇ 2ರಷ್ಟು ಇಎಂಡಿ ಇರಿಸಬೇಕಾಗುತ್ತದೆ. ಹರಾಜು ಮೊತ್ತ ಹೆಚ್ಚಳದ ವೇಳೆ ಕನಿಷ್ಠ ₹2 ಲಕ್ಷ ಅಥವಾ ಅದರ ಗುಣಾಕಾರದಷ್ಟು (ಉದಾಹರಣೆಗೆ ₹4 ಲಕ್ಷ/₹ 6 ಲಕ್ಷ/ ₹8 ಲಕ್ಷ) ಮೊತ್ತವನ್ನು ನಮೂದಿಸಬೇಕಾಗುತ್ತದೆ ಎಂದು ವಿವರಿಸಿದೆ.

ಷರತ್ತುಗಳು

- ಬಿಡ್‌ದಾರರು ತಮಗೆ ನೀಡಿರುವ ವ್ಯಾಲೆಟ್‌ನಲ್ಲಿ ಅಗತ್ಯ ಪ್ರಮಾಣದ ಹಣವನ್ನು ಜಮೆ ಮಾಡಬೇಕು. ಅರ್ಜಿ ಶುಲ್ಕ, ಇಎಂಡಿ ಸೇರಿ ಎಲ್ಲ ಪ್ರಕ್ರಿಯೆಗಳ ಪಾವತಿಯನ್ನು ಈ ವಾಲೆಟ್ ಮೂಲಕವೇ ನಡೆಸಬೇಕು
- ಹರಾಜು ನಡೆಸಿದ ಅಬಕಾರಿ ವರ್ಷ ಮತ್ತು ಅಂಗೀಕಾರ ಪತ್ರ ಪಡೆದ ವರ್ಷ ಒಳಗೊಂಡು ಒಟ್ಟು 5 ಅಬಕಾರಿ ವರ್ಷಗಳವರೆಗೆ (30/06/2030ರವರೆಗೆ) ಸನ್ನದು ಚಾಲ್ತಿಯಲ್ಲಿ ಇರಲಿದೆ
- ಮೊದಲ ವರ್ಷದಲ್ಲಿ ಸನ್ನದು ಶುಲ್ಕಕ್ಕೆ ವಿನಾಯತಿ ಇದ್ದು, ನಂತರದ ನಾಲ್ಕು ವರ್ಷವೂ ವಾರ್ಷಿಕ ಸನ್ನದು ಶುಲ್ಕ ಪಾವತಿಸಬೇಕು

ಹರಾಜು ಪ್ರಕ್ರಿಯೆ

ವಿವರ	ದಿನಾಂಕ
ಬಿಡ್‌ದಾರರ ನೋಂದಣಿ	22.12.2025
ಬಿಡ್‌ದಾರರಿಗೆ, ಹರಾಜು ನೋಡಲ್ ಅಧಿಕಾರಿಗಳಿಗೆ ತರಬೇತಿ	23.12.2025 ರಿಂದ 07.01.2026
ನೇರ ಹರಾಜು	13.01.2026 ರಿಂದ 20.01.2026

ಅಂಕಿ ಅಂಶಗಳು

₹70 ಲಕ್ಷ ಆಯ್ದ ಕೆಲ ಜಿಲ್ಲೆಗಳಲ್ಲಿ ಸನ್ನದಿನ ಮೂಲ ಬೆಲೆ. ಇದು ಹರಾಜಿನಲ್ಲಿ ಲಭ್ಯವಿರುವ ಸನ್ನದಿನ ಕನಿಷ್ಠ ಮೂಲ ಬೆಲೆ. ಮೂಲ ಬೆಲೆಯ ಮೇಲೆ ಹರಾಜು ನಡೆಸಲಾಗುತ್ತದೆ

₹1.50 ಕೋಟಿ ಬೆಂಗಳೂರು ನಗರ ಪ್ರದೇಶದಲ್ಲಿ ಹರಾಜಿಗೆ ಲಭ್ಯವಿರುವ ಸನ್ನದುಗಳ ಮೂಲ ಬೆಲೆ

ಒಳಮೀಸಲಾತಿ ಅನ್ವಯ

ಮದ್ಯದಂಗಡಿ ಸನ್ನದುಗಳ ಹರಾಜಿನಲ್ಲಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಅನ್ವಯ ಮಾಡಲಾಗಿದೆ. ಪರಿಶಿಷ್ಟ ಜಾತಿಗಳಲ್ಲಿ ಒಳಮೀಸಲಾತಿ ಅನ್ವಯ ‘ಎ’ ವರ್ಗದವರಿಗೆ ಶೇ 6ರಷ್ಟು, ‘ಬಿ’ ವರ್ಗದವರಿಗೆ ಶೇ 6ರಷ್ಟು ಮತ್ತು ‘ಸಿ’ ವರ್ಗದವರಿಗೆ ಶೇ 5ರಷ್ಟು ಸನ್ನದುಗಳನ್ನು ಮೀಸಲಿರಿಸಲಾಗಿದೆ. ಪರಿಶಿಷ್ಟ ಪಂಗಡಗಳಿಗೆ ಶೇ 7ರಷ್ಟು ಸನ್ನದುಗಳನ್ನು ಮೀಸಲಿರಿಸಲಾಗಿದೆ.

ರಾಷ್ಟ್ರವಿರೋಧಿ ಚಟುವಟಿಕೆಯಲ್ಲಿ ಕಾಂಗ್ರೆಸ್: ಪ್ರಧಾನಿ ಆರೋಪ

ನಾಮರೂಪ (ಅಸ್ಸಾಂ) (ಪಿಟಿಐ): ‘ಕಾಂಗ್ರೆಸ್ ಪಕ್ಷವು ರಾಷ್ಟ್ರ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದು, ಬಾಂಗ್ಲಾದೇಶದ ಅಕ್ರಮ ವಲಸಿಗರಿಗೆ ಅಸ್ಸಾಂನಲ್ಲಿ ನೆಲಸಲು ನೆರವು ನೀಡುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಆರೋಪಿಸಿದರು.

ದಿಬ್ರುಗಢ ಜಿಲ್ಲೆಯ ನಾಮರೂಪದಲ್ಲಿ ₹10,601 ಕೋಟಿ ವೆಚ್ಚದಲ್ಲಿ ಬ್ರೌನ್‌ಫೀಲ್ಡ್ ಅಮೋನಿಯಾ– ಯೂರಿಯಾ ಘಟಕಕ್ಕೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು. 2030ರ ವೇಳೆಗೆ ಈ ಘಟಕ ಕಾರ್ಯಾರಂಭ ಮಾಡಲಿದ್ದು, 12.7 ಲಕ್ಷ ಮೆಟ್ರಿಕ್ ಟನ್ ಯೂರಿಯಾ ಉತ್ಪಾದನಾ ಸಾಮರ್ಥ್ಯ ಹೊಂದಿರಲಿದೆ.

‘ಇಲ್ಲಿನ ಹಳೆ ಘಟಕವನ್ನು ಆಧುನೀಕರಿಸಲು ಮತ್ತು ರೈತರ ಸಮಸ್ಯೆಗಳನ್ನು ಪರಿಹರಿಸಲು ಕಾಂಗ್ರೆಸ್ ಯಾವುದೇ ಪ್ರಯತ್ನ ಮಾಡಲಿಲ್ಲ’ ಎಂದು ಅವರು ವಾಗ್ದಾಳಿ ನಡೆಸಿದರು.

‘ವಿರೋಧ ಪಕ್ಷವು ಅಸ್ಸಾಂ ಜನರ ಗುರುತು, ಅಸ್ತಿತ್ವ ಮತ್ತು ಹೆಮ್ಮೆಯ ಬಗ್ಗೆ ಕಾಳಜಿ ಹೊಂದಿಲ್ಲ. ಹಾಗಾಗಿಯೇ ಅದು ಮತದಾರರ ಪಟ್ಟಿ ಪರಿಷ್ಕರಣೆಯನ್ನು ವಿರೋಧಿಸುತ್ತಿದೆ. ಅದಕ್ಕೆ ಅಧಿಕಾರ ಕಸಿದುಕೊಳ್ಳುವ ಬಯಕೆ ಮಾತ್ರ ಇದೆ. ಆದರೆ, ಬಿಜೆಪಿಯು ಅಸ್ಸಾಂ ಜನರ ಗುರುತು ಮತ್ತು ಹಿರಿಮೆಯನ್ನು ರಕ್ಷಿಸಲು ಪ್ರಯತ್ನಿಸುತ್ತಿದೆ’ ಎಂದು ಅವರು ಪ್ರತಿಪಾದಿಸಿದರು.

‘ಶತಮಾನಗಳ ಹಿಂದೆ ಅಹೋಮ್ ರಾಜವಂಶದ ಕಾಲದಲ್ಲಿ ಅಸ್ಸಾಂ ಹೇಗೆ ಶಕ್ತಿಯುತವಾಗಿತ್ತೋ, ಹಾಗೆಯೇ ರಾಜ್ಯವನ್ನು ಬಲಿಷ್ಠಗೊಳಿಸುವ ಗುರಿಯನ್ನು ಬಿಜೆಪಿ ಸರ್ಕಾರ ಹೊಂದಿದೆ’ ಎಂದು ಪ್ರಧಾನಿ ಹೇಳಿದರು.

ಕೈಗಾರಿಕೀಕರಣ ಮತ್ತು ಸಂಪರ್ಕ ಕ್ರಾಂತಿಯು ಅಸ್ಸಾಂ ಜನರ ಕನಸುಗಳನ್ನು ನನಸು ಮಾಡುತ್ತಿದೆ. ಇದಕ್ಕಾಗಿ ಡಬಲ್ ಎಂಜಿನ್ ಸರ್ಕಾರ ನಿರಂತರ ಶ್ರಮಿಸುತ್ತಿದೆ ಎಂದು ಮೋದಿ ಹೇಳಿದರು.

ಅಸ್ಸಾಂನ ನಾಮರೂಪದಲ್ಲಿ ಬ್ರೌನ್‌ಫೀಲ್ಡ್ ಅಮೋನಿಯಾ– ಯೂರಿಯಾ ಘಟಕಕ್ಕೆ ಶಂಕುಸ್ಥಾಪನೆ ನೆರವೇರಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಸಭಿಕರತ್ತ ಕೈಬೀಸಿದರು. ಕೇಂದ್ರ ಸಚಿವ ಸರ್ವಾನಂದ ಸೋನೋವಾಲ್, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಎರಡು ದಶಕಗಳ ಅಭಿವೃದ್ಧಿ ಬುಡಮೇಲು: ಕಾಂಗ್ರೆಸ್

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ನೆಲದ ಕಾನೂನಾದ ನರೇಗಾವನ್ನು ಅಪವಿತ್ರಗೊಳಿಸಿದೆ ಎಂದು ಕಾಂಗ್ರೆಸ್ ಭಾನುವಾರ ಆರೋಪಿಸಿತು.

ಜೈರಾಮ್ ರಮೇಶ್

ಚರ್ಚೆಯನ್ನೇ ನಡೆಸದೆ ಎರಡು ದಶಕಗಳ ಪ್ರಗತಿಯನ್ನು ಬುಡಮೇಲು ಮಾಡಿದೆ. ಸಂಸತ್ತಿನ ಸಂಪ್ರದಾಯಗಳು ಮತ್ತು ಪ್ರಕ್ರಿಯೆಗಳನ್ನು ಗಾಳಿಗೆ ತೂರಿದೆ ಎಂದು ವಾಗ್ದಾಳಿ ನಡೆಸಿತು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, ಯುಪಿಎ ಸರ್ಕಾರವು 2012ರಲ್ಲಿ ಜಾರಿ ಮಾಡಿದ್ದ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕುರಿತ ವಿಮರ್ಶಾತ್ಮಕ ದಾಖಲೆಯನ್ನು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದಾರೆ.

ಆಗಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ನರೇಗಾ ಸಮೀಕ್ಷೆಯನ್ನು ಬಿಡುಗಡೆ ಮಾಡಿದ್ದರು. ಅದು 2008 ಮತ್ತು 2012ರ ಮಧ್ಯೆ ಕೈಗೊಂಡ 145 ಕ್ಷೇತ್ರ ಅಧ್ಯಯನಗಳ ಸಂಕಲನವಾಗಿತ್ತು. ಇದು ಈಗಲೂ ಅಧ್ಯಯನಕ್ಕೆ ಲಭ್ಯವಿದೆ ಎಂದು ಅವರು ಹೇಳಿದ್ದಾರೆ.

ಇದಕ್ಕೂ ಮುನ್ನ ಶನಿವಾರ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಕೇಂದ್ರ ಸರ್ಕಾರವು ನರೇಗಾ ಯೋಜನೆಯನ್ನು ನೆಲಸಮ ಮಾಡಿದೆ. ನೂತನ ಕಪ್ಪು ಕಾನೂನಿನ ವಿರುದ್ಧ ಹೋರಾಡಿ ಎಂದು ಕಾರ್ಯಕರ್ತರಿಗೆ ಕರೆ ನೀಡಿದ್ದರು.

ಯೋಜನೆಯನ್ನೇ ಮುಗಿಸಿದೆ: (ಮುಂಬೈ) ಕೇಂದ್ರ ಸರ್ಕಾರವು ‘ಉದ್ಯೋಗ ಖಾತರಿ ಕಾಯ್ದೆ’ಯನ್ನು (ಮನರೇಗಾ) ನಿಜಾರ್ಥದಲ್ಲಿ ಮುಗಿಸಿ ಹಾಕಿದೆ ಎಂದು ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಪ್ರಶಾಂತ್ ಭೂಷಣ್ ಅವರು ಭಾನುವಾರ ಹೇಳಿದ್ದಾರೆ.

ಕೇಂದ್ರವು ಯೋಜನೆಯ ಹೆಸರನ್ನು ಬದಲಾಯಿಸಿರುವುದು ಮಾತ್ರವಲ್ಲದೆ, ಇಡೀ ಯೋಜನೆಯನ್ನೇ ಬದಲಾಯಿಸಿದೆ ಎಂದು ಅವರು ಲಾತೂರ್‌ನಲ್ಲಿ ಪ್ರತಿಕ್ರಿಯಿಸಿದ್ದಾರೆ.

‘ಮನರೇಗಾ ಹಕ್ಕು ಆಧಾರಿತ ಯೋಜನೆಯಾಗಿದ್ದು, ಪ್ರತಿ ಗ್ರಾಮೀಣ ಕುಟುಂಬವು ಕನಿಷ್ಠ 100 ದಿನ ಕೆಲಸ ಮಾಡುವ ಮೂಲಭೂತ ಹಕ್ಕನ್ನು ಒದಗಿಸಿತ್ತು. ಅಲ್ಲದೆ, ಸರ್ಕಾರದಿಂದ ಹಣವನ್ನೂ ಪಡೆಯುತ್ತಿತ್ತು. ಆದರೆ, ಈಗ ಕೇಂದ್ರ ಸರ್ಕಾರ ಅದನ್ನು ತೆಗೆದುಹಾಕಿದೆ ಎಂದು ಪ್ರಶಾಂತ್ ಭೂಷಣ್ ಹೇಳಿದ್ದಾರೆ.

ಮಸೂದೆಗೆ ರಾಷ್ಟ್ರಪತಿ ಅಂಕಿತ

ವಿಬಿ–ಜಿ ರಾಮ್ ಜಿ ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾನುವಾರ ಅಂಕಿತ ಹಾಕಿದರು ಎಂದು ಗ್ರಾಮೀಣ ಅಭಿವೃದ್ಧಿ ಇಲಾಖೆ ತಿಳಿಸಿದೆ.

ವಿರೋಧ ಪಕ್ಷಗಳ ಪ್ರತಿಭಟನೆ ಮಧ್ಯೆಯೇ ಸಂಸತ್ತಿನಲ್ಲಿ ಗುರುವಾರ ಮಸೂದೆಯನ್ನು ಅಂಗೀಕರಿಸಲಾಗಿತ್ತು.ನರೇಗಾ ಯೋಜನೆಗೆ ಪರ್ಯಾಯವಾದ ನೂತನ ಮಸೂದೆಯು ಗ್ರಾಮೀಣ ಜನರಿಗೆ ವಾರ್ಷಿಕ 125 ದಿನಗಳ ಉದ್ಯೋಗದ ಖಾತರಿಯನ್ನು ನೀಡುತ್ತದೆ.

ಗೋಪ್ಯ ಮಾಹಿತಿ ಸೋರಿಕೆ: ಬಂಧನ

ಪ್ರಜಾವಾಣಿ ವಾರ್ತೆ

ಉಡುಪಿ: ನೌಕಾಪಡೆಹಡಗುಗಳಿಗೆ ಸಂಬಂಧಿಸಿದ ಗೋಪ್ಯ ಮಾಹಿತಿಯನ್ನು ಪಾಕಿಸ್ತಾನಕ್ಕೆ ಸೋರಿಕೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿ ಮತ್ತೊಬ್ಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಹೀರೇಂದ್ರ

ಗುಜರಾತ್‌ನ ಆನಂದ ತಾಲ್ಲೂಕು ಕೈಲಾಸ್ ನಗರಿಯ ಹೀರೇಂದ್ರ ಕುಮಾರ್ ಭರತ್ ಕುಮಾರ್ ಖಡಯಾತ (34) ಬಂಧಿತ. ಈತ ಆರೋಪಿಗಳಿಗೆ ಮೊಬೈಲ್ ಸಿಮ್ ಒದಗಿಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಪ್ರಕರಣದ ಸಂಬಂಧ ಹಿಂದೆ ಉತ್ತರಪ್ರದೇಶದ ಸುಲ್ತಾನ್‌ಪುರ ಜಿಲ್ಲೆಯ ರೋಹಿತ್ (29), ಸಂತ್ರಿ (37) ಎಂಬುವವರನ್ನು ಪೊಲೀಸರು ಬಂಧಿಸಿದ್ದರು.

‘ಹೆಸರು ಬದಲಿಸಿ ಏನು ಸಾಧಿಸಿದಿರಿ?’

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ವಿಬಿ–ಜಿ ರಾಮ್ ಜಿ ಕಾಯ್ದೆ ಹಾಗೂ ಖಾಸಗಿ ಹೂಡಿಕೆಗೆ ಅಣುಶಕ್ತಿ ಕ್ಷೇತ್ರ ಮುಕ್ತಗೊಳಿಸುವ ಕಾಯ್ದೆಗಳನ್ನು ಕೇಂದ್ರ ಸರ್ಕಾರ ಬಹಳ ಗಡಿಬಿಡಿಯಲ್ಲಿ ಜಾರಿಗೊಳಿಸುತ್ತಿದೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇಲ್ಲಿ ತರಾಟೆಗೆ ತೆಗೆದುಕೊಂಡರು.

ಸುದ್ದಿಗಾರರ ಜೊತೆಗೆ ಮಾತನಾಡಿದ ಅನರು, ‘ಮನರೇಗಾ ಯೋಜನೆಗೆ ಮಹಾತ್ಮಗಾಂಧಿ ಹೆಸರು ಇದ್ದಿದ್ದರೆ ತೊಂದರೆ ಏನಿತ್ತು? ಈಗ ಜಿ–ರಾಮ್–ಜಿ ಇಟ್ಟಿದ್ದರಿಂದ ಏನು ಸಾಧಿಸಿದಂತಾಯಿತು’ ಎಂದು ಪ್ರಶ್ನಿಸಿದರು.

‘ಮನರೇಗಾ ಹೆಸರನ್ನು ಬರೀ ವಿಬಿ–ಜಿ ರಾಮ್ ಜಿ ಎಂದು ಬದಲಿಸಿಲ್ಲ. ಬದಲಿಗೆ ರೈಟ್ ಟು ವರ್ಕ್ (ಕೆಲಸದ ಹಕ್ಕು) ತೆಗೆದು, ತಮಗೆ ಬೇಕಾದಲ್ಲಿ, ಬೇಕಾದವರಿಗೆ ಮಾತ್ರವೇ ಕೆಲಸ ನೀಡುವಂತೆ ಬದಲಿಸಿದೆ. ಇದು ದೊಡ್ಡ ತಪ್ಪು. ಇದರ ವಿರುದ್ಧ ರಾಷ್ಟ್ರದಾದ್ಯಂತ ಚಳವಳಿ ನಡೆಸಲಾಗುವುದು’ ಎಂದು ಸ್ಪಷ್ಟಪಡಿಸಿದರು.

ಕರ್ನಾಟಕ ಸರ್ಕಾರದ ಸ್ಟಾಕ್ (ಸೆಕ್ಯುರಿಟೀಸ್)
ವಿಧಾನ ಸೌಧ, ಬೆಂಗಳೂರು.

ಪ್ರಕಟಣೆ

1. ಒಟ್ಟು ಮೊತ್ತ: ರೂ 6000 ಕೋಟಿ (ರೂ 1000 ಕೋಟಿ – 06 ವರ್ಷ ಮತ್ತು 6 ತಿಂಗಳು ಅವಧಿ ; ರೂ. 2000 ಕೋಟಿ – 08 ವರ್ಷದ ಅವಧಿ ; ರೂ.1000 ಕೋಟಿ – 10 ವರ್ಷದ ಅವಧಿ ; ರೂ. 2000 ಕೋಟಿ – 12 ವರ್ಷದ ಅವಧಿ)
2. ಹಂಚಿಕೆ ವಿಧಾನ: ಹರಾಜು ಮೂಲಕ, ಪಿಡಿಒ, ಆರ್‌ಬಿಐ, ಮುಂಬೈ ಮುಖಾಂತರ.
3. ಹರಾಜಿನ ದಿನಾಂಕ : ಡಿಸೆಂಬರ್ 23, 2025.

ಕರ್ನಾಟಕ ಸರ್ಕಾರವು ಮೇಲಿನ ಸೆಕ್ಯೂರಿಟಿಗಳಿಗೆ ಚಂದಾದಾರಿಕೆಯನ್ನು ಆಹ್ವಾನಿಸುತ್ತದೆ. ಅಧಿಸೂಚನೆಯ ಪ್ರತಿಗಳು ಮತ್ತು ಅರ್ಜಿ ನಮೂನೆಗಳನ್ನು ಪಿಡಿಒ, ಆರ್‌ಬಿಐ, ಬೆಂಗಳೂರು ಇವರಿಂದ ಪಡೆಯಬಹುದು. ಚಿಲ್ಲರೆ ಹೂಡಿಕೆದಾರರ ಭಾಗವಹಿಸುವಿಕೆಯನ್ನು ಉತ್ತೇಜಿಸಲು RBI ನಿಂದ ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯವನ್ನು ಪರಿಚಯಿಸಲಾಗಿದೆ. ಮಾರಾಟದ ಅಧಿಸೂಚಿತ ಮೊತ್ತದ ಶೇ 10ರ ವರೆಗಿನ ಸರ್ಕಾರಿ ಸ್ಟಾಕ್ ಅನ್ನು ಅರ್ಹ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಹಂಚಲಾಗುತ್ತದೆ. ಮಾದರಿ ಟೆಂಡರ್ ನಮೂನೆಗಳು ಮತ್ತು ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯದ ಪರಿಷ್ಕೃತ ಯೋಜನೆ ವೆಬ್‌ಸೈಟ್ www.rbi.org.in ನಲ್ಲಿ ಲಭ್ಯವಿದೆ.

ಸಹಿ/– (ಇಕ್ರಂ ಶರೀಫ್)
ಸರ್ಕಾರದ ಜಂಟಿ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ) ಆರ್ಥಿಕ ಇಲಾಖೆ
DIPR/CP/4567/Zen/2025-26

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಪ್ರಧಾನ ಮುಖ್ಯ ಅಭಿಯಂತರವರ ಕಚೇರಿ, 2ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009.

ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಐಎಫ್‌ಟಿ ನಂ: ಬೆಂಜಮಂ/ಪ್ರಮುಅ/6004/2025–26 ದಿನಾಂಕ: 20–12–2025

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ **5 ವರ್ಷಗಳ ಅವಧಿಗೆ ಬೆಳ್ಳಂದೂರಿನಲ್ಲಿ 90 ಎಂಎಲ್‌ಡಿ ಎಸ್‌ಟಿಪಿಯ ಸಮಗ್ರ ಕಾರ್ಯಾಚರಣೆ ಮತ್ತು ನಿರ್ವಹಣೆ** ಕಾಮಗಾರಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದೆ **(2ನೇ ಕರೆ).**
ಟೆಂಡರ್‌ಗಿಟ್ಟ ಮೊತ್ತ : **ರೂ. 1471.34 ಲಕ್ಷಗಳು.**
ಇಎಂಡಿ ಮೊತ್ತ: **ರೂ. 15.00 ಲಕ್ಷಗಳು.**
ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **31–12–2025ರ ಸಂಜೆ 4:00 ಗಂಟೆವರೆಗೆ.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **01–01–2026ರಂದು ಸಂಜೆ 5:00 ಗಂಟೆಗೆ.** ಟೆಂಡರ್ ಮತ್ತು ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಪ್ರಧಾನ ಮುಖ್ಯ ಅಭಿಯಂತರರು
DIPR/CP/YC/4572/2025-26

ತಮ್ಮದೆ ಪರಂಪರೆಯನ್ನು ಹುಟ್ಟುಹಾಕಿದ್ದ ಕಲಾವಿದ • ಸಾಮಾಜಿಕ ಕಥೆಗಳಿಗೆ ಸಿನಿಮಾಗಳಲ್ಲಿ ಪ್ರಾಧಾನ್ಯ

ಮಲಯಾಳ ಹಿರಿಯ ನಟ ಶ್ರೀನಿವಾಸನ್ ನಿಧನ

ಪ್ರಜಾವಾಣಿ ವಾರ್ತೆ

ತಿರುವನಂತಪುರಂ: ಮಲಯಾಳ ನಟ, ನಿರ್ದೇಶಕ, ಚಿತ್ರಕಥೆಗಾರ ಶ್ರೀನಿವಾಸನ್ (68) ಅವರು ಶನಿವಾರ ಕೊನೆಯುಸಿರೆಳೆದರು. ಭಾನುವಾರ ಕೊಚ್ಚಿಯಲ್ಲಿ ಧಾರ್ಮಿಕ ವಿಧಾನಗಳೊಂದಿಗೆ ಅಭಿಮಾನಿಗಳ ಸಮ್ಮುಖದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಶ್ರೀನಿವಾಸನ್

ಹಲವು ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರಿಗೆ ಶನಿವಾರ ಬೆಳಿಗ್ಗೆ ಉಸಿರಾಟ ತೊಂದರೆ ಕಾಣಿಸಿಕೊಂಡಿತು. ಕುಟುಂಬದ ಸದಸ್ಯರು ಕೂಡಲೇ ಆಸ್ಪತ್ರೆಗೆ ಕರೆದೊಯ್ದರು. ಆಸ್ಪತ್ರೆಗೆ ಕರೆತರುವ ವೇಳೆಗೆ ಅವರು ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದರು.

ಶ್ರೀನಿವಾಸನ್ ಅವರಿಗೆ ಗಂಡು ಮಕ್ಕಳಾದ ವಿನೀತ್ ಶ್ರೀನಿವಾಸನ್, ಧ್ಯಾನ್ ಶ್ರೀನಿವಾಸನ್, ಪತ್ನಿ ವಿಮಲಾ ಇದ್ದಾರೆ. ಮಕ್ಕಳಿಬ್ಬರೂ ಸಿನಿಮಾ ರಂಗದಲ್ಲಿ ಗುರುತಿಸಿಕೊಂಡಿದ್ದಾರೆ.

ವಿಡಂಬನೆ ಮೂಲಕ ಜಾಗೃತಿ: 1956ರ ಏಪ್ರಿಲ್ 6ರಂದು ಕಣ್ಣೂರಿನ ತಲಶ್ಶೇರಿಯಲ್ಲಿ ಜನಿಸಿದ ಶ್ರೀನಿವಾಸನ್ ಅವರು ಎಡಪಂಥೀಯರಾಗಿ ಗುರುತಿಸಿಕೊಂಡಿದ್ದರು. ತಮ್ಮ ಸಿದ್ಧಾಂತಗಳಿಂದ ಎಡಪಂಥೀಯರು ವಿಮುಖವಾಗಿದ್ದನ್ನು ತಮ್ಮ ಸಿನಿಮಾಗಳ ಮೂಲಕ ವಿಡಂಬನಾತ್ಮಕವಾಗಿ ತೋರಿಸಿದ್ದರು.

1976ರಲ್ಲಿ ‘ಮಣಿಮುಳಕ್ಕಂ’ ಸಿನಿಮಾದ ಮೂಲಕ ನಟನೆ ಆರಂಭಿಸಿದ ಅವರು, ಐದು ದಶಕಗಳಲ್ಲಿ 200ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿ, ಹಲವು ಸಿನಿಮಾಗಳಿಗೆ ಕಥೆ, ಚಿತ್ರಕಥೆಯನ್ನು ಬರೆದಿದ್ದರು. ತಮ್ಮ ನಟನೆಗೆ ಹಲವು ಬಾರಿ ರಾಷ್ಟ್ರ ಪ್ರಶಸ್ತಿಗಳನ್ನು ಪಡೆದಿದ್ದರು. ಸಾಮಾಜಿಕ ಕಥಾಹಂದರವುಳ್ಳ ‘ಚಿಂತಾವಿಷ್ಟೆಯಾಯ ಶ್ಯಾಮಲ’ ಸಿನಿಮಾದ ಚಿತ್ರಕಥೆ, ಕಥೆ ಹಾಗೂ ನಟನೆ ಸೇರಿದಂತೆ ಹಲವು ವಿಭಾಗಗಳಲ್ಲಿ ಕೇರಳ ರಾಜ್ಯ ಪ್ರಶಸ್ತಿಯನ್ನು ಪಡೆದಿದ್ದರು.

2007ರಲ್ಲಿ ತೆರೆ ಕಂಡ ‘ಅರಬಿಕಥ’, 1989ರ ‘ವರವೇಲ್ಪು’ 1991ರಲ್ಲಿ ಬಿಡುಗಡೆಯಾದ ‘ಸಂದೇಶಂ’ ಸಿನಿಮಾಗಳು ಅವರ ಚಿತ್ರರಂಗದ ಮಹತ್ವದ ಸಿನಿಮಾಗಳಾಗಿ ಗುರುತಿಸಲ್ಪಟ್ಟಿದೆ.

1989ರ ‘ವಡಕ್ಕುನೋಕಿಯಂತ್ರಂ’ 1990ರಲ್ಲಿ ಬಂದ ‘ತಲ್ಲನಾಮಂತ್ರ’, ಹಾಗೂ 1998ರ ‘ಚಿಂತಾವಿಷ್ಟೆಯಾಯ ಶ್ಯಾಮಲ’ ಅವರಿಗೆ ಹೆಚ್ಚು ಖ್ಯಾತಿ ತಂದುಕೊಟ್ಟ ಸಿನಿಮಾಗಳಾಗಿವೆ. ಕೊನೆಯ ಎರಡು ಸಿನಿಮಾಗಳಿಗೆ ಅವರೇ ಕಥೆ ಬರೆದು, ನಿರ್ದೇಶನವನ್ನು ಮಾಡಿದ್ದರು.

1986ರ ‘ಸನ್ಮನಸ್ಸುಲ್ಲ ವರ್ಕ್ ಸಮಾಧಾನಂ’, 1987ರ ‘ನಾಡೋಡಿಕಾಟ್ಟ್’, 1988ರ ‘ಪಟ್ಟಣಪ್ರವೇಶಂ’, ಹಾಗೂ 2005ರಲ್ಲಿ ಬಂದ ‘ಉದಯನಾನು ತಾರಂ’ ಸಿನಿಮಾಗಳಲ್ಲಿನ ಅವರ ನಟನೆಯೂ ಪರಿಣಾಮಕಾರಿಯಾಗಿತ್ತು.

2007ರಲ್ಲಿ ತೆರೆಕಂಡ, ಎಂ. ಮೋಹನನ್ ನಿರ್ದೇಶನದ ‘ಕಥಾ ಪರಯುಂಬೋಳ್’ ಮಲಯಾಳ ಚಿತ್ರದಲ್ಲಿ ಅವರ ನಟನೆಯು ಸಹಜಾಭಿನಯದ ಪ್ರಾತ್ಯಕ್ಷಿಕೆಯಂತಿತ್ತು. ಅದೇ ಚಿತ್ರ ‘ಕುಚೇಲನ್’ ಹೆಸರಿನಲ್ಲಿ ತಮಿಳಿನಲ್ಲಿ ಹಾಗೂ ‘ಬಿಲ್ಲು ಬಾರ್ಬರ್’ ಹೆಸರಿನಲ್ಲಿ ಹಿಂದಿಯಲ್ಲಿ ರೀಮೇಕ್ ಆದವು. ತಮಿಳು ರೀಮೇಕ್‌ನಲ್ಲಿ ರಜನೀಕಾಂತ್ ಅಭಿನಯಿಸಿದ್ದರೆ, ಹಿಂದಿಯಲ್ಲಿ ಶಾರುಕ್ ಖಾನ್ ನಟಿಸಿದ್ದರು.

ಪರಿಸರದ ಬಗ್ಗೆ ಅತೀವ ಕಾಳಜಿ ಹೊಂದಿದ್ದ ಶ್ರೀನಿವಾಸನ್, ಸಾವಯವ ಹಾಗೂ ಸಾಂಪ್ರದಾಯಿಕ ಕೃಷಿಯ ಕುರಿತು ಹೆಚ್ಚು ಒಲವು ಹೊಂದಿ ಆ ನಿಟ್ಟಿನಲ್ಲಿ ತೊಡಗಿಸಿಕೊಂಡಿದ್ದರು.

ದಿಗ್ಗಜರ ಜೊತೆ ಒಡನಾಟ

ಮದ್ರಾಸ್ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ಸೂಪರ್‌ಸ್ಟಾರ್ ರಜನಿಕಾಂತ್ ಹಾಗೂ ಶ್ರೀನಿವಾಸನ್ ಒಂದೇ ತರಗತಿಯಲ್ಲಿ ಕಲಿತಿದ್ದರು. ನಟರಾದ ಮೋಹನ್‌ಲಾಲ್, ಮಮ್ಮುಟ್ಟಿ, ಸತ್ಯನ್ ಅಂತಿಕಾಡ್ ಜೊತೆಗೆ ವೈಯಕ್ತಿಕ ಒಡನಾಟ ಹೊಂದಿದ್ದರು.

ಶ್ರೀನಿವಾಸನ್ ನಿಧನಕ್ಕೆ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ಸೇರಿದಂತೆ ಹಲವು ನಟ–ನಟಿಯರು ಕಂಬನಿ ಮಿಡಿದಿದ್ದಾರೆ. ಹಲವು ನಟರೂ ಅವರ ಮನೆಗೆ ತೆರಳಿ, ಮೃತದೇಹಕ್ಕೆ ಅಂತಿಮ ನಮನ ಸಲ್ಲಿಸಿ, ಕುಟುಂಬಸ್ಥರಿಗೆ ಧೈರ್ಯ ತುಂಬಿದರು.

₹350ಕ್ಕೆ ಇಳಿದ 1ಕೆ.ಜಿ ಕಾಫಿ ಬೀಜದ ಬೆಲೆ

ಕೊಯ್ಲಿನ ವೇಳೆಗೆ ದರ ಕುಸಿತ ಕಾಫಿ ಬೆಳೆಗಾರರಿಗೆ ಆತಂಕ

• ರವಿ ಕೆಳಂಗಡಿ

ಕಳಸದಲ್ಲಿ ರೊಬಸ್ಟಾ ಕಾಫಿ ಹಣ್ಣು ಕೊಯ್ದು ಕಣದಲ್ಲಿ ಒಣಗಿಸಲಾಗುತ್ತಿದೆ

ಕಳಸ: ಕಾಫಿ ಕೊಯ್ಲು ಆರಂಭ ಆಗುತ್ತಿದ್ದಂತೆ, ಧಾರಣೆ ಕುಸಿಯುತ್ತಿದೆ. ಜನವರಿಯಿಂದ ಗರಿಷ್ಠ ಮಟ್ಟದಲ್ಲಿದ್ದ ಕಾಫಿ ಧಾರಣೆ ಈಗ 2 ವರ್ಷದ ಹಿಂದಿನ ಮಟ್ಟಕ್ಕೆ ಕುಸಿದಿದೆ.

ಲಂಡನ್ ಮಾರುಕಟ್ಟೆಯಲ್ಲಿ ರೊಬಸ್ಟಾ ಕಾಫಿ ಧಾರಣೆ ಶುಕ್ರವಾರ ಟನ್‌ಗೆ 3,669 ಡಾಲರ್‌ಗೆ ಕುಸಿದಿದೆ. ಸ್ಥಳೀಯವಾಗಿ 1ಕೆ.ಜಿ ಕಾಫಿ ಬೀಜದ ಬೆಲೆ ₹350ಕ್ಕೆ ಇಳಿದಿದೆ. ಮಾರ್ಚ್‌ನಲ್ಲಿ ಕೆ.ಜಿಗೆ ₹500 ಇತ್ತು.

ಬೆಲೆ ಏರಿಕೆಯ ನಿರೀಕ್ಷೆಯಿಂದ ರೈತರು ಕಳೆದ ವರ್ಷದ ಫಸಲನ್ನು ದಾಸ್ತಾನು ಮಾಡಿದ್ದರು. 'ಕಳೆದ ವರ್ಷ ಬೇಗ ಕಾಫಿ ಮಾರಾಟ ಮಾಡಿ ನಷ್ಟ ಅನುಭವಿಸಿದ್ದೆವು. ಈ ವರ್ಷ ತೋಟಕ್ಕೆ ಬಹಳಷ್ಟು ಖರ್ಚು ಮಾಡಿದ್ದೆವು. ಆದರೆ, ಕೊಯ್ಲಿನ ವೇಳೆಗೆ ದರ ಇಳಿದಿರುವುದು ಬೇಸರ ತಂದಿದೆ' ಎಂದು ಬೆಳೆಗಾರ ನೂಜಿ ಪೂರ್ಣೇಶ್ ಹೇಳಿದರು.

ಬ್ರೆಜಿಲ್‌ನಲ್ಲಿ ಅರೇಬಿಕಾ ಕಾಫಿ ಫಸಲು ಉತ್ತಮವಾಗಿರುವುದು ಧಾರಣೆ ಇಳಿಯಲು ಕಾರಣ. ವಿಯೆಟ್ನಾಂನಲ್ಲಿ ರೊಬಸ್ಟಾ ಬೆಳೆ ಹೆಚ್ಚುತ್ತಿದೆ. ಈ ವರ್ಷ ಅಲ್ಲಿ 2.9 ಕೋಟಿ ಚೀಲಗಳಷ್ಟು ಕಾಫಿ ಬೆಳೆಯಲಾಗಿದ್ದು, ಇದು 4 ವರ್ಷದ ಗರಿಷ್ಠ ಮಟ್ಟ ಎಂದು ಮೂಲಗಳು ತಿಳಿಸಿವೆ.

'ಜಾಗತಿಕವಾಗಿ ಕಾಫಿ ಫಸಲು ಈ ವರ್ಷ ಶೇ 2ರಷ್ಟು ಏರಬಹುದು. ಅರೇಬಿಕಾ ಕಾಫಿ ಫಸಲು ಶೇ 5ರಷ್ಟು, ರೊಬಸ್ಟಾ ಇಳುವರಿ ಶೇ 11ರಷ್ಟು ಏರಬಹುದು' ಎಂದು ಅಮೆರಿಕದ ವಿದೇಶಿ ಕೃಷಿ ಸೇವಾ ಸಂಸ್ಥೆ ಅಂದಾಜಿಸಿದೆ.

'ಜಾಗತಿಕ ಮಟ್ಟದಲ್ಲಿ ಕಾಫಿ ಉತ್ಪಾದನೆ ತೀರಾ ಹೆಚ್ಚಾಗಿಲ್ಲ. ಆದ್ದರಿಂದ ದರ ಇನ್ನಷ್ಟು ಕುಸಿಯಲಾರದು' ಎಂದು ಮಾರುಕಟ್ಟೆಯ ತಜ್ಞರ ಭರವಸೆ ವ್ಯಕ್ತಪಡಿಸಿದ್ದಾರೆ.

ಈ ನಡುವೆ, ಬೆಲೆ ಕುಸಿಯುವ ಭೀತಿಯಿಂದ ಕೆಲ ಬೆಳೆಗಾರರು ಕಾಫಿ ಒಣಗಿದ ಕೂಡಲೇ ಮಾರುತ್ತಿದ್ದಾರೆ. ಕೆಲವರು ಮಾರುಕಟ್ಟೆ ಚೇತರಿಸಿದ ನಂತರ ಮಾರಲು ಉದ್ದೇಶಿಸಿ ದಾಸ್ತಾನು ಮಾಡುತ್ತಿದ್ದಾರೆ.

ಎಂ.ಎಫ್ ವೆಚ್ಚ ಕಡಿತ: ಲಾಭವೇನು?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್

ಚಾರ್ಟರ್ಡ್ ಅಕೌಂಟೆಂಟ್

ಮ್ಯೂಚುವಲ್ ಫಂಡ್ (ಎಂ.ಎಫ್) ಹೂಡಿಕೆದಾರರಿಗೆ ಸಿಹಿ ಸುದ್ದಿಯನ್ನು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ನೀಡಿದೆ. ಮ್ಯೂಚುವಲ್ ಫಂಡ್ ಹೂಡಿಕೆಗಳ ಮೇಲಿನ ವೆಚ್ಚ ಅನುಪಾತವನ್ನು (ಎಕ್ಸ್‌ಪೆನ್ಸ್ ರೇಷಿಯೊ/ಕಮಿಷನ್) ಅದು ತಗ್ಗಿಸಿದೆ. 2025ರ ಡಿಸೆಂಬರ್ 17ರಂದು ಸೆಬಿ ಆಡಳಿತ ಮಂಡಳಿ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ. ಕೇವಲ 15 ಮೂಲಾಂಶಗಳಷ್ಟು (ಶೇ 0.15ರಷ್ಟು) ವೆಚ್ಚ ಕಡಿತ ಮಾಡಲಾಗಿದೆ. ನೋಡಲು ಇದೊಂದು ಸಣ್ಣ ಬದಲಾವಣೆಯಂತೆ ಕಂಡರೂ ದೀರ್ಘಾವಧಿ ಹೂಡಿಕೆ ಮಾಡುವವರಿಗೆ ಈ ವೆಚ್ಚ ಅನುಪಾತ ಕಡಿತ ಬಹಳಷ್ಟು ಅನುಕೂಲ ಒದಗಿಸಲಿದೆ.

ಸೆಬಿ ತಂದಿರುವ ಈ ಬದಲಾವಣೆ ಏನು? ಹೂಡಿಕೆಗಳ ಮೇಲೆ ಆಗುವ ಪರಿಣಾಮವೇನು? ಹೂಡಿಕೆ ಮೇಲಿನ ಲಾಭದ ಪ್ರಮಾಣದಲ್ಲಾಗುವ ಬದಲಾವಣೆ ಎಷ್ಟು?

ಬದಲಾವಣೆ ಏನು?: ಸೆಬಿ ಒಟ್ಟಾರೆ ಮ್ಯೂಚುವಲ್ ಫಂಡ್‌ಗಳ ವೆಚ್ಚ ಅನುಪಾತವನ್ನು 15 ಮೂಲಾಂಶಗಳಷ್ಟು ಕಡಿತಗೊಳಿಸಿದೆ. ಇಂಡೆಕ್ಸ್ ಫಂಡ್ಸ್/ಇಟಿಎಫ್‌ಗಳಿಗೆ ವೆಚ್ಚ ಅನುಪಾತವನ್ನು ಶೇ 1ರಿಂದ ಶೇ 0.90ಕ್ಕೆ ಇಳಿಸಲಾಗಿದೆ. ಲಿಕ್ವಿಡ್ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಫಂಡ್ ಆಫ್ ಫಂಡ್‌ಗಳು, ಇಂಡೆಕ್ಸ್ ಫಂಡ್‌ಗಳು ಮತ್ತು ಇಟಿಎಫ್‌ಗಳ ವೆಚ್ಚ ಅನುಪಾತವನ್ನೂ ಶೇ 1ರಿಂದ ಶೇ 0.90ಕ್ಕೆ ನಿಗದಿಪಡಿಸಲಾಗಿದೆ. ಶೇ 65 ಅಥವಾ ಅದಕ್ಕಿಂತ ಹೆಚ್ಚು ಮೊತ್ತವನ್ನು ಈಕ್ವಿಟಿ ಸಂಬಂಧಿತ ಹೂಡಿಕೆಗಳಲ್ಲಿ ತೊಡಗಿಸುವ ಫಂಡ್ ಆಫ್ ಫಂಡ್‌ಗಳ ವೆಚ್ಚ ಅನುಪಾತ ಶೇ 2.25ರಿಂದ ಶೇ 2.10ಕ್ಕೆ ಇಳಿದಿದೆ. ಇತರೆ ಫಂಡ್ ಆಫ್ ಫಂಡ್‌ಗಳ ವೆಚ್ಚ ಅನುಪಾತ ಶೇ 2ರಿಂದ ಶೇ 1.85ಕ್ಕೆ ತಗ್ಗಿದೆ. (ಇನ್ನಷ್ಟು ವಿವರಕ್ಕಾಗಿ ಪಟ್ಟಿ1ನ್ನು ಗಮನಿಸಿ)

ಬೇಸ್ ಎಕ್ಸ್‌ಪೆನ್ಸ್ ರೇಷಿಯೊ: ಈ ಮೊದಲು ಹೂಡಿಕೆದಾರರು ಮ್ಯೂಚುವಲ್ ಫಂಡ್ ಮೇಲಿನ ಹೂಡಿಕೆ ಶುಲ್ಕಗಳನ್ನು ಒಟ್ಟು ವೆಚ್ಚ ಅನುಪಾತದ (ಟಿಇಆರ್ - ಟೋಟಲ್ ಎಕ್ಸ್‌ಪೆನ್ಸ್ ರೇಷಿಯೊ) ಮೂಲಕ ಅಳೆಯುತ್ತಿದ್ದರು. ಇದರಲ್ಲಿ ಮ್ಯೂಚುವಲ್ ಫಂಡ್ ಹೂಡಿಕೆ ಮೇಲೆ ಆಗುವ ವಿವಿಧ ವೆಚ್ಚಗಳನ್ನು ಒಟ್ಟಾಗಿ ನೋಡಲಾಗುತ್ತಿತ್ತು. ಒಟ್ಟು ವೆಚ್ಚ ಅನುಪಾತ ಪದ್ಧತಿಯಲ್ಲಿ ಮ್ಯೂಚುವಲ್ ಫಂಡ್ ಸಂಸ್ಥೆಗೆ ಎಷ್ಟು ಶುಲ್ಕ ಹೋಗುತ್ತಿದೆ ಎಂದು ನೇರವಾಗಿ ಗೊತ್ತಾಗುತ್ತಿರಲಿಲ್ಲ. ಈಗ ಅದನ್ನು ತಪ್ಪಿಸಲು ಬೇಸ್ ಎಕ್ಸ್‌ಪೆನ್ಸ್ ರೇಷಿಯೊ ತರಲಾಗಿದೆ. ಬೇಸ್ ಎಕ್ಸ್‌ಪೆನ್ಸ್ ರೇಷಿಯೊ ಎಂದರೆ ಫಂಡ್‌ನ ನಿರ್ವಹಣೆಗೆ ಬೇಕಾಗುವ ಖರ್ಚುಗಳನ್ನಷ್ಟೇ ಒಳಗೊಂಡಿರುವ ಪ್ರಮಾಣ.

ಇದರಲ್ಲಿ ಸಾಮಾನ್ಯವಾಗಿ ನಿಧಿ ನಿರ್ವಾಹಕನ ಶುಲ್ಕ, ವಿತರಕರ ಕಮಿಷನ್, ಆಡಳಿತ ವೆಚ್ಚಗಳು ಮಾತ್ರ ಇರುತ್ತವೆ. ಜಿಎಸ್‌ಟಿ, ಮುದ್ರಾಂಕ ಶುಲ್ಕ, ಷೇರು ವಹಿವಾಟು ತೆರಿಗೆ, ಎಕ್ಸ್‌ಚೇಂಜ್/ರೆಗ್ಯುಲೇಟರಿ ವೆಚ್ಚಗಳು ಹಾಗೂ ಇನ್ನಿತರ ಸಂಬಂಧಿತ ವೆಚ್ಚಗಳನ್ನು ಬೇಸ್ ಎಕ್ಸ್‌ಪೆನ್ಸ್ ರೇಷಿಯೊದಿಂದ ಹೊರಗೆ ತೋರಿಸಲಾಗುತ್ತದೆ. ಒಂದೇ ಸಾಲಿನಲ್ಲಿ ಹೇಳಬೇಕು ಅಂದರೆ ಮ್ಯೂಚುವಲ್ ಫಂಡ್ ಹೂಡಿಕೆದಾರನಿಂದ ಫಂಡ್ ಹೌಸ್ ನಿಜವಾಗಿ ತೆಗೆದುಕೊಳ್ಳುವ ಶುಲ್ಕ ಬೇಸ್ ಎಕ್ಸ್‌ಪೆನ್ಸ್ ರೇಷಿಯೊ. ಬೇಸ್ ಎಕ್ಸ್‌ಪೆನ್ಸ್ ರೇಷಿಯೊ ಒಳಗೊಂಡು ಹೂಡಿಕೆದಾರನಿಗೆ ಕೊನೆಯಲ್ಲಿ ಆಗುವ ಒಟ್ಟು ವಾರ್ಷಿಕ ವೆಚ್ಚವನ್ನು ಈಗ ಒಟ್ಟು ವೆಚ್ಚ ಅನುಪಾತ ಎಂದು ಪರಿಗಣಿಸಲಾಗುತ್ತದೆ.

ಆಗುವ ಲಾಭವೇನು?: ಎಕ್ಸ್‌ಪೆನ್ಸ್ ರೇಷಿಯೊವನ್ನು ಸೆಬಿ 10ರಿಂದ 15 ಮೂಲಾಂಶದಷ್ಟು ಕಡಿತ ಮಾಡಿರುವುದರಿಂದ ಆಗುವ ಲಾಭವೇನು ಎಂಬ ಪ್ರಶ್ನೆ ನಿಮ್ಮಲ್ಲಿರಬಹುದು. ದೀರ್ಘಾವಧಿಗೆ ಹೂಡಿಕೆ ಮಾಡುವಾಗ ಸಣ್ಣ ಕಡಿತವೂ ದೊಡ್ಡ ಪರಿಣಾಮ ಬೀರುತ್ತದೆ. ಉದಾಹರಣೆಗೆ 15 ವರ್ಷಕ್ಕೆ ಮ್ಯೂಚುವಲ್ ಫಂಡ್‌ನಲ್ಲಿ ₹10 ಲಕ್ಷವನ್ನು ಒಂದೇ ಬಾರಿಗೆ ಹೂಡಿಕೆ ಮಾಡುತ್ತೀರಿ, ಶೇ 12ರಷ್ಟು ವಾರ್ಷಿಕ ಗಳಿಕೆ ಸಿಗುತ್ತದೆ ಎಂದು ಭಾವಿಸಿ. ಈ ಪ್ರಕಾರ 15 ವರ್ಷಗಳಲ್ಲಿ ಶೇ 1.5ರಷ್ಟು ವೆಚ್ಚ ಅನುಪಾತವಿದ್ದರೆ ನಿಮಗೆ ₹43.63 ಲಕ್ಷ ದಕ್ಕುತ್ತದೆ. ಅದೇ ಶೇ 1.3ರ ವೆಚ್ಚ ಅನುಪಾತ ಅನ್ವಯವಾದರೆ ₹44.9 ಲಕ್ಷ ಲಭಿಸುತ್ತದೆ. ಅಂದರೆ ₹1.34 ಲಕ್ಷ ಹೆಚ್ಚುವರಿಯಾಗಿ ನಿಮ್ಮದಾಗುತ್ತದೆ. (ಇನ್ನಷ್ಟು ವಿವರಕ್ಕಾಗಿ ಪಟ್ಟಿ2ನ್ನು ಗಮನಿಸಿ)

ನೆನಪಿಡಿ: ಅಲ್ಪಾವಧಿಗೆ ಹೂಡಿಕೆ ಮಾಡಿದಾಗ ವೆಚ್ಚ ಅನುಪಾತ ಕಡಿತದಿಂದ ದೊಡ್ಡ ಪ್ರಮಾಣದ ಲಾಭ ಸಿಗುವುದಿಲ್ಲ. ಆದರೆ ದೀರ್ಘಾವಧಿಗೆ ಹೂಡಿಕೆ ಮಾಡಿದಾಗ ಸೆಬಿ ಮಾಡಿರುವ ವೆಚ್ಚ ಅನುಪಾತ ಕಡಿತದ ಲಾಭ ಉತ್ತಮ ರೀತಿಯಲ್ಲಿ ಹೂಡಿಕೆದಾರನಿಗೆ ತಲುಪುತ್ತದೆ. ಅಂದರೆ ಈ ಬದಲಾವಣೆಯಿಂದ ಹೂಡಿಕೆದಾರನಿಗೆ ಅನುಕೂಲವಿದೆ.

1 ಎಂ.ಎಫ್ ಹೂಡಿಕೆಗಳಿಗೆ ಸೆಬಿ ನಿಗದಿಪಡಿಸಿರುವ ಹೊಸ ವೆಚ್ಚ ಅನುಪಾತದ ವಿವರ

ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿಗಳು ನಿರ್ವಹಿಸುತ್ತಿರುವ ಹೂಡಿಕೆ ಮೊತ್ತದ (ಎಯುಎಂ) ಸ್ಲ್ಯಾಬ್	ಈಕ್ವಿಟಿ ಹೂಡಿಕೆಗಳಿಗಿರುವ ಈಗಿನ ವೆಚ್ಚ ಅನುಪಾತ	ಈಕ್ವಿಟಿ ಹೂಡಿಕೆಗಳಿಗೆ ಪರಿಷ್ಕೃತ ವೆಚ್ಚ ಅನುಪಾತ	ಈಕ್ವಿಟಿ ಅಲ್ಲದ ಹೂಡಿಕೆಗಳ ಈಗಿನ ವೆಚ್ಚ ಅನುಪಾತ	ಈಕ್ವಿಟಿ ಅಲ್ಲದ ಹೂಡಿಕೆಗಳ ಪರಿಷ್ಕೃತ ವೆಚ್ಚ ಅನುಪಾತ
₹500 ಕೋಟಿವರೆಗೆ	ಶೇ 2.25	ಶೇ 2.10	ಶೇ 2	ಶೇ 1.85
₹500–₹750 ಕೋಟಿ	ಶೇ 2	ಶೇ 1.90	ಶೇ 1.75	ಶೇ 1.65
₹2–₹5 ಸಾವಿರ ಕೋಟಿ	ಶೇ 1.60	ಶೇ 1.50	ಶೇ 1.35	ಶೇ 1.25
₹5–₹10 ಸಾವಿರ ಕೋಟಿ	ಶೇ 1.50	ಶೇ 1.40	ಶೇ 1.25	ಶೇ 1.15
₹10–₹15 ಸಾವಿರ ಕೋಟಿ	ಶೇ 1.45	ಶೇ 1.35	ಶೇ 1.20	ಶೇ 1.10
₹15–₹20 ಸಾವಿರ ಕೋಟಿ	ಶೇ 1.40	ಶೇ 1.30	ಶೇ 1.15	ಶೇ 1.05
₹20–₹25 ಸಾವಿರ ಕೋಟಿ	ಶೇ 1.35	ಶೇ 1.25	ಶೇ 1.10	ಶೇ 1.00
₹25–₹30 ಸಾವಿರ ಕೋಟಿ	ಶೇ 1.30	ಶೇ 1.20	ಶೇ 1.05	ಶೇ 0.95
₹30–₹35 ಸಾವಿರ ಕೋಟಿ	ಶೇ 1.25	ಶೇ 1.15	ಶೇ 1	ಶೇ 0.90
₹35–₹40 ಸಾವಿರ ಕೋಟಿ	ಶೇ 1.20	ಶೇ 1.10	ಶೇ 0.95	ಶೇ 0.85
₹40–₹45 ಸಾವಿರ ಕೋಟಿ	ಶೇ 1.15	ಶೇ 1.05	ಶೇ 0.90	ಶೇ 0.80
₹45–₹50 ಸಾವಿರ ಕೋಟಿ	ಶೇ 1.10	ಶೇ 1	ಶೇ 0.85	ಶೇ 0.75
₹50 ಸಾವಿರ ಕೋಟಿ ಮೇಲ್ಪಟ್ಟು	ಶೇ 1.05	ಶೇ 0.95	ಶೇ 0.80	ಶೇ 0.70

ಮಾಹಿತಿ: ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ)

2 ₹10 ಲಕ್ಷ ಒಂದೇ ಬಾರಿಗೆ ಹೂಡಿಕೆ ಮಾಡಿದಾಗ ವೆಚ್ಚ ಅನುಪಾತ ಕಡಿತದಿಂದ ಸಿಗುವ ಲಾಭವೆಷ್ಟು?

ಹೂಡಿಕೆ ಅವಧಿ	ಶೇ 1.5ರಷ್ಟು ವೆಚ್ಚ ಅನುಪಾತದ ಪ್ರಕಾರ ನಿರೀಕ್ಷಿತ ಮೊತ್ತ	ಶೇ 1.3ರಷ್ಟು ವೆಚ್ಚ ಅನುಪಾತದ ಪ್ರಕಾರ ನಿರೀಕ್ಷಿತ ಮೊತ್ತ	ಹೆಚ್ಚುವರಿ ಗಳಿಕೆ (₹ಗಳಲ್ಲಿ)
5 ವರ್ಷ	₹16.34 ಲಕ್ಷ	₹16.5 ಲಕ್ಷ	₹16,600
10 ವರ್ಷ	₹26.7 ಲಕ್ಷ	₹27.24 ಲಕ್ಷ	₹54,700
15 ವರ್ಷ	₹43.63 ಲಕ್ಷ	₹44.9 ಲಕ್ಷ	₹1.34 ಲಕ್ಷ
20 ವರ್ಷ	₹71.2 ಲಕ್ಷ	₹74.25 ಲಕ್ಷ	₹2.95 ಲಕ್ಷ

ಚಿಟಿಕೆ ಸುದ್ದಿ

'₹5 ಸಾವಿರ ಕೋಟಿ ಹೂಡಿಕೆ ನಿರೀಕ್ಷೆ'

ನವದೆಹಲಿ (ಪಿಟಿಐ): ಮುಂದಿನ ಆರ್ಥಿಕ ವರ್ಷದಲ್ಲಿ ಜೈವಿಕ ಅನಿಲ ವಲಯವು ₹5 ಸಾವಿರ ಕೋಟಿಗೂ ಹೆಚ್ಚು ಹೂಡಿಕೆಯನ್ನು ಆಕರ್ಷಿಸುವ ನಿರೀಕ್ಷೆ ಇದೆ ಎಂದು ಭಾರತೀಯ ಜೈವಿಕ ಅನಿಲ ಸಂಘ (ಐಬಿಎ) ಹೇಳಿದೆ.

ಇಲ್ಲಿಯವರೆಗೆ, 100ಕ್ಕೂ ಹೆಚ್ಚು ಕಂಪ್ರೆಸ್ಡ್ ಜೈವಿಕ ಅನಿಲ (ಸಿಬಿಜಿ) ಘಟಕಗಳನ್ನು ಸ್ಥಾಪಿಸಲಾಗಿದೆ. ಪ್ರಸಕ್ತ ಕ್ಯಾಲೆಂಡರ್ ವರ್ಷದಲ್ಲಿ ಹೂಡಿಕೆದಾರರು ವಲಯದ ಬಗ್ಗೆ ಹೆಚ್ಚು ಆಸಕ್ತಿ ತೋರಿಸಿದ್ದಾರೆ ಎಂದು ಹೇಳಿದೆ.

2024–25ರ ಆರ್ಥಿಕ ವರ್ಷದಲ್ಲಿ 94 ಕಂಪ್ರೆಸ್ಡ್ ಜೈವಿಕ ಅನಿಲ ಘಟಕಗಳು 31,400 ಟನ್‌ಗೂ ಅಧಿಕ ಕಂಪ್ರೆಸ್ಡ್ ಜೈವಿಕ ಅನಿಲವನ್ನು ಮಾರಾಟ ಮಾಡಿವೆ. ಇದು ವಲಯದ ಬೆಳವಣಿಗೆ ಮತ್ತು ಮಾರುಕಟ್ಟೆ ಏರಿಕೆಗೆ ಸಾಕ್ಷಿಯಾಗಿದೆ ಎಂದು ತಿಳಿಸಿದೆ.

2026ರಲ್ಲಿ ಸಿಬಿಜಿ ಉದ್ಯಮದ ಗಾತ್ರವು ₹35,831 ಕೋಟಿಯಾಗಬಹುದು. 2030ರ ವೇಳೆಗೆ ₹44,788 ಕೋಟಿಯಷ್ಟಾಗಬಹುದು ಎಂದು ಅಂದಾಜಿಸಿದೆ.

ಶಾಂತಿ ಮಾತುಕತೆ ನಡೆಯುತ್ತಿದೆ: ರಷ್ಯಾ

ಮಿಯಾಮಿ (ಎಪಿ): ಉಕ್ರೇನ್ ಜೊತೆಗಿನ ಯುದ್ಧವನ್ನು ಕೊನೆಗೊಳಿಸಲು ಅಮೆರಿಕ ಪ್ರಸ್ತಾಪಿಸಿರುವ ಯೋಜನೆಯ ಭಾಗವಾಗಿ ಶಾಂತಿ ಮಾತುಕತೆಯು ಪ್ರಗತಿಯಲ್ಲಿದೆ ಎಂದು ರಷ್ಯಾದ ಅಧಿಕಾರಿಗಳು ತಿಳಿಸಿದ್ದಾರೆ.

ಹಲವು ದಿನಗಳಿಂದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸರ್ಕಾರವು ನಡೆಸುತ್ತಿರುವ ಪ್ರಯತ್ನದ ಭಾಗವಾಗಿ ಫ್ಲಾರಿಡಾದಲ್ಲಿ ಮಾತುಕತೆ ನಡೆಯುತ್ತಿದೆ.

ರಷ್ಯಾ ರಾಯಭಾರಿಯು ಟ್ರಂಪ್ ಅವರ ರಾಯಭಾರಿ ತಂಡವನ್ನು ಭೇಟಿ ಮಾಡಿದ್ದಾರೆ ಎಂದು ರಷ್ಯಾದ ಅಧಿಕೃತ ಸುದ್ದಿಸಂಸ್ಥೆ ವರದಿ ಮಾಡಿದೆ.

'ಫ್ಲಾರಿಡಾದಲ್ಲಿರುವ ನಮ್ಮ ತಂಡ ಅಮೆರಿಕದ ತಂಡದೊಂದಿಗೆ ಮಾತುಕತೆ ನಡೆಸುತ್ತಿದೆ. ಶೀಘ್ರದಲ್ಲಿ ಮುಂದುವರಿಯುತ್ತೇವೆ' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಭಾನುವಾರ ತಿಳಿಸಿದ್ದರು.

ಗೃಹ ಸಾಲ ₹10 ಲಕ್ಷ ಕೋಟಿ ದಾಟುವ ನಿರೀಕ್ಷೆ: ಎಸ್‌ಬಿಐ

ನವದೆಹಲಿ (ಪಿಟಿಐ): 'ಮುಂದಿನ ಆರ್ಥಿಕ ವರ್ಷದಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ನೀಡಿದ ಗೃಹಸಾಲ ಮೊತ್ತವು ₹10 ಲಕ್ಷ ಕೋಟಿ ದಾಟುವ ನಿರೀಕ್ಷೆ ಇದೆ' ಎಂದು ಬ್ಯಾಂಕ್‌ನ ಅಧ್ಯಕ್ಷ ಸಿ.ಎಸ್.ಸೆಟ್ಟಿ ಹೇಳಿದ್ದಾರೆ.

ಗೃಹ ಸಾಲಕ್ಕೆ ಹೆಚ್ಚಿದ ಬೇಡಿಕೆ ಮತ್ತು ಬಡ್ಡಿ ದರ ಇಳಿಕೆಯು ಗೃಹ ಸಾಲ ನೀಡುವ ಪ್ರಮಾಣದಲ್ಲಿ ಏರಿಕೆಗೆ ಕಾರಣವಾಗಲಿವೆ ಎಂದು ಅವರು ಹೇಳಿದ್ದಾರೆ.

2011ರ ಮಾರ್ಚ್‌ನಲ್ಲಿ ಬ್ಯಾಂಕ್ ನೀಡಿದ ಗೃಹ ಸಾಲದ ಮೊತ್ತವು ₹1 ಲಕ್ಷ ಕೋಟಿಯಷ್ಟಿತ್ತು. 2024–25ರ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಬ್ಯಾಂಕ್‌ನ ಗೃಹ ಸಾಲದ ಮೊತ್ತವು ₹8.31 ಲಕ್ಷ ಕೋಟಿಗೆ ಏರಿಕೆಯಾಗಿ, ನವೆಂಬರ್ ವೇಳೆಗೆ ₹9 ಲಕ್ಷ ಕೋಟಿ ದಾಟಿದೆ. ಇದು ಬ್ಯಾಂಕ್‌ನ ಒಟ್ಟು ಸಾಲಗಳ ಶೇ 20ರಷ್ಟು ಎಂದು ಸೆಟ್ಟಿ ತಿಳಿಸಿದ್ದಾರೆ.

ಕಳೆದ ಆರ್ಥಿಕ ವರ್ಷದಲ್ಲಿ ಬ್ಯಾಂಕ್‌ನ ಗೃಹ ಸಾಲ ನೀಡಿಕೆಯು ಶೇ 14.4ರಷ್ಟು ಬೆಳವಣಿಗೆ ಕಂಡಿತ್ತು. ಮುಂದಿನ ಆರ್ಥಿಕ ವರ್ಷದಲ್ಲಿಯೂ ಶೇ 14ರಷ್ಟು ಪ್ರಗತಿ ಕಂಡು, ₹10 ಲಕ್ಷ ಕೋಟಿಯ ಮೈಲುಗಲ್ಲು ದಾಟಲಿದೆ ಎಂದು ಹೇಳಿದ್ದಾರೆ.

2024–25ರಲ್ಲಿ ಬ್ಯಾಂಕ್‌ನ ಗೃಹ ಸಾಲ ವಿಭಾಗದ ಎನ್‌ಪಿಎ ಶೇ 0.72ರಷ್ಟಿತ್ತು. ಈ ಪ್ರಮಾಣವು ಬ್ಯಾಂಕಿಂಗ್ ವಲಯದಲ್ಲಿ ಅತಿ ಕಡಿಮೆ ಎನ್‌ಪಿಎಗಳಲ್ಲಿ ಒಂದಾಗಿದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

	ಬೆಂಗಳೂರು	ಮೈಸೂರು:
100 ಕ್ಕೆ	₹700	₹701
12 ಕ್ಕೆ	₹96	

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹480-780
ದ್ವಿತಳಿ (ಬಿ.ವಿ)	₹350-885

ಇಸ್ರೊ: 24ರಂದು ಮುಂದಿನ ತಲೆಮಾರಿನ ಸಂವಹನ ಉಪಗ್ರಹ ಉಡಾವಣೆ

ಶ್ರೀಹರಿಕೋಟ (ಪಿಟಿಐ): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೊ) ಸಂಸ್ಥೆಯು, ಅಮೆರಿಕದ ಎಎಸ್‌ಟಿ ಸ್ಪೇಸ್‌ಮೊಬೈಲ್‌ನೊಂದಿಗಿನ ವಾಣಿಜ್ಯ ಒಪ್ಪಂದದ ಭಾಗವಾಗಿ, ಇದೇ 24ರಂದು ಎಲ್‌ವಿಎಂ 3 ಎಂ6 ಕ್ರಿಯಾಯೋಜನೆ ಮೂಲಕ ಅತ್ಯಾಧುನಿಕ 'ಬ್ಲ್ಯೂಬರ್ಡ್ ಬ್ಲಾಕ್–2' ಉಪಗ್ರಹವನ್ನು ಕಕ್ಷೆಗೆ ಕಳುಹಿಸಲಿದೆ.

ಈ ಐತಿಹಾಸಿಕ ಕ್ರಿಯಾಯೋಜನೆಯಲ್ಲಿ ಕಕ್ಷೆಗೆ ತಲುಪಲಿರುವ ಮುಂದಿನ ತಲೆಮಾರಿನ ಸಂವಹನ ಉಪಗ್ರಹವು ಸ್ಮಾರ್ಟ್‌ಫೋನ್‌ಗಳಿಗೆ ನೇರವಾಗಿ ಹೈಸ್ಪೀಡ್ ಸೆಲ್ಯುಲಾರ್ ಬ್ರಾಡ್‌ಬ್ಯಾಂಡ್ ಪೂರೈಸುವ ಸಾಮರ್ಥ್ಯ ಹೊಂದಿದೆ.

ಎಎಸ್‌ಟಿ ಸ್ಪೇಸ್‌ಮೊಬೈಲ್ ಕಂಪನಿ, ಇದೇ ಮೊದಲ ಬಾರಿಗೆ ಬಾಹ್ಯಾಕಾಶ ಆಧಾರಿತ ಸೆಲ್ಯುಲಾರ್ ಬ್ರಾಡ್‌ಬ್ಯಾಂಡ್ ನೆಟ್‌ವರ್ಕ್ ನಿರ್ಮಿಸುತ್ತಿದೆ. ಇದನ್ನು ಸ್ಮಾರ್ಟ್‌ಫೋನ್‌ಗಳಿಗೆ ನೇರವಾಗಿ ಬಳಕೆ ಮಾಡಬಹುದು. ಇದನ್ನು ಸರ್ಕಾರಿ ಮತ್ತು ವಾಣಿಜ್ಯ ಸೇವೆಗಳ ಅಪ್ಲಿಕೇಶನ್‌ಗಳಿಗಾಗಿ ವಿನ್ಯಾಸಗೊಳಿಸಲಾಗಿದೆ.

'ಜಗತ್ತಿನಲ್ಲಿರುವ ಸುಮಾರು 600 ಕೋಟಿ ಮೊಬೈಲ್ ಫೋನ್ ಚಂದಾದಾರರು ಎದುರಿಸುತ್ತಿರುವ ಸಂಪರ್ಕ ಸಮಸ್ಯೆಯನ್ನು ನಿವಾರಿಸುವ ಮತ್ತು ಸಂಪರ್ಕರಹಿತವಾಗಿ ಉಳಿದಿರುವ ಶತಕೋಟಿ ಜನರಿಗೆ ಬ್ರ್ಯಾಂಡ್‌ಬ್ಯಾಂಡ್ ಕಲ್ಪಿಸುವ ಉದ್ದೇಶ ಹೊಂದಿದ್ದೇವೆ' ಎಂದು ಎಎಸ್‌ಟಿ ಸ್ಪೇಸ್‌ಮೊಬೈಲ್ ಕಂಪನಿಯು ತನ್ನ ಜಾಲತಾಣದಲ್ಲಿ ತಿಳಿಸಿದೆ.

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಭಯೋತ್ಪಾದಕರಿಗಾಗಿ ಶೋಧ

ಪ್ರಜಾವಾಣಿ ವಾರ್ತೆ

ಜಮ್ಮು: ಜಮ್ಮು–ಕಾಶ್ಮೀರದ ಉಧಮ್‌ಪುರ ಜಿಲ್ಲೆಯಲ್ಲಿ ಭಯೋತ್ಪಾದಕರು ಮನೆಯೊಂದರಿಂದ ಆಹಾರವನ್ನು ತೆಗೆದುಕೊಂಡು ಹೋಗಿರುವುದಾಗಿ ಮಾಹಿತಿ ದೊರೆತ ಕಾರಣ ಭದ್ರತಾ ಪಡೆಗಳು ತೀವ್ರ ಶೋಧ ನಡೆಸುತ್ತಿವೆ.

ಇಬ್ಬರು ಭಯೋತ್ಪಾದಕರು ಶನಿವಾರ ಸಂಜೆ ಮನೆಯೊಂದಕ್ಕೆ ಬಂದು ಆಹಾರವಸ್ತುಗಳನ್ನು ಕೊಂಡುಹೋಗಿದ್ದಾರೆ. ಅವರು ಜೈಷ್ –ಎ–ಮೊಹಮ್ಮದ್ (ಜೆಇಎಂ) ಸಂಘಟನೆಯ ಸದಸ್ಯರು ಎಂದು ಶಂಕಿಸಲಾಗಿದೆ. ಮಜಲ್‌ತ ಪ್ರದೇಶದಲ್ಲಿನ ಚೋರ್ ಮೋಟೊ ಮತ್ತು ಅದರ ಸಮೀಪವಿರುವ ಅರಣ್ಯ ಗ್ರಾಮಗಳಲ್ಲಿ ಪೊಲೀಸ್ ಮತ್ತು ಅರೆಸೇನಾ ಪಡೆಗಳು ಶೋಧ ನಡೆಸುತ್ತಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ. ಮಜಲ್‌ತ ಪ್ರದೇಶದಲ್ಲಿ ಭದ್ರತಾ ಸಿಬ್ಬಂದಿ ಮತ್ತು ಭಯೋತ್ಪಾದಕರ ನಡುವೆ ಡಿ.15ರಂದು ನಡೆದಿದ್ದ ಗುಂಡಿನ ಚಕಮಕಿಯಲ್ಲಿ ಪೊಲೀಸರೊಬ್ಬರು ಮೃತಪಟ್ಟಿದ್ದರು.

ಹೊರ ರಾಜ್ಯಗಳಿಗೆ ಸಿಐಡಿ ತಂಡ

ಒಂದನೇ ಪುಟದಿಂದ...

'ಶಾಸಕರ ವಿರುದ್ಧ ಕೆಲವು ಸಾಕ್ಷ್ಯಾಧಾರಗಳು ಲಭ್ಯವಾಗಿದ್ದು, ಅವರ ವಿಚಾರಣೆ ನಡೆಸಬೇಕಿದೆ ಎಂದು ಸಿಐಡಿ ಮೂಲಗಳು ತಿಳಿಸಿವೆ.

ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿ ಕಿತ್ತಗನೂರಿನ ಸರ್ವೆ ನಂ.212ರ ಭೂಮಿಗೆ ಸಂಬಂಧಿಸಿದಂತೆ ರೌಡಿ ಬಿಕ್ಲು ಶಿವನನ್ನು ಜುಲೈ 15ರಂದು 12 ಜನರ ಗುಂಪೊಂದು ಮಾರಕಾಸ್ತ್ರಗಳಿಂದ ಹತ್ಯೆ ಮಾಡಿತ್ತು. ಪ್ರಕರಣದಲ್ಲಿ ಜಗದೀಶ್, ರೌಡಿ ಮಲಯಾಳ ಅಜಿತ್ ಸೇರಿ 15 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

'ಜಾಗದ ವಿಚಾರವಾಗಿ ಜಗದೀಶ್, ಕಿರಣ್, ವಿಮಲ್, ಅನಿಲ್ ಮತ್ತು ಇತರರು ಶಾಸಕ ಬೈರತಿ ಬಸವರಾಜ ಅವರ ಕುಮ್ಮಕ್ಕಿನಿಂದ ಕೊಲೆ ಮಾಡಿದ್ದಾರೆ' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿತ್ತು.

ಐದನೇ ಆರೋಪಿಯಾಗಿದ್ದ ಬೈರತಿ ಬಸವರಾಜ ಅವರನ್ನು ಭಾರತಿ ನಗರ ಪೊಲೀಸರು ವಿಚಾರಣೆ ನಡೆಸಿದ್ದರು. ಜುಲೈ 24ರಂದು ಪ್ರಕರಣವನ್ನು ರಾಜ್ಯ ಸರ್ಕಾರ ಸಿಐಡಿಗೆ ವರ್ಗಾವಣೆ ಮಾಡಿತ್ತು. ಈ ವೇಳೆ ಬೈರತಿ ಬಸವರಾಜ ಅವರನ್ನು ಕೂಡ ಸಿಐಡಿ ಅಧಿಕಾರಿಗಳು ವಿಚಾರಣೆ ನಡೆಸಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000- 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಹಣ ಕಟ್ಟಬೇಕಾಗಿಲ್ಲ: SSLC, PUC, Degree, Diplomaದವರು ಕಂಪನಿಗಳಿಗೆ ಆಫೀಸ್, ಶೋರೂಂಗಳಿಗೆ ಯುವಕ,ಯುವತಿಯರು (ವಿದ್ಯಾರ್ಹತೆಯಿಲ್ಲದವರಿಗೂ) 18,000/- 60,000/- ವಸತಿಯೂಟವಿರುತ್ತದೆ. 9035277967

Multiple Vacancy

CENTRE FOR Chronic Disease Control is recruiting MBBS doctors and Nurses for SAATH Project in Bangalore Rural and Kolar. Send detailed CV to jobs@ccdcindia.org by 25th December 2025

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಗಳಿಗೆ ಪುರುಷರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಆದ್ಯತೆ. 19,000ರಿಂದ 25,000 ಸಂಪಾದಿಸಿ. ಕೋರಿಯರ್ ಸೌಲಭ್ಯವಿದೆ. 9019593297, 8095133188.

ಪ್ರವಾಸ

Travel

26.12.25 5ದಿನಗಳು ದೆಹಲಿ,ಆಗ್ರಾ,ಜೈಪುರ್, ಫತೇಪುರ್ ಶಿಕ್ರಿ,ಇತ್ಯಾದಿ 38000 16.01.26 ಮತ್ತು`02.02.26 ಮಾಘಮೇಳ ಪ್ರಯುಕ್ತ 6ದಿನಗಳು ವಿಮಾನದಲ್ಲಿ ಪ್ರಯಾಗ್‌ರಾಜ್, ಕಾಶಿ,ಗಯಾ,ಅಯೋಧ್ಯ`33000 20.02.26 11ದಿನಗಳು ನೇಪಾಳ ಮುಕ್ತಿನಾಥ ಇತ್ಯಾದಿ.48000 ''ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'' 9739847429/ 9845560219

ಶ್ರೀಮಹಾದೇಶ್ವರ ಟೂರ್ಸ್ &.ಟ್ರಾವೆಲ್ಸ್, 08 ದಿನಗಳ ಕಾಶಿಪ್ರವಾಸ. 10ದಿನಗಳ ಗುಜರಾತ್ ಪ್ರವಾಸ. 06ದಿನಗಳ ಪುರಿಜಗನ್ನಾಥ್ ಪ್ರವಾಸ. 12ದಿನಗಳ ನೇಪಾಳಪ್ರವಾಸ. ಹೆಚ್ಚಿನ.ವಿವರಗಳಿಗಾಗಿ ಸಂಪರ್ಕಿಸಿ: 9611801143/ 9742810701.

ಜಿಎಸ್‌ಟಿ ದರ ಪರಿಷ್ಕರಣೆಯಿಂದ ವಾಹನ ಉದ್ಯಮದಲ್ಲಿ ಲವಲವಿಕೆ

2026ರಲ್ಲಿ ಉತ್ತಮ ವಹಿವಾಟು ನಿರೀಕ್ಷೆ

ನವದೆಹಲಿ (ಪಿಟಿಐ): 2026ರಲ್ಲಿ ದೇಶದ ವಾಹನ ಉದ್ಯಮದ ಮಾರಾಟ ಪ್ರಮಾಣವು ಶೇಕಡ 6ರಿಂದ ಶೇ 8ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆ ಇದೆ.

ಜಿಎಸ್‌ಟಿ ದರ ಪರಿಷ್ಕರಣೆ, ಹಣಕಾಸಿನ ಪರಿಸ್ಥಿತಿ ತಿಳಿಗೊಳ್ಳುತ್ತಿರುವುದು, ಆದಾಯ ತೆರಿಗೆ ವಿನಾಯಿತಿ ಪ್ರಮಾಣವನ್ನು ಹೆಚ್ಚು ಮಾಡಿರುವುದು ವಾಹನ ಖರೀದಿಯನ್ನು ಸುಲಭವಾಗಿಸಲಿವೆ, ಗ್ರಾಹಕರಿಂದ ಉತ್ತಮ ಬೇಡಿಕೆ ಬರುವಂತೆ ಮಾಡಲಿವೆ ಎಂದು ಉದ್ಯಮ ವಲಯ ನಿರೀಕ್ಷಿಸಿದೆ.

'ಜಿಎಸ್‌ಟಿ ಪರಿಷ್ಕರಣೆಯ ಪ್ರಯೋಜನವು 2026ರಲ್ಲಿ ಪೂರ್ಣವಾಗಿ ಲಭ್ಯವಾಗಲಿದೆ ಎಂಬುದು ನಮ್ಮ ನಿರೀಕ್ಷೆ. ಇದು ಉದ್ಯಮ ವಲಯದ ವಾರ್ಷಿಕ ಬೆಳವಣಿಗೆಯನ್ನು ಶೇ 8ರವರೆಗೆ ಒಯ್ಯಬಹುದು. ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾಗಿ ನಾವು ನಮ್ಮ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲಿದ್ದೇವೆ' ಎಂದು ಮಾರುತಿ ಸುಜುಕಿ ಕಂಪನಿಯ ಎಂ.ಡಿ. ಮತ್ತು ಸಿಇಒ ಹಿಸಾಶಿ ತಕೆಯುಚಿ ಹೇಳಿದ್ದಾರೆ.

'ಜಿಎಸ್‌ಟಿ ಪರಿಷ್ಕರಣೆಯ ಮೂಲಕ ಜಾರಿಗೆ ಬಂದ ಭಾರಿ ಸುಧಾರಣೆಯು ಅರ್ಥ ವ್ಯವಸ್ಥೆಗೆ ಹೊಸ ಚೇತನ ನೀಡಿತು' ಎಂದು ಅವರು ತಿಳಿಸಿದ್ದಾರೆ.

ಆಟೊಮೊಬೈಲ್ ಡೀಲರ್ ಸಂಘಗಳ ಒಕ್ಕೂಟದ (ಎಫ್‌ಎಡಿಎ) ಅಧ್ಯಕ್ಷ ಸಿ.ಎಸ್. ವಿಘ್ನೇಶ್ವರ ಅವರು 'ದ್ವಿಚಕ್ರ ವಾಹನ ಹಾಗೂ ಪ್ರಯಾಣಿಕ ವಾಹನ ವಿಭಾಗದಲ್ಲಿ 2025ರಲ್ಲಿ ಎರಡು ಅಂಕಿಗಳ ಬೆಳವಣಿಗೆಯನ್ನು ದಾಖಲಿಸುವ ವಿಶ್ವಾಸವು ಡೀಲರ್‌ಗಳಿಗೆ ಇದೆ' ಎಂದು ಹೇಳಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಆದಾಯವು ಸ್ಥಿರವಾಗಿದೆ. ಈಗ ಮದುವೆ ಸಮಾರಂಭಗಳ ಋತು ನಡೆಯುತ್ತಿದೆ. ಹೀಗಾಗಿ ಈಗ ಕಾಣುತ್ತಿರುವ ಸಕಾರಾತ್ಮಕ ವಾತಾವರಣವು 2026ರಲ್ಲಿಯೂ ಇರಲಿದೆ ಎಂಬುದು ನಮ್ಮ ನಿರೀಕ್ಷೆ' ಎಂದು ವಿಘ್ನೇಶ್ವರ ಹೇಳಿದ್ದಾರೆ.

ಡೀಲರ್‌ಗಳ ಪೈಕಿ ಶೇ 74ರಷ್ಟು ಮಂದಿ ಮುಂದಿನ ಮೂರು ತಿಂಗಳಲ್ಲಿ ಒಳ್ಳೆಯ ಬೆಳವಣಿಗೆ ಆಗಲಿದೆ ಎಂಬ ಆಶಾಭಾವನೆ ಹೊಂದಿದ್ದಾರೆ ಎಂದಿದ್ದಾರೆ.

ಭಾರತದ ವಾಹನಗಳ ಬಿಡಿಭಾಗ ತಯಾರಕರ ಸಂಘ (ಎಸಿಎಂಎ) ಕೂಡ ಮುಂದಿನ ವರ್ಷದಲ್ಲಿ ಬೆಳವಣಿಗೆಯು ಚೆನ್ನಾಗಿ ಇರಲಿದೆ ಎಂದು ಅಂದಾಜು ಮಾಡಿದೆ.

'ಅಂತರಿಕ್ಷ ಪ್ರಯೋಗ ಶಾಲೆ' ಸ್ಥಾಪನೆಗೆ ಪ್ರಸ್ತಾವ

ನವದೆಹಲಿ (ಪಿಟಿಐ): ಬಾಹ್ಯಾಕಾಶ ತಂತ್ರಜ್ಞಾನ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ರಾಷ್ಟ್ರೀಯ ಬಾಹ್ಯಾಕಾಶ ಉತ್ತೇಜನ ಮತ್ತು ಪ್ರಮಾಣೀಕರಣ ಕೇಂದ್ರ (ಇನ್‌ಸ್ಪೇಸ್) ದೇಶದ ಏಳು ಸಂಸ್ಥೆಗಳಲ್ಲಿ 'ಅಂತರಿಕ್ಷ ಪ್ರಯೋಗಶಾಲೆ' ಸ್ಥಾಪಿಸುವ ಬಗ್ಗೆ ಪ್ರಸ್ತಾಪಿಸಿದೆ.

'ಅಂತರಿಕ್ಷ ಪ್ರಯೋಗಶಾಲೆ'ಯು ದೇಶದ ಶೈಕ್ಷಣಿಕ ಸಂಸ್ಥೆಗಳಲ್ಲಿ ಅತ್ಯಾಧುನಿಕ ಪ್ರಯೋಗಾಲಯವನ್ನು ಸ್ಥಾಪಿಸುವ ಗುರಿಯನ್ನು ಹೊಂದಿರುವ ಮೊದಲ ಉಪಕ್ರಮವಾಗಿದೆ. ಬಾಹ್ಯಾಕಾಶ ತಂತ್ರಜ್ಞಾನದ ಬಗ್ಗೆ ಕಲಿಯುವ ವಿದ್ಯಾರ್ಥಿಗಳಿಗೆ ಇದು ತರಬೇತಿ ಮತ್ತು ಅನುಭವವನ್ನು ನೀಡಲಿದೆ.

'ಆಸಕ್ತ ಸಂಸ್ಥೆಗಳಿಗೆ ಪ್ರಸ್ತಾವ ಸಲ್ಲಿಸುವಂತೆ ಮನವಿ ಮಾಡಲಾಗಿದ್ದು, ದೇಶದ ಏಳು ವಲಯಗಳಿಂದ ಏಳು ಸಂಸ್ಥೆಗಳನ್ನು ಹಂತ ಹಂತವಾಗಿ ಆಯ್ಕೆ ಮಾಡಲಾಗುತ್ತದೆ' ಎಂದು ಇನ್‌ಸ್ಪೇಸ್ ಪ್ರಚಾರ ನಿರ್ದೇಶನಾಲಯದ ನಿರ್ದೇಶಕ ವಿನೋದ್ ಕುಮಾರ್ ತಿಳಿಸಿದ್ದಾರೆ. ಯೋಜನೆಯ ಒಟ್ಟು ವೆಚ್ಚದ ಶೇ 75ರಷ್ಟನ್ನು ಇನ್‌ಸ್ಪೇಸ್ ಭರಿಸುತ್ತದೆ. ಪ್ರತಿ ಸಂಸ್ಥೆಗೆ ಗರಿಷ್ಠ ₹5 ಕೋಟಿಯಷ್ಟು ನೀಡಲಾಗುತ್ತದೆ. ಪ್ರಸ್ತಾವ ಸಲ್ಲಿಸುವ ಸಂಸ್ಥೆಗಳು 5 ವರ್ಷಕ್ಕಿಂತ ಹಳೆಯದಾಗಿರಬೇಕು ಮತ್ತು ಬಾಹ್ಯಾಕಾಶ ತಂತ್ರಜ್ಞಾನ ಕಲಿಕೆಯ ಸೌಲಭ್ಯ ಹೊಂದಿರಬೇಕು.

ಸಂಕ್ಷಿಪ್ತ ಸುದ್ದಿ

'ಭಾರತದಲ್ಲಿ ಬಹಳಷ್ಟು ಅವಕಾಶ'

ಪುಣೆ (ಪಿಟಿಐ): 'ಗಗನಯಾನಿ' ಆಗುವುದು ಭಾರತದಲ್ಲಿ ಈಗ ವೃತ್ತಿಯಾಗಿದೆ. ಯುವ ಮನಸ್ಸುಗಳಿಗೆ ಈ ವೃತ್ತಿಯಲ್ಲಿ ಬಹಳಷ್ಟು ಅವಕಾಶಗಳಿವೆ' ಎಂದು ಗಗನಯಾನಿ ಶುಭಾಂಶು ಶುಕ್ಲಾ ಹೇಳಿದರು.

ಶುಭಾಂಶು ಶುಕ್ಲಾ

ಪುಣೆ ಸಾಹಿತ್ಯ ಹಬ್ಬದಲ್ಲಿ ಭಾನುವಾರ ಮಾತನಾಡಿದ ಅವರು, 'ವಿಂಗ್ ಕಮಾಂಡರ್ ರಾಕೇಶ್ ಶರ್ಮಾ ಅವರು 1984ರಲ್ಲಿ ಬಾಹ್ಯಾಕಾಶಕ್ಕೆ ಹೋಗಿದ್ದಾಗ ನಾನು ಹುಟ್ಟಿಯೇ ಇರಲಿಲ್ಲ. ನಾನು ಹುಟ್ಟಿದ್ದು 1985ರಲ್ಲಿ. ಅವರ ಕಥೆಗಳನ್ನು ಕೇಳುತ್ತಲೇ ಬೆಳೆದೆ. ನಾನೂ ಗಗನಯಾನಿ ಆಗುತ್ತೇನೆ ಎಂದು ಅಂದುಕೊಂಡಿರಲೇ ಇಲ್ಲ. ಯಾಕೆಂದರೆ, ಭಾರತದಲ್ಲಿ ಬಾಹ್ಯಾಕಾಶ ಯೋಜನೆಗಳೇ ಇರಲಿಲ್ಲ' ಎಂದರು. 'ಆದರೆ, ಇಂದು ಪರಿಸ್ಥಿತಿ ಹಾಗಿಲ್ಲ. ನಾನು ಎಲ್ಲೇ ವಿದ್ಯಾರ್ಥಿಗಳೊಂದಿಗೆ ಮಾತನಾಡಿದರೂ ಗಗನಯಾನಿ ಆಗುವುದು ಹೇಗೆ ಎಂದು ನನ್ನನ್ನು ಕೇಳುತ್ತಾರೆ' ಎಂದರು.

'ಪವಿತ್ರ ನಗರ'ಗಳಲ್ಲಿ ಮದ್ಯ, ಮಾಂಸ ನಿಷಿದ್ಧ

ಚಂಡೀಗಢ (ಪಿಟಿಐ): ಅಮೃತಸರ, ತಲವಂಡಿ ಸಾಬೊ ಮತ್ತು ಶ್ರೀ ಆನಂದಪುರ ಸಾಹೇಬ್ ನಗರಗಳಲ್ಲಿ ಮದ್ಯ, ಮಾಂಸ ಮತ್ತು ಇತರ ಅಮಲು ಪದಾರ್ಥಗಳ ಮಾರಾಟವನ್ನು ನಿಷೇಧಿಸಿ ಸರ್ಕಾರ ಆದೇಶಿಸಿದೆ. ಈ ನಗರಗಳಿಗೆ ರಾಜ್ಯ ಸರ್ಕಾರವು 'ಪವಿತ್ರ ನಗರ' ಸ್ಥಾನಮಾನ ನೀಡಿದೆ.

ಮುಖ್ಯಮಂತ್ರಿ ಭಗವಂತ ಸಿಂಗ್ ಮಾನ್ ಅವರು, 'ಪವಿತ್ರ ನಗರ ಸ್ಥಾನಮಾನ ನೀಡಿರುವುದು ಸಿಖ್ ಸಮುದಾಯದಲ್ಲಿ ಸಂತಸ ತಂದಿದೆ. ಈ ನಗರಗಳು ಧಾರ್ಮಿಕ ಕೇಂದ್ರಗಳಷ್ಟೇ ಅಲ್ಲ, ನಮ್ಮ ಪರಂಪರೆಯ ಸಂಕೇತ' ಎಂದು ಅವರು ಭಾನುವಾರ ವಿಡಿಯೊ ಸಂದೇಶದ ಮೂಲಕ ತಿಳಿಸಿದರು.

ಕಳೆದ ತಿಂಗಳು ನಡೆದ ಪಂಜಾಬ್ ವಿಧಾನಸಭೆಯ ವಿಶೇಷ ಅಧಿವೇಶನದ ಸಂದರ್ಭದಲ್ಲಿ 'ಪವಿತ್ರ ನಗರ' ಕುರಿತ ನಿರ್ಣಯವನ್ನು ಅವಿರೋಧವಾಗಿ ಅಂಗೀಕರಿಸಲಾಗಿತ್ತು. ಡಿ.15ರಂದು ಸರ್ಕಾರ ಸುತ್ತೋಲೆ ಹೊರಡಿಸಿತ್ತು.

ಜೆಫ್ರಿಗೆ ಸಂಬಂಧಿಸಿದ ಕಡತಗಳು ಕಣ್ಮರೆ

ನ್ಯೂಯಾರ್ಕ್ (ಎಪಿ): ಲೈಂಗಿಕ ದೌರ್ಜನ್ಯ ಪ್ರಕರಣದ ಅಪರಾಧಿ ಜೆಫ್ರಿ ಎಫ್‌ಸ್ಟೈನ್‌ಗೆ ಸಂಬಂಧಿಸಿದ 16 ಕಡತಗಳು ಅಮೆರಿಕ ನ್ಯಾಯಾಂಗ ಇಲಾಖೆಯ ವೆಬ್‌ಸೈಟ್‌ನಿಂದ ದಿಢೀರ್ ಕಣ್ಮರೆಯಾಗಿರುವುದು ಚರ್ಚೆಗೆ ಕಾರಣವಾಗಿದೆ.

ಎಫ್‌ಸ್ಟೈನ್ ಜೊತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಮೆಲನಿ ಟ್ರಂಪ್ ಮತ್ತು ಎಫ್‌ಸ್ಟೈನ್ ಆಪ್ತ ಘಿಸ್ಲೈನ್ ಮಾಕ್ಸ್‌ವೆಲ್ ಅವರು ಇರುವ ಚಿತ್ರ ಸೇರಿದಂತೆ ಪ್ರಕರಣಕ್ಕೆ ಸಂಬಂಧಿಸಿದ ಕಡತಗಳನ್ನು ವೆಬ್‌ಸೈಟ್‌ನಲ್ಲಿ ಶುಕ್ರವಾರ ಪೋಸ್ಟ್ ಮಾಡಲಾಗಿತ್ತು ಆದರೆ ಶನಿವಾರ ಅದನ್ನು ಅಳಿಸಿಹಾಕಲಾಗಿದೆ.

ಕಡತಗಳನ್ನು ಯಾಕೆ ಅಳಿಸಿ ಹಾಕಲಾಗಿದೆ? ಮತ್ತು ಇದು ಉದ್ದೇಶಪೂರ್ವಕವಾಗಿ ಮಾಡಿದ ಕಾರ್ಯವೇ? ಎಂಬ ಬಗ್ಗೆ ನ್ಯಾಯಾಂಗ ಇಲಾಖೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಕಡತಗಳನ್ನು ತೆಗೆದುಹಾಕಿರುವ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ನಡೆಯುತ್ತಿದೆ. ಸಾರ್ವಜನಿಕರಿಗೆ ಈ ಬಗ್ಗೆ ಯಾಕೆ ಮಾಹಿತಿ ನೀಡಿಲ್ಲ ಎಂಬ ಪ್ರಶ್ನೆಗಳನ್ನು ಕೇಳಲಾಗುತ್ತಿದೆ.

ವೆಬ್‌ಸೈಟ್‌ನಲ್ಲಿ ಅಳಿಸಿಹಾಕಲಾಗಿರುವ ಟ್ರಂಪ್ ಚಿತ್ರವನ್ನು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಡೆಮಾಕ್ರಟಿಕ್ ಸದಸ್ಯರು, 'ಏನನ್ನು ಮುಚ್ಚಿಡಲಾಗುತ್ತಿದೆ? ಅಮೆರಿಕದ ಜನತೆಗಾಗಿ ನಾವು ಪಾರದರ್ಶಕತೆಯನ್ನು ಬಯಸುತ್ತೇವೆ' ಎಂದು ಹೇಳಿದ್ದಾರೆ.

ಜಿಇಎಂ ಮೂಲಕ ಹರಾಜು: ₹2,200 ಕೋಟಿ ಸಂಗ್ರಹ

ನವದೆಹಲಿ (ಪಿಟಿಐ): ಸರ್ಕಾರದ ಇ–ಮಾರುಕಟ್ಟೆ ಪೋರ್ಟಲ್ ಆದ 'ಜಿಇಎಂ' ಕಳೆದ ನಾಲ್ಕು ವರ್ಷದಲ್ಲಿ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸಂಸ್ಥೆಗಳ ಗುಜರಿ, ಇ–ತ್ಯಾಜ್ಯ, ಹಳೆಯ ವಾಹನಗಳು, ಯಂತ್ರೋಪಕರಣಗಳು ಮತ್ತು ಗುತ್ತಿಗೆ ಆಸ್ತಿಗಳಂತಹ ಸ್ವತ್ತುಗಳ ಮಾರಾಟದಿಂದ ₹2,200 ಕೋಟಿ ಸಂಗ್ರಹಿಸಲು ಅನುವು ಮಾಡಿಕೊಟ್ಟಿದೆ.

ಸಚಿವಾಲಯಗಳು, ಸರ್ಕಾರದ ಇಲಾಖೆಗಳು, ಸಾರ್ವಜನಿಕ ವಲಯದ ಉದ್ದಿಮೆಗಳು, ಸರಕು ಮತ್ತು ಸೇವೆಗಳನ್ನು ಈ ಆನ್‌ಲೈನ್ ವೇದಿಕೆಯ ಮೂಲಕ ಪಡೆದುಕೊಳ್ಳುತ್ತವೆ.

2021ರ ಡಿಸೆಂಬರ್‌ನಿಂದ 2025ರ ನವೆಂಬರ್‌ವರೆಗೆ ಜಿಇಎಂ 13 ಸಾವಿರಕ್ಕೂ ಹೆಚ್ಚು ಹರಾಜು ನಡೆಸಿದೆ. ಈ ಹರಾಜಿನಲ್ಲಿ ನೋಂದಾಯಿತ 23 ಸಾವಿರ ಬಿಡ್‌ದಾರರು ಮತ್ತು 17 ಸಾವಿರಕ್ಕೂ ಹೆಚ್ಚು ಹರಾಜುದಾರರು ಪಾಲ್ಗೊಂಡಿದ್ದರು ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಭಾನುವಾರ ತಿಳಿಸಿದೆ.

ಈ ಡಿಜಿಟಲ್ ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಸರ್ಕಾರಿ ಇಲಾಖೆಗಳು ಗುಜರಿ, ಇ–ತ್ಯಾಜ್ಯ, ಯಂತ್ರೋಪಕರಣಗಳು, ಹಳೆಯ ವಾಹನಗಳನ್ನು ಹೆಚ್ಚು ಬಿಡ್ ಮಾಡಿದವರಿಗೆ ಮಾರಾಟ ಮಾಡಿವೆ.

ಪಬ್‌ನಲ್ಲಿ ಗುಂಡಿನ ದಾಳಿ: 9 ಸಾವು

ಜೋಹಾನಸ್‌ಬರ್ಗ್ (ಎಪಿ): ದಕ್ಷಿಣ ಆಫ್ರಿಕಾದ ಪಬ್‌ವೊಂದರಲ್ಲಿ ಭಾನುವಾರ ನಡೆದ ಗುಂಡಿನ ದಾಳಿಯಲ್ಲಿ ಒಂಬತ್ತು ಮಂದಿ ಮೃತಪಟ್ಟಿದ್ದು, ಕನಿಷ್ಠ 10 ಮಂದಿ ಗಾಯಗೊಂಡಿದ್ದಾರೆ.

ಜೋಹಾನಸ್‌ಬರ್ಗ್‌ನಿಂದ 40 ಕಿ.ಮೀ. ದೂರದಲ್ಲಿರುವ ಬೆಕರ್ಸ್‌ಡಾಲ್ ನಗರದಲ್ಲಿ ಘಟನೆ ನಡೆದಿದೆ. ಸುಮಾರು 12 ಬಂದೂಕುಧಾರಿಗಳು ಏಕಾಏಕಿ ಪಬ್‌ವೊಂದಕ್ಕೆ ನುಗ್ಗಿ ಜನರ ಮೇಲೆ ಗುಂಡಿನ ದಾಳಿ ನಡೆಸಿ, ಪರಾರಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಪಿಗಳ ಪತ್ತೆಗಾಗಿ ಶೋಧ ಕಾರ್ಯ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೈಲ್ವೆ ಹಳಿಯುದ್ದಕ್ಕೂ ಆನೆಗಳ ಚಲನವಲನದ ಮೇಲೆ ಕಣ್ಗಾವಲಿಡುವಂತೆ ಎಲ್ಲಾ ರಾಜ್ಯಗಳಿಗೆ ಸೂಚನೆ

ಆನೆಗಳ ಸಾವು: ವರದಿ ಕೇಳಿದ ಕೇಂದ್ರ

ಕೋಲ್ಕತ್ತ (ಪಿಟಿಐ): ಅಸ್ಸಾಂನ ಹೋಜಾಯಿ ಜಿಲ್ಲೆಯಲ್ಲಿ ರೈಲು ಡಿಕ್ಕಿ ಹೊಡೆದು ಆನೆಗಳು ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ವರದಿ ಕೇಳಿದೆ ಎಂದು ಕೇಂದ್ರ ಸಚಿವ ಭೂಪೇಂದರ್ ಯಾದವ್ ಭಾನುವಾರ ತಿಳಿಸಿದರು.

ಆನೆ ಮತ್ತು ಹುಲಿ ಸಂರಕ್ಷಣೆ ಯೋಜನೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರೈಲ್ವೆ ಹಳಿಯುದ್ದಕ್ಕೂ ಆನೆಗಳ ಚಲನವಲನದ ಮೇಲೆ ಕಣ್ಗಾವಲಿಡುವಂತೆ ಎಲ್ಲಾ ರಾಜ್ಯಗಳಿಗೆ ಸೂಚಿಸಲಾಗಿದೆ' ಎಂದರು.

ರೈಲ್ವೆ ಹಳಿಯುದ್ದಕ್ಕೂ ಆನೆಗಳ ಚಲನವಲನ ಕುರಿತಂತೆ ರಾಜ್ಯಗಳ ಅರಣ್ಯ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸುವಂತೆ ರೈಲ್ವೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಲೋಕೊ ಪೈಲಟ್ ಮತ್ತು ಅರಣ್ಯ ಅಧಿಕಾರಿಗಳ ಮಧ್ಯೆ ಪರಸ್ಪರ ಸಹಕಾರವೂ ಅಗತ್ಯ ಎಂದು ಹೇಳಿದರು.

ಶನಿವಾರ ತಡರಾತ್ರಿ ಸಾಯಿರಂಗ್–ನವದೆಹಲಿ ರಾಜಧಾನಿ ಎಕ್ಸ್‌ಪ್ರೆಸ್ ರೈಲು ಡಿಕ್ಕಿ ಹೊಡೆದು ಎಂಟು ಆನೆಗಳು ಮೃತಪಟ್ಟಿವೆ. ಐದು ರೈಲು ಬೋಗಿಗಳು ಹಾಗೂ ಎಂಜಿನ್ ಈ ಅವಘಡದಿಂದಾಗಿ ಹಳಿ ತಪ್ಪಿದ್ದವು.

ಮತ್ತೊಂದು ಮರಿಯಾನೆ ಸಾವು

ನಾಗಾಂವ್ (ಪಿಟಿಐ): ರೈಲು ಡಿಕ್ಕಿ ಸಂದರ್ಭದಲ್ಲಿ ಗಾಯಗೊಂಡಿದ್ದ ಇನ್ನೊಂದು ಮರಿಯಾನೆಯೂ ಮೃತಪಟ್ಟಿದೆ. ಇದರೊಂದಿಗೆ ದುರಂತದಲ್ಲಿ ಮೃತಪಟ್ಟ ಆನೆಗಳ ಸಂಖ್ಯೆ 8ಕ್ಕೆ ಏರಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಮೃತಪಟ್ಟ ಆನೆಗಳನ್ನು ಅವಘಡ ನಡೆದ ಸ್ಥಳದ ಸಮೀಪದಲ್ಲೇ ಹೂಳಲಾಗಿದೆ ಎಂದು ಹೇಳಿದರು.

ರೈಲುಗಳ ಸಂಚಾರ ರದ್ದು

ಜೆಮ್‌ಶೆಡ್‌ಪುರ (ಪಿಟಿಐ): ಆನೆಗಳ ಚಲನವಲನದ ಕಾರಣದಿಂದ ಆಗ್ನೇಯ ರೈಲ್ವೆಯ ಚಕ್ರಧರಪುರ ವಿಭಾಗದಲ್ಲಿ ಡಿಸೆಂಬರ್ 22ರಿಂದ ಮೂರು ದಿನ 10ಕ್ಕೂ ಹೆಚ್ಚು ಪ್ರಯಾಣಿಕ ರೈಲುಗಳ ಸಂಚಾರವನ್ನು ರದ್ದು ಮಾಡಲಾಗಿದೆ.



ಮೆಮು ರೈಲು ಸೇವೆಯನ್ನೂ ಡಿಸೆಂಬರ್ 22ರಿಂದ 24ರವರೆಗೆ ರದ್ದು ಮಾಡಲಾಗಿದೆ ಎಂದು ಆಗ್ನೇಯ ರೈಲ್ವೆಯು ಪ್ರಕಟಣೆಯಲ್ಲಿ ತಿಳಿಸಿದೆ.

'ಆನೆಗಳ ಗುಂಪು ಚಕ್ರಧರಪುರ ಮತ್ತು ಝಾರಸುಗುಡ ನಡುವಣ ರೈಲು ಹಳಿಗಳ ಸಮೀಪ ಇರುವುದು ಪತ್ತೆಯಾಗಿದೆ. ಮುಂಜಾಗ್ರತಾ ಕ್ರಮವಾಗಿ ರೈಲು ಸೇವೆಯನ್ನು ನಿಧಾನಿಸಲಾಗಿದೆ. ಪರಿಣಾಮವಾಗಿ ಸಂಚಾರ ದಟ್ಟಣೆ ಹೆಚ್ಚಾಗಿದೆ. ಇದರಿಂದಲೂ ರೈಲು ಸೇವೆಯಲ್ಲಿ ವಿಳಂಬವಾಗುತ್ತಿದೆ' ಎಂದು ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಆದಿತ್ಯ ಚೌಧರಿ ತಿಳಿಸಿದರು.

'ಮಾರ್ಕ್' ಚಿತ್ರದ ಹಾಡಿಗೆ ಸುದೀಪ್ ಜೊತೆ ಸಂಭ್ರಮಿಸಿದ ಚಿತ್ರತಂಡದ ಕಲಾವಿದರು ಚಿತ್ರಗಳು: ಗೋವಿಂದರಾಜ ಜವಳಿ

ಪ್ರೇಕ್ಷಕರ ರಂಜಿಸಿದ 'ಮಾರ್ಕ್ ಉತ್ಸವ'

• ನಾಗರಾಜ್ ಬಿ.ಎನ್.

ಕಿಚ್ಚ ಸುದೀಪ್ ಅವರ ನಟನೆಯ ಬಹುನಿರೀಕ್ಷಿತ 'ಮಾರ್ಕ್' ಡಿ.25ರಂದು ರಾಜ್ಯದಾದ್ಯಂತ ಬಿಡುಗಡೆಯಾಗಲಿದ್ದು, ಪ್ರಚಾರಾರ್ಥವಾಗಿ ಶನಿವಾರ ಹುಬ್ಬಳ್ಳಿ ನಗರದ ನೆಹರೂ ಮೈದಾನದಲ್ಲಿ 'ಪ್ರೀ ರಿಲೀಸ್ ಇವೆಂಟ್' (ಮಾರ್ಕ್ ಉತ್ಸವ) ನಡೆಯಿತು. ಚಳಿಯನ್ನೂ ಲೆಕ್ಕಿಸದೇ ಪ್ರೇಕ್ಷಕರು ವಿವಿಧ ಕಲಾವಿದರ ಮನರಂಜನೆ ಕಾರ್ಯಕ್ರಮ ಆಸ್ವಾದಿಸುತ್ತ, ಸುದೀಪ್ ನಟನೆಯ ಚಿತ್ರದ ಡೈಲಾಗ್ ಕೇಳುತ್ತ ಸಂಭ್ರಮಿಸಿದರು.

ಸುದೀಪ್ ವೇದಿಕೆಗೆ ಬರುತ್ತಿದ್ದಂತೆ, ಪ್ರೇಕ್ಷಕರ ಹರ್ಷೋದ್ಗಾರ ಎಲ್ಲೇ ಮೀರಿತ್ತು. ತಮ್ಮ ನೆಚ್ಚಿನ ತಾರೆ ಸುದೀಪ್ ಅವರನ್ನು ಹತ್ತಿರದಿಂದ ನೋಡಿ, ಕಿಚ್ಚ... ಕಿಚ್ಚ... ಎಂದು ಕೂಗಿ ಕುಣಿದು ಕುಪ್ಪಳಿಸಿದರು. 'ಹುಬ್ಬಳ್ಳಿ ಹೇಗಿದ್ದೀರ?' ಎನ್ನುತ್ತಲೇ ಮಾತು ಆರಂಭಿಸಿದ ಅವರು, ಪರೋಕ್ಷವಾಗಿ ತಮ್ಮ ವಿರೋಧಿಗಳಿಗೆ ಮಾತಿನ ಚಾಟಿ ಬೀಸಿದರು.

'ಮಾತನಾಡಲು ಸಾಕಷ್ಟಿದೆ. ನಿಯಂತ್ರಿಸಿಕೊಂಡು ಮಾತನಾಡುತ್ತೇನೆ. ಹುಬ್ಬಳ್ಳಿಯಲ್ಲಿ ನಿಂತು ಮಾತನಾಡಿದರೆ ಇಡೀ ಕರ್ನಾಟಕಕ್ಕೆ ತಿಳಿಯುತ್ತದೆ. ಎಲ್ಲಿ, ಯಾರಿಗೆ ಹೇಗೆ ತಟ್ಟಬೇಕು ಎನ್ನುವುದು ಭರ್ಜರಿಯಾಗಿ ತಟ್ಟುತ್ತದೆ. ಡಿ.25ರಂದು ಚಿತ್ರ ಮಂದಿರದ ಒಳಗೆ 'ಮಾರ್ಕ್' ಬಿಡುಗಡೆಯಾದರೆ, ಹೊರಗಡೆ ಒಂದು ಪಡೆ ಯುದ್ಧಕ್ಕೆ ಸಿದ್ಧವಾಗಿ ನಿಂತಿರುತ್ತದೆ. ನಾವು ಯುದ್ಧಕ್ಕೂ ಸಿದ್ಧ, ಮಾತಿಗೂ ಬದ್ಧ' ಎಂದರು.

'ಮೌನವಾಗಿರುವುದು ಒಳ್ಳೆಯದೋ ಕೆಟ್ಟದ್ದೋ ಗೊತ್ತಿಲ್ಲ. ಆದರೆ, ನಿಮಗೋಸ್ಕರ, ಎಲ್ಲರೂ ಚೆನ್ನಾಗಿರಬೇಕು ಹಾಗೂ ಒಳ್ಳೆಯ ಹೆಸರು ಇಟ್ಟುಕೊಳ್ಳಬೇಕು ಎನ್ನುವ ಕಾರಣಕ್ಕೆ ಎಲ್ಲವನ್ನೂ ಸಹಿಸಿಕೊಂಡು ಇದ್ದೇನೆ. ಮಾತನಾಡಲು ಬರುವುದಿಲ್ಲ ಎಂದಲ್ಲ. ನನ್ನ ಸಹನೆಯಿಂದ ಬಹಳಷ್ಟು ಕಲ್ಲು ತೂರಾಟ ನಡೆಯುತ್ತಿದೆ. ನೀವು ಸಹಿಸಿಕೊಳ್ಳುತ್ತ ಇದ್ದೀರಿ. ಈಗ ಹೇಳುತ್ತಿದ್ದೇನೆ, ಸಹಿಸಿಕೊಳ್ಳುವವರೆಗೂ ತಡೆಯಿರಿ, ಮಾತನಾಡುವ ಸಮಯಕ್ಕೆ ಮಾತನಾಡಿ' ಎಂದು ಹೇಳಿದರು.

'ಮಾರ್ಕ್' ಅದ್ಭುತ ಸಿನಿಮಾವಾಗಿದ್ದು, ಸತ್ಯಜ್ಯೋತಿ ಫಿಲ್ಮ್ಸ್ ಮತ್ತು ನಿರ್ದೇಶಕ ವಿಜಯ ಕಾರ್ತಿಕೇಯನ್ ಈ ರೀತಿ ಚಿತ್ರ ಮೂಡಿಬರಲು ಕಾರಣ. ಪತ್ನಿ ಸುಪ್ರಿಯಾ ಮತ್ತು ಮಗಳು ಸಾನ್ವಿ ಅವರ ಸಹಕಾರವನ್ನು ಮರೆಯುವಂತಿಲ್ಲ. ಚಿತ್ರಕ್ಕಾಗಿ ಶ್ರಮಿಸಿದ ಎಲ್ಲರಿಗೂ ಆಭಾರಿ, ಥ್ಯಾಂಕ್ಯೂ ಹುಬ್ಬಳ್ಳಿ' ಎನ್ನುತ್ತ ಪ್ರೇಕ್ಷಕರ ಕಡೆ ಕೈ ಬೀಸಿದರು.

'ಹದ್ದು ಹಾರಾಡ್ಕೊಂಡು ಬರೋದು ಲೇಟ್ ಆಗ್ಬೋದು, ಚಿರತೆ ಓಡ್ಕೊಂಡು ಬರೋದು ಲೇಟ್ ಆಗ್ಬೋದು.. ಆದ್ರೆ ಇದು ಮಾರ್ಕ್' ಎನ್ನುವ ಟ್ರೇಲರ್‌ನಲ್ಲಿರುವ ಡೈಲಾಗ್ ಅಭಿಮಾನಿಗಳಿಗೆ ಚಳಿಯಲ್ಲೂ ಬಿಸಿಯೇರಿಸಿತ್ತು. ಟ್ರೇಲರ್ ಕೊನೆಯಲ್ಲಿ ಬರುವ 'ಧಮ್ ಹೊಡೆಯೋದು ಕಮ್ಮಿ ಮಾಡಬೇಕಲೆ' ಡೈಲಾಗ್ ಸಹ ಪ್ರೇಕ್ಷಕರ ಮನರಂಜಿಸಿತ್ತು.

ಸುದೀಪ್ ಸಿನಿಮಾದಲ್ಲಿ ನಾಯಕ ನಟನಾಗಿ ನಟಿಸಿದ್ದೂ ಅಲ್ಲದೆ, ಸಹ ನಿರ್ಮಾಪಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಹಿಂದಿನ 'ಮ್ಯಾಕ್ಸ್' ಸಿನಿಮಾದ ತಂತ್ರಜ್ಞರ ತಂಡವೇ ಈ 'ಮಾರ್ಕ್' ಸಿನಿಮಾದಲ್ಲೂ ಜೊತೆಯಾಗಿದೆ. ರೋಶಿನಿ ಪ್ರಕಾಶ್, ಯೋಗಿ ಬಾಬು, ನವೀನ್ ಚಂದ್ರ, ದೀಪಿಕಾ, ಗುರು ಸೋಮಸುಂದರಂ ಹಾಗೂ ಇತರರು ನಟಿಸಿದ್ದಾರೆ. ಅಜನೀಶ್ ಲೋಕನಾಥ ಸಂಗೀತ, ಶೇಖರ್ ಚಂದ್ರ ಛಾಯಾಚಿತ್ರಗ್ರಹಣವಿದೆ.

ಮಾರ್ಕ್ MARATHON

ಸುದೀಪ್ ಹಿಂದಿನ 'ಮ್ಯಾಕ್ಸ್' ರೀತಿಯದ್ದೇ ಕಥೆ ಈ ಚಿತ್ರದಲ್ಲಿದೆ.

ಎಸ್‌ಪಿ ಅಜಯ್ ಮಾರ್ಕಾಂಡೇಯ ಅಲಿಯಾಸ್ 'ಮಾರ್ಕ್' ಆಗಿ ಸುದೀಪ್ ನಟಿಸಿದ್ದಾರೆ. ಆದಿಕೇಶವ ಮುಖ್ಯಮಂತ್ರಿ ಆಗಲು ಏನೂ ಬೇಕಾದರೂ ಮಾಡುತ್ತಾನೆ. ಈ ಕಾರಣಕ್ಕಾಗಿಯೇ 'ಮಾರ್ಕ್' ಅಮಾನತಾಗುತ್ತಾನೆ. ಆದಿಕೇಶವನ ಬಣ್ಣ ಬಯಲು ಮಾಡಲು 'ಮಾರ್ಕ್'ಗೆ ಅವಕಾಶವೊಂದು ಸಿಗುತ್ತದೆ. ಅದನ್ನು ಉಪಯೋಗಿಸಿಕೊಂಡು ಹೇಗೆ ದುಷ್ಟರನ್ನು ಸದೆಬಡೆಯುತ್ತಾನೆ ಎನ್ನುವುದು ಚಿತ್ರದ ತಿರುಳೆಂದು ಟ್ರೇಲರ್‌ನಿಂದ ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ❖

'ಟಾಕ್ಸಿಕ್'ನಲ್ಲಿ ನಾದಿಯಾಳಾದ ಕಿಯಾರಾ

ಕಿಯಾರಾ ಅಡ್ವಾಣಿ

ಯಶ್ ನಟನೆಯ 'ಟಾಕ್ಸಿಕ್' ಸಿನಿಮಾ 2026ರ ಮಾರ್ಚ್ 19ರಂದೇ ತೆರೆಗೆ ಬರುವುದು ಖಚಿತವಾಗಿದೆ. ಚಿತ್ರತಂಡ ಪ್ರಚಾರಕ್ಕೆ ಸಜ್ಜಾಗಿದ್ದು ನಾಯಕಿ ಕಿಯಾರಾ ಅಡ್ವಾಣಿ ಅವರ ಫಸ್ಟ್‌ಲುಕ್ ಪೋಸ್ಟರ್ ಅನ್ನು ತಂಡ ಬಿಡುಗಡೆಗೊಳಿಸಿದೆ.

ಗೀತು ಮೋಹನ್‌ದಾಸ್ ನಿರ್ದೇಶನದ ಈ ಸಿನಿಮಾ ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಏಕಕಾಲದಲ್ಲಿ ಚಿತ್ರೀಕರಣ ಮುಗಿಸಿ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಚಿತ್ರದಲ್ಲಿ ಕಿಯಾರಾ ನಾದಿಯಾ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸರ್ಕಸ್ ಕಂಪನಿ ವೇದಿಕೆ ಮೇಲೆ ಅವರು ನಿಂತಿರುವಂತಿದೆ ಅವರ ಫಸ್ಟ್ ಲುಕ್ ಪೋಸ್ಟರ್. ಕಿಯಾರಾ ಮುಖದಲ್ಲಿ ಏನೋ ಆತಂಕ ಕಾಣಿಸುತ್ತಿದ್ದು, ಇದು ಕೇವಲ ಗ್ಲಾಮರ್ ಪಾತ್ರವಲ್ಲ ಎಂಬುದು ಸ್ಪಷ್ಟವಾಗುತ್ತಿದೆ.

ಸಿನಿಮಾವು ಹಿಂದಿ, ತಮಿಳು, ತೆಲುಗು, ಮಲಯಾಳ ಸೇರಿದಂತೆ ಹಲವು ಭಾರತೀಯ ಹಾಗೂ ವಿದೇಶಿ ಭಾಷೆಗಳಲ್ಲಿ ಡಬ್ ಆಗಿ ಬಿಡುಗಡೆಗೊಳ್ಳಲಿದೆ. ಜೆ.ಜೆ.ಪೆರ್ರಿ 'ಟಾಕ್ಸಿಕ್'ನ ಸಾಹಸ ದೃಶ್ಯಗಳ ಸಂಯೋಜನೆ ಮಾಡಿದ್ದಾರೆ. 'ಕೆ.ಜಿ.ಎಫ್' ಖ್ಯಾತಿಯ ರವಿ ಬಸ್ರೂರು ಸಂಗೀತ ನಿರ್ದೇಶನ, ರಾಜೀವ್ ರವಿ ಛಾಯಾಚಿತ್ರಗ್ರಹಣ, ಉಜ್ವಲ್ ಕುಲಕರ್ಣಿ ಸಂಕಲನ ಚಿತ್ರಕ್ಕಿದೆ. ❖

ತಂದೆಯ ಚಿತ್ರದಲ್ಲಿ ಮಗಳ ಹಾಡು

ಕಿಚ್ಚ ಸುದೀಪ್ ನಟನೆಯ 'ಮಾರ್ಕ್' ಸಿನಿಮಾದ 'ಮಸ್ತ್ ಮಲೈಕಾ' ಹಾಡಿನ ಮೂಲಕ ಅವರ ಪುತ್ರಿ ಸಾನ್ವಿ ಸುದೀಪ್ ಹಿನ್ನೆಲೆ ಗಾಯಕಿಯಾಗಿದ್ದಾರೆ. ಈಗಾಗಲೇ ಇಂಗ್ಲಿಷ್ ಗೀತೆಗಳನ್ನು ಹಾಡಿರುವ ಅವರು ಈ ಹಾಡಿನ ರೆಕಾರ್ಡಿಂಗ್ ಅನುಭವದ ಕುರಿತು ಮಾತನಾಡಿದ್ದಾರೆ.

'ಒಂದಲ್ಲ ಒಂದು ದಿನ ನನ್ನ ತಂದೆಗಾಗಿ ಸಿನಿಮಾದಲ್ಲಿ ಹಾಡುತ್ತೇನೆ ಎಂದು ನನಗೆ ತಿಳಿದಿತ್ತು. 'ಮಾರ್ಕ್' ಸಿನಿಮಾ ಮೂಲಕ ಅದು ನಿಜವಾಗಿದೆ. ಆದಾಗ್ಯೂ ಇದು ನಿಜ ಎಂದು ನಂಬಲು ನನಗೆ ಇನ್ನಷ್ಟು ದಿನಗಳು ಬೇಕಾಗಬಹುದು. ಈಗಾಗಲೇ ಇಂಗ್ಲಿಷ್‌ನಲ್ಲಿ ನನ್ನ ಹಾಡುಗಳು ಬಿಡುಗಡೆಗೊಂಡಿವೆ. ಆದರೆ ಕನ್ನಡದಲ್ಲಿ ಇದೇ ಮೊದಲ ಗೀತೆ. ಜತೆಗೆ ಅಪ್ಪನಿಗಾಗಿ ಹಾಡಿದ್ದು. ಹೀಗಾಗಿ ಇದು ಯಾವತ್ತಿಗೂ ನನಗೆ ವಿಶೇಷವಾಗಿದ್ದು' ಎಂದು ಮಾತು ಪ್ರಾರಂಭಿಸಿದರು ಸಾನ್ವಿ.

ಸಾನ್ವಿ ಸುದೀಪ್

ಸುದೀಪ್ ಅಳಿಯ ಸಂಚಿತ್ ಸಂಜೀವ್ ಅವರ 'ಜಿಮ್ಮಿ' ಚಿತ್ರ ಈ ಹಿಂದೆ ಘೋಷಣೆಯಾಗಿತ್ತು. ಅದರ ಶೀರ್ಷಿಕೆ ಸಮಾರಂಭದಲ್ಲಿ ಸಾನ್ವಿ ಹಾಡಿ ಗಮನ ಸೆಳೆದಿದ್ದರು. ಆದರೆ ಅದು ಕೂಡ ಇಂಗ್ಲಿಷ್ ಗೀತೆಯಾಗಿತ್ತು. ಈ ಹಿಂದೆ ನಟ ನಾನಿ ಅಭಿನಯದ 'ಹಿಟ್ 3' ಚಿತ್ರದ ಮೂಲಕ ಸಾನ್ವಿ ಸುದೀಪ್ ತೆಲುಗು ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದ್ದರು. ಆ ಚಿತ್ರದ 'ಪೊರಟಮೆ 3.0'ಗೆ ಸಾನ್ವಿ ಧ್ವನಿ ನೀಡಿದ್ದರು. ಇದೀಗ ತನ್ನ ತಂದೆ ನಟಿಸಿರುವ ಚಿತ್ರದ ಮೂಲಕವೇ ಸಾನ್ವಿ ಕನ್ನಡ ಚಿತ್ರರಂಗ ಪ್ರವೇಶಿಸಿದ್ದಾರೆ.

'ಮಸ್ತ್ ಮಲೈಕಾ' ಹೈ ಪಿಚ್‌ನ ಹಾಡು. ಹೀಗಾಗಿ ಇದು ನನ್ನ ಸಾಮರ್ಥ್ಯಕ್ಕಲ್ಲ ಅಂದುಕೊಂಡಿದ್ದೆ. ಲೈವ್ ಕಾರ್ಯಕ್ರಮಗಳಲ್ಲಿ ಹಾಡಿದ್ದೆ. ಆದರೆ ಮೈಕ್ ಮುಂದೆ ಹಾಡುವುದು ಸುಲಭವಲ್ಲ. ಅದು ಸಂಗೀತದ ಸಾಕಷ್ಟು ವಿವರಗಳನ್ನು ಕೇಳುತ್ತದೆ. ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಬಹಳ ವರ್ಷಗಳಿಂದ ಪರಿಚಿತರು. ಹೀಗಾಗಿ ನನಗೆ ಎಲ್ಲವನ್ನೂ ಅರ್ಥಮಾಡಿಸಿದರು. ಈ ಹಿಂದೆ ಕೆಲವು ಕನ್ನಡ ಪದಗಳನ್ನು ಹಾಡುವುದು ಕಷ್ಟವಾಗುತ್ತಿತ್ತು. ಆದರೆ ಅಜನೀಶ್ ಅವರು ಆ ಸಮಸ್ಯೆಯನ್ನು ಪರಿಹರಿಸಿದರು. ಜನ ಈ ಹಾಡನ್ನು ಇಷ್ಟಪಟ್ಟು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುತ್ತಿರುವುದು, ಶ್ಲಾಘಿಸುವುದನ್ನು ನೋಡಲು ಖುಷಿಯಾಗುತ್ತಿದೆ' ಎಂದು ಮಾತಿಗೆ ವಿರಾಮವಿತ್ತರು ಸಾನ್ವಿ.

ಮಹಿಳೆಯರ ಮೇಲೆ ಅತ್ಯಾಚಾರ: ಸೆರೆ

16 ವರ್ಷದ ಬಳಿಕ ಮೌನ ಮುರಿದ ವಾಕ್–ಶ್ರವಣ ದೋಷವುಳ್ಳ ಮಹಿಳೆ

ಮುಂಬೈ (ಪಿಟಿಐ): 16 ವರ್ಷಗಳ ಹಿಂದೆ ನಡೆದಿದ್ದ ಅತ್ಯಾಚಾರ ಕುರಿತಂತೆ ವಾಕ್ ಮತ್ತು ಶ್ರವಣದೋಷವುಳ್ಳ ಮಹಿಳೆಯೊಬ್ಬರು ನೀಡಿದ ದೂರು ಆಧರಿಸಿ ಕಾಮುಕನನ್ನು ಬಂಧಿಸಲಾಗಿದೆ. ಆತನು ಹಲವು ಮಹಿಳೆಯರ ಮೇಲೂ ಅತ್ಯಾಚಾರವೆಸಗಿ, ಬೆದರಿಕೆ ಹಾಕಿರುವುದು ವಿಚಾರಣೆ ವೇಳೆ ಬೆಳಕಿಗೆ ಬಂದಿದೆ.

ಅತ್ಯಾಚಾರಕ್ಕೆ ಒಳಗಾದ ಮಹಿಳೆಯೊಬ್ಬರು ಆತ್ಮಹತ್ಯೆಗೆ ಯತ್ನಿಸಿದ ಬೆನ್ನಲ್ಲೇ ಸಂತ್ರಸ್ತೆಯು ಮೌನ ಮುರಿದು ದೂರು ನೀಡಿದ್ದು, ಡಿಸೆಂಬರ್ 13ರಂದು ಆರೋಪಿಯನ್ನು ಬಂಧಿಸಲಾಗಿದೆ.

'ಪಶ್ಚಿಮ ಉಪನಗರದ ನಿವಾಸಿಯಾಗಿರುವ ಸಂತ್ರಸ್ತೆಯು ಸ್ನೇಹಿತರು ಹಾಗೂ ಸಹೋದ್ಯೋಗಿಗಳ ಜೊತೆ ವಿಡಿಯೊ ಕರೆಯಲ್ಲಿ ಸಂಜ್ಞೆಗಳನ್ನು ಬಳಸಿ ಸಂವಹನ ನಡೆಸುತ್ತಿದ್ದ ಸಂದರ್ಭದಲ್ಲಿ ಅಪ್ರಾಪ್ತ ವಯಸ್ಸಿನಲ್ಲಿ ತಮ್ಮ ಮೇಲಾದ ಅತ್ಯಾಚಾರವನ್ನು ಬಹಿರಂಗಪಡಿಸಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪತಿಯನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಠಾಣೆ ಜಿಲ್ಲಾ ವಾಕ್–ಶ್ರವಣ ದೋಷವುಳ್ಳವರ ಸಂಘದ ಅಧ್ಯಕ್ಷ ವೈಭವ್ ಘೈಸಿಸ್, ಸಾಮಾಜಿಕ ಕಾರ್ಯಕರ್ತ ಮೊಹಮ್ಮದ್ ಫರ್ಹಾನ್ ಖಾನ್, ಸಂಜ್ಞೆ ಭಾಷೆ ವ್ಯಾಖ್ಯಾನಕಾರ ಮಧು ಖೇನಿ, ಅಲಿ ಯಾವರ್ ಜಂಗ್ ವಾಕ್ ಹಾಗೂ ಶ್ರವಣ ರಾಷ್ಟ್ರೀಯ ಸಂಸ್ಥೆಯ ನಿವೃತ್ತ ಅಧಿಕಾರಿ ದಿವ್ಯಜ್ಞಾನ್ ಜೊತೆಗೂಡಿ ಇಲ್ಲಿನ ಕುರಾರ್ ಪೊಲೀಸ್ ಠಾಣೆಗೆ ತೆರಳಿ, ಕ್ಯಾಮೆರಾದ ಮುಂದೆ ಸಂತ್ರಸ್ತೆಯು ಹೇಳಿಕೆಯನ್ನು ದಾಖಲಿಸಿದ್ದಾರೆ. ಇದಾದ ಕೆಲವು ಗಂಟೆಗಳಲ್ಲಿಯೇ ಪಾಲ್ಘರ್ ಜಿಲ್ಲೆಯ ವಿರಾರ್ ಪಟ್ಟಣದಲ್ಲಿ ಆರೋಪಿ ಮಹೇಶ್ ಪವಾರ್‌ನನ್ನು ಪೊಲೀಸರು ಬಂಧಿಸಿದ್ದಾರೆ.

20 ಮಹಿಳೆಯರ ಮೇಲೆ ಅತ್ಯಾಚಾರ: '2009ರಲ್ಲಿ ಸ್ನೇಹಿತೆಯ ಜೊತೆ ಸಾಂತಾಕ್ರೂಜ್‌ನ ವಕೋಲದಲ್ಲಿರುವ ಆರೋಪಿಯ ಮನೆಗೆ ತೆರಳಿದ್ದೆ. ಈ ವೇಳೆ ಹುಟ್ಟುಹಬ್ಬದ ನೆಪದಲ್ಲಿ ಸಮೋಸ ಹಾಗೂ ಮತ್ತು ಬರಿಸುವ ಪದಾರ್ಥ ಬೆರೆಸಿದ್ದ ಪಾನೀಯ ನೀಡಿದ್ದರು. ಪ್ರಜ್ಞೆ ತಪ್ಪಿದ ವೇಳೆ ನನ್ನ ಮೇಲೆ ಅತ್ಯಾಚಾರ ಎಸಗಿದ್ದರು. ಎಚ್ಚರವಾದ ವೇಳೆ ಸ್ನೇಹಿತೆಯು ಮನೆಯಲ್ಲಿ ಇರಲಿಲ್ಲ. ಆರೋಪಿಯು ಅತ್ಯಾಚಾರ ಎಸಗಿದ ವಿಡಿಯೊ ಚಿತ್ರೀಕರಿಸಿ ಬ್ಲ್ಯಾಕ್‌ಮೇಲ್ ಮಾಡಿದ್ದ' ಎಂದು ಸಂತ್ರಸ್ತೆ ದೂರಿನಲ್ಲಿ ತಿಳಿಸಿದ್ದಾರೆ.

ಹಲವು ಯುವತಿಯರ ಮೇಲೂ ಅತ್ಯಾಚಾರ ಎಸಗಿ, ವಿಡಿಯೊ ಚಿತ್ರೀಕರಿಸಿ, ಅವರಿಂದ ಅಪಾರ ಹಣ, ಮೊಬೈಲ್, ಚಿನ್ನ ಪಡೆದಿದ್ದ ಎಂದು ತಿಳಿಸಿದ್ದಾರೆ.

'ಪ್ರಾಥಮಿಕ ತನಿಖೆ ಪ್ರಕಾರ, ಏಳು ಮಹಿಳೆಯರ ಮೇಲೆ ಅತ್ಯಾಚಾರ ಎಸಗಿರುವುದು ಕಂಡುಬಂದಿದೆ. ಈ ಸಂಖ್ಯೆ 20ರವರೆಗೂ ಏರಿಕೆಯಾಗುವ ಸಾಧ್ಯತೆಯಿದೆ' ಎಂದು ತಿಳಿಸಿದ್ದಾರೆ.

ಅಗ್ರಸ್ಥಾನದಲ್ಲಿ ಮುಂದುವರಿದ ಬಿಜೆಪಿ

ಮಹಾರಾಷ್ಟ್ರ ನಗರ ಪರಿಷತ್– ಪಂಚಾಯಿತಿ ಚುನಾವಣೆ

ಮುಂಬೈ (ಪಿಟಿಐ): ಮಹಾರಾಷ್ಟ್ರದಲ್ಲಿ 288 ನಗರ ಪರಿಷತ್ ಮತ್ತು ನಗರ ಪಂಚಾಯಿತಿಗಳ ಚುನಾವಣಾ ಫಲಿತಾಂಶ ಭಾನುವಾರ ಪ್ರಕಟವಾಗಿದ್ದು, ಬಿಜೆಪಿ, ಶಿವಸೇನೆ (ಶಿಂಧೆ), ಎನ್‌ಸಿಪಿ (ಅಜಿತ್ ಪವಾರ್) ಬಣವನ್ನು ಒಳಗೊಂಡ ಆಡಳಿತಾರೂಢ ಮಹಾಯುತಿ ಮೈತ್ರಿಕೂಟವು 207 ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ ಸ್ಥಾನಗಳನ್ನು ಗೆದ್ದುಕೊಂಡಿದೆ. ವಿರೋಧ ಪಕ್ಷಗಳ ಮಹಾ ವಿಕಾಸ್ ಅಘಾಡಿ ಮೈತ್ರಿಕೂಟವು 44 ಅಧ್ಯಕ್ಷ ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ.

ಮಹಾರಾಷ್ಟ್ರ ರಾಜ್ಯ ಚುನಾವಣಾ ಆಯೋಗವು 288 ನಗರ ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶವನ್ನು ಭಾನುವಾರ ತಡರಾತ್ರಿ ಪ್ರಕಟಿಸಿದೆ. ಆಯೋಗದ ಮಾಹಿತಿ ಪ್ರಕಾರ, ಬಿಜೆಪಿ 117 ಅಧ್ಯಕ್ಷ ಸ್ಥಾನಗಳಲ್ಲಿ ಗೆಲುವು ಸಾಧಿಸುವ ಮೂಲಕ ಅಗ್ರ ಸ್ಥಾನವನ್ನು ಉಳಿಸಿಕೊಂಡಿದೆ. ಶಿವಸೇನೆ (ಶಿಂಧೆ ಬಣ) 53 ಹಾಗೂ ಎನ್‌ಸಿಪಿ (ಅಜಿತ್ ಪವಾರ್ ಬಣ) 37 ಅಧ್ಯಕ್ಷ ಸ್ಥಾನಗಳಲ್ಲಿ ಗೆದ್ದಿವೆ. ಕಾಂಗ್ರೆಸ್ 28 ಅಧ್ಯಕ್ಷ ಸ್ಥಾನಗಳನ್ನು ಗೆದ್ದಿದ್ದರೆ, ಎನ್‌ಸಿಪಿ (ಶರದ್ ಪವಾರ್ ಬಣ) ಏಳರಲ್ಲಿ ಮತ್ತು ಶಿವಸೇನೆ (ಯುಬಿಟಿ) ಒಂಬತ್ತು ಅಧ್ಯಕ್ಷ ಸ್ಥಾನಗಳಲ್ಲಿ ಜಯ ಗಳಿಸಿವೆ.

ರಾಜ್ಯ ಚುನಾವಣಾ ಆಯೋಗದಲ್ಲಿ ನೋಂದಣಿಯಾಗಿರುವ ಪಕ್ಷಗಳಿಗೆ ನಾಲ್ಕು ಅಧ್ಯಕ್ಷ ಸ್ಥಾನಗಳು ದೊರಕಿದ್ದರೆ, ಮಾನ್ಯತೆ ಪಡೆಯದ ಪಕ್ಷಗಳು 28 ಸ್ಥಾನಗಳನ್ನು ಗೆದ್ದಿವೆ. ಐದು ಅಧ್ಯಕ್ಷ ಸ್ಥಾನಗಳಲ್ಲಿ ಪಕ್ಷೇತರರು ಗೆಲುವು ಸಾಧಿಸಿದ್ದಾರೆ ಎಂದು ಆಯೋಗ ತಿಳಿಸಿದೆ.

ಮುಂಬೈ ಮಹಾನಗರ ಪಾಲಿಕೆಯೂ ಸೇರಿದಂತೆ ಮಹಾರಾಷ್ಟ್ರದ 29 ಮಹಾನಗರ ಪಾಲಿಕೆಗಳಿಗೆ ಮುಂದಿನ ತಿಂಗಳು ಚುನಾವಣೆ ನಡೆಯಲಿದೆ. ಈಗಿನ ಚುನಾವಣಾ ಫಲಿತಾಂಶವು ಮಹಾನಗರ ಪಾಲಿಕೆಗಳ ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ.

ಆಯೋಗವನ್ನು ದೂರಿದ ವಿಪಕ್ಷಗಳು

ಮುಂಬೈ (ಪಿಟಿಐ): ಮಹಾರಾಷ್ಟ್ರದ ನಗರ ಸಭೆ ಮತ್ತು ನಗರ ಪಂಚಾಯಿತಿ ಚುನಾವಣೆಗಳಲ್ಲಿ ಪರಾಭವಗೊಂಡಿರುವುದನ್ನು ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಶಿವಸೇನಾ (ಉದ್ಧವ್ ಬಣ) ಒಪ್ಪಿಕೊಂಡಿವೆ. ಚುನಾವಣಾ ಆಯೋಗವು ಆಡಳಿತಾರೂಢ 'ಮಹಾಯುತಿ'ಯನ್ನು ಗೆಲ್ಲಿಸಿದೆ ಎಂದು ಅವು ಆರೋಪಿಸಿವೆ.

ರಾಜ್ಯ ಚುನಾವಣಾ ಆಯೋಗದ ವಿರುದ್ಧ ಕಾಂಗ್ರೆಸ್ ವಾಗ್ದಾಳಿ ನಡೆಸಿದೆ.

ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಹರ್ಷವರ್ಧನ್ ಸಪಕಾಲ್ ಅವರು, 'ಮಹಾಯುತಿ ಮೈತ್ರಿಕೂಟವನ್ನು ಚುನಾವಣೆಯಲ್ಲಿ ಗೆಲ್ಲಿಸಲು ನೆರವಾದ ಆಯೋಗಕ್ಕೆ ಅಭಿನಂದನೆಗಳು' ಎಂದು ಹೇಳಿದರು.

ಕೆಪಿಎಸ್‌ಸಿ 'ಇಂಟ್ರಾನೆಟ್' ಬಳಕೆ

ಒಂದನೇ ಪುಟದಿಂದ...

ಮೌಲ್ಯಮಾಪಕರು ಮೌಲ್ಯಮಾಪನ ಮಾಡಿ ಅಂಕಗಳನ್ನು 'ಫ್ರೀಜ್' ಮಾಡಿದ ನಂತರ ಮರು ಪರಿಶೀಲಿಸಲು ಅವಕಾಶ ಇರುವುದಿಲ್ಲ ಎಂದೂ ಮೂಲಗಳು ಹೇಳಿವೆ.

2023–24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ವೃಂದದ 384 ಹುದ್ದೆಗಳಿಗೆ ನೇಮಕಾತಿಗೆ ಮೇ 3, 5, 7 ಮತ್ತು 9ರಂದು ಕೆಪಿಎಸ್‌ಸಿ ಮುಖ್ಯ ಪರೀಕ್ಷೆ ನಡೆಸಿತ್ತು. ಮುಖ್ಯ ಪರೀಕ್ಷೆ ಬರೆದಿರುವ 5,760 ಅಭ್ಯರ್ಥಿಗಳ ಪೈಕಿ 1:3 ಅನುಪಾತದಲ್ಲಿ ಅಭ್ಯರ್ಥಿಗಳು ವ್ಯಕ್ತಿತ್ವ ಪರೀಕ್ಷೆಗೆ ಆಯ್ಕೆ ಆಗಲಿದ್ದಾರೆ.

ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ನಿಷ್ಪಕ್ಷಪಾತ, ಪಾರದರ್ಶಕತೆ ಹಾಗೂ ಕಾರ್ಯಕ್ಷಮತೆ ಖಚಿತಪಡಿಸಿಕೊಳ್ಳಲು ಕೇಂದ್ರ ಲೋಕ ಸೇವಾ ಆಯೋಗದ (ಯುಪಿಎಸ್‌ಸಿ) ಮಾದರಿಯಲ್ಲಿ ತಾಂತ್ರಿಕ ಹಾಗೂ ಸಾಂಸ್ಥಿಕ ಸುಧಾರಣೆಗಳನ್ನು ಜಾರಿಗೆ ತರಲಾಗಿದೆ ಎಂದೂ ತಿಳಿಸಿವೆ.

ಮುಖ್ಯ ಪರೀಕ್ಷೆಗೆ ನಿಯೋಜನೆಯಾಗುವ ಮೌಲ್ಯಮಾಪಕರ ಬಯೊಮೆಟ್ರಿಕ್ ಮೊದಲೇ ಪಡೆದುಕೊಂಡು, ಮೌಲ್ಯಮಾಪನದ ದಿನ ಬಯೊಮೆಟ್ರಿಕ್ ಮೂಲಕ ಅವರ ಹಾಜರಾತಿ ಖಚಿತಪಡಿಸುವ ವ್ಯವಸ್ಥೆ ಜಾರಿಗೆ ತರಲಾಗಿದೆ. ಮೌಲ್ಯಮಾಪನದಲ್ಲಿ ಏಕರೂಪತೆ ಕಾಪಾಡುವ ಉದ್ದೇಶದಿಂದ ಪ್ರತಿ ಉತ್ತರಪತ್ರಿಕೆಯ ಮೌಲ್ಯಮಾಪನಕ್ಕೂ ಮೊದಲು ಮೌಲ್ಯಮಾಪನ ರೂಪುರೇಷೆ ಮತ್ತು ಮಾದರಿ ಉತ್ತರಗಳನ್ನು ಕಾರ್ಯಾಗಾರದ ಮೂಲಕ ಮೌಲ್ಯಮಾಪಕರಿಗೆ ವಿವರಿಸಲಾಗುತ್ತದೆ. ಮೌಲ್ಯಮಾಪನದಲ್ಲಿ ಹೆಚ್ಚಿನ ಪಾರದರ್ಶಕತೆ ಮೂಲಕ ಅಭ್ಯರ್ಥಿಗಳಿಗೆ ಯಾವುದೇ ರೀತಿಯಲ್ಲೂ ಅನ್ಯಾಯ ಆಗದಂತೆ ಕ್ರಮ ತೆಗೆದುಕೊಳ್ಳಲಾಗಿದೆ ಎಂದೂ ಮೂಲಗಳು ತಿಳಿಸಿವೆ.

ಜನವರಿ ಕೊನೆಯಲ್ಲಿ ಸಂದರ್ಶನ?

ಸರ್ಕಾರಿ ಹುದ್ದೆಗಳಲ್ಲಿ ಶೇ 56ರಷ್ಟು ಮೀಸಲಾತಿಯನ್ನು ಪ್ರಶ್ನಿಸಿ ಹಲವು ಅಭ್ಯರ್ಥಿಗಳು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಈಗಾಗಲೇ ನೇಮಕಾತಿ ಅಧಿಸೂಚನೆ ಹೊರಡಿಸಿರುವ ಗೆಜೆಟೆಡ್ ಪ್ರೊಬೇಷನರ್ಸ್ ಮತ್ತು ಇತರ ಇಲಾಖೆಗಳ ಹುದ್ದೆಗಳಿಗೆ ಶೇ 56ರ ಮೀಸಲಾತಿ ಅನ್ವಯಿಸಲು ಸರ್ಕಾರದ ವತಿಯಿಂದ ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಲಾಗಿದೆ. ಈಗಾಗಲೇ ಅಧಿಸೂಚನೆ ಹೊರಡಿಸಿರುವ ಹುದ್ದೆಗಳಿಗೆ ನೇಮಕ ಪ್ರಕ್ರಿಯೆ ನಡೆಸಲು ಹೈಕೋರ್ಟ್ ಷರತ್ತುಬದ್ಧ ಅನುಮತಿ ನೀಡಿರುವುದರಿಂದ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ಪೂರ್ಣಗೊಳಿಸಲು ಅಡೆತಡೆಗಳಿಲ್ಲ. ಮೌಲ್ಯಮಾಪನ ಕಾರ್ಯವು ಶೀಘ್ರದಲ್ಲಿ ಪೂರ್ಣಗೊಳ್ಳಲಿದ್ದು, ಜನವರಿ ತಿಂಗಳ ಕೊನೆಯ ವಾರದಿಂದ ವ್ಯಕ್ತಿತ್ವ ಪರೀಕ್ಷೆ (ಸಂದರ್ಶನ) ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ' ಎಂದು ಕೆಪಿಎಸ್‌ಸಿ ಮೂಲಗಳು ಹೇಳಿವೆ.

ಏನಿದು 'ಇಂಟ್ರಾನೆಟ್'

ಒಂದನೇ ಪುಟದಿಂದ...

ಆದರೆ, 2015ನೇ ಸಾಲಿನಲ್ಲಿ ಹೊರಗುತ್ತಿಗೆ ಸಂಸ್ಥೆಯ ತಾಂತ್ರಿಕ ನೈಪುಣ್ಯ ಹೊಂದಿದ್ದ ವ್ಯಕ್ತಿಯೊಬ್ಬನ ನೆರವಿನಿಂದ ಅಂಕಗಳನ್ನು ತಿರುಚಲಾಗಿದೆ ಎಂದು ಆರೋಪಿಸಿ ಕೆಲವು ಅಭ್ಯರ್ಥಿಗಳು ಹೈಕೋರ್ಟ್ ಮೆಟ್ಟಿಲೇರಿದ್ದು, ಪ್ರಕರಣದ ವಿಚಾರಣೆ ನಡೆಯುತ್ತಿದೆ. ಇದೀಗ, ಡಿಜಿಟಲ್ ಮೌಲ್ಯಮಾಪನದ ದತ್ತಾಂಶಗಳನ್ನು ನಿರ್ವಹಿಸಲು ಹೊರಗುತ್ತಿಗೆ ನೀಡುವ ಬದಲು ಕೆಪಿಎಸ್‌ಸಿಯ ಒಳಗೆಯೇ ನಿರ್ವಹಿಸಲು 'ಇಂಟ್ರಾನೆಟ್' ಜಾಲವನ್ನು ಅಳವಡಿಸಿಕೊಳ್ಳಲಾಗಿದೆ. ಇದೊಂದು ಖಾಸಗಿ, ಸುರಕ್ಷಿತ ಕಂಪ್ಯೂಟರ್ ಜಾಲ. ಸೂಕ್ಷ್ಮ ದತ್ತಾಂಶಗಳ ಸುರಕ್ಷತೆಗೆ ಇದು ಒತ್ತು ನೀಡುತ್ತದೆ ಎಂದೂ ಮೂಲಗಳು ತಿಳಿಸಿವೆ.

ಬೆಂಗಳೂರಿನ ಲೋಕಭವನದಲ್ಲಿ ಭಾನುವಾರ 18 ಕ್ರೀಡಾ ಸಾಧಕರಿಗೆ (ನಿಂತವರು) ಕರ್ನಾಟಕ ಒಲಿಂಪಿಕ್ ಸಂಸ್ಥೆಯ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು. (ಕುಳಿತವರು) ಎಡದಿಂದ; ಕೆಒಎ ಮಹಾಪ್ರಧಾನ ಕಾರ್ಯದರ್ಶಿ ಟಿ.ಅನಂತರಾಜು, ಕರ್ನಾಟಕ ಜಿಮ್ನಾಸ್ಟಿಕ್ ಸಂಸ್ಥೆಯ ಅಧ್ಯಕ್ಷ ಸಿ. ಪ್ರಭಾಕರ್, ಕೆಒಎ ಅಧ್ಯಕ್ಷ ಕೆ. ಗೋವಿಂದರಾಜ್, ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯಪಾಲ ಥಾವರಚಂದ್ ಗೆಹಲೋತ್, ಗೃಹ ಸಚಿವ ಜಿ.ಪರಮೇಶ್ವರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ನವೀನ್‌ರಾಜ್ ಸಿಂಗ್, ಆಯುಕ್ತ ಆರ್.ಚೇತನ್ ಉಪಸ್ಥಿತರಿದ್ದರು

ಕೆಒಎ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಿ.ಎಂ ಸಿದ್ದರಾಮಯ್ಯ

ಕ್ರೀಡಾ ಕೋಟಾ: ಜನವರಿಯಲ್ಲಿ ನೇಮಕಾತಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರವು ಕ್ರೀಡಾಪಟುಗಳಿಗೆ ಪೊಲೀಸ್ ಮತ್ತು ಅರಣ್ಯ ಇಲಾಖೆಯಲ್ಲಿ ಶೇ 3ರಷ್ಟು ಹಾಗೂ ಇತರೆ ಇಲಾಖೆಗಳಲ್ಲಿ ಶೇ 2ರಷ್ಟು ಉದ್ಯೋಗ ಮೀಸಲಾತಿ ಕಲ್ಪಿಸಿದೆ. ಜನವರಿ ಮೊದಲ ವಾರದಲ್ಲೇ ನೇಮಕಾತಿಯ ಆದೇಶ ಹೊರಡಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಲೋಕಭವನದ (ರಾಜಭವನ) ಗಾಜಿನ ಮನೆಯಲ್ಲಿ ಭಾನುವಾರ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರೊಂದಿಗೆ 18 ಸಾಧಕ ಕ್ರೀಡಾಪಟುಗಳಿಗೆ ಕರ್ನಾಟಕ ಒಲಿಂಪಿಕ್ ಸಂಸ್ಥೆಯ (ಕೆಒಎ) 22ನೇ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

'ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಉನ್ನತ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಇಲಾಖಾ ನೇಮಕಾತಿಯಲ್ಲಿ ಮೀಸಲಾತಿ ಪ್ರಮಾಣವನ್ನು ನಮ್ಮ ಸರ್ಕಾರ ಹೆಚ್ಚಿಸಿದೆ. ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಈ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು' ಎಂದು ಕರೆ ನೀಡಿದರು.

'ಕಠಿಣ ಪರಿಶ್ರಮ ಹಾಗೂ ಗುರಿ ಸಾಧನೆ ಮಾಡುವ ಛಲವಿದ್ದರೆ ಕರ್ನಾಟಕದ ಕ್ರೀಡಾಪಟುಗಳೂ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲಬಹುದಾಗಿದೆ. ಕ್ರೀಡಾಪಟುಗಳಿಗೆ ಗುರಿಸಾಧನೆಯೇ ಜೀವನದ ಧ್ಯೇಯವಾಗಬೇಕು' ಎಂದು ಹೇಳಿದರು.

'1958ರಲ್ಲಿ ಪ್ರಾರಂಭವಾದ ಕರ್ನಾಟಕ ಒಲಿಂಪಿಕ್ ಸಂಸ್ಥೆಯು ಎಲ್ಲಾ ಕ್ರೀಡೆಗಳಿಗೆ ಪ್ರೋತ್ಸಾಹ ನೀಡುತ್ತಿದೆ. ಸಂಸ್ಥೆಯ ಕಟ್ಟಡಕ್ಕೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆಯನ್ನೂ ನಾನೇ ನೆರವೇರಿಸಿದ್ದೇನೆ. ಇಡೀ ದೇಶದಲ್ಲಿಯೇ ಆಂಧ್ರಪ್ರದೇಶ ಮತ್ತು ಕೇರಳ ರಾಜ್ಯಗಳಂತೆ ನಮ್ಮಲ್ಲಿಯೂ ಸಂಸ್ಥೆಯು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ' ಎಂದು ತಿಳಿಸಿದರು.

ಗೆಹಲೋತ್ ಮಾತನಾಡಿ, 'ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರೀಡಾ ವಲಯಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿವೆ. ಯುವ ಸಮುದಾಯ ಇದರ ಲಾಭ ಪಡೆದು ಹೆಚ್ಚಿನ ಸಾಧನೆ ಮಾಡಬೇಕು. ಕರ್ನಾಟಕ ಒಲಿಂಪಿಕ್ ಸಂಸ್ಥೆಯು ಸಾಧಕರನ್ನು ಗುರುತಿಸಿ, ಪ್ರಶಸ್ತಿ ನೀಡುತ್ತಿರುವುದು ಮಾದರಿ ಕೆಲಸ' ಎಂದು ಶ್ಲಾಘಿಸಿದರು.

18 ಸಾಧಕರಿಗೆ ಪ್ರಶಸ್ತಿ: ಬಿ.ಉನ್ನತಿ ಅಯ್ಯಪ್ಪ (ಅಥ್ಲೆಟಿಕ್ಸ್), ಆಯುಷ್ ಶೆಟ್ಟಿ (ಬ್ಯಾಡ್ಮಿಂಟನ್), ಪ್ರತ್ಯಾಂಶು ತೋಮರ್ (ಬ್ಯಾಸ್ಕೆಟ್‌ಬಾಲ್), ಎಸ್.ತನ್ವಿ (ಫೆನ್ಸಿಂಗ್), ನಿಖಿಲ್‌ರಾಜ್ ಎಂ (ಫುಟ್‌ಬಾಲ್), ಐಶ್ವರ್ಯಾ ವಿ. (ಕಯಾಕಿಂಗ್ ಮತ್ತು ಕನೊಯಿಂಗ್), ಎಸ್.ಡಿ. ಪ್ರಜ್ವಲ್ ದೇವ್ (ಟೆನಿಸ್), ಜಗದೀಪ್ ದಯಾಳ್ (ಹಾಕಿ), ಸುಜನ್ (ನೆಟ್‌ಬಾಲ್), ದಿವ್ಯಾ ಟಿ.ಎಸ್. (ರೈಫಲ್ ಶೂಟಿಂಗ್), ಆಕಾಶ್ ಕೆ.ಜೆ (ಟೇಬಲ್ ಟೆನಿಸ್), ಸತೀಶ್ ಬಸವರಾಜ್ (ಪತ್ರಿಕಾ ಛಾಯಾಗ್ರಾಹಕ), ಪ್ರಣವಿ ಎಸ್.ಅರಸ್ (ಗಾಲ್ಫ್) ಪರ ಅವರ ತಂದೆ ಶರತ್‌ಚಂದ್ರರಾಜ್ ಅರಸ್, ಉದಯ್ ನಾಯ್ಡು (ಜಿಮ್ನಾಸ್ಟಿಕ್) ಪರ ಅವರ ತಾಯಿ ದೀಪಾ, ಆಕಾಶ್ ಮಣಿ (ಈಜು) ಪರ ಅವರ ತಂದೆ ಎ. ಮಣಿ ಪ್ರಶಸ್ತಿ ಸ್ವೀಕರಿಸಿದರು. ಜೀವಮಾನದ ಸಾಧನೆಗಾಗಿ ಪಿ.ಎಸ್.ಜರೀನಾ (ಅಂತರರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಆಟಗಾರ), ಮುಕುಂದ್ ಕಿಲ್ಲೇಕರ್ (ಅಂತರರಾಷ್ಟ್ರೀಯ ಬಾಕ್ಸರ್), ವಿ.ಎಸ್.ವಿನಯ (ಅಂತರರಾಷ್ಟ್ರೀಯ ಹಾಕಿ ಆಟಗಾರ) ಅವರನ್ನು ಸನ್ಮಾನಿಸಲಾಯಿತು.

ಟೂರ್ನಿಯ ವಿಜೇತರಿಗೆ ಎ.ಬಿ.ಸುದರ್ಶನ್ ಮತ್ತು ಎ.ಬಿ. ರವಿಶಂಕರ್ ಬಹುಮಾನ ವಿತರಿಸಿದರು

ಗಾಲ್ಫ್ ಕ್ಲಬ್ ಬೆಳ್ಳಿ ಮಹೋತ್ಸವಕ್ಕೆ ತೆರೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: 25 ವರ್ಷ ಪೂರೈಸಿರುವ ಚಿಕ್ಕಮಗಳೂರು ಗಾಲ್ಫ್ ಕ್ಲಬ್ (ಸಿಜಿಸಿ) ಬೆಳ್ಳಿ ಹಬ್ಬದ ಕಾರ್ಯಕ್ರಮಗಳಿಗೆ ಭಾನುವಾರ ತೆರೆ ಬಿದ್ದಿತು. ಇದರ ಅಂಗವಾಗಿ ಆಯೋಜಿಸಿದ್ದ ಸಿಲ್ವರ್ ಜೂಬಿಲಿ ಸಿಜಿಸಿ ಓಪನ್ ವಿಭಾಗದಲ್ಲಿ ವರುಣ್ ಗಣಪತಿ ಗೆಲುವು ಸಾಧಿಸಿದರೆ, ನಿಶಾಂತ್ ಕುಲಕರ್ಣಿ ರನ್ನರ್ ಅಪ್ ಆದರು.

ಪುರುಷರ ವಿಭಾಗದಲ್ಲಿ (ಹ್ಯಾಂಡಿಕ್ಯಾಪ್ 0–20) ಕೆ.ಆರ್. ವೈಶಾಖ್ ಗೆಲುವು ಸಾಧಿಸಿದರೆ, ಕೆ.ಆರ್.ವಿಹಾನ್ ರನ್ನರ್ ಅಪ್ ಆದರು. ಸಿಜಿಸಿ ಸದಸ್ಯರ (ಹ್ಯಾಂಡಿಕ್ಯಾಪ್ 15–24) ವಿಭಾಗದಲ್ಲಿ ನಿಶಾಂತ್ ಎ.ಎನ್. ಪ್ರಥಮ ಮತ್ತು ನಕುಲ್ ಕಿರಣ್ ದ್ವಿತೀಯ ಸ್ಥಾನ ಪಡೆದರು.

ಸಿಜಿಸಿ ಸದಸ್ಯರ (ಹ್ಯಾಂಡಿಕ್ಯಾಪ್ 0–14) ವಿಭಾಗದಲ್ಲಿ ವಿನಾಯಕ್ ಎ.ಯು. ಪ್ರಥಮ ಮತ್ತು ದರ್ಶನ್ ಟಿ.ಪಿ. ದ್ವಿತೀಯ ಸ್ಥಾನ, 70 ವರ್ಷ ಮೇಲ್ಪಟ್ಟವರ ಸ್ಟೇಬಲ್‌ಫೋರ್ಡ್ (ಹ್ಯಾಂಡಿಕ್ಯಾಪ್ 0–24) ವಿಭಾಗದಲ್ಲಿ ಸುದರ್ಶನ್ ಮಾನೆ ಪ್ರಥಮ ಮತ್ತು ಜಿ.ಪಿ. ಮೂರ್ತಿ ದ್ವಿತೀಯ ಸ್ಥಾನ ಪಡೆದರು.

ಸಿಲ್ವರ್ ಜೂಬಿಲಿ ಫೌಂಡರ್ ಕಪ್ ಸ್ಟೇಬಲ್‌ಫೋರ್ಡ್‌ನಲ್ಲಿ (ಹ್ಯಾಂಡಿಕ್ಯಾಪ್- 0–24) ಎಸ್.ಎಲ್. ಸತ್ಯನಾರಾಯಣ ಪ್ರಥಮ ಮತ್ತು ಮಲ್ಲಪ್ಪಗೌಡ ದ್ವಿತೀಯ ಸ್ಥಾನ, ಸಿಲ್ವರ್ ಜೂಬಿಲಿ ವಿಸಿಟರ್ ಕಪ್ ಸ್ಟ್ರೋಕ್ ಪ್ಲೇ (ಹ್ಯಾಂಡಿಕ್ಯಾಪ್ 0–18) ವಿಭಾಗದಲ್ಲಿ ಕೇದಾರನಾಥ ಮುದ್ದ ಪ್ರಥಮ ಮತ್ತು ಸಂಜತ್ ಎ.ಆರ್. ದ್ವಿತೀಯ ಸ್ಥಾನ, ಸಿಲ್ವರ್ ಜೂಬಲಿ ಮಹಿಳಾ (ಹ್ಯಾಂಡಿಕ್ಯಾಪ್ 0–18) ವಿಭಾಗದಲ್ಲಿ ಶ್ವೇತಾ ರಾಮು ಪ್ರಥಮ ಮತ್ತು ಸೋನಿಯಾ ಟಿ. ದ್ವಿತೀಯ ಸ್ಥಾನ ಪಡೆದರು.

ಅತ್ಯಂತ ದೂರ ಡ್ರೈವ್‌ನಲ್ಲಿ ಶ್ರೀರಂಗ ಜಯರಾಮ್, ಪಿನ್‌ಗೆ ಹತ್ತಿರ ವಿಭಾಗದಲ್ಲಿ ಪ್ರಕಾಶ್ ಗಣೇಶ್, ನೇರ ಡ್ರೈವ್‌ನಲ್ಲಿ ಸಚಿನ್ ಸಾರಗೋಡು ಸಾಧನೆ ಮಾಡಿದರು. ಸಿಲ್ವರ್ ಜೂಬಿಲಿ ಸಿಜಿಸಿ ಕ್ಯಾಡಿಸ್ ವಿಭಾಗದಲ್ಲಿ ಅಮೃತ್ ಮತ್ತು ರಾಜ ಸಾಧನೆಯನ್ನು ಸ್ಮರಿಸಲಾಯಿತು.

ಹೈಕಮಾಂಡ್ 'ಕೈ' ಹಾಕಲ್ಲ: ಖರ್ಗೆ

ಒಂದನೇ ಪುಟದಿಂದ...

ನಾಯಕತ್ವ ವಿಷಯದ ಬಗ್ಗೆ ದೆಹಲಿಯಲ್ಲಿ ಕಾಂಗ್ರೆಸ್ ಹೈಕಮಾಂಡ್ ನಾಯಕರು ಇತ್ತೀಚೆಗೆ ಸಮಾಲೋಚನೆ ನಡೆಸಿದ್ದರು. ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ನಿವಾಸದಲ್ಲಿ ನಡೆದಿದ್ದ ಈ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಭಾಗಿಯಾಗಿದ್ದರು. ರಾಜ್ಯದಲ್ಲಿನ ಕುರ್ಚಿ ಕಾದಾಟದ ಬಗ್ಗೆ ಈ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆದಿತ್ತು.

ಕೇಂದ್ರ ನಾಯಕತ್ವ ನಿರ್ಧಾರ ತೆಗೆದುಕೊಳ್ಳುವವರೆಗೆ 'ಅಧಿಕಾರ ಹಸ್ತಾಂತರ' ವಿಷಯದ ಬಗ್ಗೆ ಯಾವುದೇ ಸಾರ್ವಜನಿಕ ಹೇಳಿಕೆ ನೀಡದಂತೆ ಎರಡೂ ಬಣಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲು ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಆ ಬಳಿಕ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರು ಉಪಾಹಾರ ಕೂಟದ ಮೂಲಕ, 'ಅಧಿಕಾರ ಹಂಚಿಕೆ ವಿಚಾರದಲ್ಲಿ ತಮ್ಮ ನಡುವೆ ಯಾವುದೇ ಗೊಂದಲ ಇಲ್ಲ. ಹೈಕಮಾಂಡ್ ತೀರ್ಮಾನವೇ ಅಂತಿಮ' ಎಂದಿದ್ದರು.

'ನಿಲುವಿನಲ್ಲಿ ಬದಲಾವಣೆ ಇಲ್ಲ'

'ನಾನು ಈಗಲೂ ಸಿದ್ದರಾಮಯ್ಯ ಅವರ ಪರ. ಡಿ.ಕೆ. ಶಿವಕುಮಾರ್ ಅವರು ಎಷ್ಟೇ ಪ್ರಯತ್ನ ಮಾಡಿದರೂ ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು ಶಾಸಕ ಕೆ.ಎನ್.ರಾಜಣ್ಣ ಹೇಳಿದರು

ಡಿ.ಕೆ. ಶಿವಕುಮಾರ್ ಅವರ ಭೇಟಿ ಕುರಿತು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ಶಿವಕುಮಾರ್ ಅವರು ನನ್ನನ್ನು ಹುಡುಕಿಕೊಂಡು ಬಂದಿರಲಿಲ್ಲ. ಅವರು ಪಕ್ಷದ ಅಧ್ಯಕ್ಷರಿದ್ದಾರೆ. ಅವರು ಯಾರನ್ನಾದರೂ ಕರೆದು ಮಾತನಾಡಬಹುದು, ಚರ್ಚಿಸಬಹುದು. ಅದರಲ್ಲಿ ಯಾವುದೇ ರಾಜಕಾರಣ ಇಲ್ಲ. ಪಕ್ಷ ಸಂಘಟನೆ ಬಗ್ಗೆ ಹೇಳಿದರು. ಆಯ್ತಪ್ಪಾ ಮಾಡೋಣ ಎಂದಿದ್ದೇನೆ ಅಷ್ಟೇ' ಎಂದರು.

ಭಾರತ ವನಿತೆಯರಿಗೆ ಗೆಲುವು

ಮೊದಲ ಟಿ20 ಪಂದ್ಯ: ಶ್ರೀಲಂಕಾದ ಅಲ್ಪ ಮೊತ್ತ • ಜೆಮಿಮಾ ಅಜೇಯ ಅರ್ಧಶತಕ

ವಿಶಾಖಪಟ್ಟಣ (ಪಿಟಿಐ): ಬೌಲರ್‌ಗಳ ಸಾಂಘಿಕ ಪ್ರದರ್ಶನದ ನೆರವಿನಿಂದ ಭಾರತ ತಂಡವು, ಮಹಿಳೆಯರ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ಭಾನುವಾರ ಎಂಟು ವಿಕೆಟ್‌ಗಳಿಂದ ಸುಲಭವಾಗಿ ಸೋಲಿಸಿತು. 44 ಎಸೆತಗಳಲ್ಲಿ ಅಜೇಯ 69 ರನ್ ಗಳಿಸಿದ ಜೆಮಿಮಾ ರಾಡ್ರಿಗಸ್ ತಂಡ ಬೇಗ ಗುರಿತಲುಪಲು ನೆರವಾದರು.

ವೈ.ಎಸ್.ರಾಜಶೇಖರ ರೆಡ್ಡಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತದ ವೇಗ– ಸ್ಪಿನ್ ದಾಳಿಯ ಮುಂದೆ ಪರದಾಡಿದ ಲಂಕನ್ನರು 6 ವಿಕೆಟ್‌ಗೆ 121 ರನ್‌ಗಳ ಸಾಧಾರಣ ಮೊತ್ತ ಗಳಿಸಿದರು. ಭಾರತ ತಂಡವು ಇನ್ನೂ 5.2 ಓವರುಗಳು ಬಾಕಿಯಿರುವಂತೆ 2 ವಿಕೆಟ್‌ಗೆ 122 ರನ್ ಗಳಿಸಿತು. ಐದು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ದಾಖಲಿಸಿತು.

ಆರಂಭ ಆಟಗಾರ್ತಿ ಶಫಾಲಿ ವರ್ಮಾ (9) ಅವರನ್ನು ತಂಡ ಬೇಗನೇ ಕಳೆದುಕೊಂಡಿತು. ಆದರೆ ಸ್ಮೃತಿ ಮಂದಾನ (25, 25ಎ) ಜತೆಗೂಡಿದ ಜೆಮಿಮಾ ಎರಡನೇ ವಿಕೆಟ್‌ಗೆ 54 ರನ್ ಸೇರಿಸಿದರಲ್ಲದೇ, ತಂಡವನ್ನು ಗೆಲುವಿನ ಹಾದಿಯಲ್ಲಿ ಮುನ್ನಡೆಸಿದರು. ಮುರಿಯದ ಮೂರನೇ ವಿಕೆಟ್‌ಗೆ ನಾಯಕಿ ಹರ್ಮನ್‌ಪ್ರೀತ್ ಕೌರ್ (ಔಟಾಗದೇ15) ಅವರೊಂದಿಗೆ 55 ರನ್ ಸೇರಿಸಿದರು. ಜೆಮಿಮಾ ಅವರ ಅಜೇಯ ಆಟದಲ್ಲಿ ಹತ್ತು ಬೌಂಡರಿಗಳಿದ್ದವು.

4,000 ರನ್

ಭಾರತ ತಂಡದ ಸ್ಮೃತಿ ಮಂದಾನ ಅವರು ಅಂತರರಾಷ್ಟ್ರೀಯ ಮಹಿಳಾ ಟಿ20 ಕ್ರಿಕೆಟ್‌ನಲ್ಲಿ 4,000 ರನ್ ಪೂರೈಸಿದರು. ಈ ಸಾಧನೆ ಮಾಡಿದ ವಿಶ್ವದ ಎರಡನೇ ಆಟಗಾರ್ತಿ ಎನಿಸಿದರು. ನ್ಯೂಜಿಲೆಂಡ್‌ನ ಸೂಝಿ ಬೇಟ್ಸ್ (4,716) ಮೊದಲಿಗರು.

ಇದಕ್ಕೆ ಮೊದಲು ಭಾರತದ ಬೌಲರ್‌ಗಳು ಸಂಘಟಿತ ದಾಳಿ ನಡೆಸಿ ಶ್ರೀಲಂಕಾ ತಂಡವನ್ನು ಅಲ್ಪ ಮೊತ್ತಕ್ಕೆ ಕಟ್ಟಿಹಾಕಿದ್ದರು. ಆರಂಭ ಆಟಗಾರ್ತಿ ವಿಶ್ಮಿ ಗುಣರತ್ನ 39 (43 ಎಸೆತ) ಪ್ರಮುಖ ಕೊಡುಗೆ ನೀಡಿದರು.

ಅತಿಥೇಯ ಬೌಲರ್‌ಗಳ ಬಿಗು ದಾಳಿಯೆದುರು ಲಂಕಾ ತಂಡದ ರನ್‌ವೇಗ ಯಾವ ಹಂತದಲ್ಲೂ ಗಮನಾರ್ಹವಾಗಿ ಹೆಚ್ಚಲಿಲ್ಲ. ವೇಗದ ಬೌಲರ್‌ಗಳಾದ ಕ್ರಾಂತಿ ಗೌಡ, ಅರುಂಧತಿ ರೆಡ್ಡಿ, ಸ್ಪಿನ್ನರ್‌ಗಳಾದ ದೀಪ್ತಿ ಶರ್ಮಾ, ವೈಷ್ಣವಿ ಶರ್ಮಾ, ಶ್ರೀಚರಣಿ ಕಡಿವಾಣ ಹಾಕಿದರು. ಮಧ್ಯಪ್ರದೇಶದ 20 ವರ್ಷ ವಯಸ್ಸಿನ ಎಡಗೈ ಸ್ಪಿನ್ನರ್ ವೈಷ್ಣವಿ (16/0) ಅವರಿಗೆ ಇದು ಪದಾರ್ಪಣೆ ಪಂದ್ಯವಾಗಿತ್ತು.

ಅಜೇಯ ಅರ್ಧಶತಕ ಗಳಿಸಿದ ಜೆಮಿಮಾ ರಾಡ್ರಿಗಸ್ ಪಿಟಿಐ ಚಿತ್ರ

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 20 ಓವರುಗಳಲ್ಲಿ 6 ವಿಕೆಟ್‌ಗೆ 121 (ವಿಶ್ಮಿ ಗುಣರತ್ನೆ 39, ಹಸಿನಿ ಪೆರೇರಾ 20, ಹರ್ಷಿತಾ ಸಮರವಿಕ್ರಮ 21; ಕ್ರಾಂತಿ ಗೌಡ್ 23ಕ್ಕೆ1, ದೀಪ್ತಿ ಶರ್ಮಾ 20ಕ್ಕೆ1); ಭಾರತ: 14.4 ಓವರುಗಳಲ್ಲಿ 2ಕ್ಕೆ 122 (ಸ್ಮೃತಿ ಮಂದಾನ 25, ಜೆಮಿಮಾ ರಾಡ್ರಿಗಸ್ ಔಟಾಗದೇ 69, ಹರ್ಮನ್‌ಪ್ರೀತ್ ಕೌರ್ ಔಟಾಗದೇ 15; ಇನೋಕಾ ರಣವೀರ 17ಕ್ಕೆ1).
ಪಂದ್ಯದ ಆಟಗಾರ್ತಿ: ಜೆಮಿಮಾ ರಾಡ್ರಿಗಸ್.

ಟಿ.ಟಿ: ಸಾಕ್ಷ್ಯಾ ಪ್ರಶಸ್ತಿ 'ಡಬಲ್' ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದಯೋನ್ಮುಖ ಆಟಗಾರ್ತಿ ಸಾಕ್ಷ್ಯಾ ಸಂತೋಷ್, ಭಾನುವಾರ ಮುಕ್ತಾಯಗೊಂಡ ಸಿ.ವಿ.ಎಲ್. ಶಾಸ್ತ್ರಿ ಸ್ಮಾರಕ ರಾಜ್ಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ 13 ವರ್ಷದೊಳಗಿನ ಬಾಲಕಿಯರ ಹಾಗೂ ಹೋಪ್ಸ್ ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಗೆದ್ದರು.

ಸಾಕ್ಷ್ಯಾ ಅವರು 13 ವರ್ಷದೊಳಗಿನ ಬಾಲಕಿಯರ ಪ್ರಶಸ್ತಿ ಸುತ್ತಿನಲ್ಲಿ 12–14, 13–11, 12–10, 11–1ರಿಂದ ಲಕ್ಷ್ಮಿ ಆಶ್ರಿತಾ ವಿರುದ್ಧ ಸುಲಭ ಗೆಲುವು ಸಾಧಿಸಿದರು. ಹೋಪ್ಸ್ ಬಾಲಕಿಯರ ಫೈನಲ್ ಹಣಾಹಣಿಯಲ್ಲಿ ಸಾಕ್ಷ್ಯಾ 11–5, 11–2, 9–11, 11–4ರಿಂದ ತಮನ್ನಾ ಎನ್. ಅವರನ್ನು ಮಣಿಸಿ, ಪ್ರಶಸ್ತಿ ಡಬಲ್ ಸಾಧಿಸಿದರು.

ಸಿದ್ಧಾಂತ್‌ಗೆ ಕಿರೀಟ: 13 ವರ್ಷದೊಳಗಿನ ಬಾಲಕರ ಸಿಂಗಲ್ಸ್‌ನಲ್ಲಿ ಸಿದ್ಧಾಂತ್ ಎಂ. ಚಾಂಪಿಯನ್ ಆದರು. ಅವರು, ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ 11–6, 11–5, 12–14, 11–3ರಿಂದ ಅರ್ಣವ್ ಮಿಥುನ್ ಅವರನ್ನು ಮಣಿಸಿದರು.

ಅರ್ಣವ್ ಅವರು ಹೋಪ್ಸ್ ಬಾಲಕರ ವಿಭಾಗದಲ್ಲಿ ಕಿರೀಟ ತಮ್ಮದಾಗಿಸಿಕೊಂಡರು. ಫೈನಲ್‌ನಲ್ಲಿ ಅವರು 14–12, 11–7, 10–12, 13–11ರಿಂದ ಶರ್ವಿಲ್ ಕಾಂಬ್ಳೇಕರ್ ವಿರುದ್ಧ ರೋಚಕ ಗೆಲುವು ಸಾಧಿಸಿದರು.

ಶನಿವಾರ ನಡೆದಿದ್ದ 15 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ ರೇಯಾನ್ಶ್ ಜಲನ್ ಅವರು ವೇದಾಂತ್ ವಸಿಷ್ಠ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದುಕೊಂಡಿದ್ದರು.

ಯೂತ್ ಏಷ್ಯಾ ಕಪ್: ಫೈನಲ್‌ನಲ್ಲಿ ಎಡವಿದ ಭಾರತ ತಂಡ

ಮಿನ್ಹಾಸ್ ಮಿಂಚು, ಪಾಕ್‌ಗೆ ಪ್ರಶಸ್ತಿ

ದುಬೈ (ಪಿಟಿಐ): ಪಾಕಿಸ್ತಾನದ ಆರಂಭ ಆಟಗಾರ ಸಮೀರ್ ಮಿನ್ಹಾಸ್ ಅವರ ಭರ್ಜರಿ ಶತಕ ಮತ್ತು ವೇಗದ ಬೌಲರ್‌ಗಳ ದಾಳಿಗೆ ಭಾರತ ಯುವ ತಂಡದ ಬಳಿ ಉತ್ತರವಿರಲಿಲ್ಲ. ಭಾನುವಾರ ನಡೆದ, 19 ವರ್ಷದೊಳಗಿನವರ ಏಷ್ಯಾ ಕಪ್ ಏಕದಿನ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯ ಏಕಪಕ್ಷೀಯವಾಯಿತು. 191 ರನ್‌ಗಳ ಭಾರಿ ಅಂತರದಿಂದ ಗೆದ್ದ ಪಾಕಿಸ್ತಾನ ಎರಡನೇ ಬಾರಿ ಟ್ರೋಫಿ ಎತ್ತಿಹಿಡಿಯಿತು.

ಮಿನ್ಹಾಸ್ 113 ಎಸೆತಗಳನ್ನು ಎದುರಿಸಿ, 17 ಬೌಂಡರಿ, 9 ಸಿಕ್ಸರ್‌ಗಳಿದ್ದ 172 ರನ್ ಹೊಡೆದ ಪರಿಣಾಮ ಪಾಕಿಸ್ತಾನ ತಂಡ 8 ವಿಕೆಟ್‌ಗೆ 347 ರನ್‌ಗಳ ಭಾರಿ ಮೊತ್ತ ಪೇರಿಸಿತು. ಈ ದೊಡ್ಡ ಗುರಿ ತಲುಪಬೇಕಾದರೆ ಭಾರತಕ್ಕೆ ಉತ್ತಮ ಆರಂಭ ಅಗತ್ಯವಿತ್ತು. ಆದರೆ ಪಾಕ್‌ನ ವೇಗಿಗಳಾದ ಅಲಿ ರಝಾ (42ಕ್ಕೆ4), ಮೊಹಮ್ಮದ್ ಸಯ್ಯಾಂ (38ಕ್ಕೆ2) ಮತ್ತು ಅಬ್ದುಲ್ ಸುಭಾನ್ (29ಕ್ಕೆ2) ಅವರು ನಿಯಮಿತವಾಗಿ ವಿಕೆಟ್‌ಗಳನ್ನು ಪಡೆದರು. ಭಾರತ 26.2 ಓವರುಗಳಲ್ಲಿ 156 ರನ್‌ಗಳಿಗೆ ಕುಸಿಯಿತು.

ಬೀಸಾಟಕ್ಕೆ ಹೆಸರಾದ ಎಡಗೈ ಬ್ಯಾಟರ್ ವೈಭವ್ ಸೂರ್ಯವಂಶಿ ಅವರು ರಝಾ ಹಾಕಿದ ಇನಿಂಗ್ಸ್‌ನ ಮೊದಲ ಓವರಿನಲ್ಲಿ ಎರಡು ಸಿಕ್ಸರ್ ಮತ್ತು ಒಂದು ಬೌಂಡರಿ ಬಾರಿಸಿದರು. ಆ ಓವರಿನಲ್ಲಿ 21 ರನ್‌ಗಳು ಬಂದವು. ಆದರೆ ಮೂರನೇ ಓವರಿನಲ್ಲಿ ನಾಯಕ ಆಯುಷ್ ಮ್ಹಾತ್ರೆ ಅವರನ್ನು ಕಳೆದುಕೊಂಡ ನಂತರ ಪಾಕ್ ನಿಯಮಿತವಾಗಿ ವಿಕೆಟ್‌ಗಳನ್ನು ಪಡೆಯಿತು.

ಆ್ಯರನ್ ಜಾರ್ಜ್ (16, 4x4), ಮೊಹಮ್ಮದ್ ಸಯ್ಯಾಂ ಬೌಲಿಂಗ್‌ನಲ್ಲಿ ಚೆಂಡನ್ನು ಪುಲ್ ಮಾಡುವ ಯತ್ನದಲ್ಲಿ ಸ್ಕ್ವೇರ್‌ಲೆಗ್‌ನಲ್ಲಿ ಕ್ಯಾಚಿತ್ತರು. ಐದನೇ ಓವರಿನ ಮೊದಲ ಎಸೆತದಲ್ಲಿ ಸೂರ್ಯವಂಶಿ ನಿರ್ಗಮಿಸಿದ ಮೇಲೆ ಭಾರತದ ಹೋರಾಟ ಬಲ ಕಳೆದುಕೊಂಡಿತು. ಅಲಿ ರಝಾ ಬೌಲಿಂಗ್‌ನಲ್ಲಿ ವೈಭವ್ ವಿಕೆಟ್ ಕೀಪರ್‌ಗೆ ಕ್ಯಾಚಿತ್ತಾಗ ಪಾಕ್ ಆಟಗಾರರು ಜೋರಾಗಿಯೇ ಸಂಭ್ರಮಿಸಿದರು. ವೈಭವ್ ಕೂಡ ಗೊಣಗಿ ಹತಾಶೆಯಿಂದ ನಿರ್ಗಮಿಸಿದರು.

ಇದಕ್ಕೆ ಮೊದಲು, ಸಮೀರ್ ಮಿನ್ಹಾಸ್ ಭಾರತದ ಬೌಲಿಂಗ್ ದಾಳಿಯನ್ನು ಆರಂಭದಿಂದಲೇ ದಂಡಿಸಿದರು. ಗುಂಪು ಹಂತದ ಮೊದಲ ಪಂದ್ಯದಲ್ಲಿ ಅವರು ಮಲೇಷ್ಯಾ ವಿರುದ್ಧ ಅಜೇಯ 177 ರನ್ ಬಾರಿಸಿದ್ದರು. ಅವರು ಪಂದ್ಯದ ಆಟಗಾರ ಮತ್ತು ಸರಣಿಯ ಆಟಗಾರ (471 ರನ್) ಎನಿಸಿದರು.

ಉಭಯ ತಂಡಗಳ ಆಟಗಾರರು ಈ ಪಂದ್ಯದಲ್ಲಿಯೂ ಔಪಚಾರಿಕ ಹಸ್ತಲಾಘವದಲ್ಲಿ ಭಾಗಿಯಾಗಲಿಲ್ಲ.

ಸಮೀರ್ ಮಿನ್ಹಾಸ್ 'ಎಕ್ಸ್' ಚಿತ್ರ

ಸ್ಕೋರುಗಳು: ಪಾಕಿಸ್ತಾನ ಯುವ ತಂಡ: 50 ಓವರುಗಳಲ್ಲಿ 8ಕ್ಕೆ 347 (ಸಮೀರ್ ಮಿನ್ಹಾಸ್ 172, ಉಸ್ಮಾನ್ ಖಾನ್ 35, ಅಹ್ಮದ್ ಹುಸೇನ್ 56; ಹೆನಿಲ್ ಪಟೇಲ್ 62ಕ್ಕೆ2, ದೀಪೇಶ್ ದೇವೇಂದ್ರನ್ 83ಕ್ಕೆ3, ಖಿಲಾನ್ ಪಟೇಲ್ 44ಕ್ಕೆ2); ಭಾರತ ಯುವ ತಂಡ: 26.2 ಓವರುಗಳಲ್ಲಿ 156 (ವೈಭವ್ ಸೂರ್ಯವಂಶಿ 26, ದೀಪೇಶ್ ದೇವೇಂದ್ರನ್ 36; ಅಲಿ ರಝಾ 42ಕ್ಕೆ4, ಮೊಹಮ್ಮದ್ ಸಯ್ಯಾಂ 38ಕ್ಕೆ2, ಅಬ್ದುಲ್ ಸುಭಾನ್ 29ಕ್ಕೆ2, ಹುಝೈಫಾ ಅಹ್ಸಾನ್ 12ಕ್ಕೆ2).

ಮಹಿಳಾ ಕ್ರಿಕೆಟ್: ಕ್ವಾರ್ಟರ್‌ಗೆ ಕರ್ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಶ್ವಿ ಕಂಡಿಕುಪ್ಪ ಅವರ ಅಜೇಯ ಶತಕ ಹಾಗೂ ರಚಿತಾ ಹತ್ವಾರ್ ಅವರ ಅರ್ಧಶತಕದ ನೆರವಿನಿಂದ ಕರ್ನಾಟಕ ತಂಡವು 19 ವರ್ಷದೊಳಗಿನ ಮಹಿಳಾ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಭಾನುವಾರ 27 ರನ್‌ಗಳಿಂದ ಮಧ್ಯಪ್ರದೇಶ ತಂಡವನ್ನು ಮಣಿಸಿತು. ಅದರೊಂದಿಗೆ ಗುಂಪು ಹಂತದಲ್ಲಿ ಎಲ್ಲ 5 ಪಂದ್ಯಗಳನ್ನು ಗೆದ್ದು ಅಜೇಯವಾಗಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿತು.

ಹೈದರಾಬಾದ್‌ನ ಜಿಮ್ಖಾನಾ ಕ್ರೀಡಾಂಗಣದಲ್ಲಿ ನಡೆದ ಎಲೀಟ್ ಡಿ ಗುಂಪಿನ ಈ ಪಂದ್ಯದಲ್ಲಿ ಉಭಯ ತಂಡಗಳು ಅಂಕಪಟ್ಟಿಯ ಅಗ್ರಸ್ಥಾನ ಗಿಟ್ಟಿಸಿಕೊಳ್ಳಲು ಹೋರಾಡಿದವು. ನಾಯಕಿ ರಚಿತಾ (56; 70 ಎಸೆತ; 11x4) ಉತ್ತಮ ಬುನಾದಿ ಹಾಕಿಕೊಟ್ಟರೆ, ಕಾಶ್ವಿ (ಔಟಾಗದೇ 115; 84 ಎ; 17x4, 2x6) ಅವರು ಬಿರುಸಿನ ಶತಕದೊಂದಿಗೆ ತಂಡವು 250ರ ಗಡಿ ದಾಟಲು ನೆರವಾದರು. ರಾಜ್ಯ ತಂಡವು ನಿಗದಿತ ಓವರ್‌ಗಳಲ್ಲಿ 6 ವಿಕೆಟ್‌ಗೆ 264 ರನ್ ಗಳಿಸಿತು. ಮಧ್ಯಪ್ರದೇಶ ತಂಡದ ನಾಯಕಿ ಆಯುಷಿ ಶುಕ್ಲಾ 41 ರನ್ ನೀಡಿ ಎರಡು ವಿಕೆಟ್ ಪಡೆದರು.

ಕಾಶ್ವಿ ಕಂಡಿಕುಪ್ಪ

ಸ್ಪರ್ಧಾತ್ಮಕ ಮೊತ್ತ ಬೆನ್ನಟ್ಟಿದ ಮಧ್ಯಪ್ರದೇಶ ತಂಡಕ್ಕೆ ವಂದಿತಾ ಕೆ. ರಾವ್ (34ಕ್ಕೆ3) ಹಾಗೂ ನಂದನಿ ಚೌಹಾನ್ (44ಕ್ಕೆ2) ಅವರು ಪರಿಣಾಮಕಾರಿ ಬೌಲಿಂಗ್ ಮೂಲಕ ಕಾಡಿದರು. ಆಯುಷಿ ಬಳಗವು ನಿಗದಿತ ಓವರ್‌ಗಳಲ್ಲಿ 7 ವಿಕೆಟ್‌ಗೆ 237 ರನ್ ಗಳಿಸಲಷ್ಟೇ ಶಕ್ತವಾಯಿತು. ವಿಕೆಟ್‌ಕೀಪರ್ ವೈಷ್ಣವಿ ವ್ಯಾಸ್ (39; 71ಎ, 4x3) ಹಾಗೂ ಮಹಿ ಠಾಕೂರ್ (33; 49ಎ, 4x3) ಅವರನ್ನು ಹೊರತುಪಡಿಸಿದರೆ ಉಳಿದ್ಯಾವ ಬ್ಯಾಟರ್‌ಗಳೂ 30ರ ಗಡಿ ದಾಟಲಿಲ್ಲ.

ಎಲೀಟ್ ಡಿ ಗುಂಪಿನಲ್ಲಿ ಕ್ರಮವಾಗಿ ಮೊದಲೆರಡು ಸ್ಥಾನ ಪಡೆದ ಕರ್ನಾಟಕ ಹಾಗೂ ಮಧ್ಯಪ್ರದೇಶ ತಂಡಗಳು ಎಂಟರ ಘಟ್ಟಕ್ಕೆ ಅರ್ಹತೆ ಪಡೆದವು.

ರಚಿತಾ ಬಳಗವು ಪುಣೆಯಲ್ಲಿ ಇದೇ 28ರಂದು (ಭಾನುವಾರ) ನಡೆಯಲಿರುವ ಕ್ವಾರ್ಟರ್‌ಫೈನಲ್‌ನಲ್ಲಿ ಬಂಗಾಳ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 50 ಓವರ್‌ಗಳಲ್ಲಿ 6 ವಿಕೆಟ್‌ಗೆ 264 (ರಚಿತಾ ಹತ್ವಾರ್ 56, ಕಾಶ್ವಿ ಕಂಡಿಕುಪ್ಪ ಔಟಾಗದೇ 115, ಕಾರ್ಣಿಕಾ ಕಾರ್ತಿಕ್ 40; ಆಯುಷಿ ಶುಕ್ಲಾ 41ಕ್ಕೆ2). ಮಧ್ಯಪ್ರದೇಶ: 50 ಓವರ್‌ಗಳಲ್ಲಿ 7 ವಿಕೆಟ್‌ಗೆ 237 (ವೈಷ್ಣವಿ ವ್ಯಾಸ್ 39, ಮಹಿ ಠಾಕೂರ್ 33; ವಂದಿತಾ ಕೆ. ರಾವ್ 34ಕ್ಕೆ3, ನಂದನಿ ಚೌಹಾನ್ 44ಕ್ಕೆ2).

ಕೋಲ್ಕತ್ತ ವಿಶ್ವ 25ಕೆ ರೇಸ್: ಚೆಪ್ಟೇಗಿಗೆ ಚಿನ್ನ

ಕೋಲ್ಕತ್ತ (ಪಿಟಿಐ): ಯುಗಾಂಡಾದ ಜೋಶುವಾ ಚೆಪ್ಟೇಗಿ ಅವರು ಕೋಲ್ಕತ್ತದಲ್ಲಿ ಭಾನುವಾರ ನಡೆದ ಟಾಟಾ ಸ್ಟೀಲ್ ವಿಶ್ವ 25ಕೆ (25 ಕಿ.ಮೀ.) ಓಟವನ್ನು ಗೆದ್ದು, ದೂರ ಓಟದ ಸ್ಪರ್ಧೆಯಲ್ಲಿ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದರು. ಭಾರತದ ಗುಲ್ವೀರ್ ಸಿಂಗ್ ಮತ್ತು ಸೀಮಾ ಅವರು ತಮ್ಮ ಎಲೀಟ್ ವಿಭಾಗಗಳಲ್ಲಿ ದಾಖಲೆಯನ್ನು ಸುಧಾರಿಸಿದರು.

ಇಥಿಯೋಪಿಯಾದ ದೆಗಿಟು ಅಝಿಮೆರಾ (1 ಗಂಟೆ, 19 ನಿಮಿಷ, 36 ಸೆಕೆಂಡು) ಅವರು ಅಮೋಘ ಓಟ ಓಡಿ ಹಾಲಿ ಚಾಂಪಿಯನ್, ಸ್ವದೇಶದ ಸುತುಮೆ ಅಸೇಫಾ ಕೆಬೆಡೆ ಅವರನ್ನು ಹಿಂದೆಹಾಕಿ ಮಹಿಳೆಯರ ವಿಭಾಗದಲ್ಲಿ ಅಗ್ರಸ್ಥಾನ ಪಡೆದರು. ಸುತುಮೆ (1:20:28) ಎರಡನೇ ಸ್ಥಾನ ಗಳಿಸಿದರೆ, ಮೆಸೆಲೆಚ್ ಅಲೆಮಯೆಹು (1:20:48) ಮೂರನೇ ಸ್ಥಾನ ಪಡೆದರು.

ಎರಡು ಬಾರಿಯ ಒಲಿಂಪಿಕ್ ಚಾಂಪಿಯನ್ ಚೆಪ್ಟೇಗಿ ತಮ್ಮ ರೇಸ್‌ಅನ್ನು 1 ಗಂಟೆ 11 ನಿ. 49 ಸೆ.ಗಳಲ್ಲಿ ಪೂರೈಸಿ ಅಗ್ರಸ್ಥಾನ ಪಡೆದರು. ಯಾವ ಹಂತದಲ್ಲೂ ಅವರು ನಿಯಂತ್ರಣ ಕಳೆದುಕೊಳ್ಳಲಿಲ್ಲ.



ಚಿನ್ನ ಗೆದ್ದ ಯುಗಾಂಡಾದ ಜೋಶುವಾ ಚೆಪ್ಟೇಗಿ ಪಿಟಿಐ ಚಿತ್ರ

ಎರಡನೇ ಸ್ಥಾನ ಪಡೆದ ತಾಂಜಾನಿಯಾದ ಅಲ್ಫೋನ್ಸ್ ಫೆಲಿಕ್ಸ್ ಸಿಯುಂಬು (1:11:56) ಮತ್ತು ಮೂರನೇ ಸ್ಥಾನ ಗಳಿಸಿದ ಲೆಸೊತೊದ ತೆಬೆಲ್ಲೊ ರಾಮಕೊಂಗೊನಾ (1:11:59) ನಡುವೆ ಪೈಪೋಟಿ ತೀವ್ರವಾಗಿತ್ತು.

ಎಲೀಟ್ ರೇಸ್‌ನಲ್ಲಿ ಭಾರತೀಯ ಓಟಗಾರರ ಪೈಕಿ ಗುಲ್ವೀರ್ ಅವರು 1:12:06 ಸೆ.ಗಳಲ್ಲಿ ಗುರಿ ತಲುಪಿದರು.

ಇನ್ನೂ ಎರಡು ಟೆಸ್ಟ್ ಉಳಿದಿರುವಂತೆ 3–0 ಮುನ್ನಡೆ

ಆ್ಯಷಸ್: ಆಸ್ಟ್ರೇಲಿಯಾಕ್ಕೆ ಸರಣಿ ಜಯ

ಅಡಿಲೇಡ್ (ಎಪಿ): ಆಸ್ಟ್ರೇಲಿಯಾ ತಂಡದವರು ಆ್ಯಷಸ್ ಸರಣಿಯ ಮೂರನೇ ಟೆಸ್ಟ್ ಪಂದ್ಯದಲ್ಲಿ ಭಾನುವಾರ ಇಂಗ್ಲೆಂಡ್ ತಂಡದ ವಿರುದ್ಧ 82 ರನ್‌ಗಳ ಜಯ ಪಡೆದರು. ಎರಡು ಟೆಸ್ಟ್‌ಗಳು ಉಳಿದಿರುವಂತೆ ಆತಿಥೇಯರು 3-0 ಅಂತರದಿಂದ ಸರಣಿಯನ್ನು ಕೈವಶ ಮಾಡಿಕೊಂಡರು.

ಗೆಲುವಿಗೆ ವಿಶ್ವದಾಖಲೆಯ 435 ರನ್‌ಗಳ ಗುರಿ ಎದುರಿಸಿದ್ದ ಇಂಗ್ಲೆಂಡ್ ತಂಡ (ಶನಿವಾರ: 6 ವಿಕೆಟ್‌ಗೆ 207) ಅಂತಿಮ ದಿನ ಪ್ರತಿರೋಧ ತೋರಿತು. ಆದರೆ 352 ರನ್‌ಗಳಿಗೆ ಆಲೌಟ್ ಆಯಿತು. ಎಡಗೈ ವೇಗದ ಬೌಲರ್ ಮಿಚೆಲ್ ಸ್ಟಾರ್ಕ್ ಮೂರು ವಿಕೆಟ್ ಪಡೆದರೆ, ಸ್ಕಾಟ್ ಬೋಲ್ಯಾಂಡ್ ಅವರು ಚಹಾ ವಿರಾಮಕ್ಕೆ ಮೊದಲು ಕೊನೆಯ ವಿಕೆಟ್ (ಜೋಶ್ ಟಂಗ್) ಗಳಿಸಿದರು.

'ಹಲವು ಕಾರಣಗಳಿಂದ 3-0 ಸರಣಿ ಜಯ ತೃಪ್ತಿದಾಯಕ' ಎಂದು ಆಸ್ಟ್ರೇಲಿಯಾ ನಾಯಕ ಪ್ಯಾಟ್ ಕಮಿನ್ಸ್ ಹೇಳಿದರು. ಬೆನ್ನುನೋವಿನಿಂದ ಚೇತರಿಸಿ ಈ ಪಂದ್ಯಕ್ಕೆ ಪುನರಾಗಮನ ಮಾಡಿದ್ದ ಅವರು ಒಟ್ಟು ಆರು ವಿಕೆಟ್ ಗಳಿಸಿದರು. ಸರಣಿಗೆ ಮೊದಲು ಆಸ್ಟ್ರೇಲಿಯಾ ತಂಡದ ಅನುಭವಿ ಆಟಗಾರರ ವಯಸ್ಸಿನ ಬಗ್ಗೆ ಬಹಳಷ್ಟು ಚರ್ಚೆಗಳು ನಡೆದಿದ್ದವು.


ಪಂದ್ಯದ ಆಟಗಾರ ಅಲೆಕ್ಸ್ ಕ್ಯಾರಿ

ಪರ್ತ್ ಮತ್ತು ಬ್ರಿಸ್ಬೇನ್‌ನಲ್ಲಿ ನಡೆದ ಮೊದಲ ಎರಡು ಟೆಸ್ಟ್ ಪಂದ್ಯಗಳಲ್ಲಿ ಇಂಗ್ಲೆಂಡ್ ಎಂಟು ವಿಕೆಟ್‌ಗಳ ಸೋಲನುಭವಿಸಿತ್ತು. ಇಂಗ್ಲೆಂಡ್, ಕಾಂಗರೂ ನಾಡಿನಲ್ಲಿ ಆಡಿದ ಕೊನೆಯ 18 ಟೆಸ್ಟ್‌ಗಳಲ್ಲಿ ಒಂದರಲ್ಲೂ ಜಯ ಗಳಿಸಲು ಸಾಧ್ಯವಾಗಿಲ್ಲ. ಆಸ್ಟ್ರೇಲಿಯಾ, ತವರಿನಲ್ಲಿ ಸತತ ನಾಲ್ಕನೇ ಬಾರಿ ಆ್ಯಷಸ್ ಸರಣಿ ಜಯಿಸಿದಂತಾಯಿತು.

ಅಡಿಲೇಡ್ ಓವಲ್‌ನಲ್ಲಿ 2013ರಿಂದ ಈಚೆಗೆ ಆಡಿದ 13 ಟೆಸ್ಟ್ ಪಂದ್ಯಗಳ ಪೈಕಿ 12ರಲ್ಲಿ ಆಸ್ಟ್ರೇಲಿಯಾ ಜಯಗಳಿಸಿದೆ. 2018ರಲ್ಲಿ ಭಾರತ ಎದುರು ಒಂದು ಪಂದ್ಯದಲ್ಲಿ ಸೋಲನುಭವಿಸಿತ್ತು.

ಮೊದಲ ಇನಿಂಗ್ಸ್‌ನಲ್ಲಿ ಶತಕ (106) ಮತ್ತು ಎರಡನೇ ಇನಿಂಗ್ಸ್‌ನಲ್ಲಿ ಅರ್ಧ ಶತಕ (72) ಬಾರಿಸಿದ ಅಲೆಕ್ಸ್ ಕ್ಯಾರಿ ಪಂದ್ಯದ ಆಟಗಾರನಾದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 371 ಮತ್ತು 349; ಇಂಗ್ಲೆಂಡ್: 286 ಮತ್ತು 102.5 ಓವರುಗಳಲ್ಲಿ 352 (ಜೇಮಿ ಸ್ಮಿತ್ 60, ವಿಲ್ ಜಾಕ್ಸ್ 47, ಬ್ರೈಡನ್ ಕಾರ್ಸ್ ಔಟಾಗದೇ 39; ಮಿಚೆಲ್ ಸ್ಟಾರ್ಕ್ 62ಕ್ಕೆ3, ಪ್ಯಾಟ್ ಕಮಿನ್ಸ್ 48ಕ್ಕೆ3, ನೇಥನ್ ಲಯನ್ 77ಕ್ಕೆ3).

Pick the drive that fits your spirit: Carens Clavis with dynamic performance or Carens Clavis EV with 490km** range and electric power. Whether you choose traditional strength or advanced efficiency, you'll discover bold design, spacious comfort, seamless tech, and connection in every journey. Book now and experience the epic together.

Scan to know more

The Carens Clavis Built smart

Dual Pane Panoramic Sunroof

67.62 cm (26.62") Dual Panoramic Display Panel

ADAS Level 2^ with 20 Autonomous Features

The Carens Clavis EV Commanding electric presence

V2L – Vehicle to Load (External & Internal)

Paddle Shifters for i-Pedal & Regenerative Braking#

51.4 kWh & 42 kWh Battery Pack Options

For more information, visit our dealership or contact: 1800 108 5000 | 093195 91407 | www.kia.com | Book Kia | kiacare@kiaindia.net | Look for "Kia India" @

*Terms & Conditions Apply. Benefit shown is the combination of exchange, loyalty, corporate, scrappage and special benefits applicable on Carens Clavis (ICE) only, which may vary from model to model and region to region. **The individual driving style and other factors, such as speed, outside temperature, topography, and the use of electricity-consuming devices/units, have an influence on the real-life range regeneration level, and can possibly reduce it. Range as per ARAI MIDC-Full. ^Advanced Driver Assistance System (ADAS) is not a substitute for human eye and driver vigilance. It is an assistance feature that enhances driving experience and safety. Effectiveness of ADAS may vary based on actual situation and all objects around vehicle may not be detected. The driver shall remain responsible for safe, vigilant, and attentive driving. #i-Pedal Regen technology is not a complete replacement for the brake pedal, and drivers should always be prepared to use the brake pedal for emergencies or when more forceful braking is needed. The product & feature images shown here are for representation purpose only. Features and specifications as shown may not be part of standard fitment and may vary. The colors shown are subject to availability and may not be available across all variants and may differ slightly from those shown. The specifications and features may vary depending on models/ variants. We do not endorse vandalism or illegal activities related to road safety. Safety is a top priority, and we urge responsible behavior regarding traffic regulations and road safety. Kia India Pvt. Ltd. (Formerly known as Kia Motors India Private Limited) reserves the right to make any changes with respect to the trims, colors, specifications and other details of any model or to discontinue any model without prior notice. For more details visit your local Kia dealership. Kia India Pvt. Ltd. urges you to follow traffic rules, these are meant to keep you safe on roads.

Bangalore: **PPS Kia:** Mysore Road, Tel: 6309990010; **JSP Kia:** Bellandur, Tel: 9513918131; Hosur Road, Tel: 9986644472; Sarjapur, Tel: 8095553636; **VST Kia:** Palace Cross, Tel: 9606988123, Yeshwanthpur, Tel: 9606988124 **Naara Kia:** JP Nagar, Tel: 7406528200, Kanakpura Road, Tel: 907010099; **Epitome Kia:** Whitefield, Tel: 9606970216, Yelahanka, Tel: 7406343339, Varthur, Tel: 9844240044, Avalahalli, Tel: 7022317666; **Taapasi Kia:** Kalyan Nagar, Tel: 8095537777; Koramangala, Tel: 9071177333; **Advaith Kia:** Lalbagh, Tel: 9611006006, Magadi Road, Tel: 6364871023, Banashankari, Tel: 6364871022, Basaweshwar Nagar, Tel: 6364871024; Tumkur: **PPS Kia:** Tel: 6303622210; Kolar: **Epitome Kia:** Tel: 8951903224